# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| ಭಾಗ – ೪<br>Part – IV | ಬೆಂಗಳೂರು, ಬುಧವಾರ, ೧೮, ಮೇ, ೨೦೨೨(ವೈಶಾಖ, ೨೮, ಶಕವರ್ಷ, ೧೯೪೪)<br>BENGALURU, WEDNESDAY, 18, MAY, 2022(VAISHAKHA, 28, SHAKAVARSHA, 1944) | ನಂ. ೨೮೯<br>No. 289 |
|---|---|---|


## ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ
## ಅಧಿಸೂಚನೆ

ಸಂಖ್ಯೆ: ಸಂವ್ಯಶಾಇ 14 ಕೇಶಾಪ್ರ 2022 ಬೆಂಗಳೂರು, ದಿನಾಂಕ: 18.05.2022.

ಭಾರತ ಸರ್ಕಾರದ Official Language Wing, Ministry of Law and Justice, Government of India ರವರ ಪತ್ರ ಸಂಖ್ಯೆ: F.No.10(iii)(IX)/Auth./Kannada/79-OL/23, ದಿನಾಂಕ: 18.04.2022ರಲ್ಲಿ ಸೂಚಿಸಿದಂತೆ the Authoritative Text (Central Laws) Act, 1973 (Central Act 50 of 1973) ರ ಪ್ರಕರಣ 2(a)ರಡಿಯಲ್ಲಿ ದಿನಾಂಕ: 21.03.2022ರಂದು ಮಾನ್ಯ ರಾಷ್ಟ್ರಾಧ್ಯಕ್ಷರ ಅನುಮೋದನೆಗೊಂಡು ಕನ್ನಡಕ್ಕೆ ಭಾಷಾಂತರಗೊಂಡ ಈ ಕೆಳಕಂಡ ಕೇಂದ್ರ ಅಧಿನಿಯಮಗಳಾದ,-

1. ಪಾಸ್‌ಪೋರ್ಟ್ (ಭಾರತದೊಳಕ್ಕೆ ಪ್ರವೇಶ) ಅಧಿನಿಯಮ, 1920 (1920ರ ಅಧಿನಿಯಮ ಸಂಖ್ಯೆ: 34)
2. ಪಶು ಸೋಂಕು ರೋಗಗಳ ಮತ್ತು ಸಾಂಕ್ರಾಮಿಕ ರೋಗಗಳ ಪ್ರತಿಬಂಧ ಮತ್ತು ನಿಯಂತ್ರಣ ಅಧಿನಿಯಮ, 2009 (2009ರ ಅಧಿನಿಯಮ ಸಂಖ್ಯೆ: 27)
3. ಕಾನೂನು ಮಾಪನ ವಿಜ್ಞಾನ ಅಧಿನಿಯಮ, 2009 (2010ರ ಅಧಿನಿಯಮ ಸಂಖ್ಯೆ: 1)
4. ಚಿಕಿತ್ಸಾ ಕಾರ್ಯಸಂಸ್ಥೆಗಳ (ನೋಂದಣಿ ಮತ್ತು ವಿನಿಯಮ) ಅಧಿನಿಯಮ, 2010 (2010ರ ಅಧಿನಿಯಮ ಸಂಖ್ಯೆ: 23)
5. ಭಾರತ ಭೂ ಬಂದರುಗಳ ಪ್ರಾಧಿಕಾರ ಅಧಿನಿಯಮ, 2010 (2010ರ ಅಧಿನಿಯಮ ಸಂಖ್ಯೆ: 31)
6. ಕೇಂದ್ರೀಯ ಶೈಕ್ಷಣಿಕ ಸಂಸ್ಥೆಗಳ (ಶಿಕ್ಷಕ ವೃಂದದಲ್ಲಿ ಮೀಸಲಾತಿ) ಅಧಿನಿಯಮ, 2019 (2019ರ ಅಧಿನಿಯಮ ಸಂಖ್ಯೆ: 10)
7. ಮುಸ್ಲಿಂ ಮಹಿಳೆಯರ (ವಿವಾಹದ ಹಕ್ಕುಗಳ ಸಂರಕ್ಷಣೆ) ಅಧಿನಿಯಮ, 2019 (2019ರ ಅಧಿನಿಯಮ ಸಂಖ್ಯೆ: 20)

- ಗಳನ್ನು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ (ಭಾಗ-IV) ಪ್ರಕಟಿಸಲು ಆದೇಶಿಸಲಾಗಿದೆ,-

**Re.No. D. 221**

# भारत का राजपत्र
# The Gazette of India
# ಭಾರತ ರಾಜಪತ್ರ

**(Extraordinary)**
(ವಿಶೇಷ ಸಂಚಿಕೆ)

**भाग IX अनुभाग 1**

**PART IX SECTION 1**

**ಭಾಗ IX ವಿಭಾಗ 1**

**प्राधिकार से प्रकाशित**

**Published by Authority**

ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ.

| सं 1, नई दिल्ली, बुधवार, 18 मई, 2022 | वैशाख 18, 1944 (शक) | खंड. 52 |
|---|---|---|
| No.1, New Delhi, Wednesday, May 18, 2022 | Vaishaka 18, 1944 (Saka) | Vol. 52 |
| ನಂ.1, ನವದೆಹಲಿ, ಬುಧವಾರ, ಮೇ 18, 2022 | ವೈಶಾಖ 18, 1944 (ಶಕ) | ಸಂಪುಟ. 52 |


**Ministry of Law and Justice**
(Legislative Department)
New Delhi, 18th May, 2022

**ಕಾನೂನು ಮತ್ತು ನ್ಯಾಯ ಮಂತ್ರಾಲಯ**
(ವಿಧಾಯೀ ಇಲಾಖೆ)
**ನವದೆಹಲಿ, 18ನೇ ಮೇ, 2022**

The Translation in Kannada of the following Act, namely:- (1) THE PASSPORT (ENTRY INTO INDIA) ACT, 1920 (ACT NO. 34 OF 1920) (2) THE PREVENTION AND CONTROL OF INFECTIOUS AND CONTAGIOUS DISEASES IN ANIMALS ACT, 2009 (ACT NO. 27 OF 2009) (3) THE LEGAL METROLOGY ACT, 2009 (ACT NO. 1 OF 2010) (4) THE CLINICAL ESTABLISHMENTS (REGISTRATION AND REGULATION) ACT, 2010 (ACT NO. 23 OF 2010) (5) THE LAND PORTS AUTHORITY OF INDIA ACT, 2010 (ACT NO. 31 OF 2010) (6) THE CENTRAL EDUCATIONAL INSTITUTIONS (RESERVATION IN TEACHERS' CADRE) ACT, 2019 (ACT NO. 10 OF 2019) (7) THE MUSLIM WOMEN (PROTECTION OF RIGHTS ON MARRIAGE) ACT, 2019 (ACT NO. 20 OF 2019) -are hereby published under the authority of the President and shall be deemed to be authoritative text thereof in Kannada under clause (a) of section 2 of the Authoritative Texts (Central Laws) Act, 1973 (50 of 1973).

ಈ ಕೆಳಕಂಡ ಅಧಿನಿಯಮಗಳು ಎಂದರೆ:– (1) ಪಾಸ್‌ಪೋರ್ಟ್ (ಭಾರತದೊಳಕ್ಕೆ ಪ್ರವೇಶ) ಅಧಿನಿಯಮ, 1920 (1920ರ ಅಧಿನಿಯಮ ಸಂಖ್ಯೆ 34) (2) ಪಶು ಸೋಂಕು ರೋಗಗಳ ಮತ್ತು ಸಾಂಕ್ರಾಮಿಕ ರೋಗಗಳ ಪ್ರತಿಬಂಧ ಮತ್ತು ನಿಯಂತ್ರಣ ಅಧಿನಿಯಮ, 2009 (2009 ರ ಅಧಿನಿಯಮ ಸಂಖ್ಯೆ 27) (3) ಕಾನೂನು ಮಾಪನ ವಿಜ್ಞಾನ ಅಧಿನಿಯಮ, 2009 (2010ರ ಅಧಿನಿಯಮ ಸಂಖ್ಯೆ 1) (4) ಚಿಕಿತ್ಸಾ ಕಾರ್ಯಸಂಸ್ಥೆಗಳ (ನೋಂದಣಿ ಮತ್ತು ವಿನಿಯಮ) ಅಧಿನಿಯಮ, 2010 (2010ರ ಅಧಿನಿಯಮ ಸಂಖ್ಯೆ 23) (5) ಭಾರತ ಭೂ ಬಂದರುಗಳ ಪ್ರಾಧಿಕಾರ ಅಧಿನಿಯಮ, 2010 (2010ರ ಅಧಿನಿಯಮ ಸಂಖ್ಯೆ 31) (6) ಕೇಂದ್ರೀಯ ಶೈಕ್ಷಣಿಕ ಸಂಸ್ಥೆಗಳ (ಶಿಕ್ಷಕ ವೃಂದದಲ್ಲಿ ಮೀಸಲಾತಿ) ಅಧಿನಿಯಮ, 2019 (2019 ರ ಅಧಿನಿಯಮ ಸಂಖ್ಯೆ 10) (7) ಮುಸ್ಲಿಂ ಮಹಿಳೆಯರ (ವಿವಾಹದ ಹಕ್ಕುಗಳ ಸಂರಕ್ಷಣೆ) ಅಧಿನಿಯಮ, 2019 (2019 ರ ಅಧಿನಿಯಮ ಸಂಖ್ಯೆ 20) – ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973 (1973 ರ 50) ರ 2ನೇ ಪ್ರಕರಣದ (ಎ) ಖಂಡದ ಮೇರೆಗೆ ಇದನ್ನು ಈ ಅಧಿನಿಯಮದ ಅಧಿಕೃತ ಕನ್ನಡ ಪಾಠವೆಂದು ಭಾವಿಸತಕ್ಕದ್ದು.

## ಪಾಸ್‌ಪೋರ್ಟ್ (ಭಾರತದೊಳಕ್ಕೆ ಪ್ರವೇಶ) ಅಧಿನಿಯಮ, 1920

## (1920ರ ಅಧಿನಿಯಮ ಸಂಖ್ಯೆ 34)

[9ನೇ ಸೆಪ್ಟೆಂಬರ್, 1920.]

ಭಾರತವನ್ನು ಪ್ರವೇಶಿಸುವ ವ್ಯಕ್ತಿಗಳು ಪಾಸ್‌ಪೋರ್ಟ್‌ಗಳನ್ನು ಹೊಂದಿರಬೇಕೆಂದು ಅಗತ್ಯಪಡಿಸುವ ಅಧಿಕಾರ ಹೊಂದುವುದಕ್ಕಾಗಿ ಉಪಬಂಧಿಸುವ ಅಧಿನಿಯಮ.

ಭಾರತವನ್ನು ಪ್ರವೇಶಿಸುವ ವ್ಯಕ್ತಿಗಳು ಪಾಸ್‌ಪೋರ್ಟ್‌ಗಳನ್ನು ಹೊಂದಿರಬೇಕೆಂದು ಅಗತ್ಯಪಡಿಸುವ ಅಧಿಕಾರವನ್ನು ಹೊಂದುವುದು ವಿಹಿತವಾಗಿರುವುದರಿಂದ, ಈ ಮೂಲಕ ಕೆಳಕಂಡಂತೆ ಅಧಿನಿಯಮಿಸಲಾಗಿದೆ:–

**1. ಚಿಕ್ಕ ಹೆಸರು ಮತ್ತು ವ್ಯಾಪ್ತಿ.–** (1) ಈ ಅಧಿನಿಯಮವನ್ನು ಪಾಸ್‌ಪೋರ್ಟ್ (ಭಾರತದೊಳಕ್ಕೆ ಪ್ರವೇಶ) ಅಧಿನಿಯಮ, 1920 ಎಂದು ಕರೆಯತಕ್ಕದ್ದು.

(2) ಇದು, ಇಡೀ ಭಾರತಕ್ಕೆ ವ್ಯಾಪ್ತವಾಗತಕ್ಕದ್ದು.

**2. ಪರಿಭಾಷೆಗಳು.–** ಈ ಅಧಿನಿಯಮದಲ್ಲಿ ವಿಷಯಕ್ಕೆ ಅಥವಾ ಸಂದರ್ಭಕ್ಕೆ ವಿರುದ್ಧವಾದುದು ಏನಾದರೂ ಇದ್ದ ಹೊರತು,–

"ಪ್ರವೇಶ" ಎಂದರೆ ಜಲಮಾರ್ಗದ, ಭೂ ಮಾರ್ಗದ ಅಥವಾ ವಾಯುಮಾರ್ಗದ ಮೂಲಕ ಪ್ರವೇಶ;

"ಪಾಸ್‌ಪೋರ್ಟ್" ಎಂದರೆ, ನಿಯಮಿಸಿದ ಪ್ರಾಧಿಕಾರವು ನೀಡಿದ ಅಥವಾ ನವೀಕರಿಸಿದ ಮತ್ತು ಪಾಸ್‌ಪೋರ್ಟ್‌ಗಳ ಯಾವ ವರ್ಗಕ್ಕೆ ಪಾಸ್‌ಪೋರ್ಟ್ ಸಂಬಂಧಿಸಿದೆಯೋ ಆ ಪಾಸ್‌ಪೋರ್ಟ್‌ಗಳ ವರ್ಗಕ್ಕೆ ಸಂಬಂಧಿಸಿದಂತೆ ನಿಯಮಿಸಿದ ಷರತ್ತುಗಳನ್ನು ಪೂರೈಸುವ ತತ್ಕಾಲದಲ್ಲಿ ಜಾರಿಯಲ್ಲಿರುವ ಪಾಸ್‌ಪೋರ್ಟ್; ಮತ್ತು

"ನಿಯಮಿಸಿದ" ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು.

**3. ನಿಯಮಗಳನ್ನು ರಚಿಸಲು ಅಧಿಕಾರ.–** (1) ಕೇಂದ್ರ ಸರ್ಕಾರವು, ಭಾರತವನ್ನು ಪ್ರವೇಶಿಸುವ ವ್ಯಕ್ತಿಗಳು ಪಾಸ್‌ಪೋರ್ಟ್‌ಗಳನ್ನು ಹೊಂದಿರಬೇಕೆಂದು ಅಗತ್ಯಪಡಿಸಲು ಮತ್ತು ಆ ಉದ್ದೇಶಕ್ಕೆ ಪೂರಕವಾದ ಅಥವಾ ಪ್ರಾಸಂಗಿಕವಾದ ಎಲ್ಲಾ ವಿಷಯಗಳಿಗಾಗಿ ನಿಯಮಗಳನ್ನು ರಚಿಸಬಹುದು.

(2) ಈ ಹಿಂದೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಅಂಥ ನಿಯಮಗಳು–

(ಎ) ಯಾರೇ ವ್ಯಕ್ತಿಯು, ತನಗೆ ನೀಡಿದ ಪಾಸ್‌ಪೋರ್ಟನ್ನು ಹೊಂದಿರದಿದ್ದರೆ ಆ ವ್ಯಕ್ತಿಯು ಭಾರತಕ್ಕೆ ಅಥವಾ ಅದರ ಯಾವುದೇ ಭಾಗಕ್ಕೆ ಪ್ರವೇಶಿಸುವುದನ್ನು ನಿಷೇಧಿಸಬಹುದು;

(ಬಿ) ಈ ಅಧಿನಿಯಮದ ಉದ್ದೇಶಗಳಿಗಾಗಿ, ಪಾಸ್‌ಪೋರ್ಟ್‌ಗಳನ್ನು ಯಾವ ಪ್ರಾಧಿಕಾರಿಗಳು ನೀಡತಕ್ಕದ್ದೋ ಅಥವಾ ನವೀಕರಿಸತಕ್ಕದ್ದೋ ಆ ಪ್ರಾಧಿಕಾರಿಗಳನ್ನು ಮತ್ತು ಅವರು ಪಾಲಿಸಬೇಕಾದ ಷರತ್ತುಗಳನ್ನು ನಿಯಮಿಸಬಹುದು; ಮತ್ತು

(ಸಿ) ಅಂಥ ನಿಯಮಗಳ ಯಾವುದೇ ಉಪಬಂಧಗಳಿಂದ ಸಂಪೂರ್ಣವಾಗಿ ಅಥವಾ ಯಾವುದೇ ಷರತ್ತಿನ ಮೇಲೆ ಯಾರೇ ವ್ಯಕ್ತಿಗೆ ಅಥವಾ ವ್ಯಕ್ತಿಗಳ ವರ್ಗಕ್ಕೆ ವಿನಾಯಿತಿ ನೀಡಲು ಉಪಬಂಧ ಕಲ್ಪಿಸಬಹುದು.

(3) ಈ ಪ್ರಕರಣದ ಮೇರೆಗೆ ರಚಿಸಿದ ನಿಯಮಗಳು, ಅವುಗಳ ಯಾವುದೇ ಉಲ್ಲಂಘನೆಯು ಅಥವಾ ಅಂಥ ಯಾವುದೇ ನಿಯಮದ ಮೇರೆಗಿನ ಅಧಿಕಾರದಿಂದ ಹೊರಡಿಸಿದ ಯಾವುದೇ ಆದೇಶದ ಯಾವುದೇ ಉಲ್ಲಂಘನೆಯು ಐದು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಐವತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯವಾಗತಕ್ಕದ್ದೆಂದು ಉಪಬಂಧ ಕಲ್ಪಿಸಬಹುದು.

(4) ಈ ಪ್ರಕರಣದ ಮೇರೆಗೆ ರಚಿಸಿದ ಎಲ್ಲಾ ನಿಯಮಗಳನ್ನು ರಾಜಪತ್ರದಲ್ಲಿ ಪ್ರಕಟಿಸತಕ್ಕದ್ದು, ಮತ್ತು ತರುವಾಯ ಅವು ಈ ಅಧಿನಿಯಮದಲ್ಲಿ ಒಳಗೊಂಡಿದ್ದಿದ್ದರೆ ಹೇಗೋ ಹಾಗೆ ಪರಿಣಾಮ ಹೊಂದಿರತಕ್ಕದ್ದು.

(5) ಈ ಅಧಿನಿಯಮದ ಮೇರೆಗೆ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಮಂಡಿಸತಕ್ಕದ್ದು ಮತ್ತು ಮೇಲೆ ಹೇಳಿದ ಅಧಿವೇಶನದ, ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಅಧಿವೇಶನಗಳ ನಿಕಟೋತ್ತರ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮುಂಚೆ, ಆ ನಿಯಮದಲ್ಲಿ ಯಾವುದೇ ಮಾರ್ಪಾಡು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ ಆ ತರುವಾಯ, ಆ ನಿಯಮವು ಸಂದರ್ಭಾನುಸಾರ, ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ; ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಈ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟುಮಾಡತಕ್ಕದ್ದಲ್ಲ.

**3ಎ. ತರುವಾಯದ ಅಪರಾಧಗಳಿಗಾಗಿ ದಂಡನೆ.–** ಈ ಅಧಿನಿಯಮದ ಮೇರೆಗೆ ರಚಿಸಿದ ಯಾವುದೇ ನಿಯಮದ ಅಥವಾ ಮಾಡಿದ ಆದೇಶದ ಮೇರೆಗೆ ಅಪರಾಧದ ಅಪರಾಧಿಯೆಂದು ನಿರ್ಣೀತನಾಗಿದ್ದ ಯಾರಾದರೂ ಈ ಅಧಿನಿಯಮದ ಮೇರೆಗೆ ಮತ್ತೆ ಅಪರಾಧದ ಅಪರಾಧಿಯೆಂದು ನಿರ್ಣೀತನಾದರೆ, ಮತ್ತೆ ಮಾಡಿದ ಆ ಅಪರಾಧಕ್ಕೆ ಉಪಬಂಧಿಸಿರುವ ದಂಡನೆಯ ದುಪ್ಪಟ್ಟು ದಂಡನೆಗೆ ದಂಡನೀಯನಾಗತಕ್ಕದ್ದು.

**4. ದಸ್ತಗಿರಿ ಮಾಡುವ ಅಧಿಕಾರ.–** (1) ಸಬ್–ಇನ್ಸ್‌ಪೆಕ್ಟರ್ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಯಾರೇ ಪೊಲೀಸ್ ಅಧಿಕಾರಿಯು ಮತ್ತು ಈ ಬಗ್ಗೆ ಕೇಂದ್ರ ಸರ್ಕಾರದ ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಅಧಿಕಾರ ಪಡೆದ ಸೀಮಾಸುಂಕ ಇಲಾಖೆಯ ಯಾರೇ ಅಧಿಕಾರಿಯು, 3ನೇ ಪ್ರಕರಣದ ಮೇರೆಗೆ ರಚಿಸಿದ ಯಾವುದೇ ನಿಯಮವನ್ನು ಅಥವಾ ಆದೇಶವನ್ನು ಉಲ್ಲಂಘಿಸಿರುವ ಯಾರೇ ವ್ಯಕ್ತಿಯನ್ನು ಅಥವಾ ಉಲ್ಲಂಘಿಸಿದ್ದಾನೆಂದು, ಯಾವ ವ್ಯಕ್ತಿಯ ಬಗ್ಗೆ ಸಮಂಜಸವಾದ ಸಂದೇಹವಿದೆಯೋ ಆ ಯಾರೇ ವ್ಯಕ್ತಿಯನ್ನು ವಾರಂಟಿಲ್ಲದೆ ದಸ್ತಗಿರಿ ಮಾಡಬಹುದು.

(2) ಈ ಪ್ರಕರಣದ ಮೇರೆಗೆ ದಸ್ತಗಿರಿ ಮಾಡುವ ಪ್ರತಿಯೊಬ್ಬ ಅಧಿಕಾರಿಯು, ಅನಗತ್ಯ ವಿಳಂಬ ಮಾಡದೆ, ದಸ್ತಗಿರಿಯಾದ ವ್ಯಕ್ತಿಯನ್ನು ಸುಪರ್ದಿಗೆ ತೆಗೆದುಕೊಳ್ಳತಕ್ಕದ್ದು ಅಥವಾ ಆ ಪ್ರಕರಣದಲ್ಲಿ ಅಧಿಕಾರ ವ್ಯಾಪ್ತಿ ಹೊಂದಿರುವ ಮ್ಯಾಜಿಸ್ಟ್ರೇಟನ ಮುಂದೆ ಅಥವಾ ಹತ್ತಿರದ ಪೊಲೀಸ್ ಠಾಣೆಯ ಪ್ರಭಾರಿ ಅಧಿಕಾರಿಯ ಮುಂದೆ ಹಾಜರುಪಡಿಸತಕ್ಕದ್ದು ಮತ್ತು ಯಾವುದೇ ಅಂಥ ದಸ್ತಗಿರಿಯ ಸಂಬಂಧದಲ್ಲಿ ದಂಡ ಪ್ರಕ್ರಿಯಾ ಸಂಹಿತೆ, 1973 (1974 ರ 2)ರ 57ನೇ ಪ್ರಕರಣದ ಉಪಬಂಧಗಳು ಸಾಧ್ಯವಾಗಬಹುದಾದಷ್ಟು ಮಟ್ಟಿಗೆ ಅನ್ವಯವಾಗತಕ್ಕದ್ದು.

**5. ಹೊರಹಾಕಲು ಅಧಿಕಾರ.–** ಕೇಂದ್ರ ಸರ್ಕಾರವು, ಪಾಸ್‌ಪೋರ್ಟ್ ಇಲ್ಲದೆ ಭಾರತಕ್ಕೆ ಪ್ರವೇಶಿಸುವುದನ್ನು ನಿಷೇಧಿಸುವ 3ನೇ ಪ್ರಕರಣದ ಮೇರೆಗೆ ರಚಿಸಿದ ಯಾವುದೇ ನಿಯಮವನ್ನು ಉಲ್ಲಂಘಿಸಿ ಭಾರತಕ್ಕೆ ಪ್ರವೇಶಿಸಿದ ಯಾರೇ

ವ್ಯಕ್ತಿಯನ್ನು ಭಾರತದಿಂದ ಹೊರಹಾಕಲು ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ, ನಿರ್ದೇಶಿಸಬಹುದು ಮತ್ತು ತದನಂತರ ಸರ್ಕಾರದ ಯಾರೇ ಅಧಿಕಾರಿಯು ಅಂಥ ನಿರ್ದೇಶನವನ್ನು ಜಾರಿಗೊಳಿಸಲು ಅಗತ್ಯವಿರುವ ಎಲ್ಲಾ ಸಮಂಜಸ ಅಧಿಕಾರಗಳನ್ನು ಹೊಂದಿರತಕ್ಕದ್ದು.

**6**. [**ಬಿ ಭಾಗದ ರಾಜ್ಯಗಳಿಗೆ ಅಧಿನಿಯಮದ ಅನ್ವಯ**].– ಬಿ ಭಾಗದ ರಾಜ್ಯಗಳ (ಕಾನೂನುಗಳು) ಅಧಿನಿಯಮ, 1951 (1951 ರ 3)ರ 3ನೇ ಪ್ರಕರಣದ ಮತ್ತು ಅನುಸೂಚಿಯ ಮೂಲಕ ನಿರಸನಗೊಳಿಸಲಾಗಿದೆ.

## ಪಶು ಸೋಂಕು ರೋಗಗಳ ಮತ್ತು ಸಾಂಕ್ರಾಮಿಕ ರೋಗಗಳ ಪ್ರತಿಬಂಧ ಮತ್ತು ನಿಯಂತ್ರಣ ಅಧಿನಿಯಮ, 2009

## (2009 ರ ಅಧಿನಿಯಮ ಸಂಖ್ಯೆ 27)

[20ನೇ ಮಾರ್ಚ್, 2009.]

ಪಶುಗಳನ್ನು ಬಾಧಿಸುವ ಸೋಂಕು ರೋಗಗಳ ಮತ್ತು ಸಾಂಕ್ರಾಮಿಕ ರೋಗಗಳ ಪ್ರತಿಬಂಧಕ್ಕೆ, ನಿಯಂತ್ರಣಕ್ಕೆ ಮತ್ತು ನಿರ್ಮೂಲನೆಗೆ, ಒಂದು ರಾಜ್ಯದಲ್ಲಿ ಕಾಣಿಸಿಕೊಂಡಿರುವ ಅಂಥ ರೋಗಗಳು ಇನ್ನೊಂದು ರಾಜ್ಯದಲ್ಲಿ ಕಾಣಿಸಿಕೊಳ್ಳದಂತೆ ಅಥವಾ ಒಂದು ರಾಜ್ಯದಿಂದ ಮತ್ತೊಂದು ರಾಜ್ಯಕ್ಕೆ ಅಂಥ ರೋಗಗಳು ಹರಡುವುದನ್ನು ತಡೆಯಲು ಮತ್ತು ಪಶುಗಳನ್ನು ಮತ್ತು ಪಶು ಉತ್ಪನ್ನಗಳನ್ನು ಆಮದು ಮಾಡಿಕೊಳ್ಳುವುದಕ್ಕೆ ಮತ್ತು ರಫ್ತು ಮಾಡುವುದಕ್ಕೆ ಅನುಕೂಲ ಮಾಡಿಕೊಡುವುದಕ್ಕಾಗಿ ಭಾರತಕ್ಕಿರುವ ಅಂತರರಾಷ್ಟ್ರೀಯ ಹೊಣೆಗಾರಿಕೆಗಳನ್ನು ಈಡೇರಿಸಲು ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಪ್ರಾಸಂಗಿಕವಾದ ವಿಷಯಗಳಿಗೆ ಉಪಬಂಧ ಕಲ್ಪಿಸಲು ಅಧಿನಿಯಮ.

ದೇಶದಲ್ಲಿ ಪಶು ಸೋಂಕು ರೋಗಗಳಿಂದಾಗಿ ಮತ್ತು ಸಾಂಕ್ರಾಮಿಕ ರೋಗಗಳಿಂದಾಗಿ ಅಪಾರವಾಗಿ ಆರ್ಥಿಕ ನಷ್ಟಗಳು ಆಗುತ್ತಿರುವುದರಿಂದ, ಈ ರೋಗಗಳಲ್ಲಿ ಕೆಲವು ರೋಗಗಳು ಸಾರ್ವಜನಿಕರಿಗೆ ತೀವ್ರತರವಾದ ಸಂಕಟವನ್ನು ಉಂಟು ಮಾಡುವಂಥವುಗಳಾಗಿರುವುದರಿಂದ;

ಮತ್ತು ಅಂಥ ಪಶು ರೋಗಗಳಲ್ಲಿ ಬಹಳಷ್ಟು ರೋಗಗಳನ್ನು, ಲಸಿಕೆ ಕಾರ್ಯಕ್ರಮಗಳನ್ನು ನ್ಯಾಯೋಚಿತ ಅನುಷ್ಠಾನಕ್ಕೆ ತಂದು ಅಥವಾ ವೈಜ್ಞಾನಿಕ ದೃಷ್ಟಿಕೋನದಲ್ಲಿ ಇತರ ಸಮುಚಿತ ಮತ್ತು ಸಕಾಲಿಕ ಕ್ರಮಗಳನ್ನು ಕೈಗೊಂಡು ಬಹುಮಟ್ಟಿಗೆ ಪ್ರತಿಬಂಧಿಸಬಹುದಾಗಿರುವುದರಿಂದ;

ಮತ್ತು ಪಶುಗಳನ್ನು ಮತ್ತು ಪಶು ಉತ್ಪನ್ನಗಳನ್ನು ಆಮದು ಮಾಡಿಕೊಳ್ಳುವುದಕ್ಕೆ ಮತ್ತು ರಫ್ತು ಮಾಡುವುದಕ್ಕೆ ಅನುಕೂಲ ಕಲ್ಪಿಸಿಕೊಡುವಂಥ ಮತ್ತು ಅಂತರರಾಷ್ಟ್ರೀಯ ಪದ್ಧತಿಗಳಿಗೆ ಅನುಗುಣವಾಗಿರಬೇಕಾದಂಥ ಕ್ರಮಗಳು ಅಗತ್ಯವಾಗಿರುವುದರಿಂದ;

ಮತ್ತು ಭಾರತದಲ್ಲಿ ಪಶು ಸೋಂಕು ರೋಗಗಳನ್ನು ಮತ್ತು ಸಾಂಕ್ರಾಮಿಕ ರೋಗಗಳನ್ನು ಪ್ರತಿಬಂಧಿಸುವ, ಅವುಗಳನ್ನು ನಿಯಂತ್ರಣಕ್ಕೆ ತರುವ ಮತ್ತು ಅವುಗಳನ್ನು ಭಾರತದಲ್ಲಿ ಇಲ್ಲದಂತೆ ಮಾಡುವ ವಿಷಯವನ್ನು ದೇಶದ ಆರ್ಥಿಕ ವ್ಯವಸ್ಥೆಯ ಮೇಲೆ, ಅಂತಹ ರೋಗಗಳಿಂದ ಪ್ರತಿಕೂಲ ಪರಿಣಾಮ ಉಂಟಾಗುವುದನ್ನು ತಪ್ಪಿಸುವ ಸಲುವಾಗಿ ಮತ್ತು ಈ ಉದ್ದೇಶಕ್ಕಾಗಿ ನಿಯಂತ್ರಣ ವಿಧಿವಿಧಾನಗಳಲ್ಲಿ ಸಮನ್ವಯ ತರುವ ಸಲುವಾಗಿ ಮತ್ತು ಪಶು ರೋಗಗಳು ರಾಜ್ಯರಾಜ್ಯಗಳ ಒಳಗೆ ಪ್ರಸರಣವಾಗುವುದನ್ನು ತಡೆಗಟ್ಟುವ ಸಲುವಾಗಿ ರಾಷ್ಟ್ರಮಟ್ಟದಲ್ಲಿ ನಿಭಾಯಿಸಬೇಕೆಂಬುದನ್ನು ಮನಗಂಡಿರುವುದರಿಂದ;

ಮತ್ತು ಅದರಲ್ಲೂ ಮುಖ್ಯವಾಗಿ ಕೆಲವು ಸೋಂಕು ರೋಗಗಳಿಗೆ ಮತ್ತು ಸಾಂಕ್ರಾಮಿಕ ರೋಗಗಳಿಗೆ ಸಂಬಂಧಿಸಿದಂತೆ, ರಾಜ್ಯ ಸರ್ಕಾರಗಳು ತಮ್ಮ ತಮ್ಮ ಅಧಿಕಾರವ್ಯಾಪ್ತಿಯೊಳಗೆ ಅತ್ಯಗತ್ಯವಾಗಿ ತೆಗೆದುಕೊಳ್ಳಬೇಕಾದ ಮುಂಜಾಗರೂಕತಾ ಕ್ರಮಗಳ ಬಗ್ಗೆ ಮತ್ತು ಸಮುಚಿತ ಕ್ರಮಗಳನ್ನು ಸಕಾಲದಲ್ಲಿ ಅಳವಡಿಸಿಕೊಂಡು ತಮ್ಮ ತಮ್ಮ ಪ್ರದೇಶಗಳ ಹೊರಗೆ ಪಶುಗಳ ಚಲನವಲನವನ್ನು ನಿಯಂತ್ರಿಸುವುದಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಗಳು ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮಾಡಿ ಈ ವಿಷಯವನ್ನು ರಾಷ್ಟ್ರಮಟ್ಟದಲ್ಲಿ ನಿಭಾಯಿಸಬೇಕಾಗಿರುವುದರಿಂದ;

ಮತ್ತು ಭಾರತವು Office International Des Epizooties, Paris – ಇದರ ಸದಸ್ಯ ರಾಷ್ಟ್ರವಾಗಿರುವುದರಿಂದ ಮತ್ತು ಸದರಿ ಸಂಸ್ಥೆಯ ಸಾರ್ವತ್ರಿಕ ಬಾಧ್ಯತೆಗಳನ್ನು, ತೀರ್ಮಾನಗಳನ್ನು ಮತ್ತು ಶಿಫಾರಸುಗಳನ್ನು ಅನುಷ್ಠಾನಕ್ಕೆ ತರುವುದು ಅತ್ಯಗತ್ಯವಾಗಿರುವುದರಿಂದ ಮತ್ತು ಸದರಿ ಸಂಸ್ಥೆಯು ಗೊತ್ತುಪಡಿಸಿದ ಅಂತರರಾಷ್ಟ್ರೀಯ ಪಶು ಆರೋಗ್ಯ ಸಂಹಿತೆಗೆ ಭಾರತವು ಬದ್ಧವಾಗಿರುವುದರಿಂದ;

ಇದು, ಭಾರತ ಗಣರಾಜ್ಯದ ಅರವತ್ತನೇ ವರ್ಷದಲ್ಲಿ ಸಂಸತ್ತಿನಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು:–

## ಅಧ್ಯಾಯ I

## ಪ್ರಾರಂಭಿಕ

1. **ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ಪಶು ಸೋಂಕು ರೋಗಗಳ ಮತ್ತು ಸಾಂಕ್ರಾಮಿಕ ರೋಗಗಳ ಪ್ರತಿಬಂಧ ಮತ್ತು ನಿಯಂತ್ರಣ ಅಧಿನಿಯಮ, 2009 ಎಂದು ಕರೆಯತಕ್ಕದ್ದು.

(2) ಇದು, ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ [1]ದಿನಾಂಕದಂದು ಜಾರಿಗೆ ಬರತಕ್ಕದ್ದು ಮತ್ತು ಬೇರೆ ಬೇರೆ ರಾಜ್ಯಗಳಿಗೆ ಅಥವಾ ಅವುಗಳಲ್ಲಿರುವ ಬೇರೆ ಬೇರೆ ಪ್ರದೇಶಗಳಿಗೆ ಹಾಗೆಯೇ ಈ ಅಧಿನಿಯಮದ ವಿವಿಧ ಉಪಬಂಧಗಳಿಗೆ, ಬೇರೆ ಬೇರೆ ದಿನಾಂಕಗಳನ್ನು ಗೊತ್ತುಪಡಿಸಬಹುದು ಮತ್ತು ಈ ಅಧಿನಿಯಮದ ಪ್ರಾರಂಭಕ್ಕೆ ಸಂಬಂಧಿಸಿದಂತೆ ಈ ಅಧಿನಿಯಮದ ಯಾವುದೇ ಅಂಥ ಉಪಬಂಧದಲ್ಲಿರುವ ಯಾವುದೇ ಉಲ್ಲೇಖವನ್ನು ಯಾವುದೇ ರಾಜ್ಯಕ್ಕೆ ಅಥವಾ ಪ್ರದೇಶಕ್ಕೆ ಅಥವಾ ಉಪಬಂಧಕ್ಕೆ ಸಂಬಂಧಿಸಿದಂತೆ ಅಂಥ ರಾಜ್ಯದಲ್ಲಿ ಅಥವಾ ಪ್ರದೇಶದಲ್ಲಿ ಸಂದರ್ಭಾನುಸಾರವಾಗಿ ಈ ಅಧಿನಿಯಮವು ಅಥವಾ ಆ ಉಪಬಂಧವು ಜಾರಿಗೆ ಬಂದಿರುವುದರ ಬಗೆಗಿನ ಉಲ್ಲೇಖವೆಂದು ಅರ್ಥೈಸತಕ್ಕದ್ದು.

2. **ಪರಿಭಾಷೆಗಳು.–** ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) "ಪಶು" ಎಂದರೆ:–

(i) ದನಕರು, ಎಮ್ಮೆ, ಕುರಿ, ಮೇಕೆ, ಚಮರೀಮೃಗ, ಮಿಥುನ;

(ii) ನಾಯಿ, ಬೆಕ್ಕು, ಹಂದಿ, ಕುದುರೆ, ಒಂಟೆ, ಕತ್ತೆ, ಹೇಸರಗತ್ತೆ, ಸಾಕು ಕೋಳಿಗಳು, ಜೇನು ಹುಳುಗಳು; ಮತ್ತು

(iii) ಕೇಂದ್ರ ಸರ್ಕಾರವು ಅಧಿಸೂಚನೆಯ ಮೂಲಕ [2]ನಿರ್ದಿಷ್ಟಪಡಿಸಬಹುದಾದ ಯಾವುದೇ ಇತರ ಪ್ರಾಣಿ ಅಥವಾ ಪಕ್ಷಿ;

(ಬಿ) "ತಪಾಸಣೆ ಠಾಣೆ" ಎಂದರೆ, ಈ ಅಧಿನಿಯಮದ ಉದ್ದೇಶಕ್ಕಾಗಿ, ಪ್ರಾಣಿಗಳನ್ನು ತಪಾಸಣೆ ಮಾಡಲು ನಿರ್ದೇಶಕನು ಸ್ಥಾಪಿಸಿದಂಥ ಯಾವುದೇ ಸ್ಥಳ;

(ಸಿ) "ಸಕ್ಷಮ ಅಧಿಕಾರಿ" ಎಂದರೆ, 17ನೇ ಪ್ರಕರಣದ ಮೇರೆಗೆ ಸರ್ಕಾರವು ಯಾವ ವ್ಯಕ್ತಿಯನ್ನು ಅಥವಾ ಅಧಿಕಾರಿಯನ್ನು ಸಕ್ಷಮ ಅಧಿಕಾರಿ ಎಂದು ಅಧಿಸೂಚಿಸುತ್ತದೋ ಆ ಯಾರೇ ವ್ಯಕ್ತಿ ಅಥವಾ ಆ ಯಾರೇ ಅಧಿಕಾರಿ;

(ಡಿ) "ಕಡ್ಡಾಯವಾಗಿ ಲಸಿಕೆ ಹಾಕುವುದು" ಎಂದರೆ, ಈ ಅಧಿನಿಯಮದ ಉಪಬಂಧಗಳ ಮೇರೆಗೆ ಅನುಸೂಚಿಯಲ್ಲಿರುವ ಯಾವ ರೋಗಕ್ಕೆ ಲಸಿಕೆಯನ್ನು ಹಾಕುವುದು ಕಡ್ಡಾಯವೆಂದು ಹೇಳಲಾಗಿದೆಯೋ ಆ ಯಾವುದೇ ರೋಗದ ವಿರುದ್ಧ ಯಾವುದೇ ಪಶುವಿಗೆ ಲಸಿಕೆ ಹಾಕುವುದು;

(ಇ) "ನಿಯಂತ್ರಿತ ಪ್ರದೇಶ" ಎಂದರೆ, 6ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ, ರಾಜ್ಯ ಸರ್ಕಾರವು ಯಾವ ಸ್ಥಳೀಯ ಪ್ರದೇಶವನ್ನು ನಿಯಂತ್ರಿತ ಪ್ರದೇಶವೆಂದು ಘೋಷಿಸಿದೆಯೋ ಆ ಯಾವುದೇ ಸ್ಥಳೀಯ ಪ್ರದೇಶ;

(ಎಫ್) "ದೋಷಪೂರಿತ ಲಸಿಕೆ" ಎಂದರೆ, ಅವಧಿ ಮುಗಿದ, ಮೊಹರು ಒಡೆದಿರುವ, ಮಲಿನಗೊಂಡ, ಸೂಕ್ತ ಅಲ್ಲದ ರೀತಿಯಲ್ಲಿ ಶೇಖರಿಸಿದ, ಗುರುತು ಚೀಟಿಯಿಲ್ಲದ ಅಥವಾ ವಿರೂಪಗೊಂಡ ಗುರುತು ಚೀಟಿ ಇರುವಂತ ಯಾವುದೇ ಲಸಿಕೆ;

---

[1] 25, ಆಗಸ್ಟ್ 2009 ನೋಡಿ: ಅಧಿಸೂಚನೆ ಸಂ. ಎಸ್.ಓ 2158(ಇ) ದಿನಾಂಕ: 24, ಆಗಸ್ಟ್ 2009. ನೋಡಿ: ಭಾರತ ಗೆಜೆಟ್, ಅಸಾಧಾರಣ, ಭಾಗ–II, ವಿಭಾಗ 3(ii)

ಈ ಅಧಿನಿಯಮವು, ಉತ್ತರ ಪ್ರದೇಶ ರಾಜ್ಯದ ಹೊರತು, ಎಲ್ಲ ರಾಜ್ಯಗಳಲ್ಲಿ ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಜಾರಿಗೆ ಬರತಕ್ಕದ್ದು.

[2] ಮೀನು, ಮೃದ್ವಂಗಿ, ವಲ್ಕವಂತ ಮತ್ತು ಉಭಯಚರ ಇವು (ಎ) ಖಂಡದಲ್ಲಿ ಪರಿಭಾಷಿಸಿದ 'ಪ್ರಾಣಿ' ಅರ್ಥವ್ಯಾಪ್ತಿಯೊಳಗೆ ಜಲಚರ ಪ್ರಾಣಿಗಳಾಗಿರತಕ್ಕದ್ದು. ನೋಡಿ: ಅಧಿಸೂಚನೆ ಸಂಖ್ಯೆ ಎಸ್.ಓ. 995 (ಇ) ದಿನಾಂಕ: 01 ನೇ ಏಪ್ರಿಲ್, 2014.

(ಜಿ) ರಾಜ್ಯಕ್ಕೆ ಸಂಬಂಧಿಸಿದಂತೆ, "ನಿರ್ದೇಶಕ" ಎಂದರೆ, ಈ ಅಧಿನಿಯಮದ ಉದ್ದೇಶಕ್ಕಾಗಿ ರಾಜ್ಯ ಸರ್ಕಾರವು, ಪಶು ಸಂಗೋಪನ ಇಲಾಖೆಯ ಅಥವಾ ಪಶುವೈದ್ಯಕೀಯ ಸೇವೆಗಳ ಇಲಾಖೆಯ ಅಥವಾ ಇವೆರಡೂ ಇಲಾಖೆಗಳ ಪ್ರಭಾರದಲ್ಲಿರುವ ಯಾವ ಅಧಿಕಾರಿಯನ್ನು ನಿರ್ದೇಶಕ ಎಂದು ಅಧಿಸೂಚಿಸಿದೆಯೋ ಆ ಯಾರೇ ಅಧಿಕಾರಿ;

(ಎಚ್) "ರೋಗರಹಿತ ಪ್ರದೇಶ" ಎಂದರೆ, 6ನೇ ಪ್ರಕರಣದ (5)ನೇ ಉಪಪ್ರಕರಣದ ಮೇರೆಗೆ ಯಾವ ನಿಯಂತ್ರಿತ ಪ್ರದೇಶವನ್ನು ರೋಗರಹಿತ ಪ್ರದೇಶವೆಂದು ಘೋಷಿಸಲಾಗಿದೆಯೋ ಆ ಯಾವುದೇ ನಿಯಂತ್ರಿತ ಪ್ರದೇಶ;

(ಐ) "ಸೋಂಕು ತಗುಲಿದ ಪಶು" ಎಂದರೆ, ಅನುಸೂಚಿಯಲ್ಲಿ ಹೇಳಿರುವ ಯಾವುದೇ ರೋಗದ ಸೋಂಕು ತಗುಲಿದ ಯಾವುದೇ ಪಶು;

(ಜೆ) "ಸೋಂಕು ಇರುವ ಪ್ರದೇಶ" ಎಂದರೆ, 20ನೇ ಪ್ರಕರಣದ ಮೇರೆಗೆ ಯಾವ ಪ್ರದೇಶವನ್ನು ಸೋಂಕು ಇರುವ ಪ್ರದೇಶವೆಂದು ಘೋಷಿಸಲಾಗಿದೆಯೋ ಅಂಥ ಪ್ರದೇಶ;

(ಕೆ) "ಅಧಿಸೂಚನೆ" ಎಂದರೆ, ರಾಜಪತ್ರದಲ್ಲಿ ಪ್ರಕಟಿಸಿದ ಅಧಿಸೂಚನೆ;

(ಎಲ್) "ನಿಯಮಿಸಿದ" ಎಂದರೆ, ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು;

(ಎಂ) "ಪ್ರಕಟಣೆ"ಯು, ಆ ಪ್ರದೇಶದಲ್ಲಿ, ಮಾಧ್ಯಮದ ಅಥವಾ ವೃತ್ತ ಪತ್ರಿಕೆಯ ಅಥವಾ ಯಾವುದೇ ಇತರ ಸಮೂಹ ಮಾಧ್ಯಮದ ಮೂಲಕ ಮಾಹಿತಿಯನ್ನು ಪ್ರಚುರಪಡಿಸುವುದು ಮತ್ತು ಗಟ್ಟಿ ಧ್ವನಿಯಲ್ಲಿ ಹೇಳುವಂಥ ಮತ್ತು ತಮಟೆ ಬಾರಿಸಿ ಹೇಳುವಂಥ ಸ್ಥಳೀಯ ಸಂಪರ್ಕ ಸಾಧನಗಳ ಮೂಲಕ ಮಾಹಿತಿಯನ್ನು ಪ್ರಚುರಪಡಿಸುವುದು ಒಳಗೊಳ್ಳುತ್ತದೆ;

(ಎನ್) "ರೋಗಿ ಸಂಸರ್ಗ ನಿಷೇಧ ಸ್ಥಳ ಶಿಬಿರ" ಎಂದರೆ, ಈ ಅಧಿನಿಯಮದ ಉದ್ದೇಶಕ್ಕಾಗಿ, ಸೋಂಕು ತಗುಲಿದ ಪ್ರಾಣಿಗಳನ್ನು ಮತ್ತು ಪಕ್ಷಿಗಳನ್ನು ಆರೋಗ್ಯಕರ ಪ್ರಾಣಿಗಳ ಮತ್ತು ಪಕ್ಷಿಗಳ ಸಂಪರ್ಕಕ್ಕೆ ಬಾರದಂತೆ ಪ್ರತ್ಯೇಕಿಸಿಡುವುದಕ್ಕಾಗಿ ಘೋಷಿಸಿದ ಯಾವುದೇ ಸ್ಥಳ;

(ಓ) "ಅನುಸೂಚಿತ ರೋಗ" ಎಂದರೆ, ಅನುಸೂಚಿಯಲ್ಲಿ ಸೇರಿಸಿರುವ ಯಾವುದೇ ರೋಗ;

(ಪಿ) "ಪಶು ಚಿಕಿತ್ಸಕ" ಎಂದರೆ, ಯಾವ ವ್ಯಕ್ತಿಯು ಪ್ರಸ್ತುತ ಜಾರಿಯಲ್ಲಿರುವ ಕಾನೂನಿನ ಮೇರೆಗೆ ಮನ್ನಣೆ ಪಡೆದ ಪಶುವೈದ್ಯಕೀಯ ಅರ್ಹತೆಯನ್ನು ಹೊಂದಿರುವನೋ, ಪಶು ರೋಗಗಳಿಗೆ ಚಿಕಿತ್ಸೆ ನೀಡಲು ಯಾವ ವ್ಯಕ್ತಿಗೆ ಅನುಮತಿ ನೀಡಲಾಗಿದೆಯೋ ಆ ಯಾರೇ ವ್ಯಕ್ತಿ;

(ಕ್ಯೂ) "ಪಶು ವೈದ್ಯಾಧಿಕಾರಿ" ಎಂದರೆ, 3ನೇ ಪ್ರಕರಣದ (ಬಿ) ಖಂಡದ ಮೇರೆಗೆ, ರಾಜ್ಯ ಸರ್ಕಾರವು ಯಾವ ಅಧಿಕಾರಿಯನ್ನು ಪಶು ವೈದ್ಯಾಧಿಕಾರಿಯೆಂದು ನೇಮಕ ಮಾಡಿದೆಯೋ ಆ ಯಾರೇ ಅಧಿಕಾರಿ;

(ಆರ್) ಒಂದು ಗ್ರಾಮಕ್ಕೆ ಸಂಬಂಧಿಸಿದಂತೆ, "ಗ್ರಾಮಾಧಿಕಾರಿ" ಎಂದರೆ, ರಾಜ್ಯ ಸರ್ಕಾರವು ನಿಯಮಿಸಿದ ವಿದ್ಯಾರ್ಹತೆಗೆ ಅನುಸಾರವಾಗಿ ಯಾವ ವ್ಯಕ್ತಿಯನ್ನು ಗ್ರಾಮಾಧಿಕಾರಿಯೆಂದು ಅಧಿಕೃತಗೊಳಿಸಲಾಗಿದೆಯೋ ಅಥವಾ ಹೆಸರಿಸಲಾಗಿದೆಯೋ ಆ ಯಾರೇ ವ್ಯಕ್ತಿ.

## ಅಧ್ಯಾಯ II

## ಅನುಸೂಚಿತ ರೋಗಗಳ ನಿಯಂತ್ರಣ

3. **ಪಶು ವೈದ್ಯಾಧಿಕಾರಿಗಳ ನೇಮಕ.–** ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ–

(ಎ) ಪರಿವೀಕ್ಷಣೆ ಕೈಗೊಳ್ಳಲು ಸೂಕ್ತವೆಂದು ತಾನು ಭಾವಿಸಿದಷ್ಟು ಸಂಖ್ಯೆಯ ವ್ಯಕ್ತಿಗಳನ್ನು ಪಶು ಚಿಕಿತ್ಸಕರನ್ನಾಗಿ ನೇಮಕ ಮಾಡಬಹುದು ಮತ್ತು ಅವರವರ ಅಧಿಕಾರವ್ಯಾಪ್ತಿಗೊಳಪಡುವ ಸ್ಥಳೀಯ ಎಲ್ಲೆಗಳನ್ನು ನಿರ್ದಿಷ್ಟಪಡಿಸಬಹುದು; ಮತ್ತು

(ಬಿ) ಸೂಕ್ತವೆಂದು ತಾನು ಭಾವಿಸಿದಷ್ಟು ಸಂಖ್ಯೆಯ ಪಶು ಚಿಕಿತ್ಸಕರನ್ನು, ಪಶು ವೈದ್ಯಾಧಿಕಾರಿಗಳನ್ನಾಗಿ ನೇಮಕ ಮಾಡಬಹುದು, ಸದರಿ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ಅವರು

ಅವರವರ ಅಧಿಕಾರವ್ಯಾಪ್ತಿಯ ಸ್ಥಳೀಯ ಎಲ್ಲೆಗಳೊಳಗೆ ತಮ್ಮ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ತಮ್ಮ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

4. **ಅನುಸೂಚಿತ ರೋಗಗಳನ್ನು ವರದಿ ಮಾಡುವುದು ಕಡ್ಡಾಯ.–** (1) ಯಾವುದೇ ಪ್ರಾಣಿಯನ್ನು ನೋಡಿಕೊಳ್ಳುತ್ತಿರುವ ಮಾಲೀಕನಿಗೆ ಅಥವಾ ಯಾರೇ ಇತರ ವ್ಯಕ್ತಿಗೆ, ಸರ್ಕಾರೇತರ ಸಂಸ್ಥೆಗೆ, ಸಾರ್ವಜನಿಕ ಸಂಸ್ಥೆಗಳಿಗೆ ಅಥವಾ ಗ್ರಾಮ ಪಂಚಾಯಿತಿಗೆ ಆ ಯಾವುದೇ ಪ್ರಾಣಿಗೆ ಅನುಸೂಚಿತ ರೋಗ ತಗುಲಿದೆ ಎಂದು ನಂಬಲು ಕಾರಣ ಇದ್ದರೆ, ಅಂಥ ಪ್ರತಿಯೊಬ್ಬ ಮಾಲೀಕನು ಆ ವ್ಯಕ್ತಿಯು ಅಥವಾ ಸರ್ಕಾರೇತರ ಸಂಸ್ಥೆಯು, ಸಾರ್ವಜನಿಕ ಸಂಸ್ಥೆಗಳು ಅಥವಾ ಗ್ರಾಮ ಪಂಚಾಯತಿಯು ಆ ಸಂಗತಿಯನ್ನು ಪ್ರಭಾರ ಹೊಂದಿರುವ ಗ್ರಾಮಾಧಿಕಾರಿಗೆ ಅಥವಾ ಗ್ರಾಮ ಪಂಚಾಯತಿಗೆ ವರದಿ ಮಾಡತಕ್ಕದ್ದು. ಆ ಗ್ರಾಮಾಧಿಕಾರಿಯು ಅಥವಾ ಆ ಗ್ರಾಮ ಪಂಚಾಯತಿಯು ಆ ಸಂಗತಿಯನ್ನು ಅತ್ಯಂತ ಹತ್ತಿರದಲ್ಲಿರುವ ಪಶು ಚಿಕಿತ್ಸಕನಿಗೆ ಲಿಖಿತದಲ್ಲಿ ವರದಿ ಮಾಡತಕ್ಕದ್ದು.

(2) ಗ್ರಾಮಾಧಿಕಾರಿಯು ತನ್ನ ಅಧಿಕಾರವ್ಯಾಪ್ತಿಯ ಪ್ರದೇಶದಲ್ಲಿ ಯಾವುದೇ ರೋಗವು ಕಾಣಿಸಿಕೊಂಡಿರುವ ಬಗ್ಗೆ ವರದಿ ಮಾಡುವುದಕ್ಕಾಗಿ ಆ ಪ್ರದೇಶಕ್ಕೆ ಭೇಟಿ ನೀಡತಕ್ಕದ್ದು.

(3) ಪ್ರತಿಯೊಬ್ಬ ಪಶು ಚಿಕಿತ್ಸಕನು, (1)ನೇ ಉಪಪ್ರಕರಣದ ಮೇರೆಗೆ ವರದಿಯನ್ನು ಸ್ವೀಕರಿಸಿದ ಮೇಲೆ ಅಥವಾ ಅನ್ಯಥಾ, ಯಾವುದೇ ಪಶುವಿಗೆ ಅನುಸೂಚಿತ ರೋಗದ ಸೋಂಕು ತಗುಲಿದೆ ಎಂದು ನಂಬಲು ಅವನಿಗೆ ಕಾರಣವಿದ್ದರೆ, ಅವನು ಅದನ್ನು ಪಶುವೈದ್ಯಾಧಿಕಾರಿಗೆ ವರದಿ ಮಾಡತಕ್ಕದ್ದು.

(4) ಯಾವುದೇ ರಾಜ್ಯದಲ್ಲಿ, ಯಾವುದೇ ಪಶುವಿಗೆ ಯಾವುದೇ ಅನುಸೂಚಿತ ರೋಗವು ತಗುಲಿದೆ ಎಂದು ಕಂಡುಬಂದರೆ, ನಿರ್ದೇಶಕನು, ಯಾವ ರಾಜ್ಯಗಳು ಅಂಥ ರೋಗವು ಕಾಣಿಸಿಕೊಂಡಿರುವಂಥ ಸ್ಥಳದ ನಿಕಟ ನೆರೆಹೊರೆಯಲ್ಲಿವೆಯೋ ಆ ರಾಜ್ಯಗಳ ನಿರ್ದೇಶಕರುಗಳಿಗೆ ಆ ರೋಗವು ಹರಡದಂತೆ ಸೂಕ್ತ ಪ್ರತಿಬಂಧಕ ಕ್ರಮಗಳನ್ನು ಕೈಗೊಳ್ಳಲು ಸೂಚನೆಯನ್ನು ನೀಡತಕ್ಕದ್ದು.

5. **ಸೋಂಕು ರೋಗ ತಗುಲಿದ ಪಶುಗಳನ್ನು ಪ್ರತ್ಯೇಕವಾಗಿಡುವುದು ಕರ್ತವ್ಯ.–** (1) ಯಾವ ಪಶುವಿಗೆ ಅನುಸೂಚಿತ ರೋಗವು ತಗುಲಿದೆಯೆಂದು ಪಶುವಿನ ಮಾಲೀಕನಿಗೆ ಅಥವಾ ಅದನ್ನು ನೋಡಿಕೊಳ್ಳುವ ಪ್ರತಿಯೊಬ್ಬ ವ್ಯಕ್ತಿಗೆ ನಂಬಲು ಕಾರಣ ಇದ್ದರೆ, ಅಂಥ ಪಶುವನ್ನು ಪ್ರತ್ಯೇಕವಾಗಿ ಇರಿಸತಕ್ಕದ್ದು ಮತ್ತು ಆರೋಗ್ಯದಿಂದಿರುವ ಪಶುಗಳಿಂದ ಆ ಪಶುವನ್ನು ಪ್ರತ್ಯೇಕಿಸಿ ಬೇರೊಂದು ದೂರದ ಸ್ಥಳದಲ್ಲಿ ಇರಿಸತಕ್ಕದ್ದು ಮತ್ತು ಸೋಂಕು ತಗುಲಿದ ಪಶುವು ಯಾವುದೇ ಇತರ ಪ್ರಾಣಿಯ ಸಂಪರ್ಕಕ್ಕೆ ಬರದಂತೆ ತಡೆಯಲು ಸಾಧ್ಯವಾದ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು.

(2) ಉಪಪ್ರಕರಣ (1)ರಲ್ಲಿ ತಿಳಿಸಿದ ಪಶುವಿನ ಮಾಲೀಕನು ಅಥವಾ ಅದನ್ನು ನೋಡಿಕೊಳ್ಳುವ ಅಥವಾ ಅದರ ಮೇಲೆ ನಿಯಂತ್ರಣ ಹೊಂದಿರುವ ಇತರ ವ್ಯಕ್ತಿಯು ಆ ಪಶುವನ್ನು ಹೊರಗೆ ಬಿಡತಕ್ಕದ್ದಲ್ಲ ಮತ್ತು ಸಾಮಾನ್ಯವಾಗಿ ಪಶುಗಳು ಮೇಯುವಂಥ ಸ್ಥಳದಲ್ಲಿ ಮೇಯುವುದಕ್ಕೆ ಅಥವಾ ತಪ್ಪತಿ, ಕೊಳ, ಕೆರೆ ಅಥವಾ ನದಿಯೂ ಸೇರಿದಂತೆ ಪಶುಗಳು ನೀರು ಕುಡಿಯುವಂಥ ಯಾವುದೇ ಸಾಮಾನ್ಯ ಮೂಲದಲ್ಲಿ ನೀರು ಕುಡಿಯಲು ಬಿಡತಕ್ಕದ್ದಲ್ಲ.

(3) ಪುರಸಭೆ, ಪಂಚಾಯತಿ ಅಥವಾ ಇತರ ಸ್ಥಳೀಯ ಆಡಳಿತವು ಸೋಂಕು ತಗಲಿದ ಇತರ ಎಲ್ಲಾ ಪಶುಗಳನ್ನು ಪ್ರತ್ಯೇಕವಾಗಿರಿಸತಕ್ಕದ್ದು.

**6. ನಿಯಂತ್ರಿತ ಪ್ರದೇಶಗಳನ್ನು ಮತ್ತು ರೋಗರಹಿತ ಪ್ರದೇಶಗಳನ್ನು ಅಧಿಸೂಚಿಸುವುದು.–** (1) ಯಾವುದೇ ಅನುಸೂಚಿತ ರೋಗವನ್ನು ಪ್ರತಿಬಂಧಿಸುವ, ನಿಯಂತ್ರಣಕ್ಕೆ ತರುವ ಅಥವಾ ನಿರ್ಮೂಲನೆ ಮಾಡುವ ಉದ್ದೇಶದಿಂದ, ಅಧಿಸೂಚನೆಯ ಮೂಲಕ, ಸದರಿ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿರುವ ಯಾವುವೇ ಜಾತಿಯ ಪಶುವಿಗೆ ತಗಲುವ, ಅನುಸೂಚಿಯಲ್ಲಿ ಹೇಳಿರುವ ಯಾವುದೇ ರೋಗಕ್ಕೆ ಸಂಬಂಧಪಟ್ಟಂತೆ ಮತ್ತು ಅಂಥ ಯಾವುದೇ ರೋಗಕ್ಕೆ ತುತ್ತಾಗಬಹುದಾದ ಇತರ ಯಾವುದೇ ಜಾತಿಯ ಪ್ರಾಣಿಗೆ ಸಂಬಂಧಪಟ್ಟಂತೆ ಯಾವುದೇ ಪ್ರದೇಶವನ್ನು ರಾಜ್ಯ ಸರ್ಕಾರವು ನಿಯಂತ್ರಿತ ಪ್ರದೇಶವೆಂದು ಘೋಷಿಸತಕ್ಕದ್ದು.

(2) ರಾಜ್ಯ ಸರ್ಕಾರವು, (1)ನೇ ಉಪಪ್ರಕರಣದ ಮೇರೆಗೆ ಹೊರಡಿಸಿದ ಅಧಿಸೂಚನೆಯ ಸಾರಾಂಶವನ್ನು ಸ್ಥಳೀಯ ವೃತ್ತಪತ್ರಿಕೆಯಲ್ಲಿ, ದೇಶೀಯ ಭಾಷೆಯಲ್ಲಿ ಪ್ರಕಟಿಸುವಂತೆ ಮಾಡತಕ್ಕದ್ದು ಮತ್ತು ಆ ಪ್ರದೇಶದಲ್ಲಿ ಗಟ್ಟಿ ಧ್ವನಿಯಲ್ಲಿ ಮತ್ತು ತಮಟೆ ಬಾರಿಸಿ ಹೇಳುತ್ತಾ ಪ್ರಕಟಿಸುವಂತೆ ಮಾಡತಕ್ಕದ್ದು.

(3) ಉಪಪ್ರಕರಣ (1)ರ ಮೇರೆಗೆ ಅಧಿಸೂಚನೆಯನ್ನು ಹೊರಡಿಸಿರುವಾಗ, ಆ ನಿಯಂತ್ರಿತ ಪ್ರದೇಶದಲ್ಲಿರುವ ಆ ಜಾತಿಯ ಎಲ್ಲಾ ಪಶುಗಳಿಗೆ ಆ ರೋಗ ತಗುಲದಂತೆ ಕಡ್ಡಾಯವಾಗಿ ಲಸಿಕೆ ಹಾಕಿಸತಕ್ಕದ್ದು ಮತ್ತು ಆ ರೋಗ ತಗುಲದಂತೆ ಮಾಡುವುದಕ್ಕಾಗಿ ರಾಜ್ಯ ಸರ್ಕಾರವು, ಸಾರ್ವಜನಿಕ ನೋಟೀಸಿನ ಮೂಲಕ ನಿರ್ದೇಶಿಸಬಹುದಾದಂಥ ವಿಧಾನದಲ್ಲಿ ಮತ್ತು ಅಂಥ ಕಾಲದೊಳಗೆ ಇತರ ಕ್ರಮಗಳನ್ನು ಕೈಗೊಳ್ಳತಕ್ಕದ್ದು.

(4) ರಾಜ್ಯ ಸರ್ಕಾರವು ಅಗತ್ಯವಾದ ಲಸಿಕೆಯು ದೊರೆಯುವಂತೆ ಮಾಡತಕ್ಕದ್ದು ಮತ್ತು (3)ನೇ ಉಪಪ್ರಕರಣದ ಮೇರೆಗೆ ಯಾವ ಪಶುವಿಗೆ ಲಸಿಕೆ ಹಾಕಬೇಕಾಗಿದೆಯೋ ಆ ಪಶುವಿನ ಪ್ರತಿಯೊಬ್ಬ ಮಾಲೀಕನು ಅಥವಾ ಅದನ್ನು ನೋಡಿಕೊಳ್ಳುವ ವ್ಯಕ್ತಿಯು ಆ ಪಶುವಿಗೆ ಕಡ್ಡಾಯವಾಗಿ ಲಸಿಕೆ ಹಾಕಿಸುವುದು ಅವನ ಕರ್ತವ್ಯವಾಗಿರತಕ್ಕದ್ದು.

(5) ನಿರ್ದೇಶಕರಿಂದ ಸ್ವೀಕರಿಸಿದ ವರದಿಯ ಆಧಾರದ ಮೇಲೆ ಅಥವಾ ಅನ್ಯಥಾ, ಯಾವುದೇ ನಿಯಂತ್ರಿತ ಪ್ರದೇಶದಲ್ಲಿ ಯಾವುದೇ ಜಾತಿಯ ಪಶುವಿಗೆ ತಗುಲಿರುವ ಯಾವುದೇ ಅನುಸೂಚಿತ ರೋಗವು ಈಗ ಇಲ್ಲವೇ ಇಲ್ಲ ಎಂದು ರಾಜ್ಯ ಸರ್ಕಾರಕ್ಕೆ ಮನದಟ್ಟಾದರೆ, ಆ ಪ್ರದೇಶವನ್ನು ನಿರ್ದಿಷ್ಟ ಜಾತಿಯ ಪಶುವಿಗೆ ಸಂಬಂಧಿಸಿದಂತೆ ಆ ರೋಗರಹಿತ ಪ್ರದೇಶವೆಂದು ಆ ಸರ್ಕಾರವು ಅಧಿಸೂಚನೆಯ ಮೂಲಕ ಘೋಷಿಸಬಹುದು.

(6) ಉಪಪ್ರಕರಣ (5)ರ ಮೇರೆಗೆ ಅಧಿಸೂಚನೆಯನ್ನು ಹೊರಡಿಸಿದಾಗ, ಯಾವ ಜಾತಿಯ ಪಶುವಿಗೆ ಅಥವಾ ಪಶು ಜಾತಿಗಳಲ್ಲಿ ರೋಗಕ್ಕೆ ತುತ್ತಾಗಬಹುದಾದ ಯಾವುದೇ ಇತರ ಜಾತಿಯ ಪಶುವಿಗೆ ಸಂಬಂಧಿಸದಂತೆ ಆ ಪ್ರದೇಶವು ರೋಗರಹಿತ ಪ್ರದೇಶವಾಗಿದೆಯೋ ಆ ರೋಗರಹಿತ ಪ್ರದೇಶಕ್ಕೆ ಪ್ರವೇಶಿಸಲು ಆ ಯಾವುದೇ ಪಶುವಿಗೆ, ಆ ನಿರ್ದಿಷ್ಟ ರೋಗದ ವಿರುದ್ಧ ಲಸಿಕೆ ಹಾಕಿ, ಅದಕ್ಕೆ ಸೂಕ್ತವಾಗಿ ಸೋಂಕು ತಟ್ಟದಂತೆ ರಕ್ಷಣೆ ನೀಡಿದ ಹೊರತು ಅವಕಾಶ ನೀಡತಕ್ಕದ್ದಲ್ಲ.

**7. ನಿಯಂತ್ರಿತ ಪ್ರದೇಶದಿಂದ ಪಶುಗಳ ಚಲನವಲನದ ನಿಷೇಧ.–** (1) ಯಾವುದೇ ಜಾತಿಯ ಪಶುಗಳಿಗೆ ತಗುಲಿರುವ ಯಾವುದೇ ರೋಗಕ್ಕೆ ಸಂಬಂಧಪಟ್ಟಂತೆ ಯಾವುದೇ ಪ್ರದೇಶವನ್ನು ನಿಯಂತ್ರಿತ ಪ್ರದೇಶವೆಂದು ಘೋಷಿಸಿ 6ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಅಧಿಸೂಚನೆಯನ್ನು ಹೊರಡಿಸಿದ್ದಾಗ, ಆ ಜಾತಿಯ ಪಶುವನ್ನು ಯಾವ ಸ್ಥಳದಲ್ಲಿ ಇಡಲಾಗಿದೆಯೋ ಆ ಸ್ಥಳದಿಂದ ಅದನ್ನು ಸ್ಥಳಾಂತರಿಸತಕ್ಕದ್ದಲ್ಲ.

(2) ನಿರ್ದೇಶಕನು, ಯಾವುದೇ ಪ್ರದೇಶಕ್ಕೆ ಸಂಬಂಧಪಟ್ಟಂತೆ, ಅನುಸೂಚಿಯಲ್ಲಿ ಹೇಳಿರುವ ಯಾವುದೇ ರೋಗದ ಪ್ರತಿಬಂಧದ, ನಿವಾರಣೆಯ ಅಥವಾ ನಿರ್ಮೂಲನೆಯ ಉದ್ದೇಶಕ್ಕಾಗಿ, ರಾಜಪತ್ರದಲ್ಲಿ ಆದೇಶವನ್ನು ಪ್ರಕಟಿಸಿ ಆ ಆದೇಶದಲ್ಲಿ ನಿರ್ದಿಷ್ಟಪಡಿಸಿರುವ ಜಾತಿಗಳಲ್ಲಿ ಯಾವುದೇ ಜಾತಿಯ ಎಲ್ಲ ಪಶುಗಳನ್ನು ಯಾವ ಸ್ಥಳದಲ್ಲಿ ಇಡಲಾಗಿದೆಯೋ ಆ ಸ್ಥಳದಿಂದ ಯಾವುದೇ ಇತರ ಸ್ಥಳಕ್ಕೆ ಅವುಗಳ ಚಲನವಲನವನ್ನು ನಿಷೇಧಿಸಬಹುದು.

(3) ಉಪಪ್ರಕರಣ (1)ರಲ್ಲಿ ಮತ್ತು (2)ರಲ್ಲಿ ಏನೇ ಒಳಗೊಂಡಿದ್ದರೂ–

(ಎ) ಆ ಉಪಪ್ರಕರಣಗಳಲ್ಲಿ ಹೇಳಿರುವ ಯಾವುದೇ ಪಶುವನ್ನು ಯಾವ ಸ್ಥಳದಲ್ಲಿ ಇಡಲಾಗಿದೆಯೋ ಆ ಸ್ಥಳದಿಂದ ಅದಕ್ಕೆ ಯಾವ ಹತ್ತಿರದ ಸ್ಥಳದಲ್ಲಿ ಲಸಿಕೆ ಹಾಕಿಸಬೇಕಿದೆಯೋ ಆ ಸ್ಥಳಕ್ಕೆ, ಆ ಪಶುವನ್ನು, ಅದಕ್ಕೆ ಲಸಿಕೆ ಹಾಕಿ ಸೋಂಕು ತಟ್ಟದಂತೆ ರಕ್ಷಣೆ ನೀಡುವ ಉದ್ದೇಶಕ್ಕಾಗಿ ಎಲ್ಲಿಯವರೆಗೆ ಒಯ್ಯಬೇಕಾಗಿದೆಯೋ ಅಲ್ಲಿಯವರೆಗೆ ಆ ಪಶುವಿನ ಚಲನವಲನವನ್ನು; ಅಥವಾ

(ಬಿ) ನಿರ್ದಿಷ್ಟ ರೋಗಕ್ಕೆ ಸೂಕ್ತವಾಗಿ ಲಸಿಕೆ ಹಾಕಿ ಆ ಪಶುವಿಗೆ ಸೋಂಕು ತಟ್ಟದಂತೆ ರಕ್ಷಣೆ ನೀಡಲಾಗಿದೆ ಎಂಬುದನ್ನು ಮತ್ತು ಆ ಪಶುವಿನ ಮೇಲೆ ಲಸಿಕೆ ಹಾಕಿರುವುದರ ನಿರ್ದಿಷ್ಟ ಗುರುತು ಇದೆ ಎಂಬುದನ್ನು ತೋರಿಸುವ, ಎಂದರೆ ಲಸಿಕೆ ಹಾಕಿರುವುದರ ಬಗೆಗಿನ ಸಿಂಧುವಾದ ಪ್ರಮಾಣಪತ್ರವು ಎಲ್ಲಿಯವರಗೆ ಅದರ ಜೊತೆ ಇರುವುದೋ ಅಲ್ಲಿಯವರೆಗೆ ಅಂಥ ಯಾವುದೇ ಪಶುವಿನ ಚಲನವಲನವನ್ನು

– ನಿಷೇಧಿಸಲಾಗಿದೆ ಎಂದು ಭಾವಿಸತಕ್ಕದ್ದಲ್ಲ.

**8. ಲಸಿಕೆ ಹಾಕುವುದು, ಗುರುತು ಹಾಕುವುದು ಮತ್ತು ಲಸಿಕೆ ಹಾಕಿದ್ದಕ್ಕೆ ಪ್ರಮಾಣಪತ್ರ ನೀಡಿಕೆ.–** (1) ಪಶುವಿಗೆ ಲಸಿಕೆಯನ್ನು ಹಾಕಲು ತತ್ಕಾಲದಲ್ಲಿ ಜಾರಿಯಲ್ಲಿರುವ ಕಾನೂನಿನ ಮೇರೆಗೆ ಸಕ್ಷಮನಾಗಿರುವ ಯಾರೇ ವ್ಯಕ್ತಿಯು ಪಶುವಿಗೆ ಲಸಿಕೆಯನ್ನು ಹಾಕಬಹುದು ಮತ್ತು ಲಸಿಕೆ ಹಾಕಿದ್ದಕ್ಕೆ ಪ್ರಮಾಣಪತ್ರವನ್ನು ನೀಡಬಹುದು.

(2) ಉಪಪ್ರಕರಣ (1)ರ ಉಪಬಂಧಗಳಿಗೆ ಅನುಗುಣವಾಗಿ, ಅನುಸೂಚಿಯಲ್ಲಿ ಹೇಳಿರುವ ಯಾವುದೇ ರೋಗಕ್ಕಾಗಿ ಯಾವುದೇ ಪಶುವಿಗೆ ಲಸಿಕೆ ಹಾಕಿದ್ದರೆ, ಪಶುವಿಗೆ ಲಸಿಕೆ ಹಾಕಿದ ವ್ಯಕ್ತಿಯು ಬರೆ ಹಾಕಿಸಿ, ಹಚ್ಚೆ ಹಾಕಿಸಿ ಅಥವಾ ಕಿವಿ ಚುಚ್ಚಿಸಿ ಅಥವಾ ನಿರ್ದೇಶಕನು ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ನಿರ್ದೇಶನ ನೀಡಬಹುದಾದಂಥ ಇತರ ರೀತಿಯಲ್ಲಿ ಗುರುತು ಮಾಡಿಸತಕ್ಕದ್ದು ಮತ್ತು ನಿರ್ದೇಶಕನು ಅನ್ಯಥಾ ನಿರ್ದಿಷ್ಟಪಡಿಸಿದ್ದ ಹೊರತು ಆ ಗುರುತನ್ನು ಅಳಿಸಿಹಾಕತಕ್ಕದ್ದಲ್ಲ.

(3) ಲಸಿಕೆ ಹಾಕಿರುವ ಬಗ್ಗೆ ಪ್ರಮಾಣಪತ್ರವನ್ನು ನೀಡುವ ಪ್ರಾಧಿಕಾರವು, ಲಸಿಕೆ ಹಾಕಿದ ದಿನಾಂಕವನ್ನು, ಲಸಿಕೆಯ ತಯಾರಿಕೆ ದಿನಾಂಕವನ್ನು ಮತ್ತು ಲಸಿಕೆಯ ಬಳಕೆಯ ಅವಧಿಯು ಮುಕ್ತಾಯವಾಗುವ ದಿನಾಂಕವನ್ನು ಮತ್ತು ಪಶುವಿಗೆ ಹಾಕಿದ ನಿರ್ದಿಷ್ಟ ಲಸಿಕೆಯು ಯಾವ ದಿನಾಂಕದವರೆಗೆ ಆ ಪಶುವಿಗೆ ಸೋಂಕು ತಟ್ಟದಂತೆ ರಕ್ಷಣೆ ನೀಡುತ್ತದೆಯೋ ಆ ದಿನಾಂಕವನ್ನು ನಿರ್ದಿಷ್ಟಪಡಿಸಿರತಕ್ಕದ್ದು.

**9. ಲಸಿಕೆ ಹಾಕಿದ್ದಕ್ಕೆ ನೀಡಿದ ಪ್ರಮಾಣಪತ್ರದಲ್ಲಿರಬೇಕಾದ ಒಳಾಂಶಗಳು.–** ಲಸಿಕೆ ಹಾಕಿದ್ದಕ್ಕೆ ಈ ಅಧಿನಿಯಮದ ಮೇರೆಗೆ ನೀಡುವ ಪ್ರತಿಯೊಂದು ಪ್ರಮಾಣಪತ್ರವನ್ನು ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ನಮೂನೆಯಲ್ಲಿ ನೀಡತಕ್ಕದ್ದು ಮತ್ತು ಅದರಲ್ಲಿ ಅಂಥ ವಿವರಗಳು ಒಳಗೊಂಡಿರತಕ್ಕದ್ದು.

**10. ನಿಯಂತ್ರಿತ ಪ್ರದೇಶದ ಒಳಗಡೆಗೆ ಮತ್ತು ರೋಗರಹಿತ ಪ್ರದೇಶದ ಒಳಗಡೆಗೆ ಪಶುಗಳ ಪ್ರವೇಶ ಮತ್ತು ಅಲ್ಲಿಂದ ಪಶುಗಳ ನಿರ್ಗಮನ.–** (1) ಯಾವುದೇ ಜಾತಿಯ ಪಶುಗಳಿಗೆ ತಗುಲಿರುವ ಯಾವುದೇ ರೋಗಕ್ಕೆ ಸಂಬಂಧಿಸಿದಂತೆ, 6ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಯಾವುದೇ ಪ್ರದೇಶವನ್ನು ನಿಯಂತ್ರಿತ ಪ್ರದೇಶವೆಂದು ಘೋಷಿಸಿದ್ದಾಗ, ಆ ಜಾತಿಯ ಯಾವುದೇ ಪಶುವನ್ನು 16ನೇ ಪ್ರಕರಣದಲ್ಲಿ ಹೇಳಿರುವಂತೆ ಹೊರತು, ಆ ಪ್ರದೇಶದ ಹೊರಗೆ ತೆಗೆದುಕೊಂಡು ಹೋಗತಕ್ಕದ್ದಲ್ಲ ಅಥವಾ ಆ ಪ್ರದೇಶದ ಒಳಗಡೆಗೆ ತರತಕ್ಕದ್ದಲ್ಲ.

(2) ಆ ಜಾತಿಯ ಇತರ ಪಶುಗಳಿಗೆ ಆ ರೋಗದ ಸೋಂಕು ತಗಲುವ ಸಂಭವವಿದ್ದಾಗಲೂ ಸಹ, ನಿರ್ದೇಶಕನು ರಾಜಪತ್ರದಲ್ಲಿ ಮತ್ತು ಸ್ಥಳೀಯ ಭಾಷೆಯಲ್ಲಿರುವ ಕನಿಷ್ಠ ಒಂದು ಸ್ಥಳೀಯ ದಿನಪತ್ರಿಕೆಯಲ್ಲಿ ವಿದ್ಯುಕ್ತವಾಗಿ ನೋಟೀಸನ್ನು ಪ್ರಕಟಿಸಿ, (1)ನೇ ಉಪಪ್ರಕರಣದಲ್ಲಿ ಒಳಗೊಂಡಿರುವ ನಿಷೇಧವನ್ನು ಇತರ ಯಾವುದೇ ಜಾತಿಯ ಪಶುಗಳಿಗೆ ಕೂಡ ವಿಸ್ತರಿಸಬಹುದು.

(3) ಸರಕುಗಳ ಅಥವಾ ಪಶುಗಳ ಯಾರೇ ವಾಹಕನು, 16ನೇ ಪ್ರಕರಣದ ಉಪಬಂಧಗಳನ್ನು ಪಾಲಿಸಿದ್ದ ಹೊರತು, ಯಾವುದೇ ಪಶುವನ್ನು ನಿಯಂತ್ರಿತ ಪ್ರದೇಶದಿಂದ, ರೋಗರಹಿತ ಪ್ರದೇಶದಿಂದ ಅಥವಾ ಸೋಂಕು ಇರುವ ಪ್ರದೇಶದಿಂದ ಅಥವಾ ಆ ಪ್ರದೇಶದಿಂದ ಹೊರಗಡೆಗೆ ಭೂ ಮಾರ್ಗದ, ಸಮುದ್ರ ಮಾರ್ಗದ ಅಥವಾ ವಾಯು ಮಾರ್ಗದ ಮೂಲಕ ಸಾಗಿಸತಕ್ಕದ್ದಲ್ಲ.

(4) ಉಪಪ್ರಕರಣ (1)ರಿಂದ (3)ರವರೆಗಿನವುಗಳಲ್ಲಿ ಏನೇ ಒಳಗೊಂಡಿದ್ದರೂ, ಆ ಉಪಪ್ರಕರಣಗಳಲ್ಲಿ ಹೇಳಿರುವ ಯಾವುದೇ ಪಶುವನ್ನು ಯಾವ ಪ್ರದೇಶವನ್ನು ತತ್ಕಾಲದಲ್ಲಿ ನಿಯಂತ್ರಿತ ಪ್ರದೇಶವೆಂದು ಅಥವಾ ಸೋಂಕು ಇರುವ ಪ್ರದೇಶವೆಂದು ಘೋಷಿಸಲಾಗಿದೆಯೋ ಆ ಯಾವುದೇ ಪ್ರದೇಶದ ಮೂಲಕ ಆ ಪ್ರದೇಶದ ಒಳಗಿರುವ ಯಾವುದೇ ಸ್ಥಳದಲ್ಲಿ (ಉದ್ದೇಶ ಏನೇ ಇರಲಿ ಅಥವಾ ಅವಧಿ ಎಷ್ಟೇ ಆಗಿರಲಿ) ಎಲ್ಲಿಯವರೆಗೆ ಪಶುವನ್ನು ಇಳಿಸುವುದಿಲ್ಲವೋ ಅಲ್ಲಿಯವರೆಗೆ ಆ ಪಶುವನ್ನು ರೈಲಿನಲ್ಲಿ ಸಾಗಿಸುವುದಕ್ಕೆ ಅನ್ವಯವಾಗತಕ್ಕದ್ದಲ್ಲ:

ಪರಂತು, ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ, ರಾಜ್ಯದೊಳಗೆ ಇರುವ ಯಾವುದೇ ಸ್ಥಳೀಯ ಪ್ರದೇಶದ ಮೂಲಕ ಹಾಗೆ ಸಾಗಿಸುವ ಯಾವುದೇ ಜಾತಿಯ ಪಶುವಿಗೆ, ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಕಾಲದೊಳಗೆ ಅಂಥ ಅನುಸೂಚಿತ ರೋಗದ ವಿರುದ್ಧ ಲಸಿಕೆ ಹಾಕಿ ಸೋಂಕು ತಗಲದಂತೆ

ಸೂಕ್ತವಾಗಿ ರಕ್ಷಣೆ ನೀಡತಕ್ಕದ್ದೆಂದು ಘೋಷಿಸಬಹುದು ಮತ್ತು ಆ ಪ್ರದೇಶದ ಮೂಲಕ ರೈಲಿನಲ್ಲಿ ಪಶುಗಳನ್ನು ಸಾಗಿಸುವುದಕ್ಕೂ ಮೊದಲೇ ಲಸಿಕೆ ಹಾಕಿಸಿರುವುದರ ಬಗ್ಗೆ ಪ್ರಮಾಣಪತ್ರವವನ್ನು ಪಡೆದಿರತಕ್ಕದ್ದು:

ಮತ್ತೂ ಪರಂತು, ಮೊದಲನೇ ಪರಂತುಕದಲ್ಲಿ ಹೇಳಿರುವಂತೆ, ಯಾವುದೇ ಅಧಿಸೂಚನೆಯನ್ನು ಹೊರಡಿಸಿದ್ದರೆ, ಆ ಸಂಗತಿಯನ್ನು, ರಾಜ್ಯದ ಸ್ಥಳೀಯ ಪ್ರದೇಶದ ಮೂಲಕ ಆ ಪಶುವನ್ನು ಸಾಗಿಸುವುದಕ್ಕಿಂತ ಮುಂಚೆಯೇ, ಅದಕ್ಕೆ ಲಸಿಕೆ ಹಾಕಿ ಸೋಂಕು ತಗಲದಂತೆ ರಕ್ಷಣೆ ನೀಡುವುದರ ಬಗ್ಗೆ ಸಂಬಂಧಪಟ್ಟ ರೈಲ್ವೆ ಪ್ರಾಧಿಕಾರಗಳು ಸ್ವತಃ ಮನವರಿಕೆ ಮಾಡಿಕೊಳ್ಳುವ ಸಲುವಾಗಿ ಅವರಿಗೆ ತಿಳಿಸುವುದು ರಾಜ್ಯ ಸರ್ಕಾರದ ಹೊಣೆಗಾರಿಕೆ ಆಗಿರತಕ್ಕದ್ದು.

**11. ನಿಯಂತ್ರಿತ ಪ್ರದೇಶಗಳಿಗೆ ಸಂಬಂಧಿಸಿದಂತೆ ಮುನ್ನೆಚ್ಚರಿಕೆ ಕ್ರಮಗಳು.**– ಯಾರೇ ವ್ಯಕ್ತಿಯು–

(ಎ) ಯಾವ ಜೀವಂತ ಅಥವಾ ಸತ್ತ ಪಶುವಿಗೆ 6ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಅಧಿಸೂಚಿಸಿದ ಯಾವುದೇ ಅನುಸೂಚಿತ ರೋಗದ ಸೋಂಕು ತಗುಲಿದೆಯೋ ಅಥವಾ ಸೋಂಕು ತಗುಲಿದೆ ಎಂದು ಸಮಂಜಸವಾಗಿ ಸಂದೇಹಪಡಬಹುದಾಗಿದೆಯೋ ಆ ಯಾವುದೇ ಜೀವಂತ ಅಥವಾ ಸತ್ತ ಪಶುವನ್ನು;

(ಬಿ) ಯಾವ ಮೇವನ್ನು, ಹುಲ್ಲು ಹಾಸನ್ನು ಅಥವಾ ಇತರ ವಸ್ತುವನ್ನು ಅಂಥ ರೋಗದ ಸೋಂಕು ತಗುಲಿರುವ ಯಾವುದೇ ಪ್ರಾಣಿಗೆ ಬಳಸಲಾಗಿದೆಯೋ ಅಥವಾ ಯಾವ ಮೇವು ಹುಲ್ಲುಹಾಸು ಅಥವಾ ಇತರ ವಸ್ತುವು ಅಧಿಸೂಚನೆಯಲ್ಲಿ ತಿಳಿಸಿರುವ ರೋಗದ ಸೋಂಕನ್ನು ಯಾವುದೇ ರೀತಿಯಲ್ಲಿ ಹರಡಬಹುದಾಗಿದೆಯೋ ಆ ಯಾವುದೇ ಬಗೆಯ ಮೇವನ್ನು, ಹುಲ್ಲುಹಾಸನ್ನು ಅಥವಾ ಇತರ ವಸ್ತುವನ್ನು; ಅಥವಾ

(ಸಿ) ಅಂಥ ಪಶುವಿನ ಮೃತದೇಹವನ್ನು, ಚರ್ಮವನ್ನು ಅಥವಾ ಯಾವುದೇ ಇತರ ಭಾಗವನ್ನು ಅಥವಾ ಉತ್ಪನ್ನವನ್ನು

– ನಿಯಂತ್ರಿತ ಪ್ರದೇಶದಿಂದ ಹೊರಗಡೆ ತೆಗೆದುಕೊಂಡು ಹೋಗತಕ್ಕದ್ದಲ್ಲ.

**12. ನಿಯಂತ್ರಿತ ಪ್ರದೇಶಗಳಲ್ಲಿ ಸಂತೆಗಳು, ಜಾತ್ರೆಗಳು, ವಸ್ತುಪ್ರದರ್ಶನಗಳು ಇತ್ಯಾದಿಗಳ ನಿಷೇಧ.**– ಯಾರೇ ವ್ಯಕ್ತಿಯು, ಸಂಘಟನೆಯು ಅಥವಾ ಸಂಸ್ಥೆಯು, ನಿಯಂತ್ರಿತ ಪ್ರದೇಶದ ಒಳಗಡೆ ಯಾವುದೇ ದನಗಳ ಸಂತೆಯನ್ನು, ದನಗಳ ಜಾತ್ರೆಯನ್ನು, ದನಗಳ ಪ್ರದರ್ಶನವನ್ನು ನಡೆಸತಕ್ಕದ್ದಲ್ಲ ಮತ್ತು ಯಾವುದೇ ಜಾತಿಯ ಪಶುಗಳನ್ನು ಗುಂಪುಗೂಡಿಸುವಂಥ ಅಥವಾ ಹಿಂಡುಗೂಡಿಸುವಂಥ ಇತರ ಯಾವುದೇ ಚಟುವಟಿಕೆಯನ್ನು ಕೈಗೊಳ್ಳತಕ್ಕದ್ದಲ್ಲ:

ಪರಂತು, ಸಕ್ಷಮ ಅಧಿಕಾರಿಯು, ತಾನಾಗಿಯೇ ಅಥವಾ ತನಗೆ ಆ ಬಗ್ಗೆ ಅರ್ಜಿಯನ್ನು ಸಲ್ಲಿಸಿದಾಗ, ಯಾವುದೇ ಜಾತಿಗಳ ಪಶುಗಳಿಗೆ ಸಂಬಂಧಿಸಿದ ನಿಷೇಧಕ್ಕೆ, ಆ ಜಾತಿಗೆ ಸೇರಿದ ಪಶುಗಳಿಗೆ ಅನುಸೂಚಿತ ರೋಗ ತಗಲುವ ಸಂಭವವಿಲ್ಲದಿದ್ದಾಗ ಮತ್ತು ಆ ಪಶುಗಳಿಂದ ರೋಗ ಹರಡುವ ಸಾಧ್ಯತೆ ಇಲ್ಲದಿದ್ದಾಗ ಸಾರ್ವಜನಿಕ ಹಿತದೃಷ್ಟಿಯಿಂದ ನಿಷೇಧಕ್ಕೆ ವಿನಾಯಿತಿ ನೀಡುವುದು ಅವಶ್ಯಕವೆಂಬುದು ಆ ಅಧಿಕಾರಿಗೆ ಮನವರಿಕೆಯಾದರೆ ಅಂಥ ವಿನಾಯತಿಯನ್ನು ನೀಡಬಹುದು.

**13. ಸೋಂಕು ತಗುಲಿದ ಪಶುಗಳನ್ನು ಸಂತೆಗೆ ಮತ್ತು ಇತರ ಸ್ಥಳಗಳಿಗೆ ತರುವುದಕ್ಕೆ ನಿಷೇಧ.**– ಯಾರೇ ವ್ಯಕ್ತಿಯು, ಯಾವ ಪಶುವಿಗೆ ಅನುಸೂಚಿತ ರೋಗದ ಸೋಂಕು ತಗುಲಿದೆ ಎಂದು ಅವನಿಗೆ ತಿಳಿದುಬಂದಿದೆಯೋ ಆ ಯಾವುದೇ ಪಶುವನ್ನು ಸಂತೆಗೆ, ಜಾತ್ರೆಗೆ, ಪ್ರದರ್ಶನಕ್ಕೆ ಅಥವಾ ಪಶುಗಳ ಇತರ ಜಮಾವಣೆಯ ಸ್ಥಳಕ್ಕೆ ಅಥವಾ ಯಾವುದೇ ಸಾರ್ವಜನಿಕ ಸ್ಥಳಕ್ಕೆ ತರತಕ್ಕದ್ದಲ್ಲ ಅಥವಾ ತರಲು ಪ್ರಯತ್ನಿಸತಕ್ಕದ್ದಲ್ಲ.

**14. ತಪಾಸಣಾ ಠಾಣೆಗಳು ಮತ್ತು ರೋಗಿ ಸಂಸರ್ಗ ನಿಷೇಧ ಸ್ಥಳ ಶಿಬಿರಗಳು.**– (1) ನಿರ್ದೇಶಕನು–

(ಎ) ಯಾವುದೇ ಅನುಸೂಚಿತ ರೋಗದಿಂದ ನರಳುತ್ತಿರುವ ಪಶುಗಳನ್ನು ಅಥವಾ ಸೋಂಕು ತಗುಲಿದ ಯಾವುದೇ ಅಂಥ ಪಶುಗಳ ಸಂಪರ್ಕಕ್ಕೆ ಬಂದ ಅಥವಾ ಸೋಂಕು ರೋಗ ತಗುಲಿದ ಯಾವುದೇ ಅಂಥ ಪಶುವಿನ ಹತ್ತಿರದಲ್ಲಿ ಇಟ್ಟಿರುವ ಪಶುಗಳನ್ನು ತಡೆಹಿಡಿದಿಟ್ಟುಕೊಳ್ಳುವ ಸಲುವಾಗಿ;

(ಬಿ) ಯಾವ ಜಾತಿಯ ಪಶುಗಳಿಗೆ ಸಂಬಂಧಿಸಿದಂತೆ, 6ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಹೊರಡಿಸಿದ ಅಧಿಸೂಚನೆಯು ಅಥವಾ 7ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಹೊರಡಿಸಿದ

ಆದೇಶವು ಅಧಿಸೂಚನೆಯು ಜಾರಿಯಲ್ಲಿದೆಯೋ, ಆ ಯಾವುದೇ ಜಾತಿಯ ಪಶುವು ಯಾವುದೇ ನಿಯಂತ್ರಿತ ಪ್ರದೇಶದ ಅಥವಾ ಸೋಂಕು ಇರುವ ಪ್ರದೇಶದ ಅಥವಾ ರೋಗರಹಿತ ಪ್ರದೇಶದ ಒಳಗಡೆಗೆ ಪ್ರವೇಶಿಸದಂತೆ ಅಥವಾ ಯಾವುದೇ ನಿಯಂತ್ರಿತ ಪ್ರದೇಶದಿಂದ ಅಥವಾ ಸೋಂಕು ಇರುವ ಪ್ರದೇಶದಿಂದ ಅಥವಾ ರೋಗರಹಿತ ಪ್ರದೇಶದಿಂದ ನಿರ್ಗಮಿಸದಂತೆ ತಡೆಯುವುದನ್ನು ಸುನಿಶ್ಚಿತಪಡಿಸಿಕೊಳ್ಳುವ ಸಲುವಾಗಿ

– ರಾಜ್ಯದೊಳಗೆ ಎಷ್ಟು ಬೇಕೋ ಅಷ್ಟು ರೋಗಿ ಸಂಸರ್ಗ ನಿಷೇಧ ಸ್ಥಳ ಶಿಬಿರಗಳನ್ನು ಮತ್ತು ತಪಾಸಣಾ ಠಾಣೆಗಳನ್ನು ಸ್ಥಾಪಿಸತಕ್ಕದ್ದು.

(2) ಯಾವ ಪಶುವನ್ನು ತಡೆ ಹಿಡಿದಿಟ್ಟುಕೊಳ್ಳುವ, ತಪಾಸಣೆ ಮಾಡುವ, ಯಾವ ಪಶುವಿಗೆ ಲಸಿಕೆ ಹಾಕುವ, ಅಥವಾ ಗುರುತು ಹಾಕುವ ಅಗತ್ಯವಿದೆಯೋ ಆ ಯಾವುದೇ ಪಶುವನ್ನು ಸಕ್ಷಮ ಅಧಿಕಾರಿಯು ನಿರ್ದೇಶನ ನೀಡಬಹುದಾದಂಥ ಅವಧಿಗೆ ರೋಗಿ ಸಂಸರ್ಗ ನಿಷೇಧ ಸ್ಥಳ ಶಿಬಿರದಲ್ಲಿ ಇಡಬಹುದು.

(3) ರೋಗಿ ಸಂಸರ್ಗ ನಿಷೇಧ ಸ್ಥಳ ಶಿಬಿರದಲ್ಲಿ ತಡೆದಿಟ್ಟುಕೊಂಡಿರುವ ಪ್ರತಿಯೊಂದು ಪಶುವು, ಅಂಥ ಶಿಬಿರದ ಪ್ರಭಾರದಲ್ಲಿರುವ ವ್ಯಕ್ತಿಯ ಅಭಿರಕ್ಷೆಯಲ್ಲಿರತಕ್ಕದ್ದು ಮತ್ತು ಅಂಥ ಪಶುವಿಗೆ ಲಸಿಕೆ ಹಾಕತಕ್ಕದ್ದು ಮತ್ತು ಗುರುತು ಹಾಕತಕ್ಕದ್ದು.

(4) ರೋಗಿ ಸಂಸರ್ಗ ನಿಷೇಧ ಸ್ಥಳ ಶಿಬಿರದ ಪ್ರಭಾರದಲ್ಲಿರುವ ಅಧಿಕಾರಿಯು, ಪಶುವನ್ನು ಠಾಣೆಯಿಂದ ಬಿಡುಗಡೆ ಮಾಡುವಾಗ ಪಶುವನ್ನು ತನ್ನ ಸುಪರ್ದಿಗೆ ತೆಗೆದುಕೊಳ್ಳುತ್ತಿರುವ ವ್ಯಕ್ತಿಗೆ, ರಾಜ್ಯ ಸರ್ಕಾರವು ನಿಯಮಿಸಬಹುದಾದಂಥ ನಮೂನೆಯಲ್ಲಿ ಪರವಾನಗಿಯನ್ನು ಮಂಜೂರು ಮಾಡತಕ್ಕದ್ದು ಮತ್ತು ಅಂಥ ಪ್ರತಿಯೊಬ್ಬ ವ್ಯಕ್ತಿಯು ಅಂಥ ಪರವಾನಗಿಯನ್ನು ಹಾಜರುಪಡಿಸಬೇಕೆಂದು ಯಾರೇ ಸಕ್ಷಮ ಅಧಿಕಾರಿಯು ಅಗತ್ಯಪಡಿಸಿದಾಗ ಪರವಾನಗಿಯನ್ನು ಹಾಜರುಪಡಿಸಲು ಬದ್ಧನಾಗಿರತಕ್ಕದ್ದು.

**15. ತಪಾಸಣಾ ಠಾಣೆಗಳಲ್ಲಿ ಮತ್ತು ರೋಗಿ ಸಂಸರ್ಗ ನಿಷೇಧ ಸ್ಥಳ ಶಿಬಿರಗಳಲ್ಲಿ ಪಶುಗಳನ್ನು ತಪಾಸಣೆ ಮಾಡುವುದು ಮತ್ತು ತಡೆಹಿಡಿದಿಟ್ಟುಕೊಳ್ಳುವುದು.–** (1) ಯಾವುದೇ ತಪಾಸಣಾ ಠಾಣೆಯ ಅಥವಾ ರೋಗಿ ಸಂಸರ್ಗ ನಿಷೇಧ ಸ್ಥಳ ಶಿಬಿರದ ಪ್ರಭಾರದಲ್ಲಿರುವ ಪ್ರತಿಯೊಬ್ಬ ವ್ಯಕ್ತಿಯು ತಪಾಸಣಾ ಠಾಣೆಯ ಬಳಿ ತಡೆದು ನಿಲ್ಲಿಸಿರುವ ಅಥವಾ ತಪಾಸಣಾ ಠಾಣೆಯಲ್ಲಿ ಅಥವಾ ರೋಗಿ ಸಂಸರ್ಗ ನಿಷೇಧ ಸ್ಥಳ ಶಿಬಿರದಲ್ಲಿ ತಡೆದಿಟ್ಟುಕೊಂಡಿರುವ ಯಾವುದೇ ಪಶುವನ್ನು ತಪಾಸಣೆ ಮಾಡತಕ್ಕದ್ದು.

(2) ತಪಾಸಣೆಯ ಉದ್ದೇಶಕ್ಕಾಗಿ ಅಥವಾ ಪಶುಗಳಿಗೆ ಕಡ್ಡಾಯವಾಗಿ ಲಸಿಕೆಯನ್ನು ಹಾಕುವುದಕ್ಕಾಗಿ, ಪಶುಗಳಿಗೆ ಗುರುತು ಹಾಕುವುದಕ್ಕಾಗಿ ತಪಾಸಣಾ ಠಾಣೆಯಲ್ಲಿ ಅಥವಾ ರೋಗಿ ಸಂಸರ್ಗ ನಿಷೇಧ ಸ್ಥಳ ಶಿಬಿರದಲ್ಲಿ ಪಶುವನ್ನು ತಪಾಸಣೆ ಮಾಡುವ ರೀತಿಯು ಮತ್ತು ಪಶುವನ್ನು ತಡೆಹಿಡಿದಿಟ್ಟುಕೊಳ್ಳಬೇಕಾದ ಅವಧಿಯು ಮತ್ತು ಯಾವುದೇ ಪಶುವಿಗೆ ಪ್ರವೇಶಕ್ಕಾಗಿ ಅನುಮತಿ ಪತ್ರವನ್ನು ಯಾವ ನಮೂನೆಯಲ್ಲಿ ಮತ್ತು ರೀತಿಯಲ್ಲಿ ನೀಡಬಹುದೋ ಆ ನಮೂನೆ ಮತ್ತು ರೀತಿಯು ರಾಜ್ಯ ಸರ್ಕಾರವು ನಿಯಮಿಸಬಹುದಾದಂತೆ ಇರತಕ್ಕದ್ದು.

**16. ಲಸಿಕೆ ಹಾಕಿರುವ ಪಶುಗಳು ನಿಯಂತ್ರಿತ ಪ್ರದೇಶಗಳ ಒಳಗೆ ಮತ್ತು ರೋಗರಹಿತ ಪ್ರದೇಶಗಳ ಒಳಗೆ ಪ್ರವೇಶಿಸುವುದು ಮತ್ತು ಅಲ್ಲಿಂದ ನಿರ್ಗಮಿಸುವುದು.–** 10ನೇ ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಯಾವುದೇ ಅನುಸೂಚಿತ ರೋಗಕ್ಕೆ ಸಂಬಂಧಿಸಿದಂತೆ ಪಶುಗಳ ಜಾತಿಗೆ ಸೇರಿದ ಯಾವ ಪಶುವಿಗೆ ಸಂಬಂಧಿಸಿದಂತೆ ಒಂದು ಪ್ರದೇಶವನ್ನು ನಿಯಂತ್ರಿತ ಪ್ರದೇಶವೆಂದು ಅಥವಾ ರೋಗರಹಿತ ಪ್ರದೇಶವೆಂದು ಘೋಷಿಸಿಲಾಗಿದೆಯೋ, ಯಾವ ಪಶುವಿಗೆ ಆ ರೋಗದ ವಿರುದ್ಧ ಸೂಕ್ತವಾಗಿ ಲಸಿಕೆಯನ್ನು ಹಾಕಲಾಗಿದೆಯೋ, ಆ ಪಶುವಿಗೆ ಆ ರೋಗಕ್ಕೆ ಲಸಿಕೆ ಹಾಕಲಾಗಿದೆ ಎಂಬ ಬಗ್ಗೆ ಮತ್ತು ಆ ನಂತರ ಇಪ್ಪತ್ತೊಂದು ದಿನಗಳಿಗಿಂತ ಕಡಿಮೆ ಇಲ್ಲದ ಅವಧಿಯು ಮುಕ್ತಾಯಗೊಂಡಿದೆ ಎಂಬ ಬಗ್ಗೆ, ಪ್ರಮಾಣಪತ್ರವನ್ನು ಹಾಜರುಪಡಿಸಿದಾಗ ಆ ಪಶುವಿಗೆ ನಿಯಂತ್ರಿತ ಪ್ರದೇಶದ ಅಥವಾ ರೋಗರಹಿತ ಪ್ರದೇಶದ ಒಳಗಡೆಗೆ ಪ್ರವೇಶಿಸಲು ಅಥವಾ ಆ ಪಶುವನ್ನು ಅಲ್ಲಿಂದ ಹೊರಗಡೆಗೆ ತೆಗೆದುಕೊಂಡು ಹೋಗಲು ಅಥವಾ ಇತರ ಯಾವುದೇ ಸ್ಥಳಕ್ಕೆ ಆ ಪಶುವನ್ನು ತೆಗೆದುಕೊಂಡು ಹೋಗಲು ಅನುಮತಿ ನೀಡತಕ್ಕದ್ದು.

**17. ಸಕ್ಷಮ ಅಧಿಕಾರಿಗಳ ನೇಮಕ.–** ರಾಜ್ಯ ಸರ್ಕಾರವು, ಈ ಅಧಿನಿಯಮದ ಉಪಬಂಧಗಳ ಸಮರ್ಪಕ ಅನುಷ್ಠಾನಕ್ಕಾಗಿ, ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಮೇರೆಗೆ ಸಕ್ಷಮ ಅಧಿಕಾರಿಯಾಗಿ ಯಾವುದೇ ಅಧಿಕಾರವನ್ನು ಚಲಾಯಿಸಲು ಅಥವಾ ಯಾವುದೇ ಕರ್ತವ್ಯವನ್ನು ನಿರ್ವಹಿಸಲು ಯಾರೇ ವ್ಯಕ್ತಿಯನ್ನು ಅಧಿಕೃತಗೊಳಿಸಬಹುದು ಮತ್ತು ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂತೆ, ತನ್ನ ಅಧಿಕಾರವ್ಯಾಪ್ತಿಯ ಸ್ಥಳೀಯ ಎಲ್ಲೆಗಳೊಳಗೆ ಅವನು ಅಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂಥ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು.

**18. ವಾಹಕಗಳನ್ನು ಸ್ವಚ್ಛಗೊಳಿಸುವುದು ಮತ್ತು ಸೋಂಕು ಮುಕ್ತಗೊಳಿಸುವುದು.–** (1) ಪ್ರತಿಯೊಂದು ಸಾಮಾನ್ಯ ವಾಹಕವು, ನೌಕೆಯಾಗಿರಲಿ ಇಲ್ಲವೆ ವಾಹನವಾಗಿರಲಿ, ಆ ನೌಕೆಯಲ್ಲಿ ಅಥವಾ ವಾಹನದಲ್ಲಿ ಯಾವುದೇ ಪಶುವಿನ ಸಾಗಣೆಗೂ ಮೊದಲು ಮತ್ತು ಆ ನಂತರ ಆ ನೌಕೆಯನ್ನು ಅಥವಾ ವಾಹನವನ್ನು ಮತ್ತು ಆ ಪಶುವನ್ನು ಸಾಗಿಸುತ್ತಿರುವಾಗ ಆ ಪಶುವನ್ನು ಯಾವ ಸ್ಥಳದಲ್ಲಿ ಇಳಿಸಿ ಇಟ್ಟುಕೊಳ್ಳಲಾಗಿತ್ತೋ ಆ ಯಾವುದೇ ಇತರ ಸ್ಥಳವನ್ನು ಕೂಡ ತಕ್ಷಣವೇ ಸ್ವಚ್ಛಗೊಳಿಸತಕ್ಕದ್ದು ಮತ್ತು ಸೋಂಕು ಮುಕ್ತಗೊಳಿಸತಕ್ಕದ್ದು.

(2) ಯಾವುದೇ ಜಾತಿಯ ಪಶುವಿಗೆ ಬಾಧಿಸುತ್ತಿರುವ ಯಾವುದೇ ಅನುಸೂಚಿತ ರೋಗಕ್ಕೆ ಸಂಬಂಧಿಸಿದಂತೆ ಯಾವುದೇ ಪ್ರದೇಶವನ್ನು ನಿಯಂತ್ರಿತ ಪ್ರದೇಶವೆಂದು ಅಥವಾ ರೋಗರಹಿತ ಪ್ರದೇಶವೆಂದು ಘೋಷಿಸಿದಾಗ, ನಿರ್ದೇಶಕನು, ಆ ಜಾತಿಯ ಯಾವುದೇ ಪಶುವನ್ನು ಯಾವ ವಾಹನದಲ್ಲಿ ಸಾಗಿಸಲಾಗಿದಿಯೋ ಆ ಪ್ರತಿಯೊಂದು ವಾಹನದ ಮಾಲೀಕನಿಗೆ, ಆ ವಾಹನವನ್ನು ಸರಿಯಾಗಿ ಸ್ವಚ್ಛಗೊಳಿಸಬೇಕೆಂದು ಮತ್ತು ಸೋಂಕು ಮುಕ್ತವನ್ನಾಗಿ ಮಾಡಬೇಕೆಂದು ರಾಜಪತ್ರದಲ್ಲಿ ಮತ್ತು ದೇಶೀಯ ಭಾಷೆಯ ಸ್ಥಳೀಯ ವೃತ್ತಪತ್ರಿಕೆಯಲ್ಲಿ ಸೂಕ್ತವಾಗಿ ಪ್ರಕಟಿಸಿದ ಆದೇಶದ ಮೂಲಕ, ನಿರ್ದೇಶನ ನೀಡಬಹುದು.

**19. ಪ್ರವೇಶಿಸಲು ಮತ್ತು ತಪಾಸಣೆ ಮಾಡಲು ಅಧಿಕಾರಗಳು.–** ಈ ಅಧಿನಿಯಮದ ಉಪಬಂಧಗಳನ್ನು ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳನ್ನು ಮತ್ತು ಮಾಡಿದ ಆದೇಶಗಳನ್ನು, ಪಾಲಿಸಲು ಹೊಣೆಗಾರರಾದ ವ್ಯಕ್ತಿಗಳು ಅವುಗಳನ್ನು ಪಾಲಿಸಿದ್ದಾರೆಯೇ ಎಂಬುದನ್ನು ಸುನಿಶ್ಚಿತಪಡಿಸಿಕೊಳ್ಳುವ ಉದ್ದೇಶಕ್ಕಾಗಿ, ಯಾರೇ ಪಶುವೈದ್ಯಾಧಿಕಾರಿಯು ಅಥವಾ ಇತರ ಸಕ್ಷಮ ಅಧಿಕಾರಿಯು, ಯಾವುದೇ ಭೂಮಿಯನ್ನು ಅಥವಾ ಕಟ್ಟಡವನ್ನು ಅಥವಾ ಸ್ಥಳವನ್ನು, ನೌಕೆಯನ್ನು ಅಥವಾ ವಾಹನವನ್ನು ಪ್ರವೇಶಿಸಬಹುದು ಮತ್ತು ತಪಾಸಣೆ ಮಾಡಬಹುದು.

## ಅಧ್ಯಾಯ III

## ಸೋಂಕು ಇರುವ ಪ್ರದೇಶಗಳು

**20. ಸೋಂಕು ಇರುವ ಪ್ರದೇಶಗಳ ಘೋಷಣೆ.–** ಪಶು ವೈದ್ಯಾಧಿಕಾರಿಯು, ಪಶು ಚಿಕಿತ್ಸಕನಿಂದ ಅಥವಾ ಅನ್ಯಥಾ, ವರದಿಯನ್ನು ಸ್ವೀಕರಿಸಿದ ಮೇಲೆ ತನ್ನ ಅಧಿಕಾರವ್ಯಾಪ್ತಿಯೊಳಗೆ ಬರುವ ಯಾವುದೇ ಸ್ಥಳದಲ್ಲಿ ಅಥವಾ ಆವರಣದಲ್ಲಿ ಪಶುವಿಗೆ ಯಾವುದೇ ಅಂಥ ಅನುಸೂಚಿತ ರೋಗದ ಸೋಂಕು ತಗುಲಿದೆ ಎಂದು ಅಥವಾ ಯಾವ ಪಶುವಿಗೆ ರೋಗದ ಸೋಂಕು ತಗುಲಿದೆಯೆಂದು ತಾನು ನಂಬಲು ಕಾರಣ ಇದೆಯೋ ಆ ಪಶುವನ್ನು ಇಟ್ಟುಕೊಳ್ಳಲಾಗಿದೆ ಎಂದು ಮನದಟ್ಟಾದರೆ ಅಧಿಸೂಚನೆಯ ಮೂಲಕ ಮತ್ತು ದೇಶೀಯ ಭಾಷೆಯಲ್ಲಿರುವ ಕನಿಷ್ಠಪಕ್ಷ ಒಂದು ಸ್ಥಳೀಯ ವೃತ್ತ ಪತ್ರಿಕೆಯಲ್ಲಿ ಪ್ರಕಟಣೆಯ ಮೂಲಕ ಮತ್ತು ಯಾವ ಪ್ರದೇಶವನ್ನು ಸೋಂಕು ಇರುವ ಪ್ರದೇಶವೆಂದು ಘೋಷಿಸುವುದು ಸೂಕ್ತ ಎಂದು ತಾನು ಭಾವಿಸುತ್ತಾನೋ ಅಂಥ ಪ್ರದೇಶವನ್ನು (ಮೇಲೆ ಹೇಳಿದ ಸ್ಥಳ ಅಥವಾ ಆವರಣಗಳೂ ಸೇರಿದಂತೆ ತಮಟೆ ಬಾರಿಸುತ್ತಾ ಮತ್ತು ಗಟ್ಟಿ ಧ್ವನಿಯಲ್ಲಿ ಹೇಳುತ್ತಾ) ಸೋಂಕು ಇರುವ ಪ್ರದೇಶವೆಂದು ಘೋಷಿಸಬಹುದು.

**21. ಸೋಂಕು ಇರುವ ಪ್ರದೇಶಗಳೆಂದು ಘೋಷಣೆ ಮಾಡಿರುವುದರ ಪರಿಣಾಮ.–** (1) 20ನೇ ಪ್ರಕರಣದ ಮೇರೆಗೆ ಒಂದು ಪ್ರದೇಶವನ್ನು, ಸೋಂಕು ಇರುವ ಪ್ರದೇಶವೆಂದು ಘೋಷಿಸಿದಾಗ, ಈ ಅಧಿನಿಯಮದ ಯಾವ ಉಪಬಂಧಗಳು ನಿಯಂತ್ರಿತ ಪ್ರದೇಶಕ್ಕೆ ಸಂಬಂಧಿಸಿದಂತೆ ಅನ್ವಯವಾಗುತ್ತವೆಯೋ ಆ ಎಲ್ಲಾ ಉಪಬಂಧಗಳು "ನಿಯಂತ್ರಿತ ಪ್ರದೇಶ" ಎಂಬ ಪದಗಳಿಗೆ ಬದಲಾಗಿ "ಸೋಂಕು ಇರುವ ಪ್ರದೇಶ" ಎಂಬ ಪದಗಳನ್ನು ಪ್ರತ್ಯಾಯೋಜಿಸಿದ್ದಿದ್ದರೆ ಹೇಗೆ ಸೋಂಕು ಇರುವ ಪ್ರದೇಶಕ್ಕೆ ಅನ್ವಯವಾಗುತ್ತಿದ್ದವೋ ಹಾಗೆಯೇ ಯಥೋಚಿತ ವ್ಯತ್ಯಾಸಗಳೊಂದಿಗೆ, ನಿಯಂತ್ರಿತ ಪ್ರದೇಶಕ್ಕೂ ಅನ್ವಯವಾಗತಕ್ಕದ್ದು.

(2) ಉಪಪ್ರಕರಣ (1)ರಲ್ಲಿ ಒಳಗೊಂಡಿರುವ ಉಪಬಂಧಗಳ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ ಈ ಮುಂದೆ ಹೇಳಿರುವ ಉಪಬಂಧಗಳನ್ನು ಸೋಂಕು ಇರುವ ಪ್ರದೇಶಕ್ಕೆ ಸಂಬಂಧಿಸಿದಂತೆ ಅನ್ವಯಿಸತಕ್ಕದ್ದು:–

(ಎ) ಯಾವ ಪ್ರದೇಶದಲ್ಲಿ ಪಶುವಿಗೆ ಅನುಸೂಚಿತ ರೋಗದ ಸೋಂಕು ತಗುಲಿದೆಯೋ ಅಥವಾ ಸೋಂಕು ತಗುಲಿದೆಯೆಂದು ಭಾವಿಸಲು ಸಕಾರಣ ಇದೆಯೋ ಆ ಪ್ರದೇಶದಲ್ಲಿನ ಪ್ರತಿಯೊಂದು ಪಶುವಿನ ಮಾಲೀಕನು ಅಥವಾ ಆ ಪಶುವನ್ನು ನೋಡಿಕೊಳ್ಳುತ್ತಿರುವ ಇತರ ವ್ಯಕ್ತಿಯು, ಅದಕ್ಕೆ ಪಶು ಚಿಕಿತ್ಸಕನಿಂದ ಕೂಡಲೇ ಚಿಕಿತ್ಸೆ ಮಾಡಿಸತಕ್ಕದ್ದು;

(ಬಿ) ಯಾವ ವಸ್ತುಗಳು (ಎ) ಖಂಡದಲ್ಲಿ ಹೇಳಿರುವಂಥ ಯಾವುದೇ ಪಶುವಿನ ಸಂಪರ್ಕಕ್ಕೆ ಬರುವ ಸಂಭವವಿದೆಯೋ ಆ ಎಲ್ಲಾ ವಸ್ತುಗಳನ್ನು ಪಶುಚಿಕಿತ್ಸಕನು ನಿರ್ದೇಶಿಸಬಹುದಾದಂಥ ರೀತಿಯಲ್ಲಿ ಸೋಂಕುರಹಿತವನ್ನಾಗಿಸತಕ್ಕದ್ದು ಅಥವಾ ವಿಲೆ ಮಾಡತಕ್ಕದ್ದು;

(ಸಿ) ಪ್ರತಿಯೊಬ್ಬ ಪಶುಚಿಕಿತ್ಸಕನು, ಯಾವುದೇ ಪಶುವನ್ನು ಇಟ್ಟಿರುವ ಅಥವಾ ಇಡುವ ಸಂಭವವಿರುವ ಯಾವುದೇ ಸ್ಥಳವನ್ನು ಅಥವಾ ಆವರಣವನ್ನು ತಪಾಸಣೆ ಮಾಡುವ ಉದ್ದೇಶಕ್ಕಾಗಿ ಅದನ್ನು ಪ್ರವೇಶಿಸಲು ಅಧಿಕಾರವನ್ನು ಹೊಂದಿರತಕ್ಕದ್ದು;

(ಡಿ) ಖಂಡ (ಎ)ದಲ್ಲಿ ಹೇಳಿರುವ ಪಶುವಿನ ಮಾಲೀಕನು ಅಥವಾ ಅದನ್ನು ನೋಡಿಕೊಳ್ಳುತ್ತಿರುವ ಯಾರೇ ಇತರ ವ್ಯಕ್ತಿಯು, ಕೂಡಲೇ ಆ ಪಶುವನ್ನು ಇತರ ಪಶುಗಳಿಂದ ಪ್ರತ್ಯೇಕಿಸಿ ಬೇರೆಕಡೆ ಇಡತಕ್ಕದ್ದು ಮತ್ತು ರೋಗದ ನಿವಾರಣೆಗೆ, ಚಿಕಿತ್ಸೆಗೆ ಮತ್ತು ನಿಯಂತ್ರಣಕ್ಕೆ ಅಗತ್ಯವಾಗಬಹುದಾದಂಥ, ಪಶುಚಿಕಿತ್ಸಕನು ನಿರ್ದೇಶಿಸಬಹುದಾದಂಥ ಇತರ ಕ್ರಮಗಳನ್ನು ಸಹ ಕೈಗೊಳ್ಳತಕ್ಕದ್ದು.

**22. ಸೋಂಕು ಇರುವ ಪ್ರದೇಶವೆಂದು ಘೋಷಿಸಿರುವುದನ್ನು ಅಧಿಸೂಚನೆಯಿಂದ ತೆಗೆದುಹಾಕುವುದು.–** ಪಶುವೈದ್ಯಾಧಿಕಾರಿಗೆ, ಸೂಕ್ತವೆಂದು ತಾನು ಭಾವಿಸಬಹುದಾದಂಥ ವಿಚಾರಣೆಯನ್ನು ಮಾಡಿದ ನಂತರ ಯಾವುದೇ ಸೋಂಕು ಇರುವ ಪ್ರದೇಶದಲ್ಲಿ ಇನ್ನು ಮುಂದೆ ಅನುಸೂಚಿತ ರೋಗದ ಸೋಂಕು ಯಾವುದೇ ಪಶುವಿಗೆ ತಗಲುವ ಭಯ ಅಥವಾ ಅಪಾಯ ಇಲ್ಲ ಎಂದು ಮನದಟ್ಟಾದರೆ, ಅಧಿಸೂಚನೆಯ ಮೂಲಕ ಮತ್ತು ದೇಶೀಯ ಭಾಷೆಯ, ಸ್ಥಳೀಯ ವೃತ್ತಪತ್ರಿಕೆಯಲ್ಲಿ ಪ್ರಕಟಣೆಯ ಮೂಲಕ, ಆ ಪ್ರದೇಶವು ಮೇಲೆ ಹೇಳಿರುವಂತೆ ಇನ್ನು ಮುಂದೆ ಸೋಂಕು ಇರುವ ಪ್ರದೇಶ ಅಲ್ಲ ಎಂದು ಘೋಷಿಸತಕ್ಕದ್ದು, ಆ ತರುವಾಯ 21ನೇ ಪ್ರಕರಣದಲ್ಲಿ ಹೇಳಿರುವ ಎಲ್ಲಾ ನಿರ್ಬಂಧಗಳು ಅನ್ವಯವಾಗುವುದು ನಿಂತು ಹೋಗತಕ್ಕದ್ದು.

## ಅಧ್ಯಾಯ IV

## ಸೋಂಕು ತಗುಲಿದ ಪಶುಗಳು

**23. ಸೋಂಕು ತಗುಲಿದ ಪಶುಗಳನ್ನು ಪ್ರತ್ಯೇಕಿಸಿ ಇಡುವುದು ತಪಾಸಣೆ ಮಾಡುವುದು ಮತ್ತು ಅವುಗಳಿಗೆ ಚಿಕಿತ್ಸೆ ನೀಡುವುದು.–** (1) ಪಶುಚಿಕಿತ್ಸಕನಿಗೆ, ವರದಿಯನ್ನು ಸ್ವೀಕರಿಸಿದಾಗ ಅಥವಾ ಅನ್ಯಥಾ, ಯಾವುದೇ ಪಶುವಿಗೆ ಅನುಸೂಚಿತ ರೋಗದ ಸೋಂಕು ತಗುಲಿದೆ ಎಂದು ನಂಬಲು ಕಾರಣ ಇದ್ದಾಗ ಅವನು–

(ಎ) ಆ ಪಶುವನ್ನು ಆರೋಗ್ಯದಿಂದ ಇದೆ ಎಂದು ಸ್ಪಷ್ಟವಾಗಿ ಕಂಡುಬರುವ ಇತರ ಪಶುಗಳಿಂದ ಪ್ರತ್ಯೇಕಿಸಿ ಬೇರೆ ಕಡೆ ಇಡಬೇಕೆಂದು; ಅಥವಾ

(ಬಿ) ಸಂದರ್ಭ ಸನ್ನಿವೇಶಗಳಲ್ಲಿ ಅಗತ್ಯವೆನಿಸಬಹುದಾದಂಥ ಚಿಕಿತ್ಸೆಯನ್ನು ಆ ಪಶುವಿಗೆ ಮಾಡಿಸಬೇಕೆಂದು

– ಅಂಥ ಪಶುವಿನ ಮಾಲೀಕನಿಗೆ ಅಥವಾ ಅದನ್ನು ನೋಡಿಕೊಳ್ಳುತ್ತಿರುವ ಯಾರೇ ಇತರ ವ್ಯಕ್ತಿಗೆ ಲಿಖಿತ ಆದೇಶದ ಮೂಲಕ ನಿರ್ದೇಶಿಸಬಹುದು.

(2) ಯಾವುದೇ ಕ್ರಮವನ್ನು (1)ನೇ ಉಪಪ್ರಕರಣಕ್ಕನುಸಾರವಾಗಿ ತೆಗೆದುಕೊಂಡಿದ್ದಾಗ ಪಶುಚಿಕಿತ್ಸಕನು ರೋಗವು ಕಂಡುಬಂದಿರುವುದರ ಬಗ್ಗೆ ವಿವರವಾದ ವರದಿಯನ್ನು ಕೂಡಲೇ, ಪಶುವೈದ್ಯಾಧಿಕಾರಿಗೆ ಸಲ್ಲಿಸತಕ್ಕದ್ದು.

(3) ಪಶುಚಿಕಿತ್ಸಕನಿಂದ ವರದಿಯು ಬಂದ ನಂತರ, ಪಶುವೈದ್ಯಾಧಿಕಾರಿಯು ಸಾಧ್ಯವಾದಷ್ಟು ಬೇಗನೆ, ಆ ಪಶುವನ್ನು ಹಾಗೂ ಅದರ ಸಂಪರ್ಕಕ್ಕೆ ಬಂದಿರಬಹುದಾದ ಯಾವುದೇ ಇತರ ಪಶುವನ್ನು ಪರೀಕ್ಷಿಸತಕ್ಕದ್ದು ಮತ್ತು ಆ ಉದ್ದೇಶಕ್ಕಾಗಿ, ಸಂದರ್ಭ ಸನ್ನಿವೇಶಗಳಲ್ಲಿ ಅಗತ್ಯವಿರುಬಹುದಾದಂಥ ಪರೀಕ್ಷೆಗೆ ಮತ್ತು ವೈದ್ಯಕೀಯ ಪರೀಕ್ಷೆಗೆ ಆ ಪಶುವನ್ನು ಒಳಪಡಿಸತಕ್ಕದ್ದು.

(4) ಅಂಥ ಪರೀಕ್ಷೆ ಮತ್ತು ವೈದ್ಯಕೀಯ ಪರೀಕ್ಷೆಯ ನಂತರ ಪಶುವೈದ್ಯಾಧಿಕಾರಿಯು, ಆ ಪಶುವಿಗೆ ಯಾವುದೇ ಅನುಸೂಚಿತ ರೋಗದ ಸೋಂಕು ತಗುಲಿರುವುದಿಲ್ಲ ಎಂದು ಅಭಿಪ್ರಾಯಪಟ್ಟರೆ, ಅವನು ಆ ಪಶುವಿಗೆ ಯಾವುದೇ ಅಂಥ ರೋಗದ ಸೋಂಕು ತಗುಲಿಲ್ಲ ಎಂದು ಲಿಖಿತದಲ್ಲಿ ಪ್ರಮಾಣಪತ್ರವನ್ನು ನೀಡತಕ್ಕದ್ದು.

**24. ಪಶುಗಳಿಂದ ಮಾದರಿಗಳನ್ನು ತೆಗೆದುಕೊಳ್ಳುವುದು.–** (1) ಪಶುವೈದ್ಯಾಧಿಕಾರಿಯು, ಯಾವ ಪಶುವಿಗೆ ಯಾವುದೇ ಅನುಸೂಚಿತ ರೋಗದ ಸೋಂಕು ತಗುಲಿದೆ ಎಂದು ಅನುಮಾನ ಬಂದಿದೆಯೋ ಅಥವಾ ಯಾವ ಪಶುವು ಅಂಥ ರೋಗಕ್ಕೆ ತುತ್ತಾಗಬಹುದಾಗಿದೆಯೋ ಆ ಪಶುವಿಗೆ ನಿಜವಾಗಿಯೂ ರೋಗದ ಸೋಂಕು ತಗುಲಿದೆ ಎಂಬುದನ್ನು ಸುನಿಶ್ಚಿತಪಡಿಸಿಕೊಳ್ಳುವ ಉದ್ದೇಶಕ್ಕಾಗಿ ಅಥವಾ ಯಾವ ಸ್ವರೂಪದ ಅನುಸೂಚಿತ ರೋಗದ ಸೋಂಕು ಪಶುವಿಗೆ ತಗುಲಿದೆ ಎಂಬುದನ್ನು ಸುನಿಶ್ಚಿತಪಡಿಸಿಕೊಳ್ಳುವ ಉದ್ದೇಶಕ್ಕಾಗಿ ಮಾದರಿಗಳನ್ನು ತೆಗೆದುಕೊಳ್ಳುವುದು ಅವಶ್ಯಕವೆಂದು ಆತ ಭಾವಿಸಿದರೆ, ಸಂದರ್ಭ ಸನ್ನಿವೇಶಗಳಲ್ಲಿ ಅವಶ್ಯಕವೆಂದು ತಾನು ಭಾವಿಸಿದಂಥ ಪರೀಕ್ಷೆಗಳನ್ನು ಮಾಡುವ ಉದ್ದೇಶಕ್ಕಾಗಿ ಅಂಥ ಮಾದರಿಗಳನ್ನು ಪಶುವಿನಿಂದ ತೆಗೆದುಕೊಳ್ಳಬಹುದು.

(2) ಪಶುವೈದ್ಯಾಧಿಕಾರಿಯು ಅಥವಾ ಯಾವುದೇ ಇತರ ಸಕ್ಷಮ ಅಧಿಕಾರಿಯು, ಯಾವುದೇ ರೋಗ ಬರದಂತೆ ತಡೆಯುವುದಕ್ಕಾಗಿ ಪಶುವಿಗೆ ಲಸಿಕೆ ಹಾಕಿಸಲಾಗಿದೆ ಎಂಬುದನ್ನು ಅಥವಾ ಪಶುವಿಗೆ ಹಾಕಿದ ಲಸಿಕೆಯು ಅದಕ್ಕೆ ರೋಗ ನಿರೋಧಕ ಶಕ್ತಿಯನ್ನು ಕೊಡುವಷ್ಟು ಪರಿಣಾಮಕಾರಿಯಾದುದಾಗಿದೆ ಎಂಬುದನ್ನು ಸುನಿಶ್ಚಿತಪಡಿಸಿಕೊಳ್ಳುವ ಉದ್ದೇಶಗಳಿಗಾಗಿ ಯಾವುದೇ ಅಂಥ ಪಶುವಿನಿಂದ ಮಾದರಿಗಳನ್ನು ತೆಗೆದುಕೊಳ್ಳತಕ್ಕದ್ದು ಮತ್ತು ಅವಶ್ಯಕವೆಂದು ತಾನು ಭಾವಿಸಿದ ರೀತಿಯಲ್ಲಿ ಅಂಥ ಮಾದರಿಗಳನ್ನು ಪರೀಕ್ಷಿಸತಕ್ಕದ್ದು.

**25. ಸೋಂಕು ತಗುಲಿದ ಪಶುಗಳನ್ನು ದಯಾಮರಣಕ್ಕೆ ಒಳಪಡಿಸುವುದು.–** ಪಶುವೈದ್ಯಾಧಿಕಾರಿಯು, ಯಾವ ಪ್ರದೇಶದಲ್ಲಿ ಪಶುವಿಗೆ ಅನುಸೂಚಿತ ರೋಗದ ಸೋಂಕು ತಗುಲಿದೆಯೋ ಆ ಪ್ರದೇಶದಲ್ಲಿ ಇತರ ಪಶುಗಳಿಗೆ ರೋಗದ ಸೋಂಕು ಹರಡುವುದನ್ನು ತಡೆಯುವುದಕ್ಕಾಗಿ ಅಥವಾ ಆ ರೋಗವು, ಆ ಪ್ರದೇಶದಲ್ಲಿರುವ ಮನುಷ್ಯರಿಗೂ ತಗಲುವಂತಹ ಸ್ವರೂಪದ್ದಾಗಿದ್ದರೆ ಸಾರ್ವಜನಿಕರ ಆರೋಗ್ಯವನ್ನು ಸಂರಕ್ಷಿಸುವುದಕ್ಕಾಗಿ ಅನುಸೂಚಿತ ರೋಗದ ಸೋಂಕು ತಗುಲಿದ ಪಶುವನ್ನು ದಯಾಮರಣಕ್ಕೆ ಒಳಪಡಿಸುವುದು ಅವಶ್ಯವೆಂದು ಭಾವಿಸಿದರೆ, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ಅಂಥ ಪಶುವನ್ನು ದಯಾಮರಣಕ್ಕೆ ಒಳಪಡಿಸುವುದು ಮತ್ತು ತನಗೆ ಸರಿ ಎಂದು ಕಂಡುಬರುವ ರೀತಿಯಲ್ಲಿ ಮೃತದೇಹವನ್ನು ಕೂಡಲೆ ವಿಲೆ ಮಾಡುವಂತೆ ಲಿಖಿತ ಆದೇಶದ ಮೂಲಕ ನಿರ್ದೇಶನವನ್ನು ನೀಡಬಹುದು.

**26. ಮೃತದೇಹದ ವಿಲೆ.–** ಯಾವುದೇ ಪಶುವಿನ ಮೃತದೇಹವು (ಅಥವಾ ಅದರ ಯಾವುದೇ ಭಾಗವು) ಯಾರೇ ವ್ಯಕ್ತಿಯ ಬಳಿ ಇದ್ದರೆ, ಆ ಪಶು ಸಾಯುವ ಸಮಯದಲ್ಲಿ ಯಾವುದೇ ಅನುಸೂಚಿತ ರೋಗದ ಸೋಂಕು ಅದಕ್ಕೆ ತಗುಲಿದ್ದರೆ ಅಥವಾ ಅಂಥ ರೋಗದ ಸೋಂಕು ತಗುಲಿತ್ತೆಂಬ ಸಂದೇಹ ಇದ್ದರೆ ಅಂಥ ಪ್ರತಿಯೊಬ್ಬ ವ್ಯಕ್ತಿಯು, ಆ ಪಶುವಿನ ಮೃತದೇಹವನ್ನು ನಿಯಮಿಸಬಹುದಾದಂಥ ರೀತಿಯಲ್ಲಿ ವಿಲೆ ಮಾಡತಕ್ಕದ್ದು.

**27. ಮೃತದೇಹದ ಪರೀಕ್ಷೆ ನಡೆಸಲು ಪಶುವೈದ್ಯಾಧಿಕಾರಿಯ ಮತ್ತು ಪಶುಚಿಕಿತ್ಸಕನ ಅಧಿಕಾರಗಳು.–** (1) ಪಶುವೈದ್ಯಾಧಿಕಾರಿಗೆ ಅಥವಾ ಯಾರೇ ಪಶುಚಿಕಿತ್ಸಕನಿಗೆ ಯಾವುದೇ ಪಶುವಿನ ಸಾವು, ಯಾವುದೇ ಅನುಸೂಚಿತ ರೋಗದ ಸೋಂಕಿನಿಂದ ಆಗಿದೆ ಎಂದು ನಂಬಲು ಕಾರಣ ಇದ್ದಲ್ಲಿ ಅವನು ಅಂಥ ಪಶುವಿನ ಮೃತದೇಹದ ಪರೀಕ್ಷೆಯನ್ನು ಮಾಡಬಹುದು ಅಥವಾ ಮಾಡಿಸಬಹುದು ಮತ್ತು ಅಗತ್ಯವಿದ್ದಲ್ಲಿ ಆ ಉದ್ದೇಶಕ್ಕಾಗಿ ಅಂತಹ ಪಶುವಿನ ಮೃತದೇಹವನ್ನು ಹೊರತೆಗೆಸಿ ಅವಶ್ಯಕ ಪರೀಕ್ಷೆಯನ್ನು ಮತ್ತು ಮೃತದೇಹದ ಪರೀಕ್ಷೆಯನ್ನು ಮಾಡಿದ ನಂತರ ಪಶುವಿನ ಮೃತದೇಹವನ್ನು ಸೂಕ್ತವಾಗಿ ವಿಲೆ ಮಾಡಬಹುದು.

(2) ಉಪಪ್ರಕರಣ (1)ರಲ್ಲಿ ಹೇಳಿರುವ ಪ್ರತಿಯೊಂದು ಪರೀಕ್ಷೆಯನ್ನು ಮತ್ತು ಮೃತದೇಹದ ಪರೀಕ್ಷೆಯನ್ನು ನಿಯಮಿಸಬಹುದಾದಂಥ ರೀತಿಯಲ್ಲಿ ನಡೆಸತಕ್ಕದ್ದು ಮತ್ತು ಮೃತದೇಹದ ಪರೀಕ್ಷೆಯ ವರದಿಯು ನಿಯಮಿಸಬಹುದಾದಂಥ ನಮೂನೆಯಲ್ಲಿ ಇರತಕ್ಕದ್ದು.

**28. ಕೆಲವು ಪಶುಗಳನ್ನು ವಶಕ್ಕೆ ತೆಗೆದುಕೊಳ್ಳುವುದು ಮತ್ತು ಸಾಗಿಸುವುದು.–** ಯಾವ ಪಶುವಿಗೆ ರೋಗದ ಸೋಂಕು ತಗುಲಿದೆಯೋ ಅಥವಾ ರೋಗದ ಸೋಂಕು ತಗುಲಿರಬಹುದೆಂದು ಅನುಮಾನಪಡಲಾಗಿದೆಯೋ ಆ ಯಾವುದೇ ಪಶುವನ್ನು ಅದರ ಮಾಲೀಕ ತಾನೆಂದು ಯಾರೇ ವ್ಯಕ್ತಿಯು ಕ್ಲೇಮು ಮಾಡಿರದಿರುವುದು ಕಂಡುಬಂದರೆ ಅಥವಾ ಅಂಥ ಪಶುವಿನ ಸಂಬಂಧ ನೀಡಿರುವ ಸೂಕ್ತ ಆದೇಶವನ್ನು ಅಥವಾ ನಿರ್ದೇಶನವನ್ನು ಆ ಪಶುವಿನ ಮಾಲೀಕನು ಅಥವಾ ಅದನ್ನು ನೋಡಿಕೊಳ್ಳುತ್ತಿರುವ ಇತರ ವ್ಯಕ್ತಿಯು ಕೂಡಲೇ ಪಾಲನೆ ಮಾಡಿರದಿದ್ದರೆ, ಪಶುವೈದ್ಯಾಧಿಕಾರಿಯು ಅಥವಾ ಇತರ ಸಕ್ಷಮ ಅಧಿಕಾರಿಯು ಆ ಪಶುವನ್ನು ತನ್ನ ವಶಕ್ಕೆ ತೆಗೆದುಕೊಳ್ಳಲು ಮತ್ತು ಅವನು ಸೂಕ್ತವೆಂದು ತಾನು ಭಾವಿಸಿದಂತೆ, ಅದನ್ನು ಒಂಟಿಯಾಗಿ ಇಡುವಂಥ ಅಥವಾ ಅದನ್ನು ಪ್ರತ್ಯೇಕಿಸಿ ಇಡುವಂಥ ಸ್ಥಳಕ್ಕೆ ಸಾಗಿಸಲು ಅವನಿಗೆ ಮುಕ್ತ ಅವಕಾಶ ಇರತಕ್ಕದ್ದು.

## ಅಧ್ಯಾಯ V

## ಜಾರಿ ಮತ್ತು ದಂಡನೆಗಳು

**29. ಆದೇಶಗಳ ಜಾರಿ ಮತ್ತು ಖರ್ಚು ವೆಚ್ಚಗಳ ವಸೂಲಿ.–** (1) ಈ ಅಧಿನಿಯಮದ ಮೇರೆಗೆ ಯಾವುದೇ ನಿಯಮವನ್ನು ರಚಿಸಿದ್ದರೆ, ಅಧಿಸೂಚನೆಯನ್ನು ಹೊರಡಿಸಿದ್ದರೆ, ನೋಟೀಸನ್ನು ನೀಡಿದ್ದರೆ, ಕಡ್ಡಾಯ ಕೋರಿಕೆ ಮಾಡಿದ್ದರೆ, ಆದೇಶ ಮಾಡಿದ್ದರೆ ಅಥವಾ ನಿರ್ದೇಶನ ನೀಡಿದ್ದರೆ–

(ಎ) ಯಾವುದೇ ಪಶುವಿಗೆ, ಯಾವುದೇ ಪಶುವಿನ ಮೃತದೇಹಕ್ಕೆ ಅಥವಾ ತನ್ನ ಅಭಿರಕ್ಷೆಯಲ್ಲಿರುವ ಅಥವಾ ತಾನು ನೋಡಿಕೊಳ್ಳುತ್ತಿರುವ ಯಾವುದಕ್ಕಾದರೂ ಸಂಬಂಧಿಸಿದಂತೆ ಯಾರೇ ವ್ಯಕ್ತಿಗೆ ಯಾವುದೇ ಕ್ರಮವನ್ನು ಕೈಗೊಳ್ಳಲು ಅಥವಾ ಯಾವುದೇ ಕಾರ್ಯವನ್ನು ಮಾಡಲು ಅಗತ್ಯಪಡಿಸಿದ್ದರೆ ಆ ವ್ಯಕ್ತಿಯು ಅದನ್ನು ತ್ವರಿತವಾಗಿ ಪಾಲನೆ ಮಾಡತಕ್ಕದ್ದು;

(ಬಿ) ಯಾವುದೇ ಬೀಡಾಡಿ ಪಶುವಿಗೆ ಅಥವಾ ಮಾಲೀಕನಿಲ್ಲದ ಪಶುವಿಗೆ, ಅಂಥ ಪಶುವಿನ ಮೃತದೇಹಕ್ಕೆ ಅಥವಾ ಅಂಥ ಪಶುವಿನ ಮೃತದೇಹದ ಭಾಗಗಳಿಗೆ ಸಂಬಂಧಪಟ್ಟಂತೆ ಯಾವುದೇ ಕ್ರಮವನ್ನು ಕೈಗೊಳ್ಳಲು ಅಥವಾ ಕಾರ್ಯವನ್ನು ಮಾಡಲು ಪುರಸಭೆಗೆ ಅಥವಾ ಸಂದರ್ಭಾನುಸಾರವಾಗಿ ಪಂಚಾಯಿತಿಗೆ ಅಗತ್ಯಪಡಿಸಿದ್ದರೆ, ಆ ಪುರಸಭೆಯು ಅಥವಾ ಸಂದರ್ಭಾನುಸಾರ ಪಂಚಾಯಿತಿಯು ತನ್ನ ಖರ್ಚಿನಲ್ಲಿಯೇ ಅದನ್ನು ತ್ವರಿತವಾಗಿ ಪಾಲನೆ ಮಾಡತಕ್ಕದ್ದು.

(2) ಉಪಪ್ರಕರಣ (1)ರಲ್ಲಿ ಹೇಳಿರುವ, ಕ್ರಮಗಳನ್ನು ಆ ಉದ್ದೇಶಕ್ಕೆ ಅನುಮತಿಸಿದಂಥ ಕಾಲದೊಳಗೆ ಕೈಗೊಳ್ಳದಿದ್ದರೆ ನೋಟೀಸನ್ನು ನೀಡಿರುವ, ಕಡ್ಡಾಯ ಕೋರಿಕೆಯನ್ನು ಮಾಡಿರುವ, ಆದೇಶವನ್ನು ಮಾಡಿರುವ ಅಥವಾ ನಿರ್ದೇಶನವನ್ನು ನೀಡಿರುವ ಪ್ರಾಧಿಕಾರವು, ಅಂಥ ಕ್ರಮಗಳನ್ನು ಕೈಗೊಳ್ಳಲು ಯಾವ ವ್ಯಕ್ತಿಗೆ ಅಥವಾ ಪುರಸಭೆಗೆ ಅಥವಾ ಪಂಚಾಯಿತಿಗೆ ಅಗತ್ಯಪಡಿಸಲಾಗಿದೆಯೋ ಸಂದರ್ಭಾನುಸಾರವಾಗಿ ಅಂಥ ವ್ಯಕ್ತಿಯು ಅಥವಾ ಪುರಸಭೆಯು ಅಥವಾ ಪಂಚಾಯತಿಯು ತನ್ನ ಖರ್ಚಿನಲ್ಲಿ ಅಂಥ ಕ್ರಮಗಳನ್ನು ಕೈಗೊಳ್ಳುವಂತೆ ಹೇಳಿ ಮಾಡಿಸಬಹುದು.

(3) ಉಪಪ್ರಕರಣ (2)ರ ಮೆರೆಗೆ ಕೈಗೊಂಡ ಯಾವುದೇ ಕ್ರಮಕ್ಕೆ ಮಾಡಿದ ಖರ್ಚುಗಳನ್ನು, ದಂಡ ಪ್ರಕ್ರಿಯಾ ಸಂಹಿತೆ, 1973 (1974 ರ 2)ರಲ್ಲಿ ತಿಳಿಸಿರುವಂತೆ, ನ್ಯಾಯಾಲಯವು ವಿಧಿಸಿದ ದಂಡಗಳನ್ನು ವಸೂಲಿ ಮಾಡಲು ಯಾವ ರೀತಿಯಲ್ಲಿ ಹೇಳಲಾಗಿದೆಯೋ ಅದೇ ರೀತಿಯಲ್ಲಿ ಇಂಥ ಖರ್ಚುಗಳನ್ನು ನ್ಯಾಯಾಲಯವು ವಿಧಿಸಿದ ದಂಡ ಎಂಬಂತೆಯೇ ಅದೇ ರೀತಿಯಲ್ಲಿ ಸಂದರ್ಭಾನುಸಾರ ಸಂಬಂಧಪಟ್ಟ ವ್ಯಕ್ತಿಯಿಂದ ಅಥವಾ ಪುರಸಭೆಯಿಂದ ಅಥವಾ ಪಂಚಾಯಿತಿಯಿಂದ ವಸೂಲು ಮಾಡತಕ್ಕದ್ದು.

**30. ಗ್ರಾಮಾಧಿಕಾರಿಗಳು, ಮುಂತಾದವರು ನೆರವು ನೀಡುವುದು.–** ಎಲ್ಲಾ ಪುರಸಭೆಗಳ, ಪಂಚಾಯತಿಗಳ ಅಧಿಕಾರಿಗಳು ಅಥವಾ ಎಲ್ಲ ಗ್ರಾಮಾಧಿಕಾರಿಗಳು ಮತ್ತು ರಾಜ್ಯ ಸರ್ಕಾರದ ಗ್ರಾಮೀಣಾಭಿವೃದ್ಧಿ ಮತ್ತು ಹೈನುಗಾರಿಕೆ ಅಭಿವೃದ್ಧಿ, ಕಂದಾಯ, ಕೃಷಿ, ಪಶುಸಂಗೋಪನೆ ಮತ್ತು ಪಶು ವೈದ್ಯಕೀಯ ಇಲಾಖೆಯ ಎಲ್ಲಾ ಅಧಿಕಾರಿಗಳು–

(ಎ) ಯಾವ ಪ್ರದೇಶದ ಮೇಲೆ ಪಶುವೈದ್ಯಾಧಿಕಾರಿಗೆ ಮತ್ತು ಪಶುಚಿಕಿತ್ಸಕನಿಗೆ ಅಧಿಕಾರವ್ಯಾಪ್ತಿ ಇದೆಯೋ ಆ ಪ್ರದೇಶದಲ್ಲಿ ಅನುಸೂಚಿತ ರೋಗವು ಆ ಪ್ರದೇಶದ ಯಾವುದೇ ಪಶುವಿನಲ್ಲಿ ಅಥವಾ ಪಶುವಿನ ಜಾತಿ ಇರುವ ಬಗ್ಗೆ ಕೂಡಲೇ ಮಾಹಿತಿ ನೀಡಲು;

(ಬಿ) ಯಾವುದೇ ಅನುಸೂಚಿತ ರೋಗವು ಕಾಣಿಸಿಕೊಂಡಿರುವುದನ್ನು ಅಥವಾ ಹರಡಿರುವುದನ್ನು ಪ್ರತಿಬಂಧಿಸಲು ಅಗತ್ಯವಾದ ಎಲ್ಲ ಕ್ರಮಗಳನ್ನು ತೆಗೆದುಕೊಳ್ಳಲು; ಮತ್ತು

(ಸಿ) ಪಶುವೈದ್ಯಾಧಿಕಾರಿಗೆ ಮತ್ತು ಪಶು ಚಿಕಿತ್ಸಕನಿಗೆ ಈ ಅಧಿನಿಯಮದ ಮೇರೆಗಿನ ತನ್ನ ಕರ್ತವ್ಯಗಳನ್ನು ನಿರ್ವಹಿಸುವುದಕ್ಕೆ ಅಥವಾ ತನ್ನ ಅಧಿಕಾರಗಳನ್ನು ಚಲಾಯಿಸುವುದಕ್ಕೆ ನೆರವು ನೀಡಲು

– ಬದ್ಧರಾಗಿರತಕ್ಕದ್ದು.

**31. ಅಧಿಕಾರ ಇಲ್ಲದೆ ಲಸಿಕೆ ಪ್ರಮಾಣಪತ್ರದ ನೀಡಿಕೆಗೆ ಅಥವಾ ದೋಷಪೂರ್ಣ ಲಸಿಕೆ ಹಾಕಿದ್ದಕ್ಕೆ ದಂಡನೆ.–** ಯಾರೇ ವ್ಯಕ್ತಿಯು,–

(ಎ) ಲಸಿಕೆ ಪ್ರಮಾಣಪತ್ರ ನೀಡಲು ಅಧಿಕಾರ ಇಲ್ಲದೆ ಅಥವಾ ಸಕ್ಷಮತೆ ಇಲ್ಲದೆ; ಅಥವಾ

(ಬಿ) ಲಸಿಕೆಯು ಅದು ಯಾವುದೇ ರೀತಿಯಲ್ಲಿ ದೋಷಪೂರ್ಣವಾಗಿದೆ ಎಂಬುದು ತಿಳಿದಿದ್ದೂ, ಆ ಲಸಿಕೆಯನ್ನು ಹಾಕಿದ ನಂತರ

– ಲಸಿಕೆ ಪ್ರಮಾಣಪತ್ರವನ್ನು ನೀಡಿದರೆ ಅವನು ಐದು ಸಾವಿರ ರೂಪಾಯಿಗಳ ಜುಲ್ಮಾನೆಯಿಂದ ಅಥವಾ ಆ ಜುಲ್ಮಾನೆಯನ್ನು ಕಟ್ಟಲು ತಪ್ಪಿದಾಗ ಒಂದು ತಿಂಗಳವರೆಗೆ ವಿಸ್ತರಿಸಬಹುದಾದ ಕಾರಾವಾಸ ಶಿಕ್ಷೆಯಿಂದ ದಂಡಿತನಾಗಬಹುದಾದ ಅಪರಾಧದ ತಪ್ಪಿತಸ್ಥನಾಗತಕ್ಕದ್ದು ಮತ್ತು ತರುವಾಯದ ಯಾವುದೇ ಆ ಅಪರಾಧಕ್ಕೆ ಹತ್ತು ಸಾವಿರ ರೂಪಾಯಿಗಳವರೆಗಿನ ಜುಲ್ಮಾನೆಯಿಂದ ಅಥವಾ ಮೂರು ತಿಂಗಳವರೆಗೆ ವಿಸ್ತರಿಸಬಹುದಾದ ಕಾರಾವಾಸ ಶಿಕ್ಷೆಯಿಂದ ದಂಡಿತನಾಗಬಹುದಾದ ಅಪರಾಧದ ತಪ್ಪಿತಸ್ಥನಾಗತಕ್ಕದ್ದು.

**32. ದಂಡನೆಗಳು.–** ಈ ಅಧಿನಿಯಮದ ಉಪಬಂಧಗಳನ್ನು ಉಲ್ಲಂಘಿಸಿದ ಅಥವಾ ಸಕ್ಷಮ ಅಧಿಕಾರಿಯ ಕರ್ತವ್ಯಗಳ ನಿರ್ವಹಣೆಗೆ ಅಡ್ಡಿ ಮಾಡಿದ ಯಾರೇ ವ್ಯಕ್ತಿಯು ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು ಮತ್ತು ದಂಡವನ್ನು ಕಟ್ಟಲು ತಪ್ಪಿದರೆ, ಒಂದು ತಿಂಗಳ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ದಂಡಿತನಾಗತಕ್ಕದ್ದು; ಮತ್ತು (ಈ ಅಧಿನಿಯಮದ 31ನೇ ಮತ್ತು 33ನೇ ಪ್ರಕರಣಗಳಲ್ಲಿ ಹೇಳಿರುವವುಗಳ ಹೊರತು, ಈ ಅಧಿನಿಯಮದ ಅದೇ ಉಪಬಂಧದ ಮೇರೆಗಿನ ಅಥವಾ ಯಾವುದೇ ಇತರ ಉಪಬಂಧದ ಮೇರೆಗಿನ) ಯಾವುದೇ ತರುವಾಯದ ಅಪರಾಧಕ್ಕೆ ಎರಡು ಸಾವಿರ ರೂಪಾಯಿಗಳವರೆಗಿನ ಜುಲ್ಮಾನೆಯಿಂದ ಅಥವಾ ಜುಲ್ಮಾನೆಯನ್ನು ಕಟ್ಟಲು ತಪ್ಪಿದರೆ, ಎರಡು ತಿಂಗಳ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ದಂಡಿತನಾಗತಕ್ಕದ್ದು.

**33. ಸೋಂಕು ತಗುಲಿದ ಪಶುವನ್ನು ಅಥವಾ ಆ ಪಶುವಿನ ಮೃತದೇಹವನ್ನು ನದಿಯಲ್ಲಿ ಬಿಸಾಕಿದ್ದಕ್ಕಾಗಿ ದಂಡನೆ.–** ಯಾರೇ ವ್ಯಕ್ತಿಯು, ಪಶುವು, ಅದು ಸಾಯುವುದಕ್ಕೆ ಮೊದಲೇ ಅದಕ್ಕೆ ಸೋಂಕು ತಗುಲಿತ್ತೆಂದು ತಿಳಿದುಬಂದಿದ್ದರೆ, ಅಂಥ ಪಶುವಿನ ಮೃತದೇಹವನ್ನು ಅಥವಾ ಆ ಮೃತದೇಹದ ಯಾವುದೇ ಭಾಗವನ್ನು ಯಾವುದೇ ನದಿಯಲ್ಲಿ, ಕೆರೆಯಲ್ಲಿ, ಕಾಲುವೆಯಲ್ಲಿ ಅಥವಾ ಜಲಾಗಾರದಲ್ಲಿ ಬಿಸಾಕಿದ್ದರೆ ಅಥವಾ ಬಿಸಾಕಿಸಿದರೆ ಅಥವಾ ಬಿಸಾಡಲು ಅನುಮತಿ ನೀಡಿದರೆ ಆ ಯಾರೇ ವ್ಯಕ್ತಿಯು, ಆ ಅಪರಾಧದ ತಪ್ಪಿತಸ್ಥನಾಗತಕ್ಕದ್ದು ಮತ್ತು ಆ ಅಪರಾಧ ನಿರ್ಣಯವಾದ ನಂತರ, ಅದು ಮೊದಲನೆಯ ಸಲ ಮಾಡಿದ ಅಪರಾಧವಾಗಿದ್ದರೆ ಎರಡು ಸಾವಿರ ರೂಪಾಯಿಗಳವರೆಗಿನ ಜುಲ್ಮಾನೆಯಿಂದ ಅಥವಾ ಜುಲ್ಮಾನೆಯನ್ನು ಕಟ್ಟಲು ತಪ್ಪಿದರೆ ಒಂದು ತಿಂಗಳವರೆಗಿನ ಕಾರಾವಾಸದಿಂದ ಮತ್ತು ಆ ತರುವಾಯವು ಮಾಡಿದ ಆ ಅಪರಾಧಕ್ಕಾಗಿ ಆ ಅಪರಾಧವು ನಿರ್ಣಯವಾದ ನಂತರ ಐದು ಸಾವಿರ ರೂಪಾಯಿಗಳವರೆಗಿನ ಜುಲ್ಮಾನೆಯಿಂದ ಅಥವಾ ಮೂರು ತಿಂಗಳುಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರವಾಸದಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**34. ಕಂಪನಿಗಳಿಂದ ಅಪರಾಧಗಳು.–** (1) ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಕಂಪನಿಯು ಮಾಡಿದರೆ, ಅಪರಾಧವು ನಡೆದ ಕಾಲದಲ್ಲಿ, ಕಂಪನಿಯ ಪ್ರಭಾರದಲ್ಲಿದ್ದ ಮತ್ತು ಕಂಪನಿಯ ವ್ಯವಹಾರವನ್ನು ನಡೆಸುವುದಕ್ಕಾಗಿ ಕಂಪನಿಗೆ ಜವಾಬ್ದಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯನ್ನು ಮತ್ತು ಆ ಕಂಪನಿಯನ್ನು, ಆ ಅಪರಾಧದ ತಪ್ಪಿತಸ್ಥ ಎಂದು ಭಾವಿಸತಕ್ಕದ್ದು ಮತ್ತು ಕಂಪನಿಯು ಹಾಗೂ ಆ ವ್ಯಕ್ತಿಯು ತನ್ನ ವಿರುದ್ಧದ ವ್ಯವಹರಣೆಗೆ ಗುರಿಯಾಗತಕ್ಕದ್ದು ಮತ್ತು ತದನುಸಾರವಾಗಿ ಶಿಕ್ಷೆಗೆ ಒಳಗಾಗತಕ್ಕದ್ದು:

ಪರಂತು, ಈ ಉಪಪ್ರಕರಣದಲ್ಲಿ ಒಳಗೊಂಡಿರುವುದು ಯಾವುದೂ, ಆ ಅಪರಾಧವು ತನ್ನ ತಿಳಿವಳಿಕೆಗೆ ಬಾರದೆ ನಡೆದಿದ್ದೆಂದು ಅಥವಾ ಅಂಥ ಅಪರಾಧವು ನಡೆಯುವುದನ್ನು ತಡೆಯಲು ತಾನು ಯಥೋಚಿತವಾದ ಎಲ್ಲ ಎಚ್ಚರಿಕೆ ವಹಿಸಿದ್ದೇನೆಂದು ಅಂಥ ವ್ಯಕ್ತಿಯು ರುಜುವಾತುಪಡಿಸಿದರೆ, ಈ ಅಧಿನಿಯಮದಲ್ಲಿ ಉಪಬಂಧಿಸಿದ ಯಾವುದೇ ದಂಡನೆಗೆ ಅವನನ್ನು ಗುರಿಪಡಿಸತಕ್ಕದ್ದಲ್ಲ.

(2) ಉಪಪ್ರಕರಣ (1)ರಲ್ಲಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮದ ಮೇರೆಗಿನ ಯಾವುದೇ ಅಪರಾಧವನ್ನು ಕಂಪನಿಯು ಮಾಡಿದರೆ ಮತ್ತು ಆ ಅಪರಾಧವು ಕಂಪನಿಯ ಯಾರೇ ನಿರ್ದೇಶಕನ, ವ್ಯವಸ್ಥಾಪಕನ, ಕಾರ್ಯದರ್ಶಿಯ ಅಥವಾ ಇತರ ಅಧಿಕಾರಿಯ ಸಮ್ಮತಿಯಿಂದ ಅಥವಾ ಪರೋಕ್ಷ ಸಮ್ಮತಿಯಿಂದ ನಡೆಯಿತೆಂದು ಅಥವಾ ಯಾರೇ ನಿರ್ದೇಶಕನ, ವ್ಯವಸ್ಥಾಪಕನ, ಕಾರ್ಯದರ್ಶಿಯ ಅಥವಾ ಇತರ ಅಧಿಕಾರಿಯ ಯಾವುದೇ ನಿರ್ಲಕ್ಷತೆಯಿಂದ ನಡೆದಿದೆಯೆಂದು ಆರೋಪಿಸಿರುವುದು ರುಜುವಾತಾದರೆ, ಅಂಥ ನಿರ್ದೇಶಕನನ್ನು, ವ್ಯವಸ್ಥಾಪಕನನ್ನು ಕಾರ್ಯದರ್ಶಿಯನ್ನು ಅಥವಾ ಇತರ ಅಧಿಕಾರಿಯನ್ನು ಆ ಅಪರಾಧದ ತಪ್ಪಿತಸ್ಥ ಎಂದು ಭಾವಿಸತಕ್ಕದ್ದು ಮತ್ತು ಕಂಪನಿಯು ಹಾಗೂ ಆ ವ್ಯಕ್ತಿಯು ತನ್ನ ವಿರುದ್ಧದ ವ್ಯವಹರಣೆಗೆ ಒಳಗಾಗತಕ್ಕದ್ದು ಮತ್ತು ತದನುಸಾರವಾಗಿ ಶಿಕ್ಷೆಗೆ ಗುರಿಯಾಗತಕ್ಕದ್ದು.

**ವಿವರಣೆ.**– ಈ ಪ್ರಕರಣದ ಉದ್ದೇಶಗಳಿಗಾಗಿ,–

(ಎ) **"ಕಂಪನಿ"** ಎಂದರೆ ಯಾವುದೇ ನಿಗಮಿತ ನಿಕಾಯ ಮತ್ತು ಆ ಪದದಲ್ಲಿ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ನೋಂದಣಿಯಾದ ಅಥವಾ ನೋಂದಾಯಿತವಾಗಿದೆ ಎಂದು ಭಾವಿಸಿದ ಸಹಕಾರಿ ಸಂಘವು, ಫರ್ಮ್ ಅಥವಾ ವ್ಯಕ್ತಿಗಳ ಇತರ ಸಂಘವೂ ಒಳಗೊಳ್ಳುತ್ತದೆ; ಮತ್ತು

(ಬಿ) ಫರ್ಮಿಗೆ ಸಂಬಂಧಿಸಿದಂತೆ, **"ನಿರ್ದೇಶಕ"** ಎಂದರೆ, ಫರ್ಮಿನ ಪಾಲುದಾರ.

## ಅಧ್ಯಾಯ VI

## ರೋಗಕಾರಕ ಜೀವಾಣುಗಳು ಇತ್ಯಾದಿಗಳ ಬಗ್ಗೆ ಮುನ್ನೆಚ್ಚರಿಕೆ ಕ್ರಮಗಳು

**35. ರೋಗಕಾರಕ ಜೀವಾಣು ಹೊರಹೋಗದಂತೆ ತಡೆಯುವುದು.–** (1) ಲಸಿಕೆಗಳು, ಸೀರಂಗೆ ಅಥವಾ ಕಿಮೋಥೆರಪಿ ಔಷಧಗಳಿಗೆ ಸಂಬಂಧಿಸಿದಂತೆ ತಯಾರಿಕೆಯಲ್ಲಿ, ಪರೀಕ್ಷಿಸುವುದರಲ್ಲಿ ಅಥವಾ ಸಂಶೋಧನೆಯಲ್ಲಿ ತೊಡಗಿರುವ ಮತ್ತು ಯಾವುದೇ ಅನುಸೂಚಿತ ರೋಗವನ್ನು ತಡೆಯುವ ಅಥವಾ ಅಂಥ ರೋಗಕ್ಕೆ ಚಿಕಿತ್ಸೆ ನೀಡುವ ಉದ್ದೇಶ ಇರುವಂಥ ಪ್ರತಿಯೊಂದು ಸಂಸ್ಥೆಯಲ್ಲಿ, ಪ್ರಯೋಗಾಲಯದಲ್ಲಿ ಅಥವಾ ಚಿಕಿತ್ಸಾಲಯದಲ್ಲಿ–

(ಎ) ಯಾವುದೇ ಅನುಸೂಚಿತ ರೋಗಕಾರಕ ಜೀವಾಣುವು ಹೊರಹೋಗದಿರುವುದನ್ನು ಅಥವಾ ಅನ್ಯಥಾ ಹೊರಬಿಡದಿರುವುದನ್ನು ಖಚಿತಪಡಿಸಿಕೊಳ್ಳಲು;

(ಬಿ) ಹಾಗೆ ಹೊರಹೋಗದಂತೆ ಅಥವಾ ಹೊರಬಿಡದಂತೆ ನಿಗಾ ಇಡುವುದು; ಮತ್ತು

(ಸಿ) ರೋಗಕಾರಕ ಜೀವಾಣುವು ಹೊರಹೋಗುವ ಯಾವುದೇ ಸಂದರ್ಭ ಸನ್ನಿವೇಶದಲ್ಲಿ ಸಂಬಂಧಪಟ್ಟ ಪ್ರತಿಯೊಬ್ಬರಿಗೂ ಎಚ್ಚರಿಕೆ ನೀಡಲು ಮತ್ತು ಅವರಿಗೆ ರಕ್ಷಣೆ ನೀಡಲು

– ಸಾಕಷ್ಟು ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳತಕ್ಕದ್ದು.

(2) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ–

(ಎ) ಉಪಪ್ರಕರಣ (1)ರಲ್ಲಿ ಹೇಳಿರುವಂತೆ, ತಯಾರಿಕೆಗಾಗಿ, ಪರೀಕ್ಷೆ ಅಥವಾ ಸಂಶೋಧನೆಗಾಗಿ ಬಳಕೆ ಮಾಡಲಾಗಿದೆಯೋ; ಅಥವಾ

(ಬಿ) ಯಾವ ಪಶುವಿನಲ್ಲಿ ಯಾವುದೇ ಅನುಸೂಚಿತ ರೋಗವು ಈಗಲೂ ಇದೆಯೋ ಅಥವಾ ಯಾವ ಪಶುವಿನಿಂದ ಅನುಸೂಚಿತ ರೋಗಗಳು ಹರಡುವ ಸಂಭವ ಇದೆಯೋ

– ಅಂಥ ಪ್ರತಿಯೊಂದು ಪಶುವನ್ನು ತ್ವರಿತವಾಗಿ ದಯಾಮರಣಕ್ಕೆ ಒಳಪಡಿಸತಕ್ಕದ್ದು ಮತ್ತು ಆ ಉಪಪ್ರಕರಣದಲ್ಲಿ ಹೇಳಿರುವ, ಸಂದರ್ಭಾನುಸಾರ, ಸಂಸ್ಥೆಯ, ಪ್ರಯೋಗಾಲಯದ ಅಥವಾ ಚಿಕಿತ್ಸಾಲಯದ ಪ್ರಭಾರದಲ್ಲಿರುವ ಅಥವಾ ಅದರ ಮೇಲೆ ನಿಯಂತ್ರಣ ಇಟ್ಟುಕೊಂಡಿರುವ ವ್ಯಕ್ತಿಯು ವಿಲೆ ಮಾಡತಕ್ಕದ್ದು.

(3) ಉಪಪ್ರಕರಣ (1)ರಲ್ಲಿ ಹೇಳಿರುವ ಸಂಸ್ಥೆಯ, ಪ್ರಯೋಗಾಲಯದ ಅಥವಾ ಚಿಕಿತ್ಸಾಲಯದ ಪ್ರಭಾರದಲ್ಲಿರುವ ಅಥವಾ ಅದರ ಮೇಲೆ ನಿಯಂತ್ರಣ ಇಟ್ಟುಕೊಂಡಿರುವ ಪ್ರತಿಯೊಬ್ಬ ವ್ಯಕ್ತಿಯು, (1)ನೇ ಉಪಪ್ರಕರಣದ ಮತ್ತು (2)ನೇ ಉಪಪ್ರಕರಣದ ಉಪಬಂಧಗಳನ್ನು ಪಾಲಿಸತಕ್ಕದ್ದು; ಮತ್ತು ಪಾಲಿಸದಿದ್ದ ಸಂದರ್ಭದಲ್ಲಿ ಇಪ್ಪತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಆರು ತಿಂಗಳುಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಅವರೆಡರಿಂದಲೂ ದಂಡಿತನಾಗಬಹುದಾದ ಅಪರಾಧದ ತಪ್ಪಿತಸ್ಥನಾಗತಕ್ಕದ್ದು ಮತ್ತು ಸಂಸ್ಥೆಯು ಲಸಿಕೆಗಳನ್ನು ಅಥವಾ ಔಷಧಗಳನ್ನು ವಾಣಿಜ್ಯ ಉದ್ದೇಶಕ್ಕಾಗಿ ತಯಾರಿಸುತ್ತಿದ್ದರೆ, ಒಂದು ವರ್ಷದ ಅವಧಿಯವರೆಗೆ ಲೈಸೆನ್ಸನ್ನು ತಾತ್ಕಾಲಿಕವಾಗಿ ಅಮಾನತಿನಲ್ಲಿ ಇಡಬಹುದು.

## ಅಧ್ಯಾಯ VII

### ಸಂಕೀರ್ಣ

**36. ಅಧಿಕಾರಗಳನ್ನು ವಹಿಸಿಕೊಡುವುದು.–** ರಾಜ್ಯ ಸರ್ಕಾರವು, ಈ ಅಧಿನಿಯಮದಿಂದ ಅಥವಾ ಅದರ ಮೇರೆಗೆ ಪ್ರದತ್ತವಾಗಿರುವ ಎಲ್ಲಾ ಅಥವಾ ಅಧಿಕಾರಗಳ ಪೈಕಿ ಯಾವುದೇ ಅಧಿಕಾರಗಳನ್ನು 42ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ನಿಯಮಗಳನ್ನು ರಚಿಸಲು ಇರುವ ಅಧಿಕಾರಗಳನ್ನು ಹೊರತುಪಡಿಸಿ, ತನ್ನ ಅಧೀನದಲ್ಲಿರುವ ಯಾರೇ ಅಧಿಕಾರಿಗೆ ಅಥವಾ ಪ್ರಾಧಿಕಾರಕ್ಕೆ ಅಧಿಸೂಚನೆಯ ಮೂಲಕ ವಹಿಸಿಕೊಡಬಹುದು.

**37. ಅಧಿಕಾರಿಗಳು ಮತ್ತು ಪ್ರಾಧಿಕಾರಿಗಳು ಸರ್ಕಾರದ ನಿಯಂತ್ರಣಕ್ಕೆ ಒಳಪಟ್ಟು ಕಾರ್ಯನಿರ್ವಹಿಸುವುದು.–** ಈ ಅಧಿನಿಯಮದ ಮೇರೆಗೆ ಎಲ್ಲಾ ಅಧಿಕಾರಿಗಳು ಮತ್ತು ಪ್ರಾಧಿಕಾರಿಗಳು, ಈ ಅಧಿನಿಯಮದಿಂದ ಅಥವಾ ಅದರ ಮೇರೆಗೆ ಪ್ರದತ್ತವಾದ ತಮ್ಮ ಅಧಿಕಾರಗಳನ್ನು ಅಥವಾ ಅವರಿಗೆ ವಹಿಸಿಕೊಟ್ಟ ಕರ್ತವ್ಯಗಳನ್ನು ಕೇಂದ್ರ ಸರ್ಕಾರವು ಅಥವಾ ರಾಜ್ಯ ಸರ್ಕಾರವು ಕಾಲಕಾಲಕ್ಕೆ ಮಾಡಿದ, ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗಿರದ ಆದೇಶಗಳಿಗೆ ಅನುಸಾರವಾಗಿ ಚಲಾಯಿಸತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು.

**38. ಅನುಸೂಚಿಯನ್ನು ತಿದ್ದುಪಡಿ ಮಾಡಲು ಅಧಿಕಾರ.–** (1) ಕೇಂದ್ರ ಸರ್ಕಾರವು, ಅಧಿಸೂಚನೆಯ ಮೂಲಕ, ಯಾವುದೇ ಪಶುರೋಗವನ್ನು ಅನುಸೂಚಿಗೆ ಸೇರಿಸಬಹುದು ಅಥವಾ ಅನುಸೂಚಿಯಿಂದ ಬಿಟ್ಟುಬಿಡಬಹುದು ಮತ್ತು ಸದರಿ ರೋಗವನ್ನು ಅಂಥ ಅಧಿಸೂಚನೆಯ ದಿನಾಂಕದಿಂದ ಅನುಸೂಚಿಗೆ ಸೇರಿಸಲಾಗಿದೆ ಅಥವಾ ಅದರಿಂದ ಬಿಟ್ಟುಬಿಡಲಾಗಿದೆ ಎಂದು ಭಾವಿಸತಕ್ಕದ್ದು.

(2) ಉಪಪ್ರಕರಣ (1)ರ ಮೇರೆಗೆ ಹೊರಡಿಸಿದ ಪ್ರತಿಯೊಂದು ಅಧಿಸೂಚನೆಯನ್ನು, ಅದನ್ನು ಹೊರಡಿಸಿದ ನಂತರ ಆದಷ್ಟು ಬೇಗನೆ, ಸಂಸತ್ತಿನ ಉಭಯ ಸದನಗಳ ಮುಂದೆ ಮಂಡಿಸತಕ್ಕದ್ದು.

**39. ನಿರ್ದೇಶನಗಳನ್ನು ನೀಡಲು ಅಧಿಕಾರ.–** ಕೇಂದ್ರ ಸರ್ಕಾರವು, ಪಶುಗಳ ಯಾವುದೇ ಸೋಂಕು ರೋಗದ ಅಥವಾ ಸಾಂಕ್ರಾಮಿಕ ರೋಗದ ಪ್ರತಿಬಂಧದ, ನಿಯಂತ್ರಣದ ಮತ್ತು ನಿರ್ಮೂಲನೆಯ ಉದ್ದೇಶಕ್ಕಾಗಿ ಅನುಸೂಚಿತ ರೋಗಗಳಿಗೆ ಮತ್ತು ಲಸಿಕೆ ಹಾಕಿರುವುದಕ್ಕೆ ಸಂಬಂಧಿಸಿದ ವಿವರಪಟ್ಟಿಕೆಗಳನ್ನು ಮತ್ತು ಅಂಕಿಅಂಶಗಳನ್ನು ಒದಗಿಸಲು ತಾನು ಸೂಕ್ತವೆಂದು ಭಾವಿಸಿದಂತೆ ನೀಡುವ ನಿರ್ದೇಶನಗಳೂ ಸೇರಿದಂತೆ ಕಾಲಕಾಲಕ್ಕೆ ರಾಜ್ಯ ಸರ್ಕಾರಕ್ಕೆ ಅಥವಾ ಈ ಅಧಿನಿಯಮದ ಮೇರೆಗಿನ ಇತರ ಪ್ರಾಧಿಕಾರಿಗಳಿಗೆ ನಿರ್ದೇಶನಗಳನ್ನು ನೀಡಬಹುದು ಮತ್ತು ಅಂಥ ಪ್ರತಿಯೊಂದು ನಿರ್ದೇಶನವನ್ನು ಪಾಲಿಸತಕ್ಕದ್ದು.

**40. ಕೆಲವು ವ್ಯಕ್ತಿಗಳು ಲೋಕ ನೌಕರರಾಗಿರುವುದು.–** ಪ್ರತಿಯೊಬ್ಬ ಸಕ್ಷಮ ಅಧಿಕಾರಿಯು, ನಿರ್ದೇಶಕನು ಮತ್ತು ಪಶುವೈದ್ಯಾಧಿಕಾರಿಯು ಈ ಅಧಿನಿಯಮದ ಮೇರೆಗಿನ ಯಾವುದೇ ಅಧಿಕಾರವನ್ನು ಚಲಾಯಿಸುವಾಗ ಅಥವಾ ಯಾವುದೇ

ಕರ್ತವ್ಯವನ್ನು ನಿರ್ವಹಿಸುತ್ತಿರುವಾಗ, ಭಾರತ ದಂಡ ಸಂಹಿತೆ (1860 ರ 45)ಯ 21ನೇ ಪ್ರಕರಣದ ಅರ್ಥ ವ್ಯಾಪ್ತಿಯೊಳಗೆ ಲೋಕ ನೌಕರನೆಂದು ಭಾವಿಸತಕ್ಕದ್ದು.

41. **ತೊಂದರೆಗಳನ್ನು ನಿವಾರಿಸಲು ಅಧಿಕಾರ.–** (1) ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೆ ತರುವಾಗ ಯಾವುದೇ ತೊಂದರೆ ಉದ್ಭವಿಸಿದರೆ, ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಪ್ರಕಟಿಸಿದ ಆದೇಶದ ಮೂಲಕ, ತೊಂದರೆಯನ್ನು ನಿವಾರಿಸಲು ಅವಶ್ಯವೆಂದು ಅಥವಾ ವಿಹಿತವೆಂದು ಕಂಡುಬರಬಹುದಾದಂಥ, ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗದಂಥ ಉಪಬಂಧಗಳನ್ನು ರಚಿಸಬಹುದು:

ಪರಂತು, ಈ ಅಧಿನಿಯಮವು ಪ್ರಾರಂಭವಾದ ದಿನಾಂಕದಿಂದ ಎರಡು ವರ್ಷಗಳ ಅವಧಿಯು ಮುಕ್ತಾಯಗೊಂಡ ತರುವಾಯ, ಈ ಪ್ರಕರಣದ ಮೇರೆಗೆ ಯಾವುದೇ ಆದೇಶವನ್ನು ಮಾಡತಕ್ಕದ್ದಲ್ಲ.

(2) ಈ ಪ್ರಕರಣದ ಮೇರೆಗೆ ರಚಿಸಿದ ಪ್ರತಿಯೊಂದು ಆದೇಶವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಮಂಡಿಸತಕ್ಕದ್ದು.

42. **ನಿಯಮಗಳನ್ನು ರಚಿಸಲು ಕೇಂದ್ರ ಸರ್ಕಾರದ ಅಧಿಕಾರ.–** (1) ಕೇಂದ್ರ ಸರ್ಕಾರವು, ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ರಾಜಪತ್ರದಲ್ಲಿ ಮುಂಚಿತವಾಗಿ ಪ್ರಕಟಿಸಬೇಕೆಂಬ ಷರತ್ತಿಗೆ ಒಳಪಟ್ಟು ಅಧಿಸೂಚನೆಯ ಮೂಲಕ ನಿಯಮಗಳನ್ನು ರಚಿಸಬಹುದು.

(2) ಅದರಲ್ಲೂ ಮುಖ್ಯವಾಗಿ ಮತ್ತು ಮೇಲೆ ಹೇಳಿದ ಅಧಿಕಾರಗಳ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಅಂಥ ನಿಯಮಗಳು ಈ ಮುಂದಿನ ಎಲ್ಲಾ ಅಥವಾ ಯಾವುದೇ ವಿಷಯಗಳಿಗೆ ಉಪಬಂಧವನ್ನು ಕಲ್ಪಿಸಬಹುದು, ಎಂದರೆ:–

(ಎ) 9ನೇ ಪ್ರಕರಣದ ಮೇರೆಗೆ ಲಸಿಕೆ ಹಾಕಿದಕ್ಕಾಗಿ ನೀಡಿದ ಪ್ರಮಾಣಪತ್ರದ ನಮೂನೆ ಮತ್ತು ಯಾವ ವಿವರಗಳನ್ನು ಅಂಥ ಪ್ರಮಾಣಪತ್ರವು ಒಳಗೊಂಡಿರತಕ್ಕದ್ದೋ ಆ ವಿವರಗಳು;

(ಬಿ) 26ನೇ ಪ್ರಕರಣದ ಮೇರೆಗೆ ಮೃತದೇಹವನ್ನು ವಿಲೆ ಮಾಡುವ ವಿಧಾನ;

(ಸಿ) 27ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಪರೀಕ್ಷೆಯನ್ನು ಮಾಡುವ ಮತ್ತು ಮೃತದೇಹದ ಪರೀಕ್ಷೆ ಮಾಡಿಸುವ ವಿಧಾನ ಮತ್ತು (2)ನೇ ಉಪಪ್ರಕರಣದ ಮೇರೆಗೆ ಮೃತದೇಹ ಪರೀಕ್ಷೆಯ ವರದಿಯ ನಮೂನೆ;

(ಡಿ) ಕೇಂದ್ರ ಸರ್ಕಾರವು ಯಾವ ಇತರ ವಿಷಯಗಳನ್ನು ನಿಯಮಿಸಬಹುದೋ ಅಥವಾ ಯಾವ ಇತರ ವಿಷಯಗಳಿಗೆ ನಿಯಮಗಳನ್ನು ರಚಿಸುವುದು ಅಗತ್ಯವಾಗಿದೆಯೋ ಆ ಯಾವುದೇ ಇತರ ವಿಷಯ.

43. **ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರದ ಅಧಿಕಾರ.–** (1) ರಾಜ್ಯ ಸರ್ಕಾರವು, ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ಅಧಿಸೂಚನೆಯ ಮೂಲಕ ಮತ್ತು ಕೇಂದ್ರ ಸರ್ಕಾರದ ಪೂರ್ವಾನುಮೋದನೆ ಪಡೆದು ಈ ಕೆಳಕಂಡ ನಿಯಮಗಳನ್ನು ರಚಿಸಬಹುದು.

(2) ಅದರಲ್ಲೂ ಮುಖ್ಯವಾಗಿ ಮತ್ತು ಮೇಲೆ ಹೇಳಿದ ಅಧಿಕಾರಗಳ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಅಂಥ ನಿಯಮಗಳು ಈ ಮುಂದಿನ ಎಲ್ಲಾ ಅಥವಾ ಯಾವುದೇ ವಿಷಯಗಳಿಗೆ ಉಪಬಂಧವನ್ನು ಕಲ್ಪಿಸಬಹುದು ಎಂದರೆ:–

(ಎ) 14ನೇ ಪ್ರಕರಣದ (4)ನೇ ಉಪಪ್ರಕರಣದ ಮೇರೆಗೆ ರೋಗಿ ಸಂಸರ್ಗ ನಿಷೇಧ ಸ್ಥಳ ಶಿಬಿರದ ಪ್ರಭಾರದಲ್ಲಿರುವ ಅಧಿಕಾರಿಯು ಮಂಜೂರು ಮಾಡಬೇಕಾದ ಪರವಾನಿಗೆ ನಮೂನೆ;

(ಬಿ) 15ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಪಶುಗಳಿಗೆ ಕಡ್ಡಾಯವಾಗಿ ಲಸಿಕೆಯನ್ನು ಹಾಕುವುದಕ್ಕಾಗಿ ಮತ್ತು ಪಶುಗಳಿಗೆ ಗುರುತು ಹಾಕುವುದಕ್ಕಾಗಿ ತಪಾಸಣಾ ಠಾಣೆಯ ಬಳಿ ಅಥವಾ ರೋಗಿ ಸಂಸರ್ಗ ನಿಷೇಧ ಸ್ಥಳ ಶಿಬಿರದ ಬಳಿ ಪಶುವನ್ನು ತಪಾಸಣೆ ಮಾಡುವ ರೀತಿ ಮತ್ತು ಪಶುವನ್ನು ತಡೆಹಿಡಿದಿಟ್ಟುಕೊಳ್ಳಬೇಕಾದ ಅವಧಿ ಮತ್ತು ಪ್ರವೇಶಕ್ಕಾಗಿ ಪರವಾನಿಗೆ ನೀಡಿಕೆಯ ನಮೂನೆ ಮತ್ತು ನೀಡಿಕೆ ವಿಧಾನ;

(ಸಿ) ರಾಜ್ಯ ಸರ್ಕಾರವು ಯಾವ ಇತರ ವಿಷಯದ ಸಂಬಂಧದಲ್ಲಿ ನಿಯಮವನ್ನು ರಚಿಸಬೇಕಾಗಿದೆಯೋ ಅಥವಾ ರಚಿಸಬಹುದಾಗಿದೆಯೋ, ಆ ಯಾವುದೇ ಇತರ ವಿಷಯ.

**44. ನಿಯಮಗಳನ್ನು ಮಂಡಿಸುವುದು.–** (1) ಕೇಂದ್ರ ಸರ್ಕಾರವು, ಈ ಅಧಿನಿಯಮದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಇಡತಕ್ಕದ್ದು ಮತ್ತು ಮೇಲೆ ಹೇಳಿದ ಅಧಿವೇಶನದ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಅಧಿವೇಶನಗಳ ನಿಕಟೋತ್ತರದ ಅಧಿವೇಶನದ ಮುಕ್ತಾಯಕ್ಕೆ ಮುಂಚೆ, ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ ಆ ನಿಯಮವು ಸಂದರ್ಭಾನುಸಾರ, ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ; ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು, ಆ ನಿಯಮದ ಮೇರೆಗೆ ಈ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

(2) ರಾಜ್ಯ ಸರ್ಕಾರವು, ಈ ಅಧಿನಿಯಮದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ, ಆದಷ್ಟು ಬೇಗನೆ ರಾಜ್ಯ ವಿಧಾನ ಮಂಡಲದ ಮುಂದೆ ಮಂಡಿಸತಕ್ಕದ್ದು.

**45. ನಿರಸನ ಮತ್ತು ಉಳಿಸುವಿಕೆಗಳು.–** ಈ ಅಧಿನಿಯಮದ ಪ್ರಾರಂಭದ ನಂತರ–

(i) ಗ್ಲ್ಯಾಂಡರ್ಸ್ ಮತ್ತು ಫಾರ್ಸಿ ಆಕ್ಟ್, 1899 (1899 ರ 13);

(ii) ಡೌರೈನ್ ಆಕ್ಟ್, 1910 (1910 ರ 5); ಮತ್ತು

(iii) ಯಾವುದೇ ರಾಜ್ಯದ ಯಾವುದೇ ಇತರ ಸಂವಾದಿ ಕಾನೂನು ಈ ಅಧಿನಿಯಮದ ಉಪಬಂಧಗಳಿಗೆ ಅದು ಅಸಂಗತವಾಗಿರುವಷ್ಟರಮಟ್ಟಿಗೆ

– ನಿರಸಿತಗೊಳ್ಳತಕ್ಕದ್ದು:

ಪರಂತು, ಈ ಪ್ರಕರಣದಲ್ಲಿ ಏನೇ ಒಳಗೊಂಡಿರುವುದು ಯಾವುದೂ–

(ಎ) ಯಾವುದೇ ಅಂಥ ಕಾನೂನಿನ ಉಪಬಂಧವು ಈ ಹಿಂದೆ ಜಾರಿಯಲ್ಲಿರುವುದಕ್ಕೆ ಅಥವಾ ಅದರ ಮೇರೆಗೆ ವಿಧ್ಯುಕ್ತವಾಗಿ ಮಾಡಿದ ಯಾವುದನ್ನು ಅಥವಾ ಅದರ ಮೇರೆಗೆ ಅವಕಾಶಕೊಟ್ಟಿದಂಥ ಯಾವುದಕ್ಕೂ ಬಾಧಕವಾಗತಕ್ಕದ್ದಲ್ಲ;

(ಬಿ) ಕಾನೂನಿನ ಅಂಥ ಉಪಬಂಧದ ಮೇರೆಗೆ ಆರ್ಜಿಸಿದ ಯಾವುದೇ ಹಕ್ಕಿಗೆ, ಆರ್ಜಿಸಿದ ಯಾವುದೇ ವಿಶೇಷಾಧಿಕಾರಕ್ಕೆ ಉಂಟಾದ ಯಾವುದೇ ಹೊಣೆಗಾರಿಕೆಗೆ ಅಥವಾ ಗುರಿಯಾದ ಯಾವುದೇ ಬಾಧ್ಯತೆಗೆ ಬಾಧಕವಾಗತಕ್ಕದ್ದಲ್ಲ;

(ಸಿ) ಕಾನೂನಿನ ಯಾವುದೇ ಅಂಥ ಉಪಬಂಧವನ್ನು ಉಲ್ಲಂಘಿಸಿ ಮಾಡಿದ ಯಾವುದೇ ಅಪರಾಧಕ್ಕೆ ಸಂಬಂಧಿಸಿದ ಯಾವುದೇ ದಂಡಕ್ಕೆ, ಮುಟ್ಟುಗೋಲಿಗೆ ಅಥವಾ ಶಿಕ್ಷೆಗೆ ಬಾಧಕವಾಗತಕ್ಕದ್ದಲ್ಲ; ಅಥವಾ

(ಡಿ) ಮೇಲೆ ಹೇಳಿರುವ, ಯಾವುದೇ ಅಂಥ ಹಕ್ಕಿಗೆ, ವಿಶೇಷಾಧಿಕಾರಕ್ಕೆ, ಹೊಣೆಗಾರಿಕೆಗೆ, ಬಾಧ್ಯತೆಗೆ, ದಂಡಕ್ಕೆ, ಮುಟ್ಟುಗೋಲಿಗೆ ಅಥವಾ ಶಿಕ್ಷೆಗೆ ಸಂಬಂಧಿಸಿದ ಯಾವುದೇ ತನಿಖೆಗೆ, ನ್ಯಾಯಿಕ ವ್ಯವಹರಣೆಗೆ ಅಥವಾ ಪರಿಹಾರಕ್ಕೆ ಬಾಧಕವಾಗತಕ್ಕದ್ದಲ್ಲ ಮತ್ತು ಅಂಥ ತನಿಖೆಯನ್ನು ಮುಂದುವರಿಸಬಹುದು, ನ್ಯಾಯಿಕ ವ್ಯವಹರಣೆಯನ್ನು ಹೂಡಬಹುದು, ಪರಿಹಾರ ನೀಡಿಕೆಯನ್ನು ಮುಂದುವರಿಸಬಹುದು, ಮತ್ತು ಮೇಲೆ ಹೇಳಿದಂತೆ ಕಾನೂನಿನ ಉಪಬಂಧಗಳು ಮುಂದುವರಿದಿದ್ದರೆ ಹೇಗೆ ಯಾವುದೇ ಅಂಥ ದಂಡವನ್ನು, ಮುಟ್ಟುಗೋಲನ್ನು ಮತ್ತು ಶಿಕ್ಷೆಯನ್ನು ವಿಧಿಸಬಹುದಾಗಿತ್ತೋ ಹಾಗೆಯೇ ಅಂಥ ಯಾವುದೇ ದಂಡವನ್ನು, ಮುಟ್ಟುಗೋಲನ್ನು ಮತ್ತು ಶಿಕ್ಷೆಯನ್ನು ವಿಧಿಸಬಹುದು:

ಮತ್ತೂ ಪರಂತು, ಕಾನೂನಿನ ಯಾವುದೇ ಅಂಥ ಉಪಬಂಧದ ಮೇರೆಗೆ ಮಾಡಿದ ಯಾವುದೇ ಕಾರ್ಯವನ್ನು ಅಥವಾ ಕೈಗೊಂಡ ಯಾವುದೇ ಕ್ರಮವನ್ನು, ಹೊರಡಿಸಿದ ಯಾವುದೇ ಅಧಿಸೂಚನೆಯನ್ನು, ಮಾಡಿದ ಯಾವುದೇ

ಆದೇಶವನ್ನು, ನೀಡಿದ ಯಾವುದೇ ನೋಟೀಸನ್ನು ಅಥವಾ ಸ್ವೀಕೃತಿಯನ್ನು ಅಥವಾ ಮಾಡಿದ ಯಾವುದೇ ಘೋಷಣೆಯನ್ನು ಇವೆಲ್ಲವೂ ಸೇರಿದಂತೆ ಅದು ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗದಿರುಷ್ಟರ ಮಟ್ಟಿಗೆ ಈ ಅಧಿನಿಯಮದ ಸಂವಾದಿ ಉಪಬಂಧಗಳ ಮೇರೆಗೆ ಮಾಡಿದ್ದೆಂದು, ಕೈಗೊಂಡದ್ದೆಂದು, ಹೊರಡಿಸಿದ್ದೆಂದು ಅಥವಾ ನೀಡಿದ್ದೆಂದು ಭಾವಿಸತಕ್ಕದ್ದು ಮತ್ತು ಈ ಅಧಿನಿಯಮದ ಮೇರೆಗೆ ಮಾಡಿದ ಯಾವುದನ್ನು ಅಥವಾ ಕೈಗೊಂಡ ಯಾವುದೇ ಕ್ರಮವನ್ನು ಅದು ರದ್ದಾಗದಿದ್ದರೆ ಮತ್ತು ರದ್ದಾಗುವ ತನಕ ತದನುಸಾರವಾಗಿ ಜಾರಿಯಲ್ಲಿರುವುದು ಮುಂದುವರಿಯತಕ್ಕದ್ದು.

**ಅನುಸೂಚಿ**

**[2(ಓ) ಮತ್ತು 38ನೇ ಪ್ರಕರಣಗಳನ್ನು ನೋಡಿ]**

(ಎ) **ಬಹು ಜಾತಿಗಳ ರೋಗಗಳು**

1. ನೆರಡಿ ರೋಗ (ಆಂಡ್ರಾಕ್ಸ್).
2. ಅಜೆಸ್‌ಕೀಸ್ ರೋಗ.
3. ನೀಲಿ ನಾಲಿಗೆ ರೋಗ.
4. ಕಂದು ರೋಗ.
5. ಕ್ರಿಮಿನಲ್ ಕಾಂಗೋ ಹ್ಯಾಮರೆಜಿಕ್ ಜ್ವರ. (ರಕ್ತ ಸ್ರಾವದ)
6. ಹೈಡಾಟಿಡಿಯೋಸಿಸ್.
7. ಕಾಲು ಬಾಯಿ ರೋಗ.
8. ನೀರು ಹೃದಯ ರೋಗ.
9. ಜಪಾನೀಸ್ ಮೆದುಳು ರೋಗ. (ಜಪಾನೀಸ್ ಮೆದುಳು ಉರಿಯೂತ)
10. ಇಲಿಜ್ವರ (ಲೆಪ್ಟೋಸ್ಪೈರೋಸಿಸ್), ಹಳದಿ ಜ್ವರ/ಕಾಮುತ ರೋಗ.
11. ನ್ಯೂ ವರ್ಲ್ಡ್ ಸ್ಕ್ರೂವರ್ಮ್. (ಕೊಚಲಿಮಿಯ್ಯ ಹೋಮಿನೀವೋರೆಕ್ಸ್)
12. ಓಲ್ಡ್ ವರ್ಲ್ಡ್ ಸ್ಕ್ರೂವರ್ಮ್. (ಚೈರೀಸೋಮಿಯ ಬೇಜಿಯಾನ)
13. ಪ್ಯಾರಟ್ಯುಬರ್‌ಕ್ಯುಲೋಸಿಸ್/ಜೋನ್ಸ್ ರೋಗ.
14. ಕ್ಯೂ ಜ್ವರ (ಕ್ಯೂ ಫೀವರ್).
15. ನಾಯಿಹುಚ್ಚು ರೋಗ. (ರೇಬೀಸ್ ರೋಗ)
16. ರಿಫ್ಟ್ ವ್ಯಾಲಿ ಫೀವರ್.
17. ದೊಡ್ಡ ರೋಗ. (ರಿಂಡೆರಪೆಸ್ಟ್)
18. ಟ್ರೈಕಿಸಿಲೋಸಿಸ್.
19. ತುಲರೇಮಿಯ.
20. ಬಾಯಿ ಹುಣ್ಣು.
21. ವೆಸ್ಟನೈಲ್ ಜ್ವರ.

(ಬಿ) **ಜಾನುವಾರು ಖಾಯಿಲೆಗಳು**

1. ದನಗಳ ಅನಾಪ್ಲಾಸ್ಮೋಸಿಸ್.
2. ದನಗಳ ಬೆಬಿಸಿಯೋಸಿಸ್/ಕೆಂಪು ಮೂತ್ರ ರೋಗ.

3. ದನಗಳ ಗುಪ್ತಾಂಗಗಳ ಕಂಪೈಲೋ ಬ್ಯಾಕ್ಟೀರಿಯೋ ರೋಗ.
4. ದನಗಳ ಸ್ಪಾಂಜಿಫಾರಂ ಮೆದುಳು ರೋಗ. (ಮೆದುಳ ಉರಿಯೂತ)
5. ದನಗಳ ಕ್ಷಯರೋಗ.
6. ದನಗಳ ನಂಜು ಭೇದಿ/ದನಗಳ ಸೂಕ್ಷ್ಮಾಣುಜೀವಿ ಭೇದಿ.
7. ದನಗಳ ಸಾಂಕ್ರಾಮಿಕ ಶ್ವಾಸಕೋಶದ ಉರಿಯೂತ.
8. ದನಗಳು ಪಶುವ್ಯಾಧಿ ಲೈಕೋಸಿಸ್/ದನಗಳ ಸಾಂಕ್ರಾಮಿಕ ಲ್ಯೂಕೋಸಿಸ್.
9. ಗಳಲೆ ರೋಗ.
10. ದನಗಳ ಮೂಗು ಗಂಟಲು ಶ್ವಾಸನಾಳ ಸೋಂಕು ರೋಗ/ದನಗಳ ಮೂಗು ಗಂಟಲು ಸೋಂಕು ರೋಗ, ದನಗಳ ಜನನಾಂಗದ ಸೋಂಕು ರೋಗ.
11. ಲಂಪಿ ಚರ್ಮ ರೋಗ. (ಚರ್ಮದ ದುಗ್ದಗ್ರಂಥಿ ರೋಗ)
12. ಮಾಲಿಂಗ್ನಂಟ್ ಕೇಟಾರಲ್ ಜ್ವರ.
13. ಥೈಲೀರಿಯೋಸ್ಸಿಸ್/ಥೈಲೇರಿಯಾ ರೋಗ.
14. ಟ್ರೈಕೊಮೋನಿಯಾಸಿಸ್.
15. ಟ್ರೈಪಾನೊಸೋಮಿಯಾಸಿಸ್

**(ಸಿ) ಕುರಿ ಮತ್ತು ಮೇಕೆ ರೋಗಗಳು**

1. ಮೇಕೆಗಳ ಸಂದಿವಾತ ರೋಗ/ಮೇಕೆಗಳ ಮೆದುಳು ರೋಗ.
2. ಸಾಂಕ್ರಾಮಿಕ ಅಗಾಲೆಕ್ಷಿಯ.
3. ಮೇಕೆಗಳ ಸಾಂಕ್ರಾಮಿಕ ಶ್ವಾಸಕೋಶ ಉರಿಯೂತ. (ಪ್ಲೊರೋನ್ಯೂಮೋನಿಯ)
4. ಕುರಿಗಳ ಸಾಂಕ್ರಾಮಿಕ ಗರ್ಭಪಾತ. (ಕುರಿಗಳ ಕ್ಲಾಮಿಡಿಯೋಸಿಸ್)
5. ಮೇದಿ–ವಿಸ್‌ನಾ.
6. ನೈರೋಬಿ ಕುರಿಗಳ ರೋಗ.
7. ಕುರಿಗಳ ಕಂದುರೋಗ. (ಬ್ರೂಸೆಲ್ಲಾ ಓವಿಸ್)
8. ಪಿಪಿಆರ್ ರೋಗ/ಕುರಿಗಳ ಪಿಪಿಆರ್ ರೋಗ.
9. ಸಾಲ್ಮನೆಲ್ಲೋಸಿಸ್. (ಎಸ್. ಅಬಾಟ್ಯೂಸೋವಿಸ್)
10. ಸ್ಕ್ರೇಪಿ.
11. ಕುರಿ ಸಿಡುಬು ಮತ್ತು ಮೇಕೆ ಸಿಡುಬು. (ಶೀಪ್ ಪಾಕ್ಸ್ ಮತ್ತು ಗೋಟ್ ಪಾಕ್ಸ್)

**(ಡಿ) ಅಶ್ವ ರೋಗಗಳು (ಕುದುರೆಗಳಲ್ಲಿ ಬರುವ ರೋಗಗಳು)**

1. ಆಫ್ರಿಕದ ಕುದುರೆ ರೋಗ.
2. ಕುದುರೆಗಳ ಸಾಂಕ್ರಾಮಿಕ ಗರ್ಭಕೋಶ ರೋಗ. (ಗರ್ಭಕೋಶ ಉರಿಯೂತ)
3. ಡ್ಯೂರಿನ್.

4. ಕುದುರೆಗಳ ಮೆದುಳು ರೋಗ (ಉರಿಯೂತ) (ಪೂರ್ವ)
5. ಕುದುರೆಗಳ ಮೆದುಳು ರೋಗ (ಉರಿಯೂತ) (ಪಶ್ಚಿಮ)
6. ಕುದುರೆಗಳ ಸಾಂಕ್ರಾಮಿಕ ರಕ್ತಹೀನತೆ.
7. ಕುದುರೆಗಳ ಇನ್‌ಫ್ಲೂಯೆಂಜಾ/ಕುದುರೆಗಳ ಶೀತಜ್ವರ.
8. ಕುದುರೆಗಳ ಪೈರೋಪ್ಲಾಸ್‌ಮೋಸಿಸ್.
9. ಕುದುರೆಗಳ ಮೂಗು, ಶ್ವಾಸಕೋಶದ ಉರಿಯೂತ.
10. ಕುದುರೆಗಳ ಸೂಕ್ಷ್ಮಾಣುಜೀವಿ ರಕ್ತನಾಳ ಉರಿಯೂತ.
11. ಗ್ಲ್ಯಾಂಡರ್ಸ್.
12. ಸರ್ರಾ. (ಟ್ರೈಪಾನೋಸೋಮ ಎವಾನ್ಸಿ)
13. ವೆನಿಜೂಲ ಕುದುರೆಗಳ ಮೆದುಳು ರೋಗ. (ಉರಿಯೂತ)

**(ಇ) ಹಂದಿ ರೋಗಗಳು**

1. ಆಫ್ರಿಕದ ಹಂದಿ ಜ್ವರ.
2. ಸಾಮಾನ್ಯ ಹಂದಿ ಜ್ವರ.
3. ನಿಫಾ. ಸೂಕ್ಷ್ಮಾಣು ಜೀವಿಗಳ ಮೆದುಳು ಉರಿಯೂತ.
4. ಹಂದಿಗಳ ಗಂಟು ರೋಗ/ಹಂದಿಗಳ ಸಿಸ್ಟಿಸ್‌ಕೋರ್ಸಿಸ್.
5. ಹಂದಿಗಳ ಗರ್ಭಾಶಯ ಮತ್ತು ಶ್ವಾಸಕೋಶದ ಸಿಂಡ್ರೋಮ್
6. ಹಂದಿಗಳ ರಕ್ತನಾಳಗಳ ರೋಗ.
7. ಸಾಂಕ್ರಾಮಿಕ ಜೀರ್ಣಾಂಗವ್ಯೂಹದ ಉರಿಯೂತ.

**(ಎಫ್) ಕೋಳಿಗಳ/ಕುಕ್ಕುಟಗಳ/ಹಕ್ಕಿಗಳ ರೋಗಗಳು**

1. ಹಕ್ಕಿಗಳ ಕ್ಲಾಮಿಡಿಯೋಸಿಸ್.
2. ಹಕ್ಕಿಗಳ/ಕೋಳಿಗಳ ಸಾಂಕ್ರಾಮಿಕ ಶ್ವಾಸಕೋಶದ ಉರಿಯೂತ.
3. ಕೋಳಿಗಳ ಸಾಂಕ್ರಾಮಿಕ ಗಂಟಲು ಶ್ವಾಸನಾಳ ಉರಿಯೂತ.
4. ಕೋಳಿಗಳ ಮೈಕೋಪ್ಲಾಸ್ಮೋಸಿಸ್. (ಎಂ. ಗ್ಯಾಲಿಸೆಪ್ಟಿಕಮ್)
5. ಹಕ್ಕಿಗಳ ಮೈಕೊಪ್ಲಾಸ್ಮೋಸಿಸ್. (ಎಂ. ಸಿನೋವಿಯೆ)
6. ಬಾತುಕೋಳಿಗಳ ಸೂಕ್ಷ್ಮಾಣುಜೀವಿ ಪಿತ್ತಜನಕಾಂಗದ ಉರಿಯೂತ.
7. ಕೋಳಿ ಕಾಲರಾ.
8. ಕೋಳಿ ಟೈಫಾಯ್ಡ್ ಮೆದುಳು ಜ್ವರ.
9. ಅತಿ ಹೆಚ್ಚು ಮಾರಕ ಹಕ್ಕಿ ಜ್ವರ ಮತ್ತು ಕಡಿಮೆ ಮಾರಕ ಹಕ್ಕಿಜ್ವರ/ಕೋಳಿ ಶೀತಜ್ವರ.
10. ಸಾಂಕ್ರಾಮಿಕ ಬರ್ಸಲ್ ರೋಗ. (ಗುಂಟಾರೋ ರೋಗ)
11. ಮೆರೆಕ್ಸ್ ರೋಗ.

12. ಕೊಕ್ಕರೆ ರೋಗ.
13. ಪುಲ್ಲೋರಂ ರೋಗ.
14. ಟರ್ಕಿ ಕೋಳಿಗಳ ಗಂಟಲು ಶ್ವಾಸನಾಳು ಉರಿಯೂತ.

**(ಜಿ) ಲ್ಯಾಗೊಮಾರ್ಫ್ ರೋಗ**

1. ಮಿಕ್ಸೊಮಾಟೋಸಿಸ್.
2. ಮೊಲಗಳ ರಕ್ತಸ್ರಾವ ರೋಗ.

**(ಎಚ್) ಜೇನುನೊಣದ ರೋಗಗಳು:**

1. ಜೇನು ನೊಣಗಳ ಅಕಾರ್ನಿಸೋಸಿಸ್.
2. ಜೇನು ನೊಣಗಳ ಅಮೇರಿಕನ್ ಫೌಲ್‌ಬ್ರಡ್.
3. ಜೇನು ನೊಣಗಳ ಯುರೋಪಿಯನ್ ಫೌಲ್‌ಬ್ರಡ್.
4. ಸ್ಮಾಲ್ ಹೈವ್ ಬೆಟ್ಟಲ್ ಇನ್ಫೆಸ್ಟೇಷನ್. (ಎಥೀನಾ ಟ್ಯೂಮಿಡಾ)
5. ಜೇನುನೊಣಗಳ ಟ್ರೋಫಿಲೇಲ್ಯಾಪ್ಸ್ ಇನ್ಫೆಸ್ಟೇಷನ್.
6. ಜೇನುನೊಣಗಳ ವರೋಸ್ಸಿಸ್.

**(ಐ) ಮೀನುಗಳ ರೋಗಗಳು**

1. ಮಾರಕ ಹೆಮೆಟೋಪೊಯಟಿಕ್ ರೋಗ.
2. ಸೋಂಕು ಹೆಮೆಟೋಪೊಯಟಿಕ್ ರೋಗ.
3. ಸ್ಪ್ರಿಂಗ್ ವೈರೆಮಿಯ ಆಫ್ ಕ್ರಾಫ್ಟ್. (ಎಸ್‌ವಿಸಿ)
4. ವೈರಲ್ ಹೈಮೊರ್‍ಹಾಜಿಕ್ ಸಿಪ್ಟಿಸೀಮಿಯಾ. (ವಿಹೆಚ್‌ಎಸ್)
5. ಎಪಿಝೂಟಿಕ್ ಅಲ್ಸರೇಟಿವ್ ಸಿಂಡ್ರೋಮ್. (ಇಯುಎಸ್)
6. ರೆಡ್ ಸೀಬ್ರೀಮ್ ಐರಿಡೊವೈರಲ್ ರೋಗ. (ಆರ್‌ಎಸ್‌ಐಡಿ)
7. ಕೊಇ ಹರ್ಪಿಸ್‌ವೈರಸ್ ರೋಗ. (ಕೆಎಚ್‌ವಿ)
8. ಗ್ರೂಪರ್ ಐರಿಡೊವೈರಲ್ ರೋಗ.
9. ವೈರಲ್ ಎನ್ಸಿಫಲೋಪಥಿ ಮತ್ತು ರೆಟಿನೋಪಥಿ.
10. ಎನ್ಟರಿಕ್ ಸೆಪ್ಟಿಸೀಮಿಯ ಆಫ್ ಕ್ಯಾಟ್‌ಫಿಶ್.
11. ಇನ್ಫೆಕ್ಷನ್ ವಿತ್ ಎರೋಮೊನಸ್ ಹೈಡ್ರೊಫಿಲಾ.
12. ಇನ್ಫೆಕ್ಷನ್ ವಿತ್ ಎಡ್ವರ್ಡ್‌ಸಿಲ್ಲಾ ಟರ್ಡ.
13. ಇನ್ಫೆಕ್ಷನ್ ವಿತ್ ವೈಬ್ರಿಯೊ ಆ್ಯಂಗ್ವಿಲ್ಲಾರಮ್.
14. ಇನ್ಫೆಕ್ಷನ್ ವಿತ್ ಫ್ಲೆವೊಬ್ಯಾಕ್ಟಿರಿಯಂ ಕಾಲಂನರ್.
15. ಇನ್ಫೆಕ್ಷನ್ ವಿತ್ ಸ್ಟ್ರೆಪ್ಟೊಕಾಕಸ್ ಇನಿಯಾ ಇನ್ ಟಿಲಪಿಯ.

16. ಇನ್ಫೆಕ್ಷಿಯಸ್ ಪ್ಯಾನ್ಕ್ರಿಯಟಿಕ್ ನೆಕ್ರೋಸಿಸ್. (ಕೋಲ್ಡ್ ವಾಟರ್)
17. ಇನ್ಫೆಕ್ಷನ್ ವಿತ್ ಮಿಕ್ರೊಬೊಲಸ್ ಎಸ್‌ಪಿಪಿ.
18. ಇನ್ಫೆಕ್ಷನ್ ವಿತ್ ಇಚ್ತಿಯೊಫ್ತಿರಿಯಸ್ ಮಲ್ಟಿಫಿಲಿಸ್.
19. ಇನ್ಫೆಕ್ಷನ್ ವಿತ್ ಸ್ಯಾಪ್ರೊಲೆಗ್ನಿಯ ಪ್ಯಾರಾಸಿಟಿಕ.
20. ಇನ್ಫೆಸ್ಟೇಷನ್ ವಿತ್ ಆ್ಯರ್ಗ್ಯುಲಸ್ ಎಸ್‌ಪಿಪಿ.
21. ಇನ್ಫೆಸ್ಟೇಷನ್ ವಿತ್ ಡಾಕ್ಟಿಲೊಜಿರಸ್ ಎಸ್‌ಪಿಪಿ.
22. ಇನ್ಫೆಸ್ಟೇಷನ್ ವಿತ್ ಲರ್ನೆನಿಯ ಎಸ್‌ಪಿಪಿ.
23. ಇನ್ಫೆಸ್ಟೇಷನ್ ವಿತ್ ಕ್ಯಾಲಿಗಸ್ ಎಸ್‌ಪಿಪಿ.

**(ಜೆ) ಮೃದ್ವಂಗಿ ರೋಗಗಳು**

1. ಬೋನಾಮಿಯ ಎಕ್ಸಿಟಿಯೋಸಾ ಸೋಂಕು.
2. ಇನ್ಫೆಕ್ಷನ್ ವಿತ್ ಪರ್ಕಿನ್ಸಸ್ ಒಸಿನಿ.
3. ಇನ್ಫೆಕ್ಷನ್ ವಿತ್ ಅಬಲೋನ್ ಹರ್ಪಿಸ್‌ವೈರಸ್.
4. ಇನ್ಫೆಕ್ಷನ್ ವಿತ್ ಝಿನೊಹಲಿಯೋಟಿಸ್ ಕ್ಯಾಲಿಫೋರ್ನಿನ್ಸಿಸ್.
5. ಇನ್ಫೆಕ್ಷನ್ ವಿತ್ ಮಾಟ್ರಿಲಯಡಿಸ್ ಚಂಗ್‌ಮುನ್ಸಿಸಿಸ್.
6. ಅಕ್ಯುಟ್ ವೈರಲ್ ನೆಕ್ರೋಸಿಸ್. (ಇನ್ ಸ್ಕಲ್ಲೊಪ್ಸ್)
7. ಅಕೊಯ ಒಸ್ಟರ್ ರೋಗ.
8. ಇನ್ಫೆಕ್ಷನ್ ವಿತ್ ಬೊಮನಿಯ ಒಸ್ಟ್ರೇ.
9. ಇನ್ಫೆಕ್ಷನ್ ವಿತ್ ಮಾರ್ಟೆಲಿಯ ರಿಗ್ರಿಂಜೆನ್ಸ್.
10. ಇನ್ಫೆಕ್ಷನ್ ವಿತ್ ಪರ್ಕಿನ್ಸಸ್ ಮರಿನಸ್.
11. ಇನ್ಫೆಕ್ಷನ್ ವಿತ್ ಒಸ್ಟ್ರೇಡ್ ಹರ್ಪ್ಸ್ ವೈರಸ್.

**(ಕೆ) ವಲ್ಕವಂತಗರ ರೋಗಗಳು**

1. ಟಾರಾ ಸಿಂಡ್ರೋಮ್. (ಟಿಎಸ್)
2. ಬಿಳಿ ಚುಕ್ಕೆ ರೋಗ. (ಡಬ್ಲ್ಯೂಎಸ್‌ಡಿ)
3. ಹಳದಿ ತಲೆ ರೋಗ. (ವೈಹೆಚ್‌ಡಿ)
4. ಇನ್ಫೆಕ್ಷಿಯಸ್ ಹೈಪೊಡರ್ಮಲ್ ಆ್ಯಂಡ್ ಹೆಮೊಟೊಪೊಯಿಟಿಕ್ ನೆಕ್ರೋಸಿಸ್. (ಐಹೆಚ್‌ಹೆಚ್‌ಎನ್)
5. ಇನ್ಫೆಕ್ಷಿಯಸ್ ಯೆನೆಕ್ರೊಸಿಸ್. (ಐಎಮ್‌ಎನ್)
6. ವೈಟ್ ಟೇಲ್ ಡಿಸೀಸ್. (ಎಮ್‌ಆರ್‌ಎನ್‌ವಿ)
7. ನೆಕ್ರೊಟೈಸಿಂಗ್ ಹೆಪಟೊಪ್ಯಾನ್ಕ್ರಿಟಿಸಿಸ್. (ಎನ್‌ಹೆಚ್‌ಪಿ)
8. ಮಿಲ್ಕಿ ಹೆಮೊಲಿಮ್ಫ್ ಡಿಸೀಸ್ ಆಫ್ ಸ್ಪೈನಿ ಲ್ಯಾಬ್‌ಸ್ಟರ್. (ಪ್ಯಾನುಲಿರಸ್ ಎಸ್‌ಪಿಪಿ)

9. ಮೊನೊಡನ್ ಸ್ಲೊ ಗ್ರೊತ್ ಸಿಂಡ್ರೊಮ್.
10. ಅಕ್ಯುಟ್ ಹೆಪಟೊಪ್ಯಾನ್‌ಕ್ರಿಟಿಸಿಸ್ ನೆಕ್ರೊಸಿಸ್ ಸಿಂಡ್ರೊಮ್. (ಎಹೆಚ್‌ಪಿಎನ್‌ಎಸ್)
11. ಹೆಪಟೊಪ್ಯಾನ್‌ಕ್ರಿಟಿಸಿಸ್ ಪರ್ವೊವೈರಸ್.
12. ಮೊನೊಡನ್ ಬ್ಯಾಕುಲೊವೈರಸ್.
13. ಲೂಸ್ ವೈರಸ್ ಸಿಂಡ್ರೊಮ್.
14. ಸ್ವಾಫ್ ಶೆಲ್ ಸಿಂಡ್ರೊಮ್.
15. ಗ್ಯಾಫ್ಫೆಮಿಯ.

**(ಎಲ್) ಉಭಯಚರ ರೋಗಗಳು**

1. ಇನ್ಫೆಕ್ಷನ್ ವಿತ್ ರಾನವೈರಸ್.
2. ಇನ್ಫೆಕ್ಷನ್ ವಿತ್ ಬಟ್ರಕೊಚಿಟ್ರಿಯಂ ಡೆಂಡ್ರೊಬಟಿಡಿಸ್.

**(ಎಮ್) ಇತರ ರೋಗಗಳು**

1. ಒಂಟೆ ಸಿಡುಬು.
2. ಲೈಶ್ಮೋನಿಯೋಸಿಸ್.

## ಕಾನೂನು ಮಾಪನ ವಿಜ್ಞಾನ ಅಧಿನಿಯಮ, 2009

## (2010ರ ಅಧಿನಿಯಮ ಸಂಖ್ಯೆ 1)

[13ನೇ ಜನವರಿ, 2010.]

ತೂಕದ ಬಟ್ಟುಗಳ ಮತ್ತು ಅಳತೆಯ ಮಾಪಕಗಳ ಪ್ರಮಾಣಗಳನ್ನು ನಿಗದಿಪಡಿಸುವುದಕ್ಕಾಗಿ ಮತ್ತು ಜಾರಿಗೊಳಿಸುವುದಕ್ಕಾಗಿ ತೂಕದ ಬಟ್ಟುಗಳ, ಅಳತೆಯ ಮಾಪಕಗಳ ಮತ್ತು ಯಾವ ಇತರ ಸರಕುಗಳನ್ನು ತೂಕ ಮಾಡಿ, ಅಳತೆ ಮಾಡಿ ಅಥವಾ ಸಂಖ್ಯೆಯನ್ನು ಎಣಿಕೆ ಮಾಡಿ ಮಾರಾಟ ಮಾಡಲಾಗುತ್ತದೆಯೋ ಆ ಇತರ ವಸ್ತುಗಳ ವ್ಯಾಪಾರವನ್ನು ಮತ್ತು ವಾಣಿಜ್ಯವನ್ನು ವಿನಿಯಮಿಸುವುದಕ್ಕಾಗಿ ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಪ್ರಾಸಂಗಿಕವಾದ ವಿಷಯಗಳಿಗಾಗಿ ಉಪಬಂಧ ಕಲ್ಪಿಸಲು ಅಧಿನಿಯಮ.

ಇದು ಭಾರತ ಗಣರಾಜ್ಯದ ಅರವತ್ತೊಂದನೇ ವರ್ಷದಲ್ಲಿ ಸಂಸತ್ತಿನಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು:–

### ಅಧ್ಯಾಯ I

### ಪ್ರಾರಂಭಿಕ

1. **ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ಕಾನೂನು ಮಾಪನ ವಿಜ್ಞಾನ ಅಧಿನಿಯಮ, 2009 ಎಂದು ಕರೆಯತಕ್ಕದ್ದು.

(2) ಇದು, ಇಡೀ ಭಾರತಕ್ಕೆ ವ್ಯಾಪ್ತವಾಗತಕ್ಕದ್ದು.

(3) ಇದು, ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ *ದಿನಾಂಕದಂದು ಜಾರಿಗೆ ಬರತಕ್ಕದ್ದು ಮತ್ತು ಈ ಅಧಿನಿಯಮದ ಬೇರೆ ಬೇರೆ ಉಪಬಂಧಗಳಿಗೆ, ಬೇರೆ ಬೇರೆ ದಿನಾಂಕಗಳನ್ನು ಗೊತ್ತುಪಡಿಸಬಹುದು.

2. **ಪರಿಭಾಷೆಗಳು.–** ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) **"ನಿಯಂತ್ರಕ"** ಎಂದರೆ, 14ನೇ ಪ್ರಕರಣದ ಮೇರೆಗೆ ನೇಮಕಗೊಂಡ ಕಾನೂನು ಮಾಪನ ವಿಜ್ಞಾನ ನಿಯಂತ್ರಕ;

(ಬಿ) ಯಾವುದೇ ತೂಕದ ಬಟ್ಟಿಗೆ ಅಥವಾ ಅಳತೆ ಮಾಪಕಕ್ಕೆ ಸಂಬಂಧಿಸಿದಂತೆ, **"ಡೀಲರ್"** ಎಂದರೆ, ಯಾವ ವ್ಯಕ್ತಿಯು, ನಗದಿಗಾಗಲಿ ಅಥವಾ ಮುಂದೂಡಿದ ಸಂದಾಯಕ್ಕಾಗಿಯಾಗಲಿ, ಅಥವಾ ಕಮೀಷನ್‌ಗಾಗಿಯಾಗಲಿ, ಪರಿಶ್ರಮಕ್ಕಾಗಿಯಾಗಲಿ ಅಥವಾ ಇತರ ಬೆಲೆಯುಳ್ಳ ಪ್ರತಿಫಲಕ್ಕಾಗಿಯಾಗಲಿ, ಯಾವುದೇ ಅಂಥ ತೂಕದ ಬಟ್ಟನ್ನು ಅಥವಾ ಅಳತೆಯ ಮಾಪಕವನ್ನು ಖರೀದಿ ಮಾಡುವ, ಮಾರಾಟ ಮಾಡುವ, ಸರಬರಾಜು ಮಾಡುವ ಅಥವಾ ವಿತರಣೆ ಮಾಡುವ ವ್ಯವಹಾರವನ್ನು, ನೇರವಾಗಿ ಅಥವಾ ಅನ್ಯಥಾ ನಡೆಸುತ್ತಿರುವನೋ ಆ ವ್ಯಕ್ತಿ ಮತ್ತು ಇದರಲ್ಲಿ ಕಮಿಷನ್ ಏಜೆಂಟನು, ಆಮದುದಾರನು, ಯಾವ ವ್ಯಕ್ತಿಯು ತಾನು ತಯಾರಿಸಿದ ಯಾವುದೇ ತೂಕದ ಬಟ್ಟನ್ನು ಅಥವಾ ಅಳತೆಯ ಮಾಪಕವನ್ನು ಡೀಲರ್ ಅಲ್ಲದ ಇತರ ಯಾರೇ ವ್ಯಕ್ತಿಗೆ ಮಾರಾಟ ಮಾಡುತ್ತಾನೋ, ಸರಬರಾಜು ಮಾಡುತ್ತಾನೋ, ವಿತರಣೆ ಮಾಡುತ್ತಾನೋ ಅಥವಾ ಅನ್ಯಥಾ ತಲುಪಿಸುತ್ತಾನೋ ಆ ತಯಾರಕನು ಒಳಗೊಳ್ಳುತ್ತಾನೆ;

(ಸಿ) **"ನಿರ್ದೇಶಕ"** ಎಂದರೆ, 13ನೇ ಪ್ರಕರಣದ ಮೇರೆಗೆ ನೇಮಕಗೊಂಡ ಕಾನೂನು ಮಾಪನ ವಿಜ್ಞಾನ ನಿರ್ದೇಶಕ;

---

*ಮಾರ್ಚ್ 01, 2011 ರಂದು ಜಾರಿಗೆ ಬಂದಿದೆ. ಅಧಿಸೂಚನೆ ಸಂಖ್ಯೆ ಎಸ್.ಓ 1 (ಇ), ದಿನಾಂಕ: ಡಿಸೆಂಬರ್ 31, 2010. ಭಾರತ ವಿಶೇಷ ರಾಜಪತ್ರ, ಭಾಗ–II, ವಿಭಾಗ 3 (ii) ನೋಡಿ.

(ಡಿ) ವ್ಯಾಕರಣ ವ್ಯತ್ಯಾಸಗಳೊಂದಿಗೆ ಮತ್ತು ಸಜಾತೀಯ ಪದಾವಳಿಗಳೊಂದಿಗೆ, "ರಫ್ತು" ಎಂದರೆ, ಭಾರತದ ಹೊರಕ್ಕೆ ಭಾರತದಿಂದ ತೆಗೆದುಕೊಂಡು ಹೋಗುವುದು;

(ಇ) ವ್ಯಾಕರಣ ವ್ಯತ್ಯಾಸಗಳೊಂದಿಗೆ ಮತ್ತು ಸಜಾತೀಯ ಪದಾವಳಿಗಳೊಂದಿಗೆ, "ಆಮದು" ಎಂದರೆ, ಭಾರತದ ಹೊರಗಿನಿಂದ ಭಾರತದ ಒಳಗೆ ತರುವುದು;

(ಎಫ್) "ಲೇಬಲ್" ಎಂದರೆ, ಮುಂಚಿತವಾಗಿ ಪ್ಯಾಕು ಮಾಡಿದ ಯಾವುದೇ ಸರಕು ಸಾಮಗ್ರಿಗಳ ಮೇಲೆ ಅಂಟಿಸಿರುವ ಅಥವಾ ಅವುಗಳ ಮೇಲೆ ಕಂಡುಬರುವ ಲಿಖಿತದಲ್ಲಿರುವ, ಗುರುತು ಮಾಡಿದ, ಸ್ಟಾಂಪು ಹಾಕಿದ ಮುದ್ರಿತವಾದ ಅಥವಾ ಗ್ರಾಫಿಕ್ ರೂಪದಲ್ಲಿರುವ ಯಾವುದೇ ವಿಷಯ;

(ಜಿ) "ಕಾನೂನು ಮಾಪನ ವಿಜ್ಞಾನ" ಎಂದರೆ, ಯಾವ ಕಡ್ಡಾಯ ತಾಂತ್ರಿಕ ಮತ್ತು ಕಾನೂನು ಅಗತ್ಯತೆಗಳಿಗೆ ತೂಕದ ಬಟ್ಟುಗಳ ಮತ್ತು ಅಳತೆ ಮಾಪಕಗಳ ಭದ್ರತೆಯ ಮತ್ತು ನಿಖರತೆಯ ದೃಷ್ಟಿಯಿಂದ ಸಾರ್ವಜನಿಕ ಖಾತರಿಯನ್ನು ಖಚಿತಪಡಿಸಿಕೊಳ್ಳುವ ಉದ್ದೇಶ ಇದೆಯೋ ಆ ಕಡ್ಡಾಯ ತಾಂತ್ರಿಕ ಮತ್ತು ಕಾನೂನು ಅಗತ್ಯತೆಗಳ ಸಂಬಂಧದಲ್ಲಿ ಮಾಪನ ವಿಜ್ಞಾನದ ಯಾವ ಭಾಗದಲ್ಲಿ ತೂಕದ ಬಟ್ಟಿನ ಅಥವಾ ಅಳತೆಯ ಮಾಪಕದ ಯೂನಿಟ್‌ಗಳನ್ನು ತೂಕ ಮಾಡುವ ಅಥವಾ ಅಳತೆ ಮಾಡುವ ವಿಧಾನಗಳ ಮತ್ತು ತೂಕ ಮಾಡುವ ಮತ್ತು ಅಳತೆ ಮಾಡುವ ಸಾಧನ ಸಲಕರಣೆಗಳ ಬಗ್ಗೆ ನಿರೂಪಿಸಲಾಗಿದೆಯೋ ಆ ಮಾಪನ ವಿಜ್ಞಾನದ ಭಾಗ;

(ಹೆಚ್) "ಕಾನೂನು ಮಾಪನ ವಿಜ್ಞಾನ ಅಧಿಕಾರಿ" ಎಂದರೆ, 13ನೇ ಮತ್ತು 14ನೇ ಪ್ರಕರಣದ ಮೇರೆಗೆ ನೇಮಕಗೊಂಡ ಹೆಚ್ಚುವರಿ ನಿರ್ದೇಶಕ, ಹೆಚ್ಚುವರಿ ನಿಯಂತ್ರಕ, ಜಂಟಿ ನಿರ್ದೇಶಕ, ಜಂಟಿ ನಿಯಂತ್ರಕ, ಉಪ ನಿರ್ದೇಶಕ, ಉಪ ನಿಯಂತ್ರಕ, ಸಹಾಯಕ ನಿರ್ದೇಶಕ, ಸಹಾಯಕ ನಿಯಂತ್ರಕ ಮತ್ತು ಇನ್ಸ್‌ಪೆಕ್ಟರ್;

(ಐ) ಯಾವುದೇ ತೂಕದ ಬಟ್ಟಿನ ಅಥವಾ ಅಳತೆಯ ಮಾಪಕದ ಸಂಬಂಧದಲ್ಲಿ 'ತಯಾರಕ' ಎಂದರೆ, ಯಾವ ವ್ಯಕ್ತಿಯು–

(i) ತೂಕದ ಬಟ್ಟುಗಳನ್ನು ಮಾಡುವ ಅಥವಾ ಅಳತೆಯ ಮಾಪಕಗಳನ್ನು ತಯಾರಿಸುತ್ತಾನೋ;

(ii) ಅಂಥ ತೂಕದ ಬಟ್ಟಿನ ಅಥವಾ ಅಳತೆಯ ಮಾಪಕದ ಒಂದು ಅಥವಾ ಹೆಚ್ಚು ಭಾಗಗಳನ್ನು ತಯಾರಿಸುತ್ತಾನೋ ಮತ್ತು ಅಂಥ ತೂಕದ ಬಟ್ಟುಗಳ ಅಥವಾ ಅಳತೆಯ ಮಾಪಕಗಳ ಇತರ ಭಾಗಗಳನ್ನು ಪಡೆದುಕೊಳ್ಳುತ್ತಾನೋ ಮತ್ತು ಆ ಭಾಗಗಳನ್ನು ಜೋಡಿಸಿ ಅಂತಿಮವಾಗಿ ತಯಾರಿಸಿದ ತೂಕದ ಬಟ್ಟಿನ ಅಥವಾ ಅಳತೆಯ ಮಾಪಕವನ್ನು ತಾನೇ ತಯಾರಿಸಿದ್ದೆಂದು ಅಥವಾ ಸಂದರ್ಭಾನುಸಾರ ಅದು ತಯಾರಿಸಿದ್ದೆಂದು ಕ್ಲೇಮು ಮಾಡುತ್ತಾನೋ;

(iii) ಅಂಥ ತೂಕದ ಬಟ್ಟಿನ ಅಥವಾ ಅಳತೆಯ ಮಾಪಕದ ಯಾವ ಭಾಗವನ್ನು ತಯಾರಿಸುವುದಿಲ್ಲವೋ ಆದರೆ ಇತರರು ತಯಾರಿಸಿದ ಆ ಭಾಗಗಳನ್ನು ಜೋಡಿಸುತ್ತಾನೋ ಮತ್ತು ಅಂತಿಮವಾಗಿ ಸಿದ್ಧಪಡಿಸಿದ ತೂಕದ ಬಟ್ಟನ್ನು ಅಥವಾ ಅಳತೆಯ ಮಾಪಕವನ್ನು ತಾನೇ ತಯಾರಿಸಿದ್ದೆಂದು ಅಥವಾ ಸಂದರ್ಭಾನುಸಾರ ಅದು ತಯಾರಿಸಿದ್ದೆಂದು ಕ್ಲೇಮು ಮಾಡುತ್ತಾನೋ;

(iv) ಯಾರೇ ಇತರ ವ್ಯಕ್ತಿಯು ಮಾಡಿದ ಅಥವಾ ತಯಾರಿಸಿ ಪೂರ್ಣಗೊಳಿಸಿದ ಯಾವುದೇ ತೂಕದ ಬಟ್ಟಿನ ಅಥವಾ ಅಳತೆಯ ಮಾಪಕದ ಮೇಲೆ ತನ್ನದೇ ಗುರುತನ್ನು ಹಾಕುತ್ತಾನೋ ಅಥವಾ ಹಾಕಿಸುತ್ತಾನೋ ಮತ್ತು ಅಂಥ ತೂಕದ ಬಟ್ಟು ಅಥವಾ ಅಳತೆಯ ಮಾಪಕವು ತಾನೇ ಅಥವಾ ಸಂದರ್ಭಾನುಸಾರ ಅದು ಮಾಡಿದ ಅಥವಾ ತಯಾರಿಸಿದ ಉತ್ಪನ್ನವೆಂದು ಕ್ಲೇಮು ಮಾಡುತ್ತಾನೋ

– ಆ ವ್ಯಕ್ತಿ;

(ಜೆ) "ಅಧಿಸೂಚನೆ" ಎಂದರೆ, ರಾಜಪತ್ರದಲ್ಲಿ ಪ್ರಕಟಿಸಿದ ಅಧಿಸೂಚನೆ;

(ಕೆ) "ಸಂರಕ್ಷಣೆ" ಎಂದರೆ, ಮಾನವನ ಅಥವಾ ಪ್ರಾಣಿಯ ಒಳಿತನ್ನು ಕಾಪಾಡುವುದಕ್ಕಾಗಿ ಅಥವಾ ಯಾವುದೇ ಸರಕು ಸಾಮಗ್ರಿಯನ್ನು, ಸಸ್ಯವರ್ಗವನ್ನು ಅಥವಾ ವಸ್ತುವನ್ನು ಪ್ರತ್ಯೇಕವಾಗಿಯಾಗಲಿ ಅಥವಾ ಸಾಮೂಹಿಕವಾಗಿಯಾಗಲಿ ಸಂರಕ್ಷಿಸುವುದಕ್ಕಾಗಿ ಯಾವ ಕ್ರಮವನ್ನು ಕೈಗೊಳ್ಳುವುದು ಅಗತ್ಯವಿದೆಯೋ ಆ ಕ್ರಮವನ್ನು ನಿರ್ಧರಿಸುವ ಉದ್ದೇಶಕ್ಕಾಗಿ, ಯಾವುದೇ ತೂಕದ ಬಟ್ಟಿನಿಂದ ಅಥವಾ ಅಳತೆಯ ಮಾಪಕದಿಂದ ಕಂಡುಬರುವ ಪ್ರಮಾಣ ಸಂಖ್ಯೆಯ ಬಳಕೆ;

(ಎಲ್) "ಮುಂಚಿತವಾಗಿ ಪ್ಯಾಕ್ ಮಾಡಿದ ಸರಕು ಸಾಮಗ್ರಿ" ಎಂದರೆ, ಯಾವ ಸರಕು ಸಾಮಗ್ರಿಯನ್ನು ಖರೀದಿದಾರನು ಉಪಸ್ಥಿತನಿಲ್ಲದಿರುವಾಗ ಯಾವುದೇ ಸ್ವರೂಪದ ಪ್ಯಾಕೇಜಿನಲ್ಲಿ ಅದನ್ನು ಮೊಹರು ಮಾಡಿರಲಿ ಅಥವಾ ಮೊಹರು ಮಾಡಿಲ್ಲದಿರಲಿ, ಪ್ಯಾಕ್ ಮಾಡಿರುವ ಆ ಸರಕು ಸಾಮಗ್ರಿ, ಹಾಗೆ ಮಾಡಿದ್ದರಿಂದ ಅದರಲ್ಲಿ ಒಳಗೊಂಡಿರುವ ಉತ್ಪನ್ನವು ಪೂರ್ವನಿರ್ಧಾರಿತ ಪ್ರಮಾಣದ್ದಾಗಿರುತ್ತದೆ;

(ಎಂ) "ವ್ಯಕ್ತಿ" ಎಂಬುದರಲ್ಲಿ,–

(i) ಹಿಂದೂ ಅವಿಭಕ್ತ ಕುಟುಂಬ;

(ii) ಪ್ರತಿಯೊಂದು ಇಲಾಖೆ ಅಥವಾ ಕಚೇರಿ;

(iii) ಸರ್ಕಾರವು ಸ್ಥಾಪಿಸಿದ ಅಥವಾ ರಚಿಸಿದ ಪ್ರತಿಯೊಂದು ಸಂಸ್ಥೆ;

(iv) ಭಾರತದ ರಾಜ್ಯಕ್ಷೇತ್ರದ ಒಳಗಿರುವ ಪ್ರತಿಯೊಂದು ಸ್ಥಳೀಯ ಪ್ರಾಧಿಕಾರ;

(v) ಕಂಪನಿ, ಫರ್ಮು ಮತ್ತು ವ್ಯಕ್ತಿಗಳ ಸಂಘ;

(vi) ಅಧಿನಿಯಮದ ಮೇರೆಗೆ ರಚಿತವಾದ ಟ್ರಸ್ಟು;

(vii) ಅಧಿನಿಯಮದ ಮೇರೆಗೆ ರಚಿತವಾದ ಪ್ರತಿಯೊಂದು ಸಹಕಾರಿ ಸಂಘ;

(viii) ಸಂಘಗಳ ನೋಂದಣಿ ಅಧಿನಿಯಮ, 1860 (1860 ರ 21) ರ ಮೇರೆಗೆ ನೋಂದಾಯಿತವಾದ ಪ್ರತಿಯೊಂದು ಇತರ ಸಂಘ

– ಇವುಗಳು ಒಳಗೊಳ್ಳುತ್ತವೆ.

(ಎನ್) "ಆವರಣ" ಎಂಬುದರಲ್ಲಿ–

(i) ಯಾವ ಸ್ಥಳದಲ್ಲಿ ಒಬ್ಬ ವ್ಯಕ್ತಿಯು, ಸ್ವತಃ ತಾನೇ ಅಥವಾ ಅಂಥ ಆವರಣದಲ್ಲಿ ವ್ಯವಹಾರವನ್ನು ನಡೆಸುವ ಯಾರೇ ವ್ಯಕ್ತಿಯೂ ಒಳಗೊಂಡಂತೆ ಯಾವುದೇ ಹೆಸರಿನಿಂದ ಕರೆಯಲಾಗುವ ಏಜೆಂಟ್‌ನ ಮೂಲಕವಾಗಲಿ ಯಾವುದೇ ವ್ಯವಹಾರವನ್ನು, ಕೈಗಾರಿಕೆಯನ್ನು, ಉತ್ಪಾದನೆಯನ್ನು ಅಥವಾ ವ್ಯಾಪಾರ ವ್ಯವಹಾರವನ್ನು ನಡೆಸುತ್ತಾನೋ ಆ ಸ್ಥಳ;

(ii) ಉಗ್ರಾಣ, ಗೋದಾಮು ಅಥವಾ ಯಾವ ಸ್ಥಳದಲ್ಲಿ ಯಾವುದೇ ತೂಕದ ಬಟ್ಟನ್ನು ಅಥವಾ ಅಳತೆಯ ಮಾಪಕವನ್ನು ಅಥವಾ ಇತರ ಸರಕುಗಳನ್ನು ದಾಸ್ತಾನು ಮಾಡಲಾಗಿದೆಯೋ ಅಥವಾ ಪ್ರದರ್ಶಿಸಲಾಗಿದೆಯೋ ಆ ಇತರ ಸ್ಥಳ;

(iii) ಯಾವ ಸ್ಥಳದಲ್ಲಿ ಯಾವುದೇ ವ್ಯಾಪಾರಕ್ಕೆ ಅಥವಾ ವಹಿವಾಟಿಗೆ ಸಂಬಂಧಿಸಿದ ಯಾವುವೇ ಲೆಕ್ಕದ ಪುಸ್ತಕಗಳನ್ನು ಅಥವಾ ಇತರ ದಸ್ತಾವೇಜುಗಳನ್ನು ಇಡಲಾಗಿದೆಯೋ ಆ ಸ್ಥಳ;

(iv) ವಾಸದ ಮನೆಯ ಯಾವುದೇ ಭಾಗವನ್ನು, ಯಾವುದೇ ವ್ಯವಹಾರವನ್ನು, ಕೈಗಾರಿಕೆಯನ್ನು, ಉತ್ಪಾದನೆಯನ್ನು, ಅಥವಾ ವ್ಯಾಪಾರವನ್ನು ನಡೆಸುವ ಉದ್ದೇಶಕ್ಕಾಗಿ ಬಳಸುತ್ತಿದ್ದರೆ ಆ ವಾಸದ ಮನೆ;

(v) ಯಾವ ವಾಹನ, ನೌಕೆ ಅಥವಾ ಸಂಚಾರ ಸಾಧನದ ನೆರವಿನಿಂದ ಯಾವುದೇ ವಹಿವಾಟನ್ನು ಅಥವಾ ವ್ಯವಹಾರವನ್ನು ನಡೆಸಲಾಗುತ್ತಿದೆಯೋ ಆ ವಾಹನ ಅಥವಾ ನೌಕೆ ಅಥವಾ ಇತರ ಸಂಚಾರ ಸಾಧನ

– ಒಳಗೊಳ್ಳುತ್ತದೆ;

(ಒ) "ನಿಯಮಿಸಿದ" ಎಂದರೆ, ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು;

(ಪಿ) "ದುರಸ್ತಿದಾರ" ಎಂದರೆ, ಯಾವ ವ್ಯಕ್ತಿಯು ತೂಕದ ಬಟ್ಟನ್ನು ಅಥವಾ ಅಳತೆಯ ಮಾಪಕವನ್ನು ದುರಸ್ತಿ ಮಾಡುತ್ತಾನೋ ಆ ವ್ಯಕ್ತಿ ಮತ್ತು ಯಾವ ವ್ಯಕ್ತಿಯು, ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ನಿಗದಿಪಡಿಸಿರುವ ಪ್ರಮಾಣಗಳಿಗೆ ಅಂತಹ ತೂಕದ ಬಟ್ಟು ಅಥವಾ ಅಳತೆಯ ಮಾಪಕವು ಅನುರೂಪವಾಗಿರುವುದನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ಯಾವುದೇ ತೂಕದ ಬಟ್ಟನ್ನು ಅಥವಾ ಅಳತೆಯ ಮಾಪಕವನ್ನು ಸರಿಹೊಂದಿಸುತ್ತಾನೋ, ಸ್ವಚ್ಛಗೊಳಿಸುತ್ತಾನೋ, ಅದಕ್ಕೆ ಕೀಲೆಣ್ಣೆ ಹಾಕುತ್ತಾನೋ ಅಥವಾ ಪೇಂಟ್ ಮಾಡುತ್ತಾನೋ ಅಥವಾ ಅಂತಹ ತೂಕದ ಬಟ್ಟನ್ನು ಅಥವಾ ಅಳತೆಯ ಮಾಪಕವನ್ನು ಸುಸ್ಥಿತಿಯಲ್ಲಿಡಲು ಯಾವುದೇ ಇತರ ಸೇವೆಯನ್ನು ಒದಗಿಸುತ್ತಾನೋ ಆ ವ್ಯಕ್ತಿಯು ಒಳಗೊಳ್ಳುತ್ತಾನೆ;

(ಕ್ಯೂ) ಕೇಂದ್ರಾಡಳಿತ ಪ್ರದೇಶಕ್ಕೆ ಸಂಬಂಧಪಟ್ಟಂತೆ "ರಾಜ್ಯ ಸರ್ಕಾರ" ಎಂದರೆ, ಅದರ ಆಡಳಿತಗಾರ;

(ಆರ್) ವ್ಯಾಕರಣ ವ್ಯತ್ಯಾಸಗಳೊಂದಿಗೆ ಮತ್ತು ಸಜಾತೀಯ ಪದಾವಳಿಗಳೊಂದಿಗೆ, "ಮಾರಾಟ" ಎಂದರೆ, ಒಬ್ಬ ವ್ಯಕ್ತಿಯು ಇನ್ನೊಬ್ಬ ವ್ಯಕ್ತಿಗೆ, ಯಾವುದೇ ತೂಕದ, ಅಳತೆಯ ಸ್ವತ್ತನ್ನು ಅಥವಾ ಇತರ ಸರಕುಗಳನ್ನು ನಗದಿಗಾಗಿ ಅಥವಾ ಮುಂದೂಡಿದ ಸಂದಾಯಕ್ಕಾಗಿ ಅಥವಾ ಯಾವುದೇ ಇತರ ಮೌಲ್ಯದ ಪ್ರತಿಫಲಕ್ಕಾಗಿ ವರ್ಗಾಯಿಸುವುದು ಮತ್ತು ಇದರಲ್ಲಿ ಕಂತು ಖರೀದಿ ಪದ್ಧತಿ ಅನ್ವಯ ಅಥವಾ ಕಂತುಗಳ ರೂಪದಲ್ಲಿ ಹಣ ಸಂದಾಯ ಮಾಡುವ ಇತರ ಯಾವುದೇ ಪದ್ಧತಿ ಅನ್ವಯ ಯಾವುದೇ ತೂಕದ ಬಟ್ಟನ್ನು, ಅಳತೆಯ ಮಾಪಕವನ್ನು ಅಥವಾ ಇತರ ಸರಕುಗಳನ್ನು ವರ್ಗಾವಣೆ ಮಾಡುವುದು ಒಳಗೊಳ್ಳುತ್ತದೆ. ಆದರೆ ಅಂಥ ತೂಕದ ಬಟ್ಟನ್ನು, ಅಳತೆಯ ಮಾಪಕವನ್ನು ಅಥವಾ ಇತರ ಸರಕುಗಳನ್ನು ಅಡಮಾನ ಮಾಡುವುದು ಅಥವಾ ಆಧಾರ ಮಾಡುವುದು ಅಥವಾ ಅವುಗಳನ್ನು ಮೇಲಿನ ಋಣಭಾರಕ್ಕೆ ಅಳವಡಿಸುವುದು ಅಥವಾ ಒತ್ತೆಯಿಡುವುದು ಒಳಗೊಳ್ಳುವುದಿಲ್ಲ;

(ಎಸ್) "ಮೊಹರು" ಎಂದರೆ, ಯಾವ ಸಾಧನದಿಂದ ಅಥವಾ ಪ್ರಕ್ರಿಯೆಯಿಂದ ಸ್ಟಾಂಪನ್ನು ಹಾಕಲಾಗುತ್ತದೆಯೋ ಆ ಸಾಧನ ಅಥವಾ ಪ್ರಕ್ರಿಯೆ ಮತ್ತು ಯಾವುದೇ ಸ್ಟಾಂಪು ಪೂರ್ಣವಾಗಿ ಮಾಡುವಂತೆ ಮಾಡಲು ಬಳಸಲಾಗುವ ತಂತಿಯನ್ನು ಅಥವಾ ಉಪಸಾಧನವನ್ನು ಅದು ಒಳಗೊಳ್ಳುತ್ತದೆ;

(ಟಿ) "ಸ್ಟಾಂಪ್" ಎಂದರೆ–

(i) ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ನಿರ್ದಿಷ್ಟಪಡಿಸಿದ ಪ್ರಮಾಣಕ್ಕೆ ಅಂಥ ತೂಕದ ಬಟ್ಟು ಅಥವಾ ಅಳತೆಯ ಮಾಪಕವು ಅನುರೂಪವಾಗಿದೆ ಎಂದು ಪ್ರಮಾಣೀಕರಿಸುವ; ಅಥವಾ

(ii) ಯಾವುದೇ ಅಂಥ ತೂಕದ ಬಟ್ಟು ಅಥವಾ ಅಳತೆಯ ಮಾಪಕವು ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ನಿರ್ದಿಷ್ಟಪಡಿಸಿದ ಪ್ರಮಾಣಗಳಿಗೆ ಅನುರೂಪವಾಗಿದೆ ಎಂದು ಪ್ರಮಾಣೀಕರಿಸಿ, ಅದರ ಮೇಲೆ ಈ ಹಿಂದೆ ಮಾಡಿದ ಯಾವುದೇ ಗುರುತನ್ನು ಅಳಿಸಿಹಾಕಲಾಗಿದೆ ಎಂದು ಸೂಚಿಸುವ

– ದೃಷ್ಟಿಯಿಂದ, ಯಾವುದೇ ತೂಕದ ಬಟ್ಟಿಗೆ ಅಥವಾ ಅಳತೆಯ ಮಾಪಕಕ್ಕೆ ಸಂಬಂಧಿಸಿದಂತೆ, ಅಚ್ಚೊತ್ತುವ, ಎರಕಹೊಯ್ಯುವ, ಕೆತ್ತುವ, ಕೊರೆಯುವ, ಕಾಯಿಸಿ ಒತ್ತುವ, ಪ್ರಿಸ್ಟ್ರೆಸ್ಡ್ ಕಾಗದದಿಂದ ಮೊಹರನ್ನು ಹಾಕುವ ಮೂಲಕ ಅಥವಾ ಯಾವುದೇ ಇತರ ಪ್ರಕ್ರಿಯೆಯ ಮೂಲಕ ಮಾಡಿದ ಗುರುತು;

(ಯು) "ವಹಿವಾಟು" ಎಂದರೆ:–

(i) ಮಾರಾಟಕ್ಕಾಗಿ ಆಗಲಿ, ಖರೀದಿಗಾಗಿ ಆಗಲಿ, ವಿನಿಯಮಕ್ಕಾಗಿ ಆಗಲಿ ಅಥವಾ ಯಾವುದೇ ಇತರ ಉದ್ದೇಶಕ್ಕಾಗಿ ಆಗಲಿ ಮಾಡಿಕೊಂಡ ಯಾವುದೇ ಕರಾರು; ಅಥವಾ

(ii) ಯಾವುದೇ ಸ್ವಾಮ್ಯ ಶುಲ್ಕದ, ದಾರಿ ಸುಂಕದ, ಜಕಾತಿಯ ಅಥವಾ ಇತರ ಬಾಕಿಗಳ ಯಾವುದೇ ನಿರ್ಧರಣೆ; ಅಥವಾ

(iii) ಮಾಡಿದ ಯಾವುದೇ ಕೆಲಸದ, ಕೊಡಬೇಕಾದ ಮಜೂರಿಯ ಅಥವಾ ಸಲ್ಲಿಸಿದ ಸೇವೆಗಳ ನಿರ್ಧರಣೆ;

(ವಿ) ವ್ಯಾಕರಣ ವ್ಯತ್ಯಾಸಗಳೊಂದಿಗೆ ಮತ್ತು ಸಜಾತೀಯ ಪದಾವಳಿಗಳೊಂದಿಗೆ "ಸತ್ಯಾಪನೆ"ಯು ಯಾವುದೇ ತೂಕದ ಬಟ್ಟಿಗೆ ಅಥವಾ ಅಳತೆ ಮಾಪನಕ್ಕೆ ಸಂಬಂಧಿಸಿದಂತೆ ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ನಿಗದಿಪಡಿಸಿದ ಪ್ರಮಾಣಗಳಿಗೆ ಅಂಥ ತೂಕದ ಬಟ್ಟಿನ ಅಥವಾ ಅಳತೆಯ ಮಾಪಕವು ಅನುರೂಪವಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳುವ ದೃಷ್ಟಿಯಿಂದ ಅಂಥ ತೂಕದ ಬಟ್ಟನ್ನು ಅಥವಾ ಅಳತೆಯ ಮಾಪಕವನ್ನು ಹೋಲಿಸಿನೋಡುವ, ಪರಿಶೀಲಿಸುವ, ಪರೀಕ್ಷಿಸುವ ಅಥವಾ ಸರಿಹೊಂದಿಸುವ ಪ್ರಕ್ರಿಯೆಯನ್ನು ಮತ್ತು ಪುನರ್ ಸತ್ಯಾಪನೆಯನ್ನು ಮತ್ತು ಮಾಪನಾಂಕ ಮಾಡುವುದನ್ನು ಸಹ ಅದು ಒಳಗೊಳ್ಳುತ್ತದೆ;

(ಡಬ್ಲ್ಯೂ) **"ತೂಕದ ಬಟ್ಟು ಅಥವಾ ಅಳತೆ ಮಾಪಕ"** ಎಂದರೆ, ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ನಿರ್ದಿಷ್ಟಪಡಿಸಿದ ತೂಕದ ಬಟ್ಟು ಅಥವಾ ಅಳತೆಯ ಮಾಪಕ ಮತ್ತು ಇದು ತೂಕ ಮಾಡುವ ಅಥವಾ ಅಳತೆಮಾಡುವ ಸಾಧನ ಸಲಕರಣೆಯನ್ನು ಒಳಗೊಳ್ಳುತ್ತದೆ.

**3. ಈ ಅಧಿನಿಯಮದ ಉಪಬಂಧಗಳು ಇತರ ಯಾವುದೇ ಕಾನೂನಿನ ಉಪಬಂಧಗಳಿಗಿಂತ ಹೆಚ್ಚಿನ ಪರಿಣಾಮವನ್ನು ಹೊಂದಿರುವುದು.–** ಈ ಅಧಿನಿಯಮದ ಉಪಬಂಧಗಳು, ಈ ಅಧಿನಿಯಮ ಅಲ್ಲದ ಯಾವುದೇ ಅಧಿನಿಯಮಿತಿಯಲ್ಲಿ ಅಥವಾ ಈ ಅಧಿನಿಯಮದ ಹೊರತಾಗಿ ಯಾವುದೇ ಅಧಿನಿಯಮಿತಿಯ ಬಲದಿಂದ ಪರಿಣಾಮ ಹೊಂದಿರುವ ಯಾವುದೇ ಲಿಖಿತದಲ್ಲಿ ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾದುದು ಏನೇ ಒಳಗೊಂಡಿದ್ದರೂ, ಪರಿಣಾಮಕಾರಿಯಾಗತಕ್ಕದ್ದು.

## ಅಧ್ಯಾಯ II

## ಪ್ರಮಾಣ ತೂಕದ ಬಟ್ಟುಗಳು ಮತ್ತು ಅಳತೆಯ ಮಾಪಕಗಳು

**4. ತೂಕದ ಬಟ್ಟುಗಳ ಮತ್ತು ಅಳತೆ ಮಾಪಕಗಳ ಯೂನಿಟ್‌ಗಳು ಮೆಟ್ರಿಕ್ ಪದ್ಧತಿಯನ್ನು ಆಧರಿಸಿರಬೇಕು.–** ತೂಕದ ಬಟ್ಟಿನ ಅಥವಾ ಅಳತೆಯ ಮಾಪಕದ ಪ್ರತಿಯೊಂದು ಯೂನಿಟ್, ಅಂತರರಾಷ್ಟ್ರೀಯ ಯೂನಿಟ್‌ಗಳ ಪದ್ಧತಿಯ ಮೇಲೆ ಆಧಾರಿತವಾಗಿರುವ ಮೆಟ್ರಿಕ್ ಪದ್ಧತಿಗೆ ಅನುಗುಣವಾಗಿರತಕ್ಕದ್ದು.

**5. ತೂಕದ ಬಟ್ಟುಗಳ ಮತ್ತು ಅಳತೆ ಮಾಪಕಗಳ ಬೇಸ್ ಯೂನಿಟ್.–** (1) ಈ ಮುಂದಿನವುಗಳ ಬೇಸ್ ಯೂನಿಟ್ ಎಂದರೆ–

(i) ಉದ್ದದ ಬೇಸ್ ಯೂನಿಟ್ ಅನ್ನು ಮೀಟರ್‌ನಲ್ಲಿ ಹೇಳತಕ್ಕದ್ದು;

(ii) ದ್ರವ್ಯಮಾನದ ಬೇಸ್ ಯೂನಿಟ್ ಅನ್ನು ಕಿಲೋಗ್ರಾಂನಲ್ಲಿ ಹೇಳತಕ್ಕದ್ದು;

(iii) ಸಮಯದ ಬೇಸ್ ಯೂನಿಟ್ ಅನ್ನು ಸೆಕೆಂಡಿನಲ್ಲಿ ಹೇಳತಕ್ಕದ್ದು;

(iv) ವಿದ್ಯುತ್ ಪ್ರವಹನದ ಬೇಸ್ ಯೂನಿಟ್ ಅನ್ನು ಅಂಪಿಯರ್‌ನಲ್ಲಿ ಹೇಳತಕ್ಕದ್ದು;

(v) ಉಷ್ಣೋತ್ಪಾದಕ ತಾಪಮಾನದ ಬೇಸ್ ಯೂನಿಟ್ ಅನ್ನು ಕೆಲ್ವಿನ್‌ನಲ್ಲಿ ಹೇಳತಕ್ಕದ್ದು;

(vi) ದ್ಯುತಿ ತೀಕ್ಷ್ಣತೆಯ ಬೇಸ್ ಯೂನಿಟ್ ಅನ್ನು ಕ್ಯಾಂಡೀಲನಲ್ಲಿ ಹೇಳತಕ್ಕದ್ದು; ಮತ್ತು

(vii) ಘನಮೂಲದ ಮೊತ್ತದ ಬೇಸ್ ಯೂನಿಟ್ ಅನ್ನು ಮೋಲ್‌ನಲ್ಲಿ ಹೇಳತಕ್ಕದ್ದು.

(2) ಉಪಪ್ರಕರಣ (1)ರಲ್ಲಿ ನಮೂದಿಸಿರುವ ಬೇಸ್ ಯೂನಿಟ್‌ಗಳ ವಿಶಿಷ್ಟ ವಿವರಗಳು, ನಿಷ್ಪನ್ನ ಬೇಸ್ ಯೂನಿಟ್‌ಗಳು ಮತ್ತು ಇತರ ಬೇಸ್ ಯೂನಿಟ್‌ಗಳು ನಿಯಮಿಸಬಹುದಾದಂತೆ ಇರತಕ್ಕದ್ದು.

**6. ಸಂಖ್ಯಾಲೇಖನದ ಬೇಸ್ ಯೂನಿಟ್.–** (1) ಸಂಖ್ಯಾಲೇಖನದ ಏಕಮಾನವು ಭಾರತೀಯ ಅಂಕಿಗಳ ಅಂತರರಾಷ್ಟ್ರೀಯ ರೂಪದ ಬೇಸ್ ಯೂನಿಟ್‌ನಲ್ಲಿ ಹೇಳತಕ್ಕದ್ದು.

(2) ಪ್ರತಿಯೊಂದು ಅಂಕಿಯ ಎಣಿಕೆಯನ್ನು ದಶಮಾಂಶ ಪದ್ಧತಿಗೆ ಅನುಸಾರವಾಗಿ ಮಾಡತಕ್ಕದ್ದು.

(3) ಅಂಕಿಗಳ ದಶಮಾಂಶ ಗುಣಿತಗಳು ಮತ್ತು ಉಪಗುಣಿತಗಳು ನಿರ್ದಿಷ್ಟಪಡಿಸಬಹುದಾದಂಥ ರೀತಿಯಲ್ಲಿ ಇರುವ ಅಂಥ ವರ್ಗನಾಮದಲ್ಲಿ ಹೇಳತಕ್ಕದ್ದು ಮತ್ತು ಅದನ್ನು ನಿಯಮಿಸಬಹುದಾದಂತಹ ರೀತಿಯಲ್ಲಿ ಬರೆಯತಕ್ಕದ್ದು.

**7. ತೂಕದ ಬಟ್ಟುಗಳ ಮತ್ತು ಅಳತೆ ಮಾಪಕಗಳ ಪ್ರಮಾಣ ಬೇಸ್ ಯೂನಿಟ್.–** (1) 5ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿರುವ ತೂಕದ ಬಟ್ಟುಗಳ ಮತ್ತು ಅಳತೆ ಮಾಪಕಗಳ ಮಾನಕಗಳು, ತೂಕದ ಬಟ್ಟುಗಳ ಮತ್ತು ಅಳತೆ ಮಾಪಕಗಳ ಪ್ರಮಾಣ ಬೇಸ್ ಯೂನಿಟ್‌ಗಳು ಆಗಿರತಕ್ಕದ್ದು.

(2) ಪ್ರಕರಣ 6ರಲ್ಲಿ ನಿರ್ದಿಷ್ಟಪಡಿಸಿರುವ ಸಂಖ್ಯಾಲೇಖನದ ಬೇಸ್ ಯೂನಿಟ್‌ಗಳೇ ಸಂಖ್ಯಾಲೇಖನದ ಪ್ರಮಾಣ ಬೇಸ್ ಯೂನಿಟ್ ಆಗಿರತಕ್ಕದ್ದು.

(3) ಪ್ರಕರಣ 5ರಲ್ಲಿ ಹೇಳಿರುವ ಬೇಸ್ ಯೂನಿಟ್‌ಗಳ ಮೌಲ್ಯವನ್ನು ಕಂಡುಕೊಳ್ಳುವ ಉದ್ದೇಶಕ್ಕಾಗಿ, ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ರೀತಿಯಲ್ಲಿ ವಸ್ತುಗಳನ್ನು ಅಥವಾ ಸಲಕರಣೆಗಳನ್ನು ಸಿದ್ಧಪಡಿಸತಕ್ಕದ್ದು ಅಥವಾ ಸಿದ್ಧಪಡಿಸುವಂತೆ ಮಾಡತಕ್ಕದ್ದು.

(4) ಆಕೃತಿ ಲಕ್ಷಣಗಳು, ವಿನ್ಯಾಸ, ತಯಾರಿಕಾ ವಿವರಗಳು, ಸಾಮಗ್ರಿಗಳು, ಸಲಕರಣೆಗಳು, ಕಾರ್ಯಸಾಮರ್ಥ್ಯ ಸಹನೀಯ ವ್ಯತ್ಯಾಸಗಳು, ಮರುಸತ್ಯಾಪನೆಯ ಅವಧಿ, ಪರೀಕ್ಷೆಗಳ ವಿಧಾನಗಳು ಅಥವಾ ಕಾರ್ಯವಿಧಾನಗಳು ನಿಯಮಿಸಬಹುದಾದಂತೆ ಇರತಕ್ಕದ್ದು.

**8. ಪ್ರಮಾಣ ತೂಕದ ಬಟ್ಟು ಅಳತೆಯ ಮಾಪಕ ಅಥವಾ ಅಂಕೆ.–** (1) ಯಾವ ತೂಕದ ಬಟ್ಟು ಅಥವಾ ಅಳತೆಯ ಮಾಪಕವು ಅಂಥ ತೂಕದ ಬಟ್ಟಿಗೆ ಅಥವಾ ಅಳತೆಯ ಮಾಪಕಕ್ಕೆ ಪ್ರಮಾಣ ಬೇಸ್ ಯೂನಿಟ್‌ಗೆ ಅನುರೂಪವಾಗಿರುತ್ತದೆಯೋ ಮತ್ತು ಅದಕ್ಕೆ ಅನ್ವಯವಾಗುವಂಥ 7ನೇ ಪ್ರಕರಣದ ಉಪಬಂಧಗಳಿಗೂ ಅನುರೂಪವಾಗಿರುತ್ತದೆಯೋ ಆ ಯಾವುದೇ ತೂಕದ ಬಟ್ಟು ಅಥವಾ ಅಳತೆಯ ಮಾಪಕವು, ಪ್ರಮಾಣ ತೂಕದ ಬಟ್ಟು ಅಥವಾ ಅಳತೆಯ ಮಾಪಕ ಆಗಿರತಕ್ಕದ್ದು.

(2) ಪ್ರಕರಣ 6ರ ಉಪಬಂಧಗಳಿಗೆ ಅನುರೂಪವಾಗಿರುವ ಯಾವುದೇ ಅಂಕಿಯು ಪ್ರಮಾಣ ಅಂಕಿ ಆಗಿರತಕ್ಕದ್ದು.

(3) ಪ್ರಮಾಣವಲ್ಲದ ತೂಕದ ಬಟ್ಟು, ಅಳತೆಯ ಮಾಪಕ ಅಥವಾ ಅಂಕಿ ಅಲ್ಲದ ಯಾವುದೇ ತೂಕದ ಬಟ್ಟು, ಅಳತೆಯ ಮಾಪಕ ಅಥವಾ ಅಂಕಿಯನ್ನು ಪ್ರಮಾಣವಾಗಿ ತೂಕದ ಬಟ್ಟು ಆಗಿ, ಅಳತೆಯ ಮಾಪಕವಾಗಿ ಅಥವಾ ಅಂಕಿ ಆಗಿ ಬಳಸತಕ್ಕದ್ದಲ್ಲ.

(4) ಪ್ರಕರಣ 8ರ ಮೇರೆಗೆ ನಿರ್ದಿಷ್ಟಪಡಿಸಿದ ತೂಕದ ಬಟ್ಟಿನ ಅಥವಾ ಅಳತೆಯ ಮಾಪಕದ ಪ್ರಮಾಣಗಳಿಗೆ ಯಾವುದೇ ತೂಕದ ಬಟ್ಟು ಅಥವಾ ಅಳತೆಯ ಮಾಪಕವು ಅನುರೂಪವಾಗಿದ್ದ ಹೊರತು ಅದನ್ನು ತಯಾರಿಸತಕ್ಕದ್ದಲ್ಲ ಅಥವಾ ಆಮದು ಮಾಡಿಕೊಳ್ಳತಕ್ಕದ್ದಲ್ಲ:

ಪರಂತು, ರಫ್ತಿನ ಉದ್ದೇಶಕ್ಕಾಗಿಯೇ ಅಥವಾ ಯಾವುದೇ ವೈಜ್ಞಾನಿಕ ಪರೀಕ್ಷೆಯ ಅಥವಾ ಸಂಶೋಧನೆಯ ಉದ್ದೇಶಕ್ಕಾಗಿಯೇ ತಯಾರಿಸಿದವುಗಳಿಗೆ ಈ ಪ್ರಕರಣದಲ್ಲಿನ ಉಪಬಂಧಗಳು ಅನ್ವಯವಾಗತಕ್ಕದ್ದಲ್ಲ.

**9. ಮೂಲ ಪ್ರಮಾಣ ಮೂಲದಲ್ಲದ ಪ್ರಮಾಣ ಮತ್ತು ಕಾರ್ಯಾರ್ಥ ಪ್ರಮಾಣ.–** (1) ತೂಕದ ಬಟ್ಟಿನ ಮತ್ತು ಅಳತೆಯ ಮಾಪಕದ ಮೂಲ ಪ್ರಮಾಣಗಳು, ಮೂಲದಲ್ಲದ ಪ್ರಮಾಣಗಳು ಮತ್ತು ಕಾರ್ಯಾರ್ಥ ಪ್ರಮಾಣಗಳು ನಿಯಮಿಸಬಹುದಾದಂಥವು ಆಗಿರತಕ್ಕದ್ದು.

(2) ನಿಯಮಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಫೀಜನ್ನು ಸಂದಾಯ ಮಾಡಿದ ನಂತರ ಪ್ರತಿಯೊಂದು ಮೂಲ ಪ್ರಮಾಣವನ್ನು, ಮೂಲದಲ್ಲದ ಪ್ರಮಾಣವನ್ನು ಮತ್ತು ಕಾರ್ಯಾರ್ಥ ಪ್ರಮಾಣವನ್ನು ಸತ್ಯಾಪನೆ ಮಾಡತಕ್ಕದ್ದು ಮತ್ತು ಅದಕ್ಕೆ ಮುದ್ರೆ ಹಾಕತಕ್ಕದ್ದು.

(3) ಉಪಪ್ರಕರಣ (2)ರ ಉಪಬಂಧಗಳಿಗನುಸಾರವಾಗಿ, ಸತ್ಯಾಪನೆ ಮಾಡಿಲ್ಲದ ಮತ್ತು ಮುದ್ರೆ ಹಾಕಿಲ್ಲದ ಪ್ರತಿಯೊಂದು ಮೂಲ ಪ್ರಮಾಣವನ್ನು, ಮೂಲದಲ್ಲದ ಪ್ರಮಾಣವನ್ನು, ಮತ್ತು ಕಾರ್ಯಾರ್ಥ ಪ್ರಮಾಣವನ್ನು ಸಿಂಧುವಾದ ಪ್ರಮಾಣವೆಂದು ಭಾವಿಸತಕ್ಕದ್ದಲ್ಲ.

**10. ತೂಕದ ಬಟ್ಟನ್ನು ಅಥವಾ ಅಳತೆಯ ಮಾಪಕವನ್ನು ಒಂದು ನಿರ್ದಿಷ್ಟ ಉದ್ದೇಶಗಳಿಗೆ ಬಳಸುವುದು.–** ಯಾವುದೇ ಸರಕುಗಳಿಗೆ, ಸರಕುಗಳ ವರ್ಗಕ್ಕೆ ಅಥವಾ ವಾಗ್ದಾನಗಳಿಗೆ ಸಂಬಂಧಪಟ್ಟಂತೆ ನಿಯಮಿಸಬಹುದಾದಂಥ ತೂಕದ ಬಟ್ಟಿನಲ್ಲಿ, ಅಳತೆಯ ಮಾಪಕದಲ್ಲಿ ಅಥವಾ ಅಂಕಿ ಮಾನಕದಲ್ಲಿ ವಹಿವಾಟನ್ನು, ವ್ಯಾಪಾರವನ್ನು ಮಾಡತಕ್ಕದ್ದು ಅಥವಾ ಕರಾರನ್ನು ಮಾಡಿಕೊಳ್ಳತಕ್ಕದ್ದು.

**11. ತೂಕದ ಬಟ್ಟಿನ, ಅಳತೆಯ ಮಾಪಕದ ಅಥವಾ ಸಂಖ್ಯಾಲೇಖನದ ಪ್ರಮಾಣ ಯುನಿಟ್‌ಗಳಲ್ಲಲ್ಲದೆ ಅನ್ಯಥಾ ಬೆಲೆ ನಮೂದಿಸುವುದು, ಇತ್ಯಾದಿಗಳ ನಿಷೇಧ.–** (1) ಯಾರೇ ವ್ಯಕ್ತಿಯು ಯಾವುವೇ ಸರಕುಗಳಿಗೆ, ವಸ್ತುಗಳಿಗೆ ಅಥವಾ ಸೇವೆಗಳಿಗೆ ಸಂಬಂಧಪಟ್ಟಂತೆ,–

(ಎ) ಯಾವುದೇ ಬೆಲೆಯನ್ನು ಅಥವಾ ಚಾರ್ಜ್‌ನ್ನು ಬಾಯಿಮಾತಿನಲ್ಲಿ ಅಥವಾ ಅನ್ಯಥಾ ಹೇಳತಕ್ಕದ್ದಲ್ಲ ಅಥವಾ ಘೋಷಣೆ ಮಾಡತಕ್ಕದ್ದಲ್ಲ; ಅಥವಾ

(ಬಿ) ಯಾವುದೇ ಬೆಲೆಪಟ್ಟಿಯನ್ನು, ಖರೀದಿಪಟ್ಟಿಯನ್ನು, ನಗದು ರಸೀದಿಯನ್ನು ಅಥವಾ ಇತರ ದಸ್ತಾವೇಜನ್ನು ನೀಡತಕ್ಕದ್ದಲ್ಲ ಅಥವಾ ಪ್ರದರ್ಶಿಸತಕ್ಕದ್ದಲ್ಲ; ಅಥವಾ

(ಸಿ) ಯಾವುದೇ ಜಾಹೀರಾತು, ಭಿತ್ತಿಪತ್ರ ಅಥವಾ ಇತರ ದಸ್ತಾವೇಜುಗಳನ್ನು ಸಿದ್ಧಪಡಿಸತಕ್ಕದ್ದಲ್ಲ ಅಥವಾ ಪ್ರಕಟಿಸತಕ್ಕದ್ದಲ್ಲ; ಅಥವಾ

(ಡಿ) ಮುಂಚಿತವಾಗಿ ಪ್ಯಾಕು ಮಾಡಿದ ಸರಕು ಸಾಮಗ್ರಿಗಳ ನಿವ್ವಳ ಪರಿಮಾಣವನ್ನು ಸೂಚಿಸತಕ್ಕದ್ದಲ್ಲ; ಅಥವಾ

(ಇ) ಯಾವುದೇ ವಹಿವಾಟನ್ನು ಅಥವಾ ಅದರ ಸಂರಕ್ಷಣೆಯನ್ನು ಯಾವುದೇ ತೂಕದ ಬಟ್ಟಿಗೆ, ಅಳತೆಯ ಮಾಪಕಕ್ಕೆ ಪ್ರಮಾಣ ಬೇಸ್ ಯೂನಿಟ್‌ಗೆ ಅಥವಾ ಸಂಖ್ಯಾಲೇಖನಕ್ಕೆ ಅನುಸಾರವಾಗಿ ಅಲ್ಲದೆ, ಯಾವುದೇ ವಹಿವಾಟನ್ನು ಪರಿಮಾಣದಲ್ಲಿ ಅಥವಾ ಅಳೆಯಬಹುದಾದ ಅಂಶದಲ್ಲಿ, ಸುತ್ತಳತೆಯಲ್ಲಿ ವ್ಯಕ್ತಪಡಿಸತಕ್ಕದ್ದಲ್ಲ.

(2) ಉಪಪ್ರಕರಣ (1)ರ ಉಪಬಂಧಗಳು ಯಾವುವೇ ಸರಕುಗಳ, ವಸ್ತುಗಳ ಅಥವಾ ಸೇವೆಯ ರಫ್ತಿಗೆ ಅನ್ವಯವಾಗತಕ್ಕದ್ದಲ್ಲ.

**12. ಪ್ರಮಾಣ ತೂಕದ ಬಟ್ಟಿಗೆ, ಅಳತೆಯ ಮಾಪಕಕ್ಕೆ ಅಥವಾ ಸಂಖ್ಯಾಲೇಖನಕ್ಕೆ ತದ್ವಿರುದ್ಧವಾದ ಯಾವುದೇ ರೂಢಿ, ಬಳಕೆ, ಇತ್ಯಾದಿಗಳು ಅನೂರ್ಜಿತ.–** ಯಾರೇ ವ್ಯಕ್ತಿಯು, ಕರಾರಿಗೆ ಅಥವಾ ಇತರ ಒಪ್ಪಂದಕ್ಕೆ ಸಂಬಂಧಪಟ್ಟಂತೆ, ಯಾವ ರೂಢಿಯ ಬಳಕೆಯು ಆಚರಣೆಯು ಅಥವಾ ಯಾವುದೇ ಸ್ವರೂಪದ ವಿಧಾನವು ತೂಕದ ಬಟ್ಟಿಗೆ, ಅಳತೆಯ ಮಾಪಕದ ಅಥವಾ ಸಂಖ್ಯಾಲೇಖನದ ಮೂಲಕ ನಿರ್ದಿಷ್ಟಪಡಿಸಿದ ಪ್ರಮಾಣಕ್ಕಿಂತ ಹೆಚ್ಚಿಗೆಯಾಗಿ ಅಥವಾ ಅದಕ್ಕೂ ಕಡಿಮೆಯಾಗಿ ಯಾವುದೇ ಪದಾರ್ಥವನ್ನು, ವಸ್ತುವನ್ನು ಅಥವಾ ಸೇವೆಯನ್ನು ಸದರಿ ವಸ್ತುವಿಗೆ, ಪದಾರ್ಥಕ್ಕೆ ಅಥವಾ ಸೇವೆಗೆ ಸಂಬಂಧಪಟ್ಟಂತೆ ತಗಾದೆ ಮಾಡುವುದಕ್ಕೆ, ಸ್ವೀಕರಿಸುವುದಕ್ಕೆ, ಅಥವಾ ತಗಾದೆ ಮಾಡಿಸುವುದಕ್ಕೆ ಅಥವಾ ಸ್ವೀಕರಿಸುವಂತೆ ಮಾಡುವುದಕ್ಕೆ ಅವಕಾಶ ಮಾಡಿಕೊಡುತ್ತದೋ ಆ ಯಾವುದೇ ರೂಢಿಯು, ಬಳಕೆಯು, ಆಚರಣೆಯು ಅಥವಾ ಯಾವುದೇ ಸ್ವರೂಪದ ವಿಧಾನವು ಅನೂರ್ಜಿತವಾಗತಕ್ಕದ್ದು.

## ಅಧ್ಯಾಯ III

### ನಿರ್ದೇಶಕನ, ನಿಯಂತ್ರಕನ ಮತ್ತು ಕಾನೂನು ಮಾಪನ ವಿಜ್ಞಾನ ಅಧಿಕಾರಿಗಳ ನೇಮಕ ಮತ್ತು ಅಧಿಕಾರಗಳು

**13. ನಿರ್ದೇಶಕನ, ಕಾನೂನು ಮಾಪನ ವಿಜ್ಞಾನ ಅಧಿಕಾರಿಗಳ ಮತ್ತು ಇತರ ನೌಕರರ ನೇಮಕ ಮತ್ತು ಅಧಿಕಾರಗಳು.–** (1) ಅಂತರರಾಜ್ಯ ವ್ಯಾಪಾರಕ್ಕೆ ಮತ್ತು ವಾಣಿಜ್ಯಕ್ಕೆ ಸಂಬಂಧಪಟ್ಟಂತೆ ಈ ಅಧಿನಿಯಮದಿಂದ ಅಥವಾ ಅದರ ಮೇರೆಗೆ ಪ್ರದತ್ತವಾದ ಅಥವಾ ಅವರಿಗೆ ವಹಿಸಿದ ಅಧಿಕಾರಗಳನ್ನು ಚಲಾಯಿಸಲು ಮತ್ತು ಕರ್ತವ್ಯಗಳನ್ನು ನಿರ್ವಹಿಸಲು, ಕೇಂದ್ರ ಸರ್ಕಾರವು ಅಧಿಸೂಚನೆಯ ಮೂಲಕ ಕಾನೂನು ಮಾಪನ ವಿಜ್ಞಾನ ನಿರ್ದೇಶಕನನ್ನು, ಹೆಚ್ಚುವರಿ ನಿರ್ದೇಶಕನನ್ನು, ಜಂಟಿ ನಿರ್ದೇಶಕನನ್ನು, ಉಪನಿರ್ದೇಶಕನನ್ನು, ಸಹಾಯಕ ನಿರ್ದೇಶಕನನ್ನು ಮತ್ತು ಇತರ ನೌಕರರನ್ನು ನೇಮಕ ಮಾಡಬಹುದು.

(2) ಉಪಪ್ರಕರಣ (1)ರ ಮೇರೆಗೆ ನೇಮಕಗೊಳ್ಳಬೇಕಾದ ನಿರ್ದೇಶಕನಿಗೆ ಮತ್ತು ಕಾನೂನು ಮಾಪನ ವಿಜ್ಞಾನ ಅಧಿಕಾರಿಗಳಿಗೆ ಇರಬೇಕಾದ ಅರ್ಹತೆಯು ನಿಯಮಿಸಬಹುದಾದಂತೆ ಇರತಕ್ಕದ್ದು.

(3) ಉಪಪ್ರಕರಣ (1)ರ ಮೇರೆಗೆ ನೇಮಕಗೊಂಡ ನಿರ್ದೇಶಕನು ಮತ್ತು ಪ್ರತಿಯೊಬ್ಬ ಕಾನೂನು ಮಾಪನ ವಿಜ್ಞಾನ ಅಧಿಕಾರಿಯು, ಕೇಂದ್ರ ಸರ್ಕಾರವು ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಸ್ಥಳೀಯ ಎಲ್ಲೆಗಳ ಒಳಗೆ ಅಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂಥ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

(4) ಉಪಪ್ರಕರಣ (1)ರ ಮೇರೆಗೆ ನೇಮಕಗೊಂಡ ಪ್ರತಿಯೊಬ್ಬ ಕಾನೂನು ಮಾಪನ ವಿಜ್ಞಾನ ಅಧಿಕಾರಿಯು ನಿರ್ದೇಶಕನ ಸಾಮಾನ್ಯ ಅಧೀಕ್ಷಣೆಯಲ್ಲಿ, ನಿರ್ದೇಶನದ ಮೇರೆಗೆ ಮತ್ತು ನಿಯಂತ್ರಣದಲ್ಲಿ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು.

(5) ಯಾವುದೇ ಕರ್ತವ್ಯವನ್ನು ನೆರವೇರಿಸಲು ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ಅಧಿಕೃತಗೊಂಡ ನಿರ್ದೇಶಕನನ್ನು, ನಿಯಂತ್ರಕನನ್ನು ಮತ್ತು ಪ್ರತಿಯೊಬ್ಬ ಕಾನೂನು ಮಾಪನ ವಿಜ್ಞಾನ ಅಧಿಕಾರಿಯನ್ನು ಭಾರತ ದಂಡ ಸಂಹಿತೆಯ (1860 ರ 45) 21ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಲೋಕನೌಕರನೆಂದು ಭಾವಿಸತಕ್ಕದ್ದು.

(6) ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮದ ಅಥವಾ ಮಾಡಿದ ಯಾವುದೇ ಆದೇಶದ ಮೇರೆಗೆ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯದ ಸಂಬಂಧದಲ್ಲಿ, ಯಾವುದೇ ಕರ್ತವ್ಯವನ್ನು ನೆರವೇರಿಸಲು ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಅಧಿಕೃತಗೊಂಡ ನಿರ್ದೇಶಕನ, ನಿಯಂತ್ರಕನ ಮತ್ತು ಕಾನೂನು ಮಾಪನ ವಿಜ್ಞಾನ ಅಧಿಕಾರಿಯ ವಿರುದ್ಧ ಯಾವುದೇ ದಾವೆಯನ್ನು, ಪ್ರಾಸಿಕ್ಯೂಷನ್ನನ್ನು ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡಲು ಅವಕಾಶವಿರತಕ್ಕದ್ದಲ್ಲ.

(7) ಕೇಂದ್ರ ಸರ್ಕಾರವು ರಾಜ್ಯ ಸರ್ಕಾರದ ಸಮ್ಮತಿಪಡೆದು ಮತ್ತು ಅದು ಈ ಬಗ್ಗೆ ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳಿಗೆ, ಪರಿಮಿತಿಗಳಿಗೆ ಮತ್ತು ನಿರ್ಬಂಧಗಳಿಗೆ ಒಳಪಟ್ಟು, ಸೂಕ್ತವೆಂದು ತಾನು ಭಾವಿಸಬಹುದಾದಂತೆ, ಈ ಅಧಿನಿಯಮದ ಮೇರೆಗೆ ನಿರ್ದೇಶಕನಿಗೆ ಇರುವಂಥ ಅಧಿಕಾರಗಳನ್ನು ರಾಜ್ಯ ಕಾನೂನು ಮಾಪನ ವಿಜ್ಞಾನ ನಿಯಂತ್ರಕನಿಗೆ ಪ್ರತ್ಯಾಯೋಜಿಸಬಹುದು ಮತ್ತು ಅಂಥ ನಿಯಂತ್ರಕನು, ಅವನು ತನಗೆ ಪ್ರತ್ಯಾಯೋಜಿಸಿದ ಅಧಿಕಾರಗಳನ್ನು ಸೂಕ್ತವೆಂದು ತಾನು ಭಾವಿಸಬಹುದಾದಂಥ ಯಾರೇ ಕಾನೂನು ಮಾಪನ ಅಧಿಕಾರಿಗೆ ಪ್ರತ್ಯಾಯೋಜಿಸುವುದು ಸಾರ್ವಜನಿಕ ಹಿತದೃಷ್ಟಿಯಿಂದ ಅವಶ್ಯಕವೆಂದು ಅಥವಾ ವಿಹಿತವೆಂದು ಅಭಿಪ್ರಾಯಪಟ್ಟರೆ, ಅವನು ಅಂಥ ಅಧಿಕಾರಿಗೆ ಅಂಥ ಅಧಿಕಾರಗಳನ್ನು ಹಾಗೆ ಪ್ರತ್ಯಾಯೋಜಿಸಬಹುದು ಮತ್ತು ಅಂಥ ನಿಯಂತ್ರಕನು ಅಂಥ ಯಾವುವೇ ಅಧಿಕಾರಗಳನ್ನು ಪ್ರತ್ಯಾಯೋಜಿಸಿದ್ದರೆ ಯಾರಿಗೆ ಅಂಥ ಅಧಿಕಾರಗಳನ್ನು ಪ್ರತ್ಯಾಯೋಜಿಸಲಾಗಿದೆಯೋ ಆ ವ್ಯಕ್ತಿಯು ಆ ಅಧಿಕಾರಗಳನ್ನು ಈ ಅಧಿನಿಯಮದ ಮೇರೆಗೆ ಅವನಿಗೆ ನೇರವಾಗಿ, ಆದರೆ ಪ್ರತ್ಯಾಯೋಜನೆ ಮೂಲಕ ಅಲ್ಲದೇ ಪ್ರಧಾನ ಮಾಡಿದಿದ್ದರೆ ಯಾವ ರೀತಿಯಲ್ಲಿ ಮತ್ತು ಎಷ್ಟರಮಟ್ಟಿಗೆ ಪರಿಣಾಮಕಾರಿಯಾಗಿ ಚಲಾಯಿಸಬಹುದಿತ್ತೋ ಅದೇ ರೀತಿಯಲ್ಲಿ ಮತ್ತು ಅಷ್ಟೇ ಪರಿಣಾಮಕಾರಿಯಾಗಿ ಅಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು.

(8) ಉಪಪ್ರಕರಣ (7)ರ ಮೇರೆಗೆ ಯಾವುವೇ ಅಧಿಕಾರಗಳನ್ನು ಪ್ರತ್ಯಾಯೋಜಿಸಿದ್ದರೆ, ಹಾಗೆ ಪ್ರತ್ಯಾಯೋಜಿಸಿರುವ ಅಧಿಕಾರಗಳನ್ನು ನಿರ್ದೇಶಕನ ಸಾಮಾನ್ಯ ಅಧೀಕ್ಷಣೆಯಲ್ಲಿ, ನಿರ್ದೇಶನದ ಮೇರೆಗೆ ಮತ್ತು ಮಾರ್ಗದರ್ಶನದಲ್ಲಿ ಚಲಾಯಿಸತಕ್ಕದ್ದು.

**14. ನಿಯಂತ್ರಕನ, ಕಾನೂನು ಮಾಪನ ವಿಜ್ಞಾನ ಅಧಿಕಾರಿಗಳ ಮತ್ತು ಇತರ ನೌಕರರ ನೇಮಕ.–** (1) ರಾಜ್ಯದ ಒಳಗೆ ವ್ಯಾಪಾರಕ್ಕೆ ಮತ್ತು ವಾಣಿಜ್ಯಕ್ಕೆ ಸಂಬಂಧಿಸಿದಂತೆ, ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ, ರಾಜ್ಯ ಕಾನೂನು ಮಾಪನ ವಿಜ್ಞಾನ ನಿಯಂತ್ರಕನನ್ನು, ಹೆಚ್ಚುವರಿ ನಿಯಂತ್ರಕನನ್ನು, ಜಂಟಿ ನಿಯಂತ್ರಕನನ್ನು, ಉಪ ನಿಯಂತ್ರಕನನ್ನು, ಸಹಾಯಕ ನಿಯಂತ್ರಕನನ್ನು, ನಿರೀಕ್ಷಕನನ್ನು ಮತ್ತು ಇತರ ನೌಕರರನ್ನು, ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಅವರಿಗೆ ಪ್ರಧಾನ ಮಾಡಿದ ಅಧಿಕಾರಗಳನ್ನು ಚಲಾಯಿಸುವುದಕ್ಕಾಗಿ ಮತ್ತು ವಹಿಸಿದ ಕರ್ತವ್ಯಗಳನ್ನು ನಿರ್ವಹಿಸುವುದಕ್ಕಾಗಿ ನೇಮಕ ಮಾಡಬಹುದು.

(2) ಉಪಪ್ರಕರಣ (1)ರ ಮೇರೆಗೆ ನೇಮಕಗೊಳ್ಳಬೇಕಾದ, ನಿಯಂತ್ರಕನಿಗೆ ಮತ್ತು ಕಾನೂನು ಮಾಪನ ವಿಜ್ಞಾನ ಅಧಿಕಾರಿಗಳಿಗೆ ಇರಬೇಕಾದ ಅರ್ಹತೆಯು ನಿಯಮಿಸಬಹುದಾದಂತೆ ಇರತಕ್ಕದ್ದು.

(3) ಉಪಪ್ರಕರಣ (1)ರ ಮೇರೆಗೆ ನೇಮಕಗೊಂಡ, ನಿಯಂತ್ರಕನು ಮತ್ತು ಪ್ರತಿಯೊಬ್ಬ ಕಾನೂನು ಮಾಪನ ವಿಜ್ಞಾನ ಅಧಿಕಾರಿಯು, ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಸ್ಥಳೀಯ ಎಲ್ಲೆಗಳ ಒಳಗೆ ಅಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂಥ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

(4) ಉಪಪ್ರಕರಣ (1)ರ ಮೇರೆಗೆ ನೇಮಕಗೊಂಡ ಪ್ರತಿಯೊಬ್ಬ ಕಾನೂನು ಮಾಪನ ವಿಜ್ಞಾನ ಅಧಿಕಾರಿಯು, ನಿಯಂತ್ರಕನ ಸಾಮಾನ್ಯ ಅಧೀಕ್ಷಣೆಯಲ್ಲಿ, ನಿರ್ದೇಶನದ ಮೇರೆಗೆ ಮತ್ತು ನಿಯಂತ್ರಣದಲ್ಲಿ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು.

**15. ಪರಿವೀಕ್ಷಣೆ ಮಾಡಲು, ವಶಪಡಿಸಿಕೊಳ್ಳಲು ಅಧಿಕಾರ ಇತ್ಯಾದಿ.–** (1) ನಿರ್ದೇಶಕನು, ನಿಯಂತ್ರಕನು ಅಥವಾ ಯಾರೇ ಕಾನೂನು ಮಾಪನ ವಿಜ್ಞಾನ ಅಧಿಕಾರಿಯು ಯಾವ ತೂಕದ ಬಟ್ಟಿಗೆ ಅಥವಾ ಅಳತೆಯ ಮಾಪಕಕ್ಕೆ ಅಥವಾ ಇತರ ಸರಕುಗಳಿಗೆ ಸಂಬಂಧಪಟ್ಟಂತೆ ಯಾವುದೇ ವ್ಯಾಪಾರವು ಅಥವಾ ವಾಣಿಜ್ಯವು ನಡೆದಿದೆಯೋ ಅಥವಾ ಅಂಥ ಯಾವುದೇ ವ್ಯಾಪಾರವನ್ನು ಅಥವಾ ವಾಣಿಜ್ಯವನ್ನು ನಡೆಸಲು ಉದ್ದೇಶಿಸಲಾಗಿದೆಯೋ ಮತ್ತು ಆ ಯಾವುದೇ ತೂಕದ ಬಟ್ಟಿಗೆ ಅಥವಾ ಅಳತೆಯ ಮಾಪಕಕ್ಕೆ ಅಥವಾ ಇತರ ಸರಕುಗಳಿಗೆ ಸಂಬಂಧಪಟ್ಟಂತೆ ಈ ಅಧಿನಿಯಮದ ಮೇರೆಗಿನ ಶಿಕ್ಷಾರ್ಹವಾದ ಅಪರಾಧವು ನಡೆದಿದೆಯೆಂದು ಅಥವಾ ನಡೆಯುವ ಸಂಭವವಿದೆಯೆಂದು ತೋರುತ್ತದೆಯೋ ಆ ಯಾವುದೇ ತೂಕದ ಬಟ್ಟನ್ನು ಅಥವಾ ಅಳತೆಯ ಮಾಪಕವನ್ನು ಅಥವಾ ಇತರ ಸರಕನ್ನು ಯಾವುದೇ ಆವರಣದಲ್ಲಿ ಇಡಲಾಗಿದೆ ಎಂದು ಅಥವಾ ಅದನ್ನು ಬಚ್ಚಿಡಲಾಗಿದೆ ಎಂದು ಅಥವಾ ಅದರ ಸಾಗಣೆ ಆಗುತ್ತಿದೆ ಎಂದು ನಂಬಲು, ಯಾರೇ ವ್ಯಕ್ತಿಗೆ ಅವನಿಗೆ ಕೊಟ್ಟ ಮತ್ತು ತಾನು ಬರೆದುಕೊಂಡಿದ್ದ ಯಾವುದೇ ಮಾಹಿತಿಯಿಂದಾಗಲಿ ಅಥವಾ ತನಗೆ ಅದು ತಿಳಿದುಬಂದಿದ್ದರಿಂದಾಗಲಿ ಅಥವಾ ಅನ್ಯಥಾ ಯಾವುದೇ ಕಾರಣ ಇದ್ದರೆ,–

(ಎ) ಯಾವುದೇ ಸೂಕ್ತ ಸಮಯದಲ್ಲಿ ಅಂಥ ಆವರಣವನ್ನು ಪ್ರವೇಶಿಸಬಹುದು ಮತ್ತು ಯಾವ ತೂಕದ ಬಟ್ಟಿಗೆ ಅಥವಾ ಅಳತೆಯ ಮಾಪಕಕ್ಕೆ ಅಥವಾ ಇತರ ಸರಕುಗಳಿಗೆ ಸಂಬಂಧಪಟ್ಟಂತೆ ವ್ಯಾಪಾರವು ಅಥವಾ ವಾಣಿಜ್ಯವು ನಡೆದಿದೆಯೋ ಅಥವಾ ವ್ಯಾಪಾರವನ್ನು ಅಥವಾ ವಾಣಿಜ್ಯವನ್ನು ನಡೆಸಲು ಉದ್ದೇಶಿಸಲಾಗಿದೆಯೋ ಆ ಯಾವುದೇ ತೂಕದ ಬಟ್ಟನ್ನು, ಅಳತೆಯ ಮಾಪಕವನ್ನು ಅಥವಾ ಇತರ ಸರಕುಗಳನ್ನು ಮತ್ತು ಅದಕ್ಕೆ ಸಂಬಂಧಿಸಿದ ಯಾವುದೇ ದಾಖಲೆಯನ್ನು, ರಿಜಿಸ್ಟರನ್ನು ಅಥವಾ ಇತರ ದಸ್ತಾವೇಜನ್ನು ಶೋಧಿಸಬಹುದು ಮತ್ತು ಪರಿಶೀಲಿಸಬಹುದು;

(ಬಿ) ಯಾವುದೇ ವ್ಯಾಪಾರವು ಮತ್ತು ವಾಣಿಜ್ಯವು ನಡೆಯುತ್ತಿರುವಾಗ ಅಥವಾ ಅಂಥ ವಾಣಿಜ್ಯಕ್ಕೆ ಅಥವಾ ವ್ಯಾಪಾರಕ್ಕೆ ಸಂಬಂಧಪಟ್ಟಂತೆ ಈ ಅಧಿನಿಯಮದ ಮೇರೆಗಿನ ಶಿಕ್ಷಾರ್ಹವಾದ ಯಾವುದೇ ಅಪರಾಧವು ನಡೆದಿದೆ ಎಂಬುದನ್ನು ಅಥವಾ ಅಂಥ ಯಾವುದೇ ಅಪರಾಧವು ನಡೆಯುವ ಸಂಭವ ಇದೆ ಎಂಬುದನ್ನು ತೋರಿಸುವ ಸಾಕ್ಷ್ಯವನ್ನು, ಯಾವ ತೂಕದ ಬಟ್ಟು, ಅಳತೆಯ ಮಾಪಕವು ಅಥವಾ ಇತರ ಸರಕುಗಳು ಮತ್ತು ಯಾವ ದಾಖಲೆಯು, ರಿಜಿಸ್ಟರು ಅಥವಾ ಇತರ ದಸ್ತಾವೇಜು ಅಥವಾ ವಸ್ತುವು ಒದಗಿಸುತ್ತದೆ ಎಂದು ನಂಬಲು ತನಗೆ ಕಾರಣವಿದೆಯೋ ಆ ಯಾವುದೇ ತೂಕದ ಬಟ್ಟನ್ನು, ಅಳತೆಯ ಮಾಪಕವನ್ನು ಅಥವಾ ಇತರ ಸರಕುಗಳನ್ನು ಮತ್ತು ಆ ಯಾವುದೇ ದಾಖಲೆಯನ್ನು, ರಿಜಿಸ್ಟರನ್ನು ಅಥವಾ ಇತರ ದಸ್ತಾವೇಜನ್ನು ಅಥವಾ ವಸ್ತುವನ್ನು ವಶಪಡಿಸಿಕೊಳ್ಳಬಹುದು.

(2) ನಿರ್ದೇಶಕನು, ನಿಯಂತ್ರಕನು ಅಥವಾ ಯಾರೇ ಕಾನೂನು ಮಾಪನ ವಿಜ್ಞಾನ ಅಧಿಕಾರಿಯು, (1)ನೇ ಉಪಪ್ರಕರಣದಲ್ಲಿ ಹೇಳಿರುವ ತೂಕದ ಬಟ್ಟಿಗೆ ಅಥವಾ ಅಳತೆಯ ಮಾಪನಕ್ಕೆ ಸಂಬಂಧಿಸಿದ ಪ್ರತಿಯೊಂದು ದಸ್ತಾವೇಜನ್ನು ಅಥವಾ ಇತರ ದಾಖಲೆಗಳನ್ನು ಹಾಜರುಪಡಿಸುವಂತೆ ಅಗತ್ಯಪಡಿಸಬಹುದು ಮತ್ತು ಅಂಥ ತೂಕದ ಬಟ್ಟನ್ನು ಅಥವಾ ಅಳತೆಯ ಮಾಪಕವನ್ನು ತನ್ನ ಅಭಿರಕ್ಷೆಯಲ್ಲಿಟ್ಟುಕೊಂಡಿರುವ ವ್ಯಕ್ತಿಯು ಅಂಥ ಆದೇಶವನ್ನು ಪಾಲಿಸತಕ್ಕದ್ದು.

(3) ಉಪಪ್ರಕರಣ (1)ರ ಮೇರೆಗೆ ವಶಪಡಿಸಿಕೊಂಡಿರುವ ಯಾವುವೇ ಸರಕುಗಳು ಬೇಗನೇ ಅಥವಾ ಸಹಜವಾಗಿ ಹಾಳಾಗುವಂತವುಗಳಾಗಿದ್ದರೆ, ನಿರ್ದೇಶಕನು, ನಿಯಂತ್ರಕನು ಅಥವಾ ಕಾನೂನು ಮಾಪನ ವಿಜ್ಞಾನ ಅಧಿಕಾರಿಯು ಅಂಥ ಸರಕುಗಳನ್ನು ನಿಯಮಿಸಬಹುದಾದಂಥ ರೀತಿಯಲ್ಲಿ ವಿಲೆ ಮಾಡಬಹುದು.

(4) ಈ ಪ್ರಕರಣದ ಮೇರೆಗೆ ಮಾಡುವ ಪ್ರತಿಯೊಂದು ಶೋಧನೆಯನ್ನು ಅಥವಾ ವಶಪಡಿಸಿಕೊಳ್ಳುವುದನ್ನು ಶೋಧನೆಗಳಿಗೆ ಅಥವಾ ವಶಪಡಿಸಿಕೊಳ್ಳುವುದಕ್ಕೆ ಸಂಬಂಧಿಸಿದಂತೆ 1973ರ ದಂಡ ಪ್ರಕ್ರಿಯಾ ಸಂಹಿತೆ (1974 ರ 2)ಯಲ್ಲಿರುವ ಉಪಬಂಧಗಳಿಗೆ ಅನುಸಾರವಾಗಿ ಮಾಡತಕ್ಕದ್ದು.

**16. ಮುಟ್ಟುಗೋಲು.–** (1) ಯಾವುದೇ ವ್ಯಾಪಾರವನ್ನು ಮತ್ತು ವಾಣಿಜ್ಯವನ್ನು ನಡೆಸುವಾಗ ಅಥವಾ ವ್ಯಾಪಾರಕ್ಕೆ ಮತ್ತು ವಾಣಿಜ್ಯಕ್ಕೆ ಸಂಬಂಧಪಟ್ಟಂತೆ ಬಳಸಿದ ಮತ್ತು 15ನೇ ಪ್ರಕರಣದ ಮೇರೆಗೆ ವಶಪಡಿಸಿಕೊಂಡ ಪ್ರಮಾಣವಲ್ಲದ ಅಥವಾ ಸತ್ಯಾಪನೆ ಮಾಡಿಲ್ಲದ ಪ್ರತಿಯೊಂದು ತೂಕದ ಬಟ್ಟು ಅಥವಾ ಅಳತೆಯ ಮಾಪಕವು ಮತ್ತು 18ನೇ ಪ್ರಕರಣವನ್ನು ಉಲ್ಲಂಘಿಸಿ ಮಾಡಿದ ಯಾವುದೇ ಪ್ಯಾಕೇಜು, ರಾಜ್ಯ ಸರ್ಕಾರಕ್ಕೆ ಮುಟ್ಟುಗೋಲು ಆಗುವುದಕ್ಕೆ ಬದ್ಧವಾಗಿರತಕ್ಕದ್ದು:

ಪರಂತು, ಯಾವ ವ್ಯಕ್ತಿಯಿಂದ ಅಂಥ ತೂಕದ ಬಟ್ಟನ್ನು ಅಥವಾ ಅಳತೆಯ ಮಾಪಕವನ್ನು ವಶಪಡಿಸಿಕೊಳ್ಳಲಾಗಿದೆಯೋ ಅವುಗಳನ್ನು ನಿಯಮಿಸಬಹುದಾದಂಥ ಕಾಲದೊಳಗೆ ಆ ವ್ಯಕ್ತಿಯು ಸತ್ಯಾಪನೆ ಮಾಡಿಸಿದ್ದರೆ ಮತ್ತು ಅವುಗಳಿಗೆ ಸ್ಟಾಂಪು ಹಾಕಿಸಿದ್ದರೆ ಅಂಥ ತೂಕದ ಬಟ್ಟು ಅಥವಾ ಅಳತೆಯ ಮಾಪಕವು ಸರ್ಕಾರಕ್ಕೆ ಮುಟ್ಟುಗೋಲು ಆಗತಕ್ಕದ್ದಲ್ಲ.

(2) ಪ್ರಕರಣ 15ರ ಮೇರೆಗೆ ವಶಪಡಿಸಿಕೊಂಡ ಆದರೆ (1)ನೇ ಉಪಪ್ರಕರಣದ ಮೇರೆಗೆ ಮುಟ್ಟುಗೋಲು ಆಗದೇ ಇರುವ ಪ್ರತಿಯೊಂದು ತೂಕದ ಬಟ್ಟನ್ನು, ಅಳತೆಯ ಮಾಪಕವನ್ನು ಅಥವಾ ಇತರ ಸರಕುಗಳನ್ನು ನಿಯಮಿಸಬಹುದಾದಂಥ ರೀತಿಯಲ್ಲಿ ಅಂಥ ಪ್ರಾಧಿಕಾರವು ವಿಲೆ ಮಾಡತಕ್ಕದ್ದು.

**17. ತಯಾರಕರು, ಮುಂತಾದವರು ದಾಖಲೆಗಳನ್ನು ಮತ್ತು ರಿಜಿಸ್ಟರುಗಳನ್ನು ಇಡುವುದು.–** (1) ತೂಕದ ಬಟ್ಟುಗಳ ಅಥವಾ ಅಳತೆಯ ಮಾಪಕಗಳ ಪ್ರತಿಯೊಬ್ಬ ತಯಾರಕನು, ದುರಸ್ತಿಗಾರನು ಅಥವಾ ಡೀಲರನು ನಿಯಮಿಸಬಹುದಾದಂಥ ದಾಖಲೆಗಳನ್ನು ಮತ್ತು ರಿಜಿಸ್ಟರುಗಳನ್ನು ಇಡತಕ್ಕದ್ದು.

(2) ಉಪಪ್ರಕರಣ (1)ರ ಮೇರೆಗೆ ಇಟ್ಟಿರುವ ದಾಖಲೆಗಳನ್ನು ಮತ್ತು ರಿಜಿಸ್ಟರುಗಳನ್ನು 15ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಪರಿವೀಕ್ಷಣೆ ಉದ್ದೇಶಕ್ಕಾಗಿ ಅಧಿಕೃತಗೊಂಡ ವ್ಯಕ್ತಿಗಳ ಮುಂದೆ ಪರಿವೀಕ್ಷಣೆ ಸಮಯದಲ್ಲಿ ಹಾಜರುಪಡಿಸತಕ್ಕದ್ದು.

**18. ಮುಂಚಿತವಾಗಿಯೇ ಪ್ಯಾಕು ಮಾಡಿರುವ ಸರಕುಗಳ ಮೇಲೆ ಇರಬೇಕಾದ ಘೋಷಣೆಗಳು.–** (1) ಯಾರೇ ವ್ಯಕ್ತಿಯು, ಮುಂಚಿತವಾಗಿಯೇ ಪ್ಯಾಕು ಮಾಡಿರುವ ಯಾವುವೇ ಸರಕನ್ನು, ಅಂಥ ಪ್ಯಾಕೇಜು ನಿಯಮಿಸಬಹುದಾದಂತೆ ಪ್ರಮಾಣ ಪರಿಮಾಣಗಳಲ್ಲಿದ್ದ ಹೊರತು ಅಥವಾ ಅಂಥ ಸಂಖ್ಯೆಗಳಲ್ಲಿ ಇದ್ದ ಹೊರತು, ಮತ್ತು ಅದರ ಮೇಲೆ ನಿಯಮಿಸಬಹುದಾದಂಥ ರೀತಿಯಲ್ಲಿ ಅಂಥ ಘೋಷಣೆಗಳು ಮತ್ತು ವಿವರಗಳು ಇದ್ದ ಹೊರತು, ತಯಾರಿಸತಕ್ಕದ್ದಲ್ಲ, ಪ್ಯಾಕ್ ಮಾಡತಕ್ಕದ್ದಲ್ಲ, ಮಾರಾಟ ಮಾಡತಕ್ಕದ್ದಲ್ಲ, ಆಮದು ಮಾಡಿಕೊಳ್ಳತಕ್ಕದ್ದಲ್ಲ, ವಿತರಣೆ ಮಾಡತಕ್ಕದ್ದಲ್ಲ, ತಲುಪಿಸತಕ್ಕದ್ದಲ್ಲ, ಮಾರಾಟಕ್ಕೆ ಇಡತಕ್ಕದ್ದಲ್ಲ, ಪ್ರದರ್ಶಿಸತಕ್ಕದ್ದಲ್ಲ ಅಥವಾ ಇಟ್ಟುಕೊಂಡಿರತಕ್ಕದ್ದಲ್ಲ.

(2) ಮುಂಚಿತವಾಗಿಯೇ ಪ್ಯಾಕು ಮಾಡಿದ ಸರಕಿನ ಚಿಲ್ಲರೆ ಮಾರಾಟದ ಬೆಲೆಯನ್ನು ನಮೂದಿಸಿರುವ ಯಾವುದೇ ಜಾಹೀರಾತಿನಲ್ಲಿ, ಆ ಪ್ಯಾಕೇಜಿನಲ್ಲಿ ಇರುವ ಸರಕಿನ ನಿವ್ವಳ ಪರಿಮಾಣವು ಅಥವಾ ಅವು ಎಷ್ಟು ಸಂಖ್ಯೆಯಲ್ಲಿ ಇವೆಯೋ ಆ ಸಂಖ್ಯೆಗೆ ಸಂಬಂಧಿಸಿದಂತೆ ಇರುವ ಘೋಷಣೆಯು ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ರೀತಿಯಲ್ಲಿ ಇರತಕ್ಕದ್ದು.

**19. ತೂಕದ ಬಟ್ಟಿನ ಅಥವಾ ಅಳತೆಯ ಮಾಪಕದ ಆಮದುಗಾರನ ನೋಂದಣಿ.–** ನಿಯಮಿಸಬಹುದಾದಂಥ ರೀತಿಯಲ್ಲಿ ಮತ್ತು ನಿಯಮಿಸಬಹುದಾದಂಥ ಫೀಜನ್ನು ಸಂದಾಯ ಮಾಡಿ ನಿರ್ದೇಶಕನ ಬಳಿ ಯಾರೇ ವ್ಯಕ್ತಿಯು ನೋಂದಾಯಿಸಿಕೊಂಡಿದ್ದ ಹೊರತು, ಯಾವುದೇ ತೂಕದ ಬಟ್ಟನ್ನು ಅಥವಾ ಅಳತೆಯ ಮಾಪಕವನ್ನು ಆಮದು ಮಾಡಿಕೊಳ್ಳತಕ್ಕದ್ದಲ್ಲ.

**20. ಪ್ರಮಾಣವಲ್ಲದ ತೂಕದ ಬಟ್ಟುಗಳನ್ನು ಅಥವಾ ಅಳತೆಯ ಮಾಪಕಗಳನ್ನು ಆಮದು ಮಾಡಿಕೊಳ್ಳುವಂತಿಲ್ಲ.–** ಯಾವುದೇ ತೂಕದ ಬಟ್ಟು ಅಥವಾ ಅಳತೆಯ ಮಾಪಕವು ಅದು ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ನಿಗದಿಪಡಿಸಿದ ತೂಕದ ಬಟ್ಟನ್ನು ಅಥವಾ ಅಳತೆಯ ಮಾಪಕವನ್ನು ನಿರ್ದಿಷ್ಟ ಪ್ರಮಾಣಗಳಿಗೆ ಅನುರೂಪವಾಗಿದ್ದ ಹೊರತು ಅದನ್ನು ಬಿಡಿಬಿಡಿಯಾಗಿ ಆಗಲಿ ಅಥವಾ ಯಾವುದೇ ಯಂತ್ರದ ಭಾಗವಾಗಿಯಾಗಲಿ ಅಥವಾ ಘಟಕವಾಗಿಯಾಗಲಿ ಆಮದು ಮಾಡಿಕೊಳ್ಳತಕ್ಕದ್ದಲ್ಲ.

**21. ಕಾನೂನು ಮಾಪನ ವಿಜ್ಞಾನದಲ್ಲಿ ತರಬೇತಿ.–** (1) ಕಾನೂನು ಮಾಪನ ವಿಜ್ಞಾನದಲ್ಲಿ ಮತ್ತು ಇತರ ಸಂಬಂಧಿತ ಜ್ಞಾನ ಶಾಖೆಗಳಲ್ಲಿ ತರಬೇತಿ ನೀಡುವುದಕ್ಕಾಗಿ ತೂಕ ಮತ್ತು ಅಳತೆ ಮಾನಕ ಅಧಿನಿಯಮ, 1976ರ (1976 ರ 60) ಉಪಬಂಧಗಳ ಮೇರೆಗೆ ಸ್ಥಾಪಿತವಾದ "ಭಾರತ ಕಾನೂನು ಮಾಪನ ವಿಜ್ಞಾನ ಸಂಸ್ಥೆ" ಯನ್ನು (ಇದರಲ್ಲಿ ಇನ್ನು ಮುಂದೆ "ಸಂಸ್ಥೆ" ಎಂದು ಉಲ್ಲೇಖಿಸಲಾಗಿದೆ) ಈ ಅಧಿನಿಯಮದ ಸಂವಾದಿ ಉಪಬಂಧಗಳ ಮೇರೆಗೆ ಸ್ಥಾಪಿತವಾದುದೆಂದು ಭಾವಿಸತಕ್ಕದ್ದು.

(2) ಸಂಸ್ಥೆಯ ಆಡಳಿತ ಮತ್ತು ನಿಯಂತ್ರಣವು, ಬೋಧಕ ಸಿಬ್ಬಂದಿಯು ಮತ್ತು ಇತರ ನೌಕರರು, ಅಲ್ಲಿ ತರಬೇತಿಗಾಗಿ ಇರಬೇಕಾದ ಕೋರ್ಸುಗಳು ಮತ್ತು ಪಠ್ಯಕ್ರಮಗಳು, ಅದರಲ್ಲಿ ಪ್ರವೇಶ ಪಡೆಯುವುದಕ್ಕಾಗಿ ವ್ಯಕ್ತಿಗೆ ಯಾವ ಅರ್ಹತೆಗಳು ಇರಬೇಕೋ, ಆ ಅರ್ಹತೆಗಳು ನಿಯಮಿಸಬಹುದಾದಂತೆ ಇರತಕ್ಕದ್ದು.

**22. ಮಾದರಿಗಳ ಅನುಮೋದನೆ.–** ಪ್ರತಿಯೊಬ್ಬ ವ್ಯಕ್ತಿಯು, ಯಾವುದೇ ತೂಕದ ಬಟ್ಟನ್ನು ಅಥವಾ ಅಳತೆಯ ಮಾಪಕವನ್ನು ತಯಾರಿಸುವುದಕ್ಕೂ ಮೊದಲು ಅಥವಾ ಆಮದು ಮಾಡಿಕೊಳ್ಳುವುದಕ್ಕೂ ಮೊದಲು, ನಿಯಮಿಸಬಹುದಾದಂಥ ರೀತಿಯಲ್ಲಿ ಅಂಥ ಫೀಜನ್ನು ಸಂದಾಯ ಮಾಡಿದ ಮೇಲೆ ಮತ್ತು ಅಂಥ ಪ್ರಾಧಿಕಾರದಿಂದ ತೂಕದ ಬಟ್ಟಿನ ಅಥವಾ ಅಳತೆಯ ಮಾಪಕದ ಮಾದರಿಗಳ ಅನುಮೋದನೆಗೆ ಕೋರತಕ್ಕದ್ದು:

ಪರಂತು, ಯಾವುದೇ ಬೀಡು ಕಬ್ಬಿಣಕ್ಕೆ, ಹಿತ್ತಾಳೆಗೆ, ಚಿನ್ನ ಬೆಳ್ಳಿಗಟ್ಟಿಗೆ ಅಥವಾ ಕ್ಯಾರೆಟ್ ತೂಕದ ಬಟ್ಟಿಗೆ ಅಥವಾ ಯಾವುದೇ ತಕ್ಕಡಿ ಕೋಲಿಗೆ, ಜವಳಿಯನ್ನು ಅಥವಾ ಚೌಬೀನೆಯನ್ನು ಅಳತೆ ಮಾಡಲು ಚಿಲ್ಲರೆ ವ್ಯಾಪಾರದಲ್ಲಿ ಸಾಮಾನ್ಯವಾಗಿ ಬಳಕೆಯಾಗುತ್ತಿರುವ (ಅಳತೆ ಟೇಪುಗಳಲ್ಲದ) ಅಳತೆ ಮಾಪಕಗಳಿಗೆ, ಸೀಮೆಎಣ್ಣೆಯನ್ನು, ಹಾಲನ್ನು ಅಥವಾ ಸೇವನೆ ಯೋಗ್ಯ ಪಾನೀಯಗಳನ್ನು ಅಳೆಯಲು ಚಿಲ್ಲರೆ ವ್ಯಾಪಾರದಲ್ಲಿ ಸಾಮಾನ್ಯವಾಗಿ ಬಳಸುವ ಇಪ್ಪತ್ತು ಲೀಟರುಗಳ ಪ್ರಮಾಣವನ್ನು ಮೀರದ ಪ್ರಮಾಣ ಮಾಪಕಗಳಿಗೆ ಸಂಬಂಧಪಟ್ಟಂತೆ ಅಂಥ ಮಾದರಿಗಳ ಅನುಮೋದನೆಯು ಅಗತ್ಯವಿಲ್ಲದಿರಬಹುದು:

ಮತ್ತೂ ಪರಂತು, ನಿಯಮಿಸಿದ ಪ್ರಾಧಿಕಾರಿಯು ಯಾವ ತೂಕದ ಬಟ್ಟನ್ನು ಅಥವಾ ಅಳತೆಯ ಮಾಪಕದ ಮಾದರಿಯು ಭಾರತದ ಹೊರಗಿನ ದೇಶದಲ್ಲಿ ಅನುಮೋದಿತವಾಗಿದೆಯೋ ಆ ಯಾವುದೇ ತೂಕದ ಬಟ್ಟಿನ ಅಥವಾ ಅಳತೆಯ ಮಾಪಕದ ಮಾದರಿಯು ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ನಿಗದಿಪಡಿಸಿದ ಪ್ರಮಾಣಗಳಿಗೆ ಅನುರೂಪವಾಗಿದೆಯೆಂದು ಅವನಿಗೆ ಮನದಟ್ಟಾದರೆ ಅಂಥ ಮಾದರಿಯನ್ನು ಯಾವುದೇ ಪರೀಕ್ಷೆ ಮಾಡದೆಯೇ ಅಥವಾ ಸೂಕ್ತವೆಂದು ಅವನು ಭಾವಿಸುವಂಥ ಪರೀಕ್ಷೆ ಮಾಡಿದ ನಂತರ ಅನುಮೋದಿಸಬಹುದು.

**23. ಲೈಸೆನ್ಸು ಇಲ್ಲದೆ ತೂಕದ ಬಟ್ಟನ್ನು ಅಥವಾ ಅಳತೆ ಮಾಪಕನ್ನು ತಯಾರಿಸುವುದರ ಮೇಲೆ, ದುರಸ್ತಿ ಮಾಡುವುದರ ಮೇಲೆ ಅಥವಾ ಮಾರಾಟ ಮಾಡುವುದರ ಮೇಲೆ ನಿಷೇಧ.–** (1) ಯಾರೇ ವ್ಯಕ್ತಿಯು, (2)ನೇ ಉಪಪ್ರಕರಣದ ಮೇರೆಗೆ ನಿಯಂತ್ರಕನು ನೀಡಿದ ಲೈಸೆನ್ಸನ್ನು ಹೊಂದಿದ್ದ ಹೊರತು, ಯಾವುದೇ ತೂಕದ ಬಟ್ಟನ್ನು ಅಥವಾ ಅಳತೆಯ ಮಾಪಕವನ್ನು ತಯಾರಿಸತಕ್ಕದ್ದಲ್ಲ, ದುರಸ್ತಿ ಮಾಡತಕ್ಕದ್ದಲ್ಲ ಅಥವಾ ಮಾರಾಟ ಮಾಡತಕ್ಕದ್ದಲ್ಲ ಅಥವಾ ಮಾರಾಟಕ್ಕೆ ಇಡತಕ್ಕದ್ದಲ್ಲ, ಪ್ರದರ್ಶಿಸತಕ್ಕದ್ದಲ್ಲ ಅಥವಾ ಮಾರಾಟಕ್ಕಾಗಿ ಇಟ್ಟುಕೊಂಡಿರತಕ್ಕದ್ದಲ್ಲ:

ಪರಂತು, ಅದನ್ನು ಯಾವ ರಾಜ್ಯದಲ್ಲಿ ತಯಾರಿಸಲಾಗುತ್ತದೆಯೋ ಆ ರಾಜ್ಯದ ಹೊರತಾಗಿ ಬೇರೆ ರಾಜ್ಯದಲ್ಲಿ ತಯಾರಕನು ತನ್ನದೇ ತೂಕದ ಬಟ್ಟನ್ನು ಅಥವಾ ಅಳತೆಯ ಮಾಪಕವನ್ನು ದುರಸ್ತಿ ಮಾಡುವುದಕ್ಕಾಗಿ ಆ ತಯಾರಕನಿಗೆ ಯಾವುದೇ ಲೈಸೆನ್ಸಿನ ಅಗತ್ಯ ಇರತಕ್ಕದ್ದಲ್ಲ.

(2) ಉಪಪ್ರಕರಣ (1)ರ ಉದ್ದೇಶಕ್ಕಾಗಿ, ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ರೀತಿಯಲ್ಲಿ ಅಂಥ ಷರತ್ತುಗಳ ಮೇಲೆ, ಅಂಥ ಅವಧಿಗೆ ಮತ್ತು ಅಂಥ ಪ್ರದೇಶ ವ್ಯಾಪ್ತಿಯ ಪ್ರದೇಶದೊಳಗೆ ಮತ್ತು ನಿಯಮಿಸಬಹುದಾದಂಥ ಫೀಜನ್ನು ಸಂದಾಯ ಮಾಡಿದ ಮೇಲೆ ನಿಯಂತ್ರಕನು ಲೈಸೆನ್ಸನ್ನು ನೀಡತಕ್ಕದ್ದು.

## ಅಧ್ಯಾಯ IV

## ತೂಕದ ಬಟ್ಟಿನ ಅಥವಾ ಅಳತೆಯ ಮಾಪಕದ ಸತ್ಯಾಪನೆ ಮತ್ತು ತೂಕದ ಬಟ್ಟಿನ ಅಥವಾ ಅಳತೆಯ ಮಾಪಕದ ಮೇಲೆ ಮುದ್ರೆ ಹಾಕುವುದು

**24. ತೂಕದ ಬಟ್ಟಿನ ಅಥವಾ ಅಳತೆಯ ಮಾಪಕದ ಸತ್ಯಾಪನೆ ಮತ್ತು ತೂಕದ ಬಟ್ಟಿನ ಅಥವಾ ಅಳತೆಯ ಮಾಪಕದ ಮೇಲೆ ಮುದ್ರೆ ಹಾಕುವುದು.–** (1) ಪ್ರತಿಯೊಬ್ಬ ವ್ಯಕ್ತಿಯು, ಅವನ ಸ್ವಾಧೀನದಲ್ಲಿ, ಅಭಿರಕ್ಷೆಯಲ್ಲಿ ಅಥವಾ ನಿಯಂತ್ರಣದಲ್ಲಿ ಯಾವುದೇ ತೂಕದ ಬಟ್ಟು ಅಥವಾ ಅಳತೆಯ ಮಾಪಕವು ಇದ್ದರೆ, ಆ ತೂಕದ ಬಟ್ಟನ್ನು ಅಥವಾ ಅಳತೆಯ ಮಾಪಕವನ್ನು ಅವನು ಯಾವುದೇ ವ್ಯವಹಾರದಲ್ಲಿ ಅಥವಾ ಸಂರಕ್ಷಣೆಯನ್ನು ಬಳಸುವಾಗ ಬಳಸುತ್ತಿದ್ದಾನೆಂಬುದನ್ನು ಅಥವಾ ಬಳಸಲು ಉದ್ದೇಶಿಸಿದ್ದಾನೆಂಬುದನ್ನು ಅಥವಾ ಬಳಸುವ ಸಂಭವವಿದೆ ಎಂಬುದನ್ನು ಸೂಚಿಸುವಂಥ ಸಂದರ್ಭಗಳಲ್ಲಿ ಅವನ ಸ್ವಾಧೀನದಲ್ಲಿರುವ ಅಂಥ ತೂಕದ ಬಟ್ಟನ್ನು ಅಥವಾ ಅಳತೆಯ ಮಾಪಕವನ್ನು ಹಾಗೆ ಬಳಸುವುದಕ್ಕೆ ಮುಂಚೆ, ನಿಯಂತ್ರಕನು ಈ ಬಗ್ಗೆ ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಸ್ಥಳದಲ್ಲಿ ಮತ್ತು ಅಂಥ ವೇಳೆಗಳಲ್ಲಿ, ನಿಯಮಿಸಬಹುದಾದಂಥ ಫೀಜನ್ನು ಸಂದಾಯ ಮಾಡಿದ ಮೇಲೆ ಆ ವ್ಯಕ್ತಿಯು ಸತ್ಯಾಪನೆ ಮಾಡಿಸಿಕೊಳ್ಳತಕ್ಕದ್ದು.

(2) ಕೇಂದ್ರ ಸರ್ಕಾರವು, ಯಾವ ತೂಕದ ಬಟ್ಟಿನ ಮತ್ತು ಅಳತೆಯ ಮಾಪಕದ ಸತ್ಯಾಪನೆಯನ್ನು ಸರ್ಕಾರದಿಂದ ಅನುಮೋದಿತವಾದ ಪರೀಕ್ಷಾ ಕೇಂದ್ರದ ಮೂಲಕ ಮಾಡಿಸಬೇಕಾಗಿದೆಯೋ ಆ ತೂಕದ ಬಟ್ಟಿನ ಮತ್ತು ಅಳತೆ ಮಾಪಕದ ಬಗೆಗಳನ್ನು ಗೊತ್ತುಪಡಿಸಬಹುದು.

(3) ಸರ್ಕಾರದಿಂದ ಅನುಮೋದಿತವಾದ ಪರೀಕ್ಷಾ ಕೇಂದ್ರವನ್ನು, ಕೇಂದ್ರ ಸರ್ಕಾರವು ಅಥವಾ ಸಂದರ್ಭಾನುಸಾರ ರಾಜ್ಯ ಸರ್ಕಾರವು ನಿಯಮಿಸಬಹುದಾದಂಥ ರೀತಿಯಲ್ಲಿ, ಅಂಥ ನಿಬಂಧನೆಗಳ ಮತ್ತು ಷರತ್ತುಗಳ ಮೇಲೆ ಮತ್ತು ಅಂಥ ಫೀಜನ್ನು ಸಂದಾಯ ಮಾಡಿದ ನಂತರ ಅಧಿಸೂಚಿಸತಕ್ಕದ್ದು.

(4) ಸರ್ಕಾರದಿಂದ ಅನುಮೋದಿತವಾದ ಪರೀಕ್ಷಾ ಕೇಂದ್ರವು, ನಿಯಮಿಸಬಹುದಾದಂಥ ಅರ್ಹತೆಗಳನ್ನು ಮತ್ತು ಅನುಭವವನ್ನು ಹೊಂದಿರುವಂಥ ವ್ಯಕ್ತಿಗಳನ್ನು ನೇಮಕ ಮಾಡಿಕೊಳ್ಳತಕ್ಕದ್ದು ಅಥವಾ ತೊಡಗಿಸತಕ್ಕದ್ದು ಮತ್ತು (2)ನೇ ಉಪಪ್ರಕರಣದ ಮೇರೆಗೆ ಗೊತ್ತುಪಡಿಸಿದ ತೂಕದ ಬಟ್ಟುಗಳ ಮತ್ತು ಅಳತೆ ಮಾಪಕಗಳ ಸತ್ಯಾಪನೆಗಾಗಿ, ಅಂಥ ನಿಬಂಧನೆಗಳ ಮತ್ತು ಷರತ್ತುಗಳ ಮೇಲೆ ಅಂಥ ಫೀಜನ್ನು ಸಂಗ್ರಹಿಸತಕ್ಕದ್ದು.

## ಅಧ್ಯಾಯ V

## ಅಪರಾಧಗಳು ಮತ್ತು ದಂಡನೆಗಳು

**25. ಪ್ರಮಾಣವಲ್ಲದ ತೂಕದ ಬಟ್ಟುಗಳನ್ನು ಅಥವಾ ಅಳತೆಯ ಮಾಪಕಗಳನ್ನು ಬಳಕೆ ಮಾಡಿದ್ದಕ್ಕಾಗಿ ದಂಡನೆ.–** ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ನಿರ್ದಿಷ್ಟಪಡಿಸಿದ ತೂಕದ ಬಟ್ಟಿನ ಅಥವಾ ಅಳತೆಯ ಮಾಪಕದ ಪ್ರಮಾಣಗಳಿಗೆ ಅಥವಾ ಯಾವುದೇ ಸಂಖ್ಯಾಲೇಖನದ ಪ್ರಮಾಣಕ್ಕೆ ಅನುಸಾರವಾಗಿ ಇಲ್ಲದಂಥ ಬೇರೆ ರೀತಿಯ ತೂಕದ ಬಟ್ಟುಗಳನ್ನು ಅಥವಾ ಸಂದರ್ಭಾನುಸಾರ ಅಳತೆಯ ಮಾಪಕಗಳನ್ನು ಯಾರೇ ವ್ಯಕ್ತಿಯು ಬಳಸಿದರೆ ಅಥವಾ ಅಂಕಿಗಳನ್ನು ಬಳಕೆ ಮಾಡಿದರೆ ಅವನು ಇಪ್ಪತ್ತೈದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಮತ್ತು ಎರಡನೆ ಸಲದ ಅಥವಾ ಆ ತರುವಾಯದ ಅಪರಾಧಕ್ಕಾಗಿ ಆರು ತಿಂಗಳ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸ ಶಿಕ್ಷೆಯಿಂದ ಮತ್ತು ಜುಲ್ಮಾನೆಯಿಂದ ಸಹ ದಂಡಿತನಾಗತಕ್ಕದ್ದು.

**26. ತೂಕದ ಬಟ್ಟನ್ನು ಮತ್ತು ಅಳತೆಯ ಮಾಪಕವನ್ನು ವ್ಯತ್ಯಾಸಗೊಳಿಸಿದ್ದಕ್ಕಾಗಿ ದಂಡ.–** ಯಾರೇ ವ್ಯಕ್ತಿಯು, ಯಾವುದೇ ಮೂಲ ಪ್ರಮಾಣವನ್ನು, ಮೂಲದ್ದಲ್ಲದ ಪ್ರಮಾಣವನ್ನು ಅಥವಾ ಕಾರ್ಯಾರ್ಥ ಪ್ರಮಾಣವನ್ನು ಯಾವುದೇ ರೀತಿಯಲ್ಲಿ ಕೆಡಿಸಿದರೆ ಅಥವಾ ವ್ಯತ್ಯಾಸಗೊಳಿಸಿದರೆ ಅಥವಾ ಯಾರೇ ವ್ಯಕ್ತಿಯನ್ನು ವಂಚಿಸುವ ದೃಷ್ಟಿಯಿಂದ ಅಥವಾ ಸತ್ಯಾಪನೆ ಮಾಡಿದಾಗ ಅದರಲ್ಲಿ ಕಂಡುಬಂದ ಯಾವುದೇ ದೋಷವನ್ನು ಸರಿಪಡಿಸುವುದಕ್ಕಾಗಿ ಹಾಗೆ ವ್ಯತ್ಯಾಸಗೊಳಿಸಿದ್ದ ಹೊರತು, ಹಾಗೆ ಮಾಡಿದ್ದರಿಂದಾಗಿ ಯಾರೇ ವ್ಯಕ್ತಿಯು ವಂಚನೆಗೆ ಒಳಗಾಗುವ ಸಂಭವ ಇದೆ ಎನ್ನುವುದು ಗೊತ್ತಿದ್ದೂ ಅಥವಾ ಹಾಗೆ ವಂಚನೆಗೆ ಒಳಗಾಗುತ್ತಾನೆಂದು ನಂಬಲು ಕಾರಣವಿದ್ದೂ ಯಾವುದೇ ತೂಕದ ಬಟ್ಟನ್ನು ಅಥವಾ ಅಳತೆಯ ಮಾಪಕದ ಪ್ರಮಾಣವನ್ನು ಹೆಚ್ಚಿಸಿದರೆ ಅಥವಾ ಪ್ರಮಾಣವನ್ನು ಕಡಿಮೆ ಮಾಡಿದರೆ ಅಥವಾ ಪ್ರಮಾಣವನ್ನು ವ್ಯತ್ಯಾಸಗೊಳಿಸಿದರೆ ಅವನು, ಐವತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಮತ್ತು ಎರಡನೆ ಸಲದ ಮತ್ತು ಆ ತರುವಾಯದ ಅಪರಾಧಕ್ಕಾಗಿ ಆರು ತಿಂಗಳಿಗಿಂತ ಕಡಿಮೆಯಲ್ಲದ, ಆದರೆ ಒಂದು ವರ್ಷದ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸ ಶಿಕ್ಷೆಯಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**27. ಪ್ರಮಾಣವಲ್ಲದ ತೂಕದ ಬಟ್ಟುಗಳನ್ನು ಅಥವಾ ಅಳತೆಯ ಮಾಪಕಗಳನ್ನು ತಯಾರಿಸಿದ್ದಕ್ಕಾಗಿ ಅಥವಾ ಮಾರಾಟ ಮಾಡಿದ್ದಕ್ಕಾಗಿ ದಂಡ.–** ಯಾವ ಪ್ರತಿಯೊಬ್ಬ ವ್ಯಕ್ತಿಯು, ಯಾವ ತೂಕದ ಬಟ್ಟು ಅಥವಾ ಅಳತೆಯ ಮಾಪಕವು,–

ಎ) ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ನಿರ್ದಿಷ್ಟಪಡಿಸಿದ ತೂಕದ ಬಟ್ಟಿನ ಅಥವಾ ಅಳತೆಯ ಪ್ರಮಾಣಗಳಿಗೆ ಅನುರೂಪವಾಗಿಲ್ಲವೊ; ಅಥವಾ

ಬಿ) ಆ ಯಾವುದೇ ತೂಕದ ಬಟ್ಟನ್ನು ಅಥವಾ ಅಳತೆಯ ಮಾಪಕವನ್ನು ಈ ಅಧಿನಿಯಮದ ಮೇರೆಗೆ ತಯಾರಿಸುವುದಕ್ಕೆ ಅವನಿಗೆ ಅನುಮತಿ ಇದ್ದ ಹೊರತು, ಯಾವ ಆ ತೂಕದ ಬಟ್ಟು ಅಳತೆಯ ಮಾಪಕವು ಅಥವಾ ಅಂಕಿಯ ಪ್ರಮಾಣಗಳು ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ನಿರ್ದಿಷ್ಟಪಡಿಸಿದ ತೂಕದ ಬಟ್ಟಿಗೆ ಅಥವಾ ಅಳತೆಯ ಮಾಪಕಕ್ಕೆ ಅಥವಾ ಸಂಖ್ಯಾಲೇಖನಗಳಿಗೆ ಅನುರೂಪವಾಗಿಲ್ಲವೋ

–ಆ ತೂಕದ ಬಟ್ಟಿನ, ಅಳತೆಯ ಮಾಪಕದ ಅಥವಾ ಸಂಖ್ಯಾಲೇಖನದ ಮೇಲೆ ಯಾವುದೇ ಕೆತ್ತಿದ ಬರಹ ಇರುವ ಆ ಯಾವುದೇ ತೂಕದ ಬಟ್ಟನ್ನು ಅಥವಾ ಅಳತೆಯ ಮಾಪಕವನ್ನು ಆ ಪ್ರತಿಯೊಬ್ಬ ವ್ಯಕ್ತಿಯು ತಯಾರಿಸಿದರೆ ಅಥವಾ ತಯಾರಿಸುವಂತೆ ಮಾಡಿದರೆ ಅಥವಾ ಮಾರಾಟ ಮಾಡಿದರೆ ಅಥವಾ ಮಾರಾಟಕ್ಕಾಗಿ ಇಟ್ಟರೆ, ಪ್ರದರ್ಶಿಸಿದರೆ ಅಥವಾ ಮಾರಾಟಕ್ಕಾಗಿ ಇಟ್ಟುಕೊಂಡಿದ್ದರೆ, ಅವನು ಇಪ್ಪತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಮತ್ತು ಎರಡನೆ ಸಲದ ಅಥವಾ ಆ ತರುವಾಯದ ಅಪರಾಧಕ್ಕಾಗಿ ಮೂರು ವರ್ಷಗಳ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸ ಶಿಕ್ಷೆಯಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**28. ನಿಯಮಿಸಿದ ಪ್ರಮಾಣಗಳನ್ನು ಉಲ್ಲಂಘಿಸಿ ಯಾವುದೇ ವಹಿವಾಟು ಮಾಡಿದ್ದಕ್ಕಾಗಿ, ವ್ಯವಹಾರ ಮಾಡಿದ್ದಕ್ಕಾಗಿ ಅಥವಾ ಕರಾರು ಮಾಡಿಕೊಂಡಿದ್ದಕ್ಕಾಗಿ ದಂಡ.–** ಯಾರೇ ವ್ಯಕ್ತಿಯು, 10ನೇ ಪ್ರಕರಣದ ಮೇರೆಗೆ ನಿರ್ದಿಷ್ಟಪಡಿಸಿದ ತೂಕದ ಬಟ್ಟುಗಳ ಮತ್ತು ಅಳತೆಯ ಮಾಪಕಗಳ ಪ್ರಮಾಣಗಳನ್ನು ಉಲ್ಲಂಘಿಸಿ ಯಾವುದೇ ವಹಿವಾಟನ್ನು, ವ್ಯವಹಾರವನ್ನು ಮಾಡಿದರೆ ಅಥವಾ ಕರಾರನ್ನು ಮಾಡಿಕೊಂಡರೆ, ಹತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಮತ್ತು ಎರಡನೆಯ ಸಲದ ಅಥವಾ ಆ ತರುವಾಯದ ಅಪರಾಧಕ್ಕಾಗಿ ಒಂದು ವರ್ಷದ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸ ಶಿಕ್ಷೆಯಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದ ಸಹ ದಂಡಿತನಾಗತಕ್ಕದ್ದು.

**29. ಪ್ರಮಾಣವಲ್ಲದ ಯೂನಿಟ್‌ಗಳನ್ನು ನಮೂದಿಸುವುದು ಅಥವಾ ಪ್ರಕಟಿಸುವುದು ಇತ್ಯಾದಿಗಳಿಗೆ ದಂಡ.–** ಯಾರೇ ವ್ಯಕ್ತಿಯು, 11ನೇ ಪ್ರಕರಣವನ್ನು ಉಲ್ಲಂಘಿಸಿದರೆ ಅವನು ಹತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಮತ್ತು ಎರಡನೆಯ ಸಲದ ಅಥವಾ ಆ ತರುವಾಯದ ಅಪರಾಧಕ್ಕಾಗಿ ಒಂದು ವರ್ಷದ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸ ಶಿಕ್ಷೆಯಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದ ಸಹ ದಂಡಿತನಾಗತಕ್ಕದ್ದು.

**30. ತೂಕದ ಬಟ್ಟುಗಳ ಅಥವಾ ಅಳತೆಯ ಮಾಪಕಗಳ ಪ್ರಮಾಣಗಳನ್ನು ಉಲ್ಲಂಘಿಸಿ ವ್ಯವಹಾರಗಳನ್ನು ಮಾಡಿದ್ದಕ್ಕಾಗಿ ದಂಡ.–** (ಎ) ಯಾರೇ ವ್ಯಕ್ತಿಯು ತೂಕ ಮಾಡಿ, ಅಳತೆ ಮಾಡಿ ಅಥವಾ ಅಂಕಿಗಳನ್ನು ಹಾಕಿ ಯಾವುದೇ ವಸ್ತುವನ್ನು ಅಥವಾ ಪದಾರ್ಥವನ್ನು ಮಾರಾಟ ಮಾಡುತ್ತಿದ್ದರೆ ಅಥವಾ ಆ ವಸ್ತುವಿನ ಅಥವಾ ಪದಾರ್ಥದ ಯಾವುದೇ ಪರಿಮಾಣದ

ಅಥವಾ ಎಷ್ಟೇ ಸಂಖ್ಯೆಯ ಯಾವ ವಸ್ತುವಿಗಾಗಿ ಅಥವಾ ಯಾವ ಪದಾರ್ಥಕ್ಕಾಗಿ ಕರಾರು ಮಾಡಿಕೊಳ್ಳಲಾಗಿತ್ತೋ ಅಥವಾ ಹಣ ಸಂದಾಯ ಮಾಡಲಾಗಿತ್ತೋ ಆ ಪರಿಮಾಣಕ್ಕಿಂತ ಕಡಿಮೆಯಾದ ಅಥವಾ ಅಷ್ಟು ಸಂಖ್ಯೆಗಿಂತ ಕಡಿಮೆಯಾದ ಆ ವಸ್ತುವನ್ನು ಅಥವಾ ಆ ಪದಾರ್ಥವನ್ನು ಖರೀದಿದಾರರಿಗೆ ತಲುಪಿಸಿದರೆ ಅಥವಾ ತಲುಪಿಸುವಂತೆ ಮಾಡಿದರೆ; ಅಥವಾ

(ಬಿ) ತೂಕ ಮಾಡಿ, ಅಳತೆ ಮಾಡಿ ಅಥವಾ ಅಂಕಿ ಹಾಕಿ ಯಾವುದೇ ಸೇವೆಯನ್ನು ಸಲ್ಲಿಸುತ್ತಿದ್ದರೆ ಯಾವ ಆ ಸೇವೆಗಾಗಿ ಕರಾರು ಮಾಡಿಕೊಳ್ಳಲಾಗಿದೆಯೋ ಅಥವಾ ಹಣ ಸಂದಾಯ ಮಾಡಿಲಾಗಿದೆಯೋ ಅದಕ್ಕಿಂತಲೂ ಕಡಿಮೆ ಸೇವೆಯನ್ನು ಸಲ್ಲಿಸಿದರೆ; ಅಥವಾ

(ಸಿ) ತೂಕದ ಪ್ರಕಾರ ಅಥವಾ ಅಳತೆಯ ಪ್ರಕಾರ ಅಥವಾ ಅಂಕಿ ಪ್ರಕಾರ ಯಾವುದೇ ವಸ್ತುವನ್ನು ಅಥವಾ ಪದಾರ್ಥವನ್ನು ಕೊಂಡುಕೊಳ್ಳುವಾಗ, ಯಾವ ವಸ್ತುವಿಗಾಗಿ ಅಥವಾ ಪದಾರ್ಥಕ್ಕಾಗಿ ಕರಾರು ಮಾಡಿಕೊಳ್ಳಲಾಗಿತ್ತೋ ಅಥವಾ ಹಣ ಸಂದಾಯ ಮಾಡಲಾಗಿತ್ತೋ ಆ ವಸ್ತುವನ್ನು ಅಥವಾ ಪದಾರ್ಥವನ್ನು, ಕರಾರು ಮಾಡಿಕೊಂಡಿದ್ದ ಪರಿಮಾಣಕ್ಕಿಂತ ಅಥವಾ ಹಣ ಸಂದಾಯ ಮಾಡಿದ್ದಕ್ಕಿಂತ ಹೆಚ್ಚಿನ ಪರಿಮಾಣದಲ್ಲಿ ಅಥವಾ ಹೆಚ್ಚು ಸಂಖ್ಯೆಯಲ್ಲಿ ಆ ವಸ್ತುವನ್ನು ಅಥವಾ ಪದಾರ್ಥವನ್ನು ಮೋಸದಿಂದ ಸ್ವೀಕರಿಸಿದರೆ ಅಥವಾ ಹಾಗೆ ಸ್ವೀಕರಿಸುವಂತೆ ಮಾಡಿದರೆ; ಅಥವಾ

(ಡಿ) ತೂಕದ ಪ್ರಕಾರ, ಅಳತೆಯ ಪ್ರಕಾರ ಅಥವಾ ಅಂಕಿ ಪ್ರಕಾರ ಯಾವುದೇ ಸೇವೆಯನ್ನು ಪಡೆದುಕೊಳ್ಳುವಾಗ, ಯಾವ ಸೇವೆಗಾಗಿ ಕರಾರು ಮಾಡಿಕೊಳ್ಳಲಾಗಿತ್ತೋ ಅಥವಾ ಹಣ ಸಂದಾಯ ಮಾಡಲಾಗಿತ್ತೋ ಆ ಸೇವೆಯನ್ನು ಕರಾರು ಮಾಡಿಕೊಂಡದ್ದಕ್ಕಿಂತ ಅಥವಾ ಹಣ ಸಂದಾಯ ಮಾಡಿದ್ದಕ್ಕಿಂತ ಹೆಚ್ಚಿಗೆಯಾಗಿ ಪಡೆದುಕೊಂಡರೆ

– ಅವನು ಹತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಮತ್ತು ಎರಡನೆಯ ಸಲದ ಮತ್ತು ಆ ತರುವಾಯದ ಅಪರಾಧಕ್ಕಾಗಿ, ಒಂದು ವರ್ಷದ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸ ಶಿಕ್ಷೆಯಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದ ಸಹ ದಂಡಿತನಾಗತಕ್ಕದ್ದು.

**31. ದಸ್ತಾವೇಜು ಇತ್ಯಾದಿಗಳನ್ನು ಹಾಜರುಪಡಿಸದಿರುವುದಕ್ಕಾಗಿ ದಂಡನೆ.–** ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಮೂಲಕ ಅಗತ್ಯಪಡಿಸಲಾದ ವಿವರಪಟ್ಟಿಕೆಗಳನ್ನು ಸಲ್ಲಿಸಬೇಕೆಂದು, ಯಾವುದೇ ದಾಖಲೆಯನ್ನು ಅಥವಾ ರಿಜಿಸ್ಟರನ್ನು ಇಡಬೇಕೆಂದು ಯಾರೇ ವ್ಯಕ್ತಿಯನ್ನು ಅಗತ್ಯಪಡಿಸಲಾಗಿದ್ದು ಅಥವಾ ನಿರ್ದೇಶಕನು, ನಿಯಂತ್ರಕನು ಅಥವಾ ಯಾರೇ ಕಾನೂನು ಮಾಪನ ವಿಜ್ಞಾನ ಅಧಿಕಾರಿಯು ಯಾವುದೇ ತೂಕದ ಬಟ್ಟನ್ನು ಅಥವಾ ಅಳತೆಯ ಮಾಪಕವನ್ನು ಅಥವಾ ಯಾವುದೇ ದಸ್ತಾವೇಜನ್ನು, ರಿಜಿಸ್ಟರನ್ನು ಅಥವಾ ಅದಕ್ಕೆ ಸಂಬಂಧಿಸಿದ ಇತರ ದಾಖಲೆಯನ್ನು ತಪಾಸಣೆಗಾಗಿ ತನ್ನ ಮುಂದೆ ಹಾಜರುಪಡಿಸಬೇಕೆಂದು ಅಗತ್ಯಪಡಿಸಿದರೆ, ಆ ವ್ಯಕ್ತಿಯು ಯಾವುದೇ ಸೂಕ್ತ ಕಾರಣವಿಲ್ಲದೆ ಅವುಗಳನ್ನು ಸಲ್ಲಿಸಲು ಅಥವಾ ಹಾಜರುಪಡಿಸಲು ತಪ್ಪಿದರೆ ಅಥವಾ ವಿಫಲನಾದರೆ, ಅವನು ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಮತ್ತು ಎರಡನೇ ಸಲದ ಅಥವಾ ಆ ತರುವಾಯದ ಅಪರಾಧಕ್ಕಾಗಿ ಒಂದು ವರ್ಷದ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸ ಶಿಕ್ಷೆಯಿಂದ ಹಾಗೂ ಜುಲ್ಮಾನೆಯಿಂದ ಸಹ ದಂಡಿತನಾಗತಕ್ಕದ್ದು.

**32. ಮಾದರಿಯನ್ನು ಅನುಮೋದಿಸಿಕೊಳ್ಳಲು ವಿಫಲನಾಗಿದ್ದಕ್ಕಾಗಿ ದಂಡನೆ.–** ಯಾರೇ ವ್ಯಕ್ತಿಯು, ಯಾವುದೇ ತೂಕದ ಬಟ್ಟಿನ ಅಥವಾ ಅಳತೆಯ ಮಾಪಕದ ಮಾದರಿಯನ್ನು ಅನುಮೋದನೆಗಾಗಿ ಸಲ್ಲಿಸಲು ವಿಫಲನಾದರೆ ಅಥವಾ ತಪ್ಪಿದರೆ ಅವನು ಇಪ್ಪತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಮತ್ತು ಎರಡನೆಯ ಸಲದ ಅಥವಾ ಆ ತರುವಾಯದ ಅಪರಾಧಕ್ಕಾಗಿ, ಒಂದು ವರ್ಷದ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸ ಶಿಕ್ಷೆಯಿಂದ ಮತ್ತು ಜುಲ್ಮಾನೆಯಿಂದ ಸಹ ದಂಡಿತನಾಗತಕ್ಕದ್ದು.

**33. ಸತ್ಯಾಪನೆ ಮಾಡಿರದ ತೂಕದ ಬಟ್ಟನ್ನು ಅಥವಾ ಅಳತೆಯ ಮಾಪಕವನ್ನು ಬಳಸಿದ್ದಕ್ಕಾಗಿ ದಂಡನೆ.–** ಯಾರೇ ವ್ಯಕ್ತಿಯು, ಸತ್ಯಾಪನೆ ಮಾಡಿರದ ಯಾವುದೇ ತೂಕದ ಬಟ್ಟನ್ನು ಅಥವಾ ಅಳತೆಯ ಮಾಪಕವನ್ನು ಮಾರಾಟ ಮಾಡಿದರೆ, ವಿತರಣೆ ಮಾಡಿದರೆ, ತಲುಪಿಸಿದರೆ ಅಥವಾ ಅನ್ಯಥಾ ವರ್ಗಾವಣೆ ಮಾಡಿದರೆ ಅಥವಾ ಬಳಸಿದರೆ ಅವನು, ಎರಡು ಸಾವಿರ ರೂಪಾಯಿಗಳಿಗೆ ಕಡಿಮೆಯಲ್ಲದ ಆದರೆ ಹತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಮತ್ತು

ಎರಡನೆಯ ಸಲದ ಅಥವಾ ಆ ತರುವಾಯದ ಅಪರಾಧಕ್ಕಾಗಿ ಒಂದು ವರ್ಷದ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸ ಶಿಕ್ಷೆಯಿಂದ ಮತ್ತು ಅವೆರಡರಿಂದ ಸಹ ದಂಡಿತನಾಗತಕ್ಕದ್ದು.

**34. ಪ್ರಮಾಣವಲ್ಲದ ತೂಕದ ಬಟ್ಟನ್ನು ಅಥವಾ ಅಳತೆಯ ಮಾಪಕವನ್ನು ಬಳಸಿ ಸರಕು ಸಾಮಗ್ರಿ ಇತ್ಯಾದಿಗಳನ್ನು ಮಾರಾಟ ಮಾಡಿದ್ದಕ್ಕಾಗಿ ಅಥವಾ ತಲುಪಿಸಿದ್ದಕ್ಕಾಗಿ ದಂಡನೆ.–** ಯಾರೇ ವ್ಯಕ್ತಿಯು, ತೂಕದ ಬಟ್ಟಿನ ಅಥವಾ ಅಳತೆಯ ಮಾಪಕದ ಪ್ರಮಾಣಗಳಲ್ಲದ ಅಥವಾ ಅಂಕಿಯ ಪ್ರಮಾಣವಲ್ಲದ ಇತರೆ ಯಾವುದೇ ಸಾಧನದ ಮೂಲಕ ಯಾವುದೇ ಸರಕು ಸಾಮಗ್ರಿಗಳನ್ನು, ವಸ್ತುವನ್ನು ಅಥವಾ ಪದಾರ್ಥವನ್ನು ಮಾರಾಟ ಮಾಡಿದರೆ ಅಥವಾ ಮಾರಾಟ ಮಾಡಿಸಿದರೆ, ತಲುಪಿಸಿದರೆ ಅಥವಾ ತಲುಪಿಸುವಂತೆ ಮಾಡಿದರೆ ಅವನು, ಎರಡು ಸಾವಿರ ರೂಪಾಯಿಗಳಿಗೆ ಕಡಿಮೆಯಲ್ಲದ ಆದರೆ ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಮತ್ತು ಎರಡನೆಯ ಸಲದ ಅಥವಾ ಆ ತರುವಾಯದ ಅಪರಾಧಕ್ಕಾಗಿ, ಮೂರು ತಿಂಗಳಿಗೆ ಕಡಿಮೆಯಲ್ಲದ, ಆದರೆ ಒಂದು ವರ್ಷದ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸ ಶಿಕ್ಷೆಯಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದ ಸಹ ದಂಡಿತನಾಗತಕ್ಕದ್ದು.

**35. ಪ್ರಮಾಣವಲ್ಲದ ತೂಕದ ಬಟ್ಟಿನಿಂದ, ಅಳತೆಯ ಮಾಪಕದಿಂದ ಅಥವಾ ಅಂಕಿ ಪ್ರಮಾಣದಿಂದ ಸೇವೆ ಸಲ್ಲಿಸಿದ್ದಕ್ಕಾಗಿ ದಂಡನೆ.–** ತೂಕದ ಬಟ್ಟು ಅಲ್ಲದ ಅಥವಾ ಅಳತೆ ಮಾಪಕವಲ್ಲದ ಅಥವಾ ಸಂಖ್ಯಾಲೇಖ ಇರದ ವಿಧಾನದಿಂದ ಪ್ರಮಾಣ ತೂಕದ ಬಟ್ಟು ಅಲ್ಲದ ಅಥವಾ ಅಳತೆ ಮಾಪಕವಲ್ಲದ ಯಾವುದೇ ತೂಕದ ಬಟ್ಟಿನಿಂದ ಅಥವಾ ಅಳತೆಯ ಮಾನಕದಿಂದ ಅಥವಾ ಅಂಕಿ ಪ್ರಮಾಣದಿಂದ ಯಾವುದೇ ಸೇವೆ ಸಲ್ಲಿಸಿದರೆ ಅಥವಾ ಸಲ್ಲಿಸುವಂತೆ ಮಾಡಿದರೆ ಅವನು, ಎರಡು ಸಾವಿರ ರೂಪಾಯಿಗಳಿಗಿಂತ ಕಡಿಮೆಯಲ್ಲದ ಆದರೆ ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಮತ್ತು ಎರಡನೆಯ ಸಲದ ಅಥವಾ ಆ ತರುವಾಯದ ಅಪರಾಧಕ್ಕಾಗಿ ಮೂರು ತಿಂಗಳಿಗೆ ಕಡಿಮೆಯಲ್ಲದ ಆದರೆ ಒಂದು ವರ್ಷದ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸ ಶಿಕ್ಷೆಯಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದ ಸಹ ದಂಡಿತನಾಗತಕ್ಕದ್ದು.

**36. ಪ್ರಮಾಣವಲ್ಲದ ಪ್ಯಾಕೇಜುಗಳನ್ನು ಮಾರಾಟ ಮಾಡುವುದು ಇತ್ಯಾದಿಗಾಗಿ ದಂಡನೆ.–**(1) ಈ ಅಧಿನಿಯಮದಲ್ಲಿ ಹೇಳಿರುವಂತೆ ಪ್ಯಾಕೇಜಿನ ಮೇಲೆ ಇರಬೇಕಾದ ಘೋಷಣೆಗಳಿಗೆ ಅನುಗುಣವಾಗಿರದ, ಮುಂಚಿತವಾಗಿಯೇ ಪ್ಯಾಕ್ ಮಾಡಿರುವ ಯಾವುದೇ ಸರಕನ್ನು ಯಾರೇ ವ್ಯಕ್ತಿಯು ತಯಾರಿಸಿದರೆ, ಪ್ಯಾಕ್ ಮಾಡಿದರೆ, ಆಮದು ಮಾಡಿಕೊಂಡರೆ, ಮಾರಾಟ ಮಾಡಿದರೆ, ವಿತರಣೆ ಮಾಡಿದರೆ ಅಥವಾ ಅನ್ಯಥಾ ವರ್ಗಾಯಿಸಿದರೆ, ಮಾರಾಟಕ್ಕಾಗಿ ಇಟ್ಟಿದ್ದರೆ, ಪ್ರದರ್ಶಿಸಿದರೆ ಅಥವಾ ಮಾರಾಟಕ್ಕಾಗಿ ಇಟ್ಟುಕೊಂಡಿದ್ದರೆ ಅಥವಾ ಮಾರಾಟ ಮಾಡಿಸಿದರೆ, ವಿತರಣೆ ಮಾಡಿಸಿದರೆ, ತಲುಪಿಸಿದರೆ ಅಥವಾ ಅನ್ಯಥಾ ವರ್ಗಾವಣೆ ಮಾಡಿಸಿದರೆ, ಮಾರಾಟಕ್ಕಾಗಿ ಇಡಿಸಿದರೆ, ಪ್ರದರ್ಶಿಸಿದರೆ, ಅವನು ಇಪ್ಪತ್ತೈದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ, ಎರಡನೆಯ ಸಲದ ಅಪರಾಧಕ್ಕಾಗಿ ಐವತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಮತ್ತು ಆ ತರುವಾಯದ ಅಪರಾಧಕ್ಕಾಗಿ, ಐವತ್ತು ಸಾವಿರ ರೂಪಾಯಿಗಳಿಗಿಂತ ಕಡಿಮೆಯಲ್ಲದ ಆದರೆ ಒಂದು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಒಂದು ವರ್ಷದ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸ ಶಿಕ್ಷೆಯಿಂದ ಅಥವಾ ಅವೆರಡರಿಂದ ಸಹ ದಂಡಿತನಾಗತಕ್ಕದ್ದು.

(2) ಯಾರೇ ವ್ಯಕ್ತಿಯು ನಿಯಮಿಸಬಹುದಾದಂಥ ನಿವ್ವಳ ಪರಿಮಾಣದ ಬದಲಾಗಿ, ತಪ್ಪಿನಿಂದಾಗಿ, ಮುಂಚಿತವಾಗಿಯೇ ಪ್ಯಾಕ್ ಮಾಡಿರುವ ಯಾವುದೇ ಸರಕನ್ನು ತಯಾರಿಸಿದರೆ ಅಥವಾ ಪ್ಯಾಕು ಮಾಡಿದರೆ ಅಥವಾ ಆಮದು ಮಾಡಿಸಿಕೊಂಡರೆ ಅಥವಾ ತಯಾರಿಸುವಂತೆ ಮಾಡಿದರೆ ಅಥವಾ ಪ್ಯಾಕ್ ಮಾಡಿಸಿದರೆ ಅಥವಾ ಆಮದು ಮಾಡಿಸಿಕೊಂಡರೆ ಅವನು ಹತ್ತು ಸಾವಿರ ರೂಪಾಯಿಗಳಿಗೆ ಕಡಿಮೆಯಲ್ಲದ ಆದರೆ ಐವತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಅಥವಾ ಎರಡನೇ ಸಲದ ಮತ್ತು ಆ ತರುವಾಯದ ಅಪರಾಧಕ್ಕಾಗಿ ಒಂದು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಒಂದು ವರ್ಷದ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸ ಶಿಕ್ಷೆಯಿಂದ ಅಥವಾ ಅವೆರಡರಿಂದ ಸಹ ದಂಡಿತನಾಗತಕ್ಕದ್ದು.

**37. ಸರ್ಕಾರದಿಂದ ಅನುಮೋದಿತವಾದ ಪರೀಕ್ಷಾ ಕೇಂದ್ರದಿಂದ ಆದ ಉಲ್ಲಂಘನೆಗಾಗಿ ದಂಡನೆ.–** (1) ಸರ್ಕಾರದಿಂದ ಅನುಮೋದಿತವಾದ ಯಾವುದೇ ಪರೀಕ್ಷಾ ಕೇಂದ್ರವು, ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ

ಯಾವುದೇ ಉಪಬಂಧಗಳನ್ನು ಅಥವಾ ಲೈಸೆನ್ಸಿನ ಷರತ್ತುಗಳನ್ನು ಉಲ್ಲಂಘನೆ ಮಾಡಿದರೆ ಆ ಕೇಂದ್ರವು ಒಂದು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತವಾಗತಕ್ಕದ್ದು.

(2) ಸರ್ಕಾರದಿಂದ ಅನುಮೋದಿತವಾದ ಪರೀಕ್ಷಾ ಕೇಂದ್ರದ ಯಾರೇ ಮಾಲೀಕನು ಅಥವಾ ನೌಕರನು ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಉಪಬಂಧಗಳಿಗೆ ಅನುಸಾರವಾಗಿ ಕರ್ತವ್ಯಗಳನ್ನು ನಿರ್ವಹಿಸುತ್ತಿರುವಾಗ ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಉಪಬಂಧಗಳನ್ನು ಉಲ್ಲಂಘಿಸಿ ಉದ್ದೇಶಪೂರ್ವಕವಾಗಿ ಯಾವುದೇ ತೂಕದ ಬಟ್ಟಿನ ಅಥವಾ ಅಳತೆಯ ಮಾಪಕದ ಸತ್ಯಾಪನೆ ಮಾಡಿದರೆ ಅಥವಾ ಮುದ್ರೆ ಹಾಕಿದರೆ, ಆತನು ಅಂಥ ಪ್ರತಿಯೊಂದು ಉಲ್ಲಂಘನೆಗೆ ಒಂದು ವರ್ಷದ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸ ಶಿಕ್ಷೆಯಿಂದ ಅಥವಾ ಹತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**38. ತೂಕದ ಬಟ್ಟಿನ ಅಥವಾ ಅಳತೆಯ ಮಾಪಕದ ಆಮದುದಾರನು ನೋಂದಣಿ ಮಾಡಿಸದೇ ಇರುವುದಕ್ಕಾಗಿ ದಂಡನೆ.–** ಈ ಅಧಿನಿಯಮದ ಮೇರೆಗೆ ನೋಂದಣಿ ಮಾಡಿಕೊಳ್ಳದೆ ಯಾವುದೇ ತೂಕದ ಬಟ್ಟನ್ನು ಅಥವಾ ಅಳತೆಯ ಮಾಪಕವನ್ನು ಆಮದು ಮಾಡಿಕೊಂಡ ಯಾರೇ ವ್ಯಕ್ತಿಯು, ಇಪ್ಪತ್ತೈದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಮತ್ತು ಎರಡನೆಯ ಸಲದ ಅಥವಾ ಆ ತರುವಾಯದ ಅಪರಾಧಕ್ಕಾಗಿ ಆರು ತಿಂಗಳ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸ ಶಿಕ್ಷೆಯಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದ ಸಹ ದಂಡಿತನಾಗತಕ್ಕದ್ದು.

**39. ಪ್ರಮಾಣವಲ್ಲದ ತೂಕದ ಬಟ್ಟನ್ನು ಅಥವಾ ಅಳತೆಯ ಮಾಪಕವನ್ನು ಆಮದು ಮಾಡಿಕೊಂಡಿದ್ದಕ್ಕಾಗಿ ದಂಡನೆ.–** ಪ್ರಮಾಣವಲ್ಲದ ಯಾವುದೇ ತೂಕದ ಬಟ್ಟನ್ನು ಅಥವಾ ಅಳತೆಯ ಮಾಪಕವನ್ನು ಆಮದು ಮಾಡಿಕೊಂಡ ಯಾರೇ ವ್ಯಕ್ತಿಯು, ಐವತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಮತ್ತು ಎರಡನೆಯ ಸಲದ ಅಥವಾ ಆ ತರುವಾಯದ ಅಪರಾಧಕ್ಕಾಗಿ, ಒಂದು ವರ್ಷದ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸ ಶಿಕ್ಷೆಯಿಂದ ಮತ್ತು ಜುಲ್ಮಾನೆಯಿಂದ ಸಹ ದಂಡಿತನಾಗತಕ್ಕದ್ದು.

**40. ನಿರ್ದೇಶಕನಿಗೆ, ನಿಯಂತ್ರಕನಿಗೆ ಅಥವಾ ಕಾನೂನು ಮಾಪನ ವಿಜ್ಞಾನ ಅಧಿಕಾರಿಗೆ ಅಡ್ಡಿ ಅಡಚಣೆ ಉಂಟುಮಾಡಿದ್ದಕ್ಕಾಗಿ ದಂಡನೆ.–** ನಿರ್ದೇಶಕನಿಗೆ, ನಿಯಂತ್ರಕನಿಗೆ ಅಥವಾ ಕಾನೂನು ಮಾಪನ ವಿಜ್ಞಾನ ಅಧಿಕಾರಿಗೆ, ಆತನ ಅಧಿಕಾರಗಳನ್ನು ಚಲಾಯಿಸದಂತೆ ಮಾಡುವ ಉದ್ದೇಶದಿಂದ ಅಥವಾ ಆತನ ಪ್ರಕಾರ್ಯಗಳನ್ನು ನಿರ್ವಹಿಸದಂತೆ ಮಾಡುವ ಉದ್ದೇಶದಿಂದ ಅಥವಾ ಆ ನಿರ್ದೇಶಕನು ಅಥವಾ ನಿಯಂತ್ರಕನು ಅಥವಾ ಯಾರೇ ಕಾನೂನು ಮಾಪನ ವಿಜ್ಞಾನ ಅಧಿಕಾರಿಯು ತನ್ನ ಅಧಿಕಾರಗಳನ್ನು ಕಾನೂನುಬದ್ಧವಾಗಿ ಚಲಾಯಿಸುವಾಗ ಅಥವಾ ಅಂಥ ತನ್ನ ಪ್ರಕಾರ್ಯಗಳನ್ನು ಹಾಗೆ ನಿರ್ವಹಿಸುವಾಗ ಆ ನಿರ್ದೇಶಕನು ಅಥವಾ ನಿಯಂತ್ರಕನು ಅಥವಾ ಯಾವುದೇ ಕಾನೂನು ಮಾಪನ ವಿಜ್ಞಾನ ಅಧಿಕಾರಿಯು, ಯಾವುದೇ ಕಾರ್ಯವನ್ನು ಮಾಡಿದ ಅಥವಾ ಮಾಡಲು ಪ್ರಯತ್ನಿಸಿದ ಪರಿಣಾಮವಾಗಿ, ಆತನ ಅಧಿಕಾರಗಳನ್ನು ಚಲಾಯಿಸುವುದಕ್ಕೆ ಅಥವಾ ನಿರ್ವಹಿಸುವುದಕ್ಕೆ ಅಡ್ಡಿ ಅಡಚಣೆ ಉಂಟುಮಾಡುವ ಅಥವಾ ತಡೆಯುವ ಯಾರೇ ವ್ಯಕ್ತಿಯು ಅಥವಾ ನಿರ್ದೇಶಕನು ಅಥವಾ ನಿಯಂತ್ರಕನು ಕಾನೂನು ಮಾಪನ ವಿಜ್ಞಾನ ಅಧಿಕಾರಿಯು ಯಾವುದೇ ತೂಕದ ಬಟ್ಟನ್ನು ಅಥವಾ ಅಳತೆಯ ಮಾಪಕವನ್ನು ಅಥವಾ ಅದಕ್ಕೆ ಸಂಬಂಧಪಟ್ಟ ಯಾವುದೇ ದಸ್ತಾವೇಜನ್ನು ಅಥವಾ ದಾಖಲೆಯನ್ನು ಅಥವಾ ಯಾವುದೇ ಪ್ಯಾಕು ಮಾಡಿದ ಸರಕಿನಲ್ಲಿರುವ ನಿವ್ವಳ ವಸ್ತುಗಳನ್ನು ಪರಿಶೀಲಿಸಲು ಮತ್ತು ಸತ್ಯಾಪನೆ ಮಾಡಲು ಅಥವಾ ಯಾವುದೇ ಇತರ ಉದ್ದೇಶಕ್ಕಾಗಿ ಯಾವುದೇ ಆವರಣದೊಳಗೆ ಪ್ರವೇಶಿಸುವುದಕ್ಕೆ ಅಡ್ಡಿ ಅಡಚಣೆ ಉಂಟುಮಾಡಿದರೆ ಅವನು ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಕಾರಾವಾಸದ ಶಿಕ್ಷೆಯಿಂದ ಮತ್ತು ಎರಡನೇ ಸಲದ ಅಥವಾ ಆ ತರುವಾಯದ ಅಪರಾಧಕ್ಕೆ ಐದು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದ ಶಿಕ್ಷೆಯಿಂದ ದಂಡಿತನಾಗತಕ್ಕದ್ದು.

**41. ಸುಳ್ಳು ಮಾಹಿತಿ ಅಥವಾ ಸುಳ್ಳು ವಿವರ ಪಟ್ಟಿಕೆಗಳನ್ನು ನೀಡಿದ್ದಕ್ಕಾಗಿ ದಂಡನೆ.–** (1) ಯಾರೇ ವ್ಯಕ್ತಿಯು, ನಿರ್ದೇಶಕ, ನಿಯಂತ್ರಕ ಅಥವಾ ಕಾನೂನು ಮಾಪನ ವಿಜ್ಞಾನ ಅಧಿಕಾರಿಯು ತನ್ನ ಕರ್ತವ್ಯ ನಿರ್ವಹಿಸುವಾಗ ಅಗತ್ಯಪಡಿಸಿದ ಅಥವಾ ಕೇಳಲಾದ ಮಾಹಿತಿಯನ್ನು ಅಂಥ ವ್ಯಕ್ತಿಗೆ ಆ ಮಾಹಿತಿಯು ಸುಳ್ಳೆಂದು ಗೊತ್ತಿರುವುದೋ ಅಥವಾ ಸುಳ್ಳೆಂದು ನಂಬಲು ಕಾರಣ ಇದೆಯೋ ಆ ಯಾವುದೇ ಮಾಹಿತಿಯನ್ನು ಕೊಟ್ಟರೆ ಅವನು, ಐದು ಸಾವಿರ ರೂಪಾಯಿಗಳವರೆಗೆ

ವಿಸ್ತರಿಸಬಹುದಾದ ಕಾರಾವಾಸ ಶಿಕ್ಷೆಯಿಂದ ಮತ್ತು ಎರಡನೇ ಸಲದ ಅಥವಾ ಆ ತರುವಾಯದ ಅಪರಾಧಕ್ಕಾಗಿ ಆರು ತಿಂಗಳ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸ ಶಿಕ್ಷೆಯಿಂದ ಮತ್ತು ಜುಲ್ಮಾನೆಯಿಂದ ಸಹ ದಂಡಿತನಾಗತ್ತಕ್ಕದ್ದು.

(2) ಯಾವ ವ್ಯಕ್ತಿಯನ್ನು, ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ವಿವರ ಪಟ್ಟಿಕೆಯನ್ನು ಅಥವಾ ದಾಖಲೆಯನ್ನು ಅಥವಾ ರಿಜಿಸ್ಟರನ್ನು ಇಡಲು ಅಗತ್ಯಪಡಿಸಲಾಗಿದ್ದು, ಆ ಯಾರೇ ವ್ಯಕ್ತಿಯು ಮುಖ್ಯ ವಿವರಗಳಲ್ಲಿ ಸುಳ್ಳಾಗಿರುವಂಥ ಯಾವುದೇ ವಿವರಪಟ್ಟಿಕೆಯನ್ನು ಸಲ್ಲಿಸಿದ್ದರೆ, ಅಥವಾ ಅಂಥ ಯಾವುದೇ ದಾಖಲೆಯನ್ನು ಅಥವಾ ರಿಜಿಸ್ಟರನ್ನು ಇಟ್ಟಿದ್ದರೆ ಅವನು, ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಮತ್ತು ಎರಡನೇ ಸಲದ ಅಥವಾ ಆ ತರುವಾಯದ ಅಪರಾಧಕ್ಕಾಗಿ ಒಂದು ವರ್ಷದ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸ ಶಿಕ್ಷೆಯಿಂದ ಹಾಗೂ ಜುಲ್ಮಾನೆಯಿಂದ ಸಹ ದಂಡಿತನಾಗತಕ್ಕದ್ದು.

**42. ಕಿರುಕುಳಕಾರಿ ಶೋಧನೆ.–** ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮದ ಮೇರೆಗೆ ಅಧಿಕಾರಗಳನ್ನು ಚಲಾಯಿಸುವ ನಿರ್ದೇಶಕನು, ನಿಯಂತ್ರಕನು ಅಥವಾ ಕಾನೂನು ಮಾಪನ ವಿಜ್ಞಾನ ಅಧಿಕಾರಿಯು–

(ಎ) ಯಾವುದೇ ಮನೆಯನ್ನು, ವಾಹನವನ್ನು ಅಥವಾ ಸ್ಥಳವನ್ನು ಯಾವ ಸಮಂಜಸ ಕಾರಣಗಳು ಇಲ್ಲವೆಂದು ಗೊತ್ತಿದ್ದರೂ ಶೋಧಿಸಿದರೆ ಅಥವಾ ಶೋಧಿಸುವಂತೆ ಮಾಡಿದರೆ; ಅಥವಾ

(ಬಿ) ಯಾವ ಸಮಂಜಸದ ಕಾರಣಗಳು ಇಲ್ಲವೆಂದು ಗೊತ್ತಿದ್ದರೂ ಯಾರೇ ವ್ಯಕ್ತಿಯನ್ನು ಶೋಧಿಸಿದರೆ; ಅಥವಾ

(ಸಿ) ಯಾವುದೇ ತೂಕದ ಬಟ್ಟನ್ನು, ಅಳತೆಯ ಮಾಪಕವನ್ನು ಅಥವಾ ಇತರ ಚರ ಸ್ವತ್ತನ್ನು ಯಾವ ಸಮಂಜಸದ ಕಾರಣಗಳು ಇಲ್ಲವೆಂದು ಗೊತ್ತಿದ್ದರೂ ವಶಪಡಿಸಿಕೊಂಡರೆ

– ಅಂಥ ಪ್ರತಿಯೊಂದು ಅಪರಾಧಕ್ಕಾಗಿ ಆ ನಿರ್ದೇಶಕನು, ನಿಯಂತ್ರಕನು ಅಥವಾ ಕಾನೂನು ಮಾಪನ ವಿಜ್ಞಾನ ಅಧಿಕಾರಿಯು ಒಂದು ವರ್ಷದ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸ ಶಿಕ್ಷೆಯಿಂದ ಅಥವಾ ಹತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**43. ಅಧಿನಿಯಮವನ್ನು ಮತ್ತು ನಿಯಮಗಳನ್ನು ಉಲ್ಲಂಘಿಸಿ ಸತ್ಯಾಪನೆ ಮಾಡಿದ್ದಕ್ಕಾಗಿ ದಂಡನೆ.–** ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮದ ಮೇರೆಗೆ ಅಧಿಕಾರಗಳನ್ನು ಚಲಾಯಿಸುವ ನಿಯಂತ್ರಕನು ಅಥವಾ ಯಾರೇ ಕಾನೂನು ಮಾಪನ ವಿಜ್ಞಾನ ಅಧಿಕಾರಿಯು, ಈ ಅಧಿನಿಯಮವನ್ನು ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮಗಳನ್ನು ಉಲ್ಲಂಘಿಸಿ ಯಾವುದೇ ತೂಕದ ಬಟ್ಟನ್ನು ಅಥವಾ ಅಳತೆಯ ಮಾಪಕವನ್ನು ಉದ್ದೇಶಪೂರ್ವಕವಾಗಿ ಸತ್ಯಾಪನೆ ಮಾಡಿದರೆ ಅಥವಾ ಮುದ್ರೆ ಹಾಕಿದರೆ ಅಂಥ ಪ್ರತಿಯೊಂದು ಅಪರಾಧಕ್ಕಾಗಿ ಒಂದು ವರ್ಷದ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸ ಶಿಕ್ಷೆಯಿಂದ ಅಥವಾ ಹತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**44. ಖೋಟಾ ಮೊಹರು ಇತ್ಯಾದಿಗಳ ತಯಾರಿಕೆಗಾಗಿ ದಂಡನೆ.–** (1) ಯಾರೇ ವ್ಯಕ್ತಿಯು–

(i) ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಅಥವಾ ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೇರೆಗೆ ನಿರ್ದಿಷ್ಟಪಡಿಸಿದ ಯಾವುದೇ ಮೊಹರಿನ ಬದಲಿಗೆ ಯಾವುದೇ ಖೋಟಾ ಮೊಹರನ್ನು ತಯಾರಿಸಿದರೆ; ಅಥವಾ

(ii) ತಯಾರಿಸಿದ ಯಾವುದೇ ಖೋಟಾ ಮೊಹರನ್ನು ಮಾರಾಟ ಮಾಡಿದರೆ ಅಥವಾ ಅನ್ಯಥಾ ವಿಲೆ ಮಾಡಿದರೆ; ಅಥವಾ

(iii) ತಯಾರಿಸಿದ ಯಾವುದೇ ಖೋಟಾ ಮೊಹರನ್ನು ತನ್ನ ಬಳಿ ಇಟ್ಟುಕೊಂಡಿದ್ದರೆ; ಅಥವಾ

(iv) ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಅಥವಾ ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೇರೆಗೆ ನಿರ್ದಿಷ್ಟಪಡಿಸಿದ ಯಾವುದೇ ಮುದ್ರೆಯ ಬದಲಿಗೆ ಖೋಟಾ ಮುದ್ರೆಯನ್ನು

ತಯಾರಿಸಿದರೆ, ಹಾಕಿರುವ ಯಾವುದೇ ಮುದ್ರೆಯನ್ನು ತೆಗೆದು ಹಾಕಿದರೆ ಅಥವಾ ಹಾಕಿರುವ ಯಾವುದೇ ಮುದ್ರೆಯನ್ನು ವಿರೂಪಗೊಳಿಸಿದರೆ; ಅಥವಾ

(v) ಹಾಗೆ ತೆಗೆದುಹಾಕಿದ ಮುದ್ರೆಯನ್ನು ಯಾವುದೇ ಇತರ ತೂಕದ ಬಟ್ಟಿಗೆ ಅಥವಾ ಅಳತೆಯ ಮಾಪಕಕ್ಕೆ ಒತ್ತಿದರೆ ಅಥವಾ ಆ ಮುದ್ರೆಯನ್ನು ಯಾವುದೇ ಇತರ ತೂಕದ ಬಟ್ಟಿಗೆ ಅಥವಾ ಅಳತೆಯ ಮಾಪಕಕ್ಕೆ ಸೇರಿಸಿದರೆ ಆಗ ಆರು ತಿಂಗಳುಗಳಿಗಿಂತ ಕಡಿಮೆಯಲ್ಲದ ಆದರೆ ಒಂದು ವರ್ಷದ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸ ಶಿಕ್ಷೆಯಿಂದ ಮತ್ತು ಎರಡನೆಯ ಸಲದ ಅಥವಾ ಆ ತರುವಾಯದ ಅಪರಾಧಕ್ಕಾಗಿ, ಆರು ತಿಂಗಳಿಗೆ ಕಡಿಮೆಯಲ್ಲದ, ಆದರೆ ಐದು ವರ್ಷಗಳವರೆಗೆ ವಿಸ್ತರಿಸಬಹುದಾದ ಕಾರಾವಾಸ ಶಿಕ್ಷೆಯಿಂದ ದಂಡಿತನಾಗತಕ್ಕದ್ದು.

**ವಿವರಣೆ.–** ಈ ಉಪಪ್ರಕರಣದಲ್ಲಿ **"ಖೋಟಾ ತಯಾರಿಕೆ"** ಪದಕ್ಕೆ ಭಾರತ ದಂಡ ಸಂಹಿತೆ (1860 ರ 45)ಯ 28ನೇ ಪ್ರಕರಣದಲ್ಲಿ ಕೊಟ್ಟಿರುವ ಅರ್ಥವೇ ಇರತಕ್ಕದ್ದು.

(2) ಯಾರೇ ವ್ಯಕ್ತಿಯು, ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿರ್ದಿಷ್ಟಪಡಿಸಿದ ಯಾವುದೇ ಮೊಹರನ್ನು ಕಾನೂನುಬಾಹಿರ ವಿಧಾನಗಳಿಂದ ಪಡೆದರೆ ಅಥವಾ ಬಳಸಿದರೆ ಮತ್ತು ಅಂಥ ಯಾವುದೇ ಮೊಹರನ್ನು, ಅಂಥ ಮೊಹರಿನಿಂದ ಮಾಡಿದ ಯಾವುದೇ ಮುದ್ರೆಯನ್ನು ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಮೂಲಕ ಅಧಿಕೃತವಾದುದ್ದೆಂದು ತೋರಿಸುವ ಉದ್ದೇಶದಿಂದ ಯಾವುದೇ ತೂಕದ ಬಟ್ಟಿನ ಅಥವಾ ಅಳತೆಯ ಮಾಪಕದ ಮೇಲೆ ಯಾವುದೇ ಮುದ್ರೆಯನ್ನು ಹಾಕುವುದಕ್ಕಾಗಿ ಯಾವುದೇ ಅಂಥ ಮೊಹರನ್ನು ಬಳಸಿದರೆ ಅಥವಾ ಬಳಸುವಂತೆ ಮಾಡಿದರೆ ಅವನು, ಆರು ತಿಂಗಳಿಗೆ ಕಡಿಮೆಯಲ್ಲದ ಆದರೆ ಒಂದು ವರ್ಷದ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸ ಶಿಕ್ಷೆಯಿಂದ ಮತ್ತು ಎರಡನೆಯ ಸಲದ ಅಥವಾ ಆ ತರುವಾಯದ ಅಪರಾಧಕ್ಕಾಗಿ ಆರು ತಿಂಗಳಿಗೆ ಕಡಿಮೆಯಲ್ಲದ ಆದರೆ ಐದು ವರ್ಷಗಳವರೆಗೆ ವಿಸ್ತರಿಸಬಹುದಾದ ಕಾರಾವಾಸ ಶಿಕ್ಷೆಯಿಂದ ದಂಡಿತನಾಗತಕ್ಕದ್ದು.

(3) ಯಾರೇ ವ್ಯಕ್ತಿಯು, ಈ ಅಧಿನಿಯಮದ ಮೂಲಕ ಅಥವಾ ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ಅಥವಾ ಅಂಥ ನಿಯಮಗಳ ಮೇರೆಗೆ ನಿರ್ದಿಷ್ಟಪಡಿಸಿದ ಮೊಹರನ್ನು ಕಾನೂನುಸಮ್ಮತವಾಗಿ ಸ್ವಾಧೀನದಲ್ಲಿಟ್ಟುಕೊಂಡಿದ್ದು, ಅಂಥ ಮೊಹರನ್ನು ಯಾವುದೇ ಕಾನೂನುಸಮ್ಮತ ಅಧಿಕಾರವಿಲ್ಲದೆ ಬಳಸಿದರೆ ಅಥವಾ ಬಳಸುವಂತೆ ಮಾಡಿದರೆ ಅವನು, ಆರು ತಿಂಗಳಿಗೆ ಕಡಿಮೆಯಲ್ಲದ ಆದರೆ ಒಂದು ವರ್ಷದ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸ ಶಿಕ್ಷೆಯಿಂದ ಮತ್ತು ಎರಡನೆಯ ಸಲದ ಅಥವಾ ಆ ತರುವಾಯದ ಅಪರಾಧಕ್ಕಾಗಿ, ಆರು ತಿಂಗಳಿಗೆ ಕಡಿಮೆಯಲ್ಲದ ಆದರೆ ಐದು ವರ್ಷಗಳ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸ ಶಿಕ್ಷೆಯಿಂದ ದಂಡಿತನಾಗತಕ್ಕದ್ದು.

(4) ಯಾರೇ ವ್ಯಕ್ತಿಯು, ಯಾವ ತೂಕದ ಬಟ್ಟಿನ ಅಥವಾ ಅಳತೆ ಮಾಪಕದ ಮೇಲೆ ಖೋಟಾ ತಯಾರಿಕೆ ಮುದ್ರೆ ಇದೆ ಎಂಬುದು ಆತನಿಗೆ ಗೊತ್ತಿದೆಯೋ ಅಥವಾ ಹಾಗೆ ನಂಬಲು ಕಾರಣ ಇದೆಯೋ ಆ ಯಾವುದೇ ತೂಕದ ಬಟ್ಟನ್ನು ಅಥವಾ ಅಳತೆಯ ಮಾಪಕವನ್ನು ಮಾರಾಟ ಮಾಡಿದರೆ ಅಥವಾ ಮಾರಾಟಕ್ಕಾಗಿ ಇಟ್ಟರೆ ಅಥವಾ ಪ್ರದರ್ಶಿಸಿದರೆ ಅಥವಾ ಅನ್ಯಥಾ ವಿಲೆ ಮಾಡಿದರೆ ಅವನು ಆರು ತಿಂಗಳುಗಳಿಗಿಂತ ಕಡಿಮೆಯಲ್ಲದ ಆದರೆ ಒಂದು ವರ್ಷದ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸ ಶಿಕ್ಷೆಯಿಂದ ಮತ್ತು ಎರಡನೆ ಸಲದ ಅಥವಾ ಆ ತರುವಾಯದ ಅಪರಾಧಕ್ಕಾಗಿ, ಆರು ತಿಂಗಳುಗಳಿಗಿಂತ ಕಡಿಮೆಯಲ್ಲದ ಆದರೆ ಐದು ವರ್ಷಗಳ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸ ಶಿಕ್ಷೆಯಿಂದ ದಂಡಿತನಾಗತಕ್ಕದ್ದು.

**45. ಲೈಸೆನ್ಸು ಇಲ್ಲದೆ ತೂಕದ ಬಟ್ಟನ್ನು ಮತ್ತು ಅಳತೆ ಮಾಪಕವನ್ನು ತಯಾರಿಸಿದ್ದಕ್ಕಾಗಿ ದಂಡನೆ.–** ಈ ಅಧಿನಿಯಮದ ಮೇರೆಗೆ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಮೇರೆಗೆ ಲೈಸೆನ್ಸನ್ನು ಪಡೆದುಕೊಳ್ಳಬೇಕಾಗಿರುವ ಯಾರೇ ವ್ಯಕ್ತಿಯು, ಸಿಂಧುವಾದ ಲೈಸೆನ್ಸು ಇಲ್ಲದೆಯೇ ಯಾವುದೇ ತೂಕದ ಬಟ್ಟನ್ನು ಅಥವಾ ಅಳತೆ ಮಾಪಕವನ್ನು ತಯಾರಿಸಿದರೆ ಅವನು ಇಪ್ಪತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಮತ್ತು ಎರಡನೆಯ ಸಲದ ಅಥವಾ ಆ

ತರುವಾಯದ ಅಪರಾಧಕ್ಕಾಗಿ, ಒಂದು ವರ್ಷದ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸ ಶಿಕ್ಷೆಯಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**46. ಲೈಸೆನ್ಸಿಲ್ಲದೆ ತೂಕದ ಬಟ್ಟಿನ ಮತ್ತು ಅಳತೆ ಮಾಪಕದ ದುರಸ್ತಿ, ಮಾರಾಟ ಇತ್ಯಾದಿಗಳಿಗೆ ದಂಡನೆ.–** ಈ ಅಧಿನಿಯಮದ ಮೇರೆಗೆ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಮೇರೆಗೆ ಲೈಸೆನ್ಸನ್ನು ಪಡೆಯಬೇಕಾದ ಯಾರೇ ವ್ಯಕ್ತಿಯು, ಸಿಂಧುವಾದ ಲೈಸೆನ್ಸ್ ಇಲ್ಲದೆಯೆ ಯಾವುದೇ ತೂಕದ ಬಟ್ಟನ್ನು ಅಥವಾ ಅಳತೆಯ ಮಾಪಕವನ್ನು ದುರಸ್ತಿ ಮಾಡಿದರೆ ಅಥವಾ ಮಾರಾಟಕ್ಕೆ ಇಟ್ಟರೆ ಅಥವಾ ಪ್ರದರ್ಶಿಸಿದರೆ ಮಾರಾಟಕ್ಕಾಗಿ ಇಟ್ಟುಕೊಂಡಿದ್ದರೆ ಅವನು, ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಮತ್ತು ಎರಡನೆಯ ಸಲದ ಅಥವಾ ಆ ತರುವಾಯದ ಅಪರಾಧಕ್ಕಾಗಿ ಒಂದು ವರ್ಷದ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸ ಶಿಕ್ಷೆಯಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**47. ಲೈಸೆನ್ಸನ್ನು ತಿದ್ದಿದ್ದಕ್ಕೆ ದಂಡನೆ.–** ಯಾರೇ ವ್ಯಕ್ತಿಯು, ಈ ಅಧಿನಿಯಮದ ಮೇರೆಗೆ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಮೇರೆಗೆ ನೀಡಿರುವ ಅಥವಾ ನವೀಕರಿಸಿರುವ ಯಾವುದೇ ಲೈಸೆನ್ಸನ್ನು, ನಿಯಂತ್ರಕನು ಆ ಲೈಸೆನ್ಸಿನಲ್ಲಿ ಬದಲಾವಣೆ ಮಾಡುವುದಕ್ಕೆ ಅಥವಾ ಲೈಸೆನ್ಸನ್ನು ಅನ್ಯಥಾ ತಿದ್ದುವುದಕ್ಕೆ ಕೊಟ್ಟಿರುವ ಯಾವುದೇ ಅಧಿಕಾರ ಪತ್ರದ ಅನುಸಾರವಾಗಿ ಅಲ್ಲದೆ, ಲೈಸೆನ್ಸನ್ನು ಬದಲಾವಣೆ ಮಾಡಿದರೆ ಅಥವಾ ಅನ್ಯಥಾ ತಿದ್ದಿದರೆ ಅವನು, ಇಪ್ಪತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಒಂದು ವರ್ಷದ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸ ಶಿಕ್ಷೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**48. ಅಪರಾಧಗಳನ್ನು ರಾಜಿ ಮಾಡಿಕೊಳ್ಳುವುದು.–** (1) 25ನೇ ಪ್ರಕರಣದ, 27ನೇ ಪ್ರಕರಣದಿಂದ 39ನೇ ಪ್ರಕರಣದವರೆಗಿನ ಪ್ರಕರಣಗಳ, 45 ರಿಂದ 47ನೇ ಪ್ರಕರಣಗಳವರೆಗಿನ ಪ್ರಕರಣಗಳ ಮೇರೆಗೆ ಅಥವಾ 52ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ರಚಿಸಿದ ಯಾವುದೇ ನಿಯಮದ ಮೇರೆಗೆ ದಂಡನೀಯವಾದ ಯಾವುದೇ ಅಪರಾಧವನ್ನು, ಪ್ರಾಸಿಕ್ಯೂಷನ್ನನ್ನು ಹೂಡುವುದಕ್ಕೂ ಮೊದಲೇ ಅಥವಾ ಆ ತರುವಾಯ, ನಿಯಮಿಸಬಹುದಾದಂಥ ಮೊತ್ತವನ್ನು ಸರ್ಕಾರಕ್ಕೆ ಜಮೆ ಮಾಡುವ ಸಲುವಾಗಿ ಸಂದಾಯ ಮಾಡಿದ ಮೇಲೆ ರಾಜಿ ಮಾಡಿಕೊಳ್ಳಬಹುದು.

(2) ನಿರ್ದೇಶಕನು ಅಥವಾ ಅಪರಾಧಗಳನ್ನು ರಾಜಿ ಮಾಡಿಕೊಳ್ಳಲು ನಿರ್ದೇಶಕನಿಂದ ವಿಶೇಷವಾಗಿ ಅಧಿಕಾರವನ್ನು ಪಡೆದುಕೊಂಡಿರಬಹುದಾದ ಕಾನೂನು ಮಾಪನ ವಿಜ್ಞಾನ ಅಧಿಕಾರಿಯು, 25ನೇ ಪ್ರಕರಣದ, 27 ರಿಂದ 39ನೇ ಪ್ರಕರಣಗಳವರೆಗಿನ ಪ್ರಕರಣಗಳ ಮೇರೆಗೆ ಅಥವಾ 52ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ರಚಿಸಿದ ಯಾವುದೇ ನಿಯಮದ ಮೇರೆಗೆ ದಂಡನೀಯವಾದ ಅಪರಾಧಗಳನ್ನು ರಾಜಿ ಮಾಡಿಕೊಳ್ಳಬಹುದು.

(3) ನಿಯಂತ್ರಕನು ಅಥವಾ ನಿಯಂತ್ರಕನಿಂದ ವಿಶೇಷವಾಗಿ ಅಧಿಕಾರ ಪಡೆದುಕೊಂಡಿರಬಹುದಾದ ಕಾನೂನು ಮಾಪನ ವಿಜ್ಞಾನ ಅಧಿಕಾರಿಯು 25ನೇ ಪ್ರಕರಣದ, 27 ರಿಂದ 31ನೇ ಪ್ರಕರಣಗಳವರೆಗಿನ ಪ್ರಕರಣಗಳ, 33 ರಿಂದ 37ನೇ ಪ್ರಕರಣಗಳವರೆಗಿನ ಪ್ರಕರಣಗಳ, 45 ರಿಂದ 47ನೇ ಪ್ರಕರಣಗಳವರೆಗಿನ ಪ್ರಕರಣಗಳ ಮೇರೆಗೆ ಮತ್ತು 52ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ರಚಿಸಿದ ಯಾವುದೇ ನಿಯಮದ ಮೇರೆಗೆ ದಂಡನೀಯವಾದ ಅಪರಾಧಗಳನ್ನು ರಾಜಿ ಮಾಡಿಕೊಳ್ಳಬಹುದು:

ಪರಂತು, ಅಂಥ ಮೊತ್ತವು, ಹಾಗೆ ರಾಜಿ ಮಾಡಿಕೊಂಡಿದ್ದ ಅಪರಾಧಕ್ಕಾಗಿ ಈ ಅಧಿನಿಯಮದ ಮೇರೆಗೆ ಯಾವ ಗರಿಷ್ಠ ಮೊತ್ತದ ಜುಲ್ಮಾನೆಯನ್ನು ವಿಧಿಸಬಹುದಾಗಿತ್ತೋ ಆ ಗರಿಷ್ಠ ಮೊತ್ತವು, ಯಾವುದೇ ಸಂದರ್ಭದಲ್ಲೂ ಮೀರತಕ್ಕದ್ದಲ್ಲ.

(4) ಯಾವ ವ್ಯಕ್ತಿಯು ಮೊದಲನೆಯ ಸಲ ಅಪರಾಧವನ್ನು ಎಸಗಿದ್ದನೋ, ಆ ಮೊದಲನೆಯ ಸಲ ಮಾಡಿದ ಅಪರಾಧದ ಬಗ್ಗೆ ಯಾವ ದಿನಾಂಕದಂದು ರಾಜಿ ಮಾಡಿಕೊಂಡಿದ್ದನೋ ಆ ದಿನಾಂಕದಿಂದ, ಮೂರು ವರ್ಷಗಳ ಅವಧಿಯೊಳಗೆ ಅದೇ ಅಪರಾಧವನ್ನು ಅಥವಾ ಅದೇ ರೀತಿಯ ಅಪರಾಧವನ್ನು ಎಸಗಿದರೆ (1)ನೇ ಉಪಪ್ರಕರಣದಲ್ಲಿರುವುದು ಯಾವುದೂ ಆ ವ್ಯಕ್ತಿಗೆ ಅನ್ವಯವಾಗತಕ್ಕದ್ದಲ್ಲ.

**ವಿವರಣೆ.–** ಯಾವ ಅಪರಾಧಕ್ಕಾಗಿ ಈ ಹಿಂದೆ ಯಾವ ದಿನಾಂಕದಂದು ರಾಜಿ ಮಾಡಿಕೊಳ್ಳಲಾಗಿತ್ತೋ ಆ ದಿನಾಂಕದಿಂದ ಮೂರು ವರ್ಷಗಳ ಅವಧಿಯು ಮುಗಿದ ತರುವಾಯ ಎರಡನೆಯ ಸಲ ಮಾಡಿದ ಅಥವಾ ಆ

ತರುವಾಯವೂ ಮಾಡಿದ ಯಾವುದೇ ಅಪರಾಧವನ್ನು ಈ ಉಪಪ್ರಕರಣದ ಉದ್ದೇಶಗಳಿಗಾಗಿ, ಮೊದಲನೆಯ ಸಲ ಮಾಡಿದ ಅಪರಾಧವೆಂದೇ ಭಾವಿಸತಕ್ಕದ್ದು.

(5) ಉಪಪ್ರಕರಣ (1)ರ ಮೇರೆಗೆ ಅಪರಾಧವನ್ನು ರಾಜಿ ಮಾಡಿಕೊಂಡಿದ್ದರೆ ಹಾಗೆ ರಾಜಿ ಮಾಡಿಕೊಂಡ ಅಪರಾಧಕ್ಕೆ ಸಂಬಂಧಪಟ್ಟಂತೆ ಅಪರಾಧಿಯ ವಿರುದ್ಧ ಸಂದರ್ಭಾನುಸಾರ ಯಾವುದೇ ವ್ಯವಹರಣೆಯನ್ನು ಅಥವಾ ಇನ್ನೂ ಹೆಚ್ಚಿನ ವ್ಯವಹರಣೆಗಳನ್ನು ಕೈಗೊಳ್ಳತಕ್ಕದ್ದಲ್ಲ.

(6) ಈ ಅಧಿನಿಯಮದ ಮೇರೆಗಿನ ಯಾವ ಅಪರಾಧವನ್ನು ಈ ಪ್ರಕರಣದಲ್ಲಿ ಉಪಬಂಧಿಸಿರುವಂತೆ ಹೊರತು, ರಾಜಿ ಮಾಡಿಕೊಳ್ಳತಕ್ಕದ್ದಲ್ಲ.

**49. ಕಂಪನಿಗಳಿಂದ ಅಪರಾಧಗಳು ಮತ್ತು ಅಪರಾಧಿಯೆಂದು ನಿರ್ಣೀತವಾಗಿರುವ ಕಂಪನಿಗಳ ಹೆಸರು, ವ್ಯವಹಾರದ ಸ್ಥಳ ಇತ್ಯಾದಿಗಳನ್ನು ಪ್ರಕಟಿಸಲು ನ್ಯಾಯಾಲಯಕ್ಕೆ ಇರುವ ಅಧಿಕಾರ.–** (1) ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಕಂಪನಿಯು ಮಾಡಿದ್ದರೆ,–

ಎ) (i) ಕಂಪನಿಯ ವ್ಯವಹಾರವನ್ನು ನಡೆಸುವುದಕ್ಕಾಗಿ ಕಂಪನಿಯ ಪ್ರಭಾರದಲ್ಲಿರಲು ಯಾವ ವ್ಯಕ್ತಿಯನ್ನು (2)ನೇ ಉಪಪ್ರಕರಣದ ಮೇರೆಗೆ ನಾಮನಿರ್ದೇಶನ ಮಾಡಲಾಗಿದೆಯೋ ಮತ್ತು ಕಂಪನಿಯ ವ್ಯವಹಾರವನ್ನು ನಡೆಸಲು ಕಂಪನಿಗೆ ಯಾವ ವ್ಯಕ್ತಿಯು ಜವಾಬ್ದಾರನಾಗಿರುವನೋ ಅಂಥ ವ್ಯಕ್ತಿ ಯಾರಾದರೂ ಇದ್ದರೆ, ಅವನನ್ನು (ಇಲ್ಲಿ ಇನ್ನು ಮುಂದೆ ಈ ಪ್ರಕರಣದಲ್ಲಿ ಜವಾಬ್ದಾರನಾಗಿರುವ ವ್ಯಕ್ತಿ ಎಂಬುದಾಗಿ ಉಲ್ಲೇಖಿಸಲಾಗಿದೆ); ಅಥವಾ

(ii) ಅಂಥ ಯಾವ ವ್ಯಕ್ತಿಯನ್ನು ನಾಮನಿರ್ದೇಶನ ಮಾಡಿರದಿದ್ದರೆ ಅಪರಾಧವನ್ನು ಮಾಡಿದ ಕಾಲದಲ್ಲಿ ಕಂಪನಿಯ ವ್ಯವಹಾರವನ್ನು ನಡೆಸುವುದಕ್ಕಾಗಿ ಕಂಪನಿಯ ಪ್ರಭಾರದಲ್ಲಿದ್ದ ಮತ್ತು ಕಂಪನಿಯ ವ್ಯವಹಾರವನ್ನು ನಡೆಸುವುದಕ್ಕಾಗಿ ಕಂಪನಿಗೆ ಜವಾಬ್ದಾರನಾಗಿರುವ ಪ್ರತಿಯೊಬ್ಬ ವ್ಯಕ್ತಿಯನ್ನು; ಮತ್ತು

(ಬಿ) ಕಂಪನಿಯನ್ನು

– ಅಪರಾಧದ ತಪ್ಪಿತಸ್ಥ ಎಂದು ಭಾವಿಸತಕ್ಕದ್ದು ಮತ್ತು ಆ ವ್ಯಕ್ತಿಯು, ಆ ಕಂಪನಿಯು ವ್ಯವಹರಣೆಗಳಿಗೆ ಒಳಗಾಗಲು ಮತ್ತು ತದನುಸಾರವಾಗಿ ಶಿಕ್ಷೆಗೆ ಒಳಗಾಗಲು ಬದ್ಧವಾಗಿರತಕ್ಕದ್ದು:

ಪರಂತು, ಅಂಥ ಯಾರೇ ವ್ಯಕ್ತಿಯು ಆ ಅಪರಾಧವು ತನ್ನ ತಿಳುವಳಿಕೆಗೆ ಬಾರದೆ ನಡೆಯಿತೆಂದು ಮತ್ತು ಅಂಥ ಅಪರಾಧವು ನಡೆಯುವುದನ್ನು ತಡೆಯಲು ತಾನು ಎಲ್ಲ ರೀತಿಯ ಸೂಕ್ತ ಎಚ್ಚರಿಕೆಯನ್ನು ವಹಿಸಿದ್ದೇನೆಂದು ರುಜುವಾತುಪಡಿಸಿದರೆ ಈ ಉಪಪ್ರಕರಣದಲ್ಲಿ ಒಳಗೊಂಡಿರುವುದು ಯಾವುದೂ ಅಂಥ ಯಾರೇ ವ್ಯಕ್ತಿಯನ್ನು, ಈ ಅಧಿನಿಯಮದಲ್ಲಿ ಉಪಬಂಧಿಸಿರುವ ಯಾವುದೇ ಶಿಕ್ಷೆಗೆ ಗುರಿಪಡಿಸತಕ್ಕದ್ದಲ್ಲ.

(2) ಈ ಅಧಿನಿಯಮದ ಮೇರೆಗಿನ ಯಾವುದೇ ಅಪರಾಧವನ್ನು ಕಂಪನಿಯು ಮಾಡದಂತೆ ತಡೆಯಲು ಅವಶ್ಯಕವಾಗಬಹುದಾದಂಥ ಅಥವಾ ವಿಹಿತವಾದಂಥ ಎಲ್ಲ ಅಧಿಕಾರಗಳನ್ನು ಚಲಾಯಿಸಲು ಮತ್ತು ಅಂಥ ಎಲ್ಲ ಕ್ರಮಗಳನ್ನು ತೆಗೆದುಕೊಳ್ಳಲು ಯಾವುದೇ ಕಂಪನಿಯು ಲಿಖಿತ ಆದೇಶದ ಮೂಲಕ, ತನ್ನ ನಿರ್ದೇಶಕರಲ್ಲಿ ಯಾರೇ ನಿರ್ದೇಶಕನನ್ನು ಅಧಿಕೃತಗೊಳಿಸಬಹುದು ಮತ್ತು ಜವಾಬ್ದಾರನಾಗಿರುವ ವ್ಯಕ್ತಿ ಎಂದೇ ಕಂಪನಿಯು ಅಂಥ ನಿರ್ದೇಶಕನನ್ನು ನಾಮನಿರ್ದೇಶನ ಮಾಡಲು ಆ ನಿರ್ದೇಶಕನ ಲಿಖಿತ ಒಪ್ಪಿಗೆ ಪಡೆದೇ ಕಂಪನಿಯ ನಾಮನಿರ್ದೇಶನ ಮಾಡಿದೆ ಎಂದು ನಿರ್ದೇಶಕನಿಗೆ ಅಥವಾ ಸಂಬಂಧಪಟ್ಟ ನಿಯಂತ್ರಕನಿಗೆ ಅಥವಾ ಅಂಥ ನಿಯಂತ್ರಕನು ಯಾವ ಕಾನೂನು ಮಾಪನ ವಿಜ್ಞಾನ ಅಧಿಕಾರಿಗೆ ಈ ಸಂಬಂಧವಾಗಿ ಅಧಿಕಾರ ಕೊಟ್ಟಿರುವನೋ (ಇಲ್ಲಿ ಇನ್ನು ಮುಂದೆ ಈ ಪ್ರಕರಣದಲ್ಲಿ ಅಧಿಕೃತ ಅಧಿಕಾರಿ ಎಂಬುದಾಗಿ ಉಲ್ಲೇಖಿಸಲಾಗಿದೆ) ಆ ಯಾರೇ ಕಾನೂನು ಮಾಪನ ವಿಜ್ಞಾನ ಅಧಿಕಾರಿಗೆ ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ರೀತಿಯಲ್ಲಿ ನೋಟೀಸು ಕೊಡಬಹುದು.

**ವಿವರಣೆ.–** ಕಂಪನಿಯು, ಯಾವುದೇ ಕಾರ್ಯಸಂಸ್ಥೆಯಲ್ಲಿ ಅಥವಾ ಶಾಖೆಯಲ್ಲಿ ಬೇರೆಬೇರೆ ಸಂಸ್ಥೆಗಳನ್ನು ಅಥವಾ ಶಾಖೆಗಳನ್ನು ಅಥವಾ ಬೇರೆಬೇರೆ ಘಟಕಗಳನ್ನು ಹೊಂದಿದ್ದರೆ, ಅಂಥ ಬೇರೆಬೇರೆ ಕಾರ್ಯಸಂಸ್ಥೆಗಳಿಗೆ ಅಥವಾ ಶಾಖೆಗಳಿಗೆ ಅಥವಾ ಘಟಕಗಳಿಗೆ ಸಂಬಂಧಪಟ್ಟಂತೆ ಈ ಉಪಪ್ರಕರಣದ ಮೇರೆಗೆ ಬೇರೆ ಬೇರೆ ವ್ಯಕ್ತಿಗಳನ್ನು ನಾಮನಿರ್ದೇಶನ

ಮಾಡಬಹುದು ಮತ್ತು ಯಾವುದೇ ಕಾರ್ಯಸಂಸ್ಥೆಗೆ, ಶಾಖೆಗೆ, ಅಥವಾ ಘಟಕಕ್ಕೆ ಸಂಬಂಧಪಟ್ಟಂತೆ, ನಾಮನಿರ್ದೇಶನ ಮಾಡಿದ ವ್ಯಕ್ತಿಯನ್ನು ಅಂಥ ಕಾರ್ಯಸಂಸ್ಥೆಗೆ, ಶಾಖೆಗೆ ಅಥವಾ ಘಟಕಕ್ಕೆ ಜವಾಬ್ದಾರನಾದ ವ್ಯಕ್ತಿ ಎಂಬುದಾಗಿ ಭಾವಿಸತಕ್ಕದ್ದು.

(3) ಉಪಪ್ರಕರಣ (2)ರ ಮೇರೆಗೆ ನಾಮನಿರ್ದೇಶನಗೊಂಡಿರುವ ವ್ಯಕ್ತಿಯು–

(i) ಅಂಥ ನಾಮನಿರ್ದೇಶನವನ್ನು ರದ್ದುಗೊಳಿಸಬೇಕೆಂಬ ತರುವಾಯದ ನೋಟೀಸನ್ನು ನಿರ್ದೇಶಕನು ಅಥವಾ ಸಂಬಂಧಪಟ್ಟ ನಿಯಂತ್ರಕನು ಅಥವಾ ಅಧಿಕೃತ ಅಧಿಕಾರಿಯು ಕಂಪನಿಯಿಂದ ಸ್ವೀಕರಿಸುವವರೆಗೆ; ಅಥವಾ

(ii) ಅವನು ಕಂಪನಿಯ ನಿರ್ದೇಶಕನಾಗಿರುವುದು ನಿಂತುಹೋಗುವವರೆಗೆ; ಅಥವಾ

(iii) ನಾಮನಿರ್ದೇಶನವನ್ನು ರದ್ದುಪಡಿಸುವಂತೆ ನಿರ್ದೇಶಕನಿಗೆ ಅಥವಾ ಸಂಬಂಧಪಟ್ಟ ನಿಯಂತ್ರಕನಿಗೆ ಅಥವಾ ಕಾನೂನು ಮಾಪನ ವಿಜ್ಞಾನ ಅಧಿಕಾರಿಗೆ ಲಿಖಿತ ಕೋರಿಕೆಯನ್ನು, ಆ ಬಗ್ಗೆ ಕಂಪನಿಗೆ ತಿಳಿಸಿ ಸಲ್ಲಿಸುವವರೆಗೆ, ಆ ಕೋರಿಕೆಯನ್ನು ನಿರ್ದೇಶಕನು ಅಥವಾ ಸಂಬಂಧಪಟ್ಟ ನಿಯಂತ್ರಕನು ಅಥವಾ ಕಾನೂನು ಮಾಪನ ವಿಜ್ಞಾನ ಅಧಿಕಾರಿಯು ವಿಲೆ ಮಾಡುವವರೆಗೆ

– ಇವುಗಳಲ್ಲಿ ಯಾವುದು ಮೊಟ್ಟಮೊದಲಿನದೋ ಆವರೆಗೆ ಜವಾಬ್ದಾರನಾಗಿರುವ ವ್ಯಕ್ತಿಯಾಗಿರುವುದು ಮುಂದುವರೆಯತಕ್ಕದ್ದು:

ಪರಂತು, ಅಂಥ ವ್ಯಕ್ತಿಯು ಆ ಕಂಪನಿಯ ನಿರ್ದೇಶಕನಾಗಿರುವುದು ನಿಂತು ಹೋಗಿದ್ದರೆ ಆತನು ಹಾಗೆ ನಿರ್ದೇಶಕನಾಗಿರುವುದು ನಿಂತು ಹೋಗಿರುವ ಸಂಗತಿಯನ್ನು ನಿರ್ದೇಶಕನಿಗೆ ಅಥವಾ ಸಂಬಂಧಪಟ್ಟ ನಿಯಂತ್ರಕನಿಗೆ ಅಥವಾ ಅಧಿಕೃತ ಅಧಿಕಾರಿಗೆ ತಿಳಿಸತಕ್ಕದ್ದು:

ಮತ್ತೂ ಪರಂತು, (iii) ನೇ ಖಂಡದ ಮೇರೆಗೆ ಅಂಥ ವ್ಯಕ್ತಿಯು ಕೋರಿಕೆಯನ್ನು ಸಲ್ಲಿಸಿದಾಗ ನಿರ್ದೇಶಕನು ಅಥವಾ ಸಂಬಂಧಪಟ್ಟ ನಿಯಂತ್ರಕನು ಅಥವಾ ಅಧಿಕೃತ ಅಧಿಕಾರಿಯು ಅಂಥ ನಾಮನಿರ್ದೇಶನವನ್ನು, ಆ ಕೋರಿಕೆಯನ್ನು ಯಾವ ದಿನಾಂಕದಂದು ಸಲ್ಲಿಸಲಾಗಿತ್ತೋ ಆ ದಿನಾಂಕಕ್ಕಿಂತ ಮುಂಚಿನ ದಿನಾಂಕದಿಂದ ಜಾರಿಗೆ ಬರುವಂತೆ ರದ್ದುಗೊಳಿಸತಕ್ಕದ್ದಲ್ಲ.

(4) ಮೇಲೆ ಹೇಳಿರುವ ಉಪಪ್ರಕರಣಗಳಲ್ಲಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಕಂಪನಿಯು ಮಾಡಿದರೆ ಮತ್ತು ಆ ಅಪರಾಧವು, (2)ನೇ ಉಪಪ್ರಕರಣದ ಮೇರೆಗೆ ನಾಮನಿರ್ದೇಶನಗೊಂಡಿರುವ ವ್ಯಕ್ತಿ ಆಗಿರದ, ಕಂಪನಿಯ ಯಾರೇ ನಿರ್ದೇಶಕನ, ವ್ಯವಸ್ಥಾಪಕನ, ಕಾರ್ಯದರ್ಶಿಯ ಅಥವಾ ಇತರ ಅಧಿಕಾರಿಯ ಸಮ್ಮತಿಯಿಂದ ಅಥವಾ ಪರೋಕ್ಷ ಸಮ್ಮತಿಯಿಂದ ನಡೆಯಿತೆಂದು ಅಥವಾ (2)ನೇ ಉಪಪ್ರಕರಣದ ಮೇರೆಗೆ ನಾಮನಿರ್ದೇಶನಗೊಂಡಿರುವ ವ್ಯಕ್ತಿ ಆಗಿರದ, ಕಂಪನಿಯ ಯಾರೇ ನಿರ್ದೇಶಕನ, ವ್ಯವಸ್ಥಾಪಕನ, ಕಾರ್ಯದರ್ಶಿಯ ಅಥವಾ ಇತರ ಅಧಿಕಾರಿಯ ನಿರ್ಲಕ್ಷ್ಯದಿಂದ ನಡೆಯಿತೆಂದು ಆರೋಪಿಸಿರುವುದು ರುಜುವಾತಾದರೆ ಅಂಥ ನಿರ್ದೇಶಕನು, ವ್ಯವಸ್ಥಾಪಕನು, ಕಾರ್ಯದರ್ಶಿಯು ಅಥವಾ ಇತರ ಅಧಿಕಾರಿಯು ಆ ಅಪರಾಧದ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ಅವನು ತನ್ನ ವಿರುದ್ಧದ ವ್ಯವಹರಣೆಗೆ ಒಳಗಾಗತಕ್ಕದ್ದು ಮತ್ತು ತದನುಸಾರವಾಗಿ ದಂಡಿತನಾಗತಕ್ಕದ್ದು.

(5) ಈ ಅಧಿನಿಯಮದ ಉಪಬಂಧಗಳಲ್ಲಿ ಯಾವುದನ್ನಾದರೂ ಉಲ್ಲಂಘಿಸಿದ್ದಕ್ಕಾಗಿ ಈ ಅಧಿನಿಯಮದ ಮೇರೆಗೆ ಯಾವುದೇ ಕಂಪನಿಯು ಅಪರಾಧಿಯೆಂದು ನಿರ್ಣಯ ಆಗಿದ್ದರೆ ಆಗ, ಕಂಪನಿಯನ್ನು ಅಪರಾಧಿಯೆಂದು ನಿರ್ಣಯಿಸುವ ನ್ಯಾಯಾಲಯಕ್ಕೆ ಕಂಪನಿಯ ಹೆಸರನ್ನು ಕಂಪನಿಯ ವ್ಯವಹಾರದ ಸ್ಥಳವನ್ನು ಉಲ್ಲಂಘನೆಯ ಸ್ವರೂಪವನ್ನು, ಕಂಪನಿಯನ್ನು ಅಪರಾಧಿಯೆಂದು ನಿರ್ಣಯಿಸಲಾಗಿದೆ ಎಂಬ ಸಂಗತಿಯನ್ನು ಮತ್ತು ಮೊಕದ್ದಮೆಯ ಸಂದರ್ಭ ಸನ್ನಿವೇಶಗಳಲ್ಲಿ ಸಮುಚಿತವೆಂದು ನ್ಯಾಯಾಲಯವು ಭಾವಿಸಬಹುದಾದಂತಹ ಇತರ ವಿವರಗಳನ್ನು, ನ್ಯಾಯಾಲಯವು ನಿರ್ದೇಶಿಸಬಹುದಾದಂತಹ ವೃತ್ತಪತ್ರಿಕೆಯಲ್ಲಿ ಅಥವಾ ಅಂಥ ಇತರ ಯಾವುದೇ ರೀತಿಯಲ್ಲಿ ಕಂಪನಿಯ ವೆಚ್ಚದಲ್ಲಿ ಪ್ರಕಟಿಸುವಂತೆ ಮಾಡತಕ್ಕದ್ದು.

(6) ನ್ಯಾಯಾಲಯದ ಆದೇಶಗಳ ವಿರುದ್ಧ ಅಪೀಲನ್ನು ಸಲ್ಲಿಸಲು ಇರುವ ಅವಧಿಯು, ಆ ಅವಧಿಯಲ್ಲಿ ಯಾವುದೇ ಅಪೀಲನ್ನು ಸಲ್ಲಿಸದೆ ಇದ್ದರೂ, ಆ ತನಕ ಅಥವಾ ಅಂಥ ಅಪೀಲನ್ನು ಸಲ್ಲಿಸಿದಾಗ ಅದನ್ನು ವಿಲೆ ಮಾಡುವ ತನಕ (5)ನೇ ಉಪಪ್ರಕರಣದ ಮೇರೆಗೆ ಯಾವುದೇ ಪ್ರಕಟಣೆಯನ್ನು ಮಾಡತಕ್ಕದ್ದಲ್ಲ.

(7) ಉಪಪ್ರಕರಣ (5)ರ ಮೇರೆಗೆ ಪ್ರಕಟಣೆಗಾಗಿ ಮಾಡಿದ ಯಾವುದೇ ವೆಚ್ಚಗಳನ್ನು, ನ್ಯಾಯಾಲಯವು ವಿಧಿಸಿದ ಜುಲ್ಮಾನೆಯನ್ನು ಹೇಗೆ ವಸೂಲಿ ಮಾಡಲಾಗುತ್ತಿತ್ತೋ ಹಾಗೆಯೇ ಕಂಪನಿಯಿಂದ ವಸೂಲು ಮಾಡತಕ್ಕದ್ದು.

**ವಿವರಣೆ**.– ಈ ಪ್ರಕರಣದ ಉದ್ದೇಶಗಳಿಗಾಗಿ,–

(ಎ) **"ಕಂಪನಿ"** ಎಂದರೆ, ಯಾವುದೇ ನಿಗಮಿತ ನಿಕಾಯ ಮತ್ತು ಅದು ಫರ್ಮನ್ನು ಅಥವಾ ವ್ಯಕ್ತಿಗಳ ಇತರ ಸಂಘವನ್ನು ಒಳಗೊಳ್ಳುತ್ತದೆ; ಮತ್ತು

(ಬಿ) ಫರ್ಮಿಗೆ ಸಂಬಂಧಿಸಿದಂತೆ **"ನಿರ್ದೇಶಕ"** ಎಂದರೆ ಫರ್ಮಿನ ಪಾಲುದಾರ, ಆದರೆ ಇದು ನಾಮನಿರ್ದೇಶಿತ ನಿರ್ದೇಶಕರುಗಳನ್ನು, ಗೌರವ ನಿರ್ದೇಶಕರುಗಳನ್ನು ಸರ್ಕಾರವು ನಾಮನಿರ್ದೇಶನ ಮಾಡಿದ ನಿರ್ದೇಶಕರುಗಳನ್ನು ಒಳಗೊಳ್ಳುವುದಿಲ್ಲ.

**50. ಅಪೀಲುಗಳು**.– (1) ಉಪಪ್ರಕರಣ (2)ರ ಉಪಬಂಧಗಳಿಗೊಳಪಟ್ಟು, ಅಪೀಲನ್ನು ಎಂದರೆ,–

(ಎ) 13ನೇ ಪ್ರಕರಣದ ಮೇರೆಗೆ ನೇಮಕಗೊಂಡ ಕಾನೂನು ಮಾಪನ ವಿಜ್ಞಾನ ಅಧಿಕಾರಿಯು 15 ರಿಂದ 20ನೇ ಪ್ರಕರಣಗಳ ಮೇರೆಗೆ, 22 ರಿಂದ 25ನೇ ಪ್ರಕರಣಗಳ ಮೇರೆಗೆ, 27ನೇ ಪ್ರಕರಣದಿಂದ 39ನೇ ಪ್ರಕರಣಗಳವರೆಗಿನ ಪ್ರಕರಣಗಳ ಮೇರೆಗೆ, 41ನೇ ಪ್ರಕರಣದ ಅಥವಾ 52ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ರಚಿಸಿದ ಯಾವುದೇ ನಿಯಮದ ಮೇರೆಗೆ ಕೈಗೊಂಡ ಪ್ರತಿಯೊಂದು ತೀರ್ಮಾನದ ಬಗ್ಗೆ ಅಥವಾ ಮಾಡಿದ ಆದೇಶದ ಬಗ್ಗೆ ನಿರ್ದೇಶಕನಿಗೆ;

(ಬಿ) 15ನೇ ಪ್ರಕರಣದಿಂದ 20ನೇ ಪ್ರಕರಣಗಳ ಮೇರೆಗೆ, 22ನೇ ಪ್ರಕರಣದಿಂದ 25ನೇ ಪ್ರಕರಣಗಳ ಮೇರೆಗೆ, 27 ರಿಂದ 39ನೇ ಪ್ರಕರಣಗಳ ಮೇರೆಗೆ, 41ನೇ ಪ್ರಕರಣದ ಮೇರೆಗೆ, ಅಥವಾ 52ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ರಚಿಸಿದ ಯಾವುದೇ ನಿಯಮದ ಮೇರೆಗೆ ಕಾನೂನು ಮಾಪನ ವಿಜ್ಞಾನ ನಿರ್ದೇಶಕನು ಕೈಗೊಂಡ ಪ್ರತಿಯೊಂದು ತೀರ್ಮಾನದ ಮೇಲೆ ಅಥವಾ ಮಾಡಿದ ಆದೇಶದ ಮೇಲೆ ಕೇಂದ್ರ ಸರ್ಕಾರಕ್ಕೆ ಅಥವಾ ಕೇಂದ್ರ ಸರ್ಕಾರವು ಈ ಸಂಬಂಧದಲ್ಲಿ ವಿಶೇಷವಾಗಿ ಅಧಿಕೃತಗೊಳಿಸಿರುವ ಯಾರೇ ಅಧಿಕಾರಿಗೆ;

(ಸಿ) ಕಾನೂನು ಮಾಪನ ವಿಜ್ಞಾನ ನಿರ್ದೇಶಕನು ಪ್ರತ್ಯಾಯೋಜಿಸಿದ ಅಧಿಕಾರಗಳ ಮೇರೆಗೆ ಕಾನೂನು ಮಾಪನ ವಿಜ್ಞಾನ ನಿಯಂತ್ರಕನು ನೀಡಿದ ಪ್ರತಿಯೊಂದು ತೀರ್ಮಾನದ ಮೇಲೆ ಕೇಂದ್ರ ಸರ್ಕಾರಕ್ಕೆ;

(ಡಿ) 15 ರಿಂದ 18ನೇ ಪ್ರಕರಣಗಳವರೆಗಿನ ಪ್ರಕರಣಗಳ ಮೇರೆಗೆ, 23 ರಿಂದ 25ನೇ ಪ್ರಕರಣಗಳ ಮೇರೆಗೆ, 27 ರಿಂದ 37ನೇ ಪ್ರಕರಣಗಳವರೆಗಿನ ಪ್ರಕರಣಗಳ ಮೇರೆಗೆ, 45 ರಿಂದ 47ನೇ ಪ್ರಕರಣಗಳವರೆಗಿನ ಪ್ರಕರಣಗಳ ಮೇರೆಗೆ ಅಥವಾ 53ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ರಚಿಸಿದ ಯಾವುದೇ ನಿಯಮದ ಮೇರೆಗೆ 14ನೇ ಪ್ರಕರಣದ ಮೇರೆಗೆ, ನೇಮಕಗೊಂಡ ಯಾರೇ ಕಾನೂನು ಮಾಪನ ವಿಜ್ಞಾನ ಅಧಿಕಾರಿಯು ನೀಡಿದ ಪ್ರತಿಯೊಂದು ತೀರ್ಮಾನದ ಮೇಲೆ ಅಥವಾ ಮಾಡಿದ ಆದೇಶದ ಮೇಲೆ ನಿಯಂತ್ರಕನಿಗೆ; ಮತ್ತು

(ಇ) 15 ರಿಂದ 18ನೇ ಪ್ರಕರಣಗಳವರೆಗಿನ ಪ್ರಕರಣಗಳ ಮೇರೆಗೆ, 23 ರಿಂದ 25ನೇ ಪ್ರಕರಣಗಳವರೆಗಿನ ಪ್ರಕರಣಗಳ ಮೇರೆಗೆ, 27 ರಿಂದ 37ನೇ ಪ್ರಕರಣಗಳವರೆಗಿನ ಪ್ರಕರಣಗಳ ಮೇರೆಗೆ, 45 ರಿಂದ 47ನೇ ಪ್ರಕರಣಗಳವರೆಗಿನ ಪ್ರಕರಣಗಳ ಮೇರೆಗೆ ರಚಿಸಿದ ಅಥವಾ 53ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ರಚಿಸಿದ ಯಾವುದೇ ನಿಯಮದ ಮೇರೆಗೆ, (ಡಿ) ಖಂಡದ ಮೇರೆಗೆ ಸಲ್ಲಿಸಿದ ಅಪೀಲಿನಲ್ಲಿ ಮಾಡಿದ ಆದೇಶ ಅಲ್ಲದ, ನಿಯಂತ್ರಕನು ನೀಡಿದ ಪ್ರತಿಯೊಂದು ತೀರ್ಮಾನದ ಮೇಲೆ ಅಥವಾ ಮಾಡಿದ ಆದೇಶದ ಮೇಲೆ ರಾಜ್ಯ ಸರ್ಕಾರಕ್ಕೆ ಅಥವಾ ರಾಜ್ಯ ಸರ್ಕಾರವು ಈ ಸಂಬಂಧದಲ್ಲಿ ವಿಶೇಷವಾಗಿ ಅಧಿಕೃತಗೊಳಿಸಿದ ಯಾರೇ ಅಧಿಕಾರಿಗೆ

– ಅಪೀಲನ್ನು ಸಲ್ಲಿಸಲು ಅವಕಾಶ ಇರತಕ್ಕದ್ದು.

(2) ಆಕ್ಷೇಪಿಸಿರುವ ಆದೇಶವನ್ನು ಯಾವ ದಿನಾಂಕದಂದು ಮಾಡಲಾಗಿತ್ತೋ ಆ ದಿನಾಂಕದಿಂದ ಅರವತ್ತು ದಿನಗಳ ಒಳಗಾಗಿ ಅಂಥ ಪ್ರತಿಯೊಂದು ಅಪೀಲನ್ನು ಸಲ್ಲಿಸತಕ್ಕದ್ದು:

ಪರಂತು, ಸದರಿ ಅರವತ್ತು ದಿನಗಳ ಅವಧಿಯೊಳಗೆ ಅಪೀಲುದಾರನು ಸಾಕಷ್ಟು ಕಾರಣದಿಂದಾಗಿ ಅಪೀಲನ್ನು ಸಲ್ಲಿಸಲು ಆಗಿರಲಿಲ್ಲ ಎಂಬುದು ಅಪೀಲು ಪ್ರಾಧಿಕಾರಕ್ಕೆ ಮನವರಿಕೆಯಾದರೆ, ಮತ್ತೆ ಅರವತ್ತು ದಿನಗಳ ಅವಧಿಯೊಳಗೆ ಅಪೀಲುದಾರನು ಅಪೀಲನ್ನು ಸಲ್ಲಿಸಲು ಅನುಮತಿ ನೀಡಬಹುದು.

(3) ಯಾವುದೇ ಅಂಥ ಅಪೀಲನ್ನು ಸ್ವೀಕರಿಸಿದ ಮೇಲೆ, ಅಪೀಲು ಪ್ರಾಧಿಕಾರವು ಅಪೀಲಿನ ಪಕ್ಷಕಾರರಿಗೆ ಅಹವಾಲನ್ನು ಹೇಳಿಕೊಳ್ಳಲು ಸೂಕ್ತ ಅವಕಾಶವನ್ನು ನೀಡಿದ ನಂತರ ಮತ್ತು ಸಮರ್ಪಕವೆಂದು ಪ್ರಾಧಿಕಾರವು ಭಾವಿಸುವಂತಹ ವಿಚಾರಣೆಯನ್ನು ಮಾಡಿದ ನಂತರ, ಕೈಗೊಂಡ ಯಾವ ತೀರ್ಮಾನದ ಮೇಲೆ ಅಥವಾ ಮಾಡಿದ ಯಾವ ಆದೇಶದ ಮೇಲೆ ಅಪೀಲು ಸಲ್ಲಿಸಲಾಗಿದೆಯೋ ಅಂಥ ತೀರ್ಮಾನವನ್ನು ಅಥವಾ ಆದೇಶವನ್ನು ಸ್ಥಿರೀಕರಿಸಿರುವ, ಮಾರ್ಪಾಟು ಮಾಡಿರುವ ಅಥವಾ ವ್ಯತಿರಿಕ್ತಗೊಳಿಸಿರುವ, ಸೂಕ್ತವೆಂದು ತಾನು ಭಾವಿಸುವಂತಹ ಆದೇಶವನ್ನು ಮಾಡಬಹುದು ಅಥವಾ ಅವಶ್ಯವಿದ್ದರೆ ಇನ್ನು ಹೆಚ್ಚಿನ ಸಾಕ್ಷ್ಯವನ್ನು ತೆಗೆದುಕೊಂಡ ನಂತರ ಹೊಸದಾಗಿ ತೀರ್ಮಾನ ಕೈಗೊಳ್ಳುವುದಕ್ಕಾಗಿ ಅಥವಾ ಆದೇಶವನ್ನು ಮಾಡುವುದಕ್ಕಾಗಿ ಸೂಕ್ತವೆಂದು ತಾನು ಭಾವಿಸುವಂತಹ ನಿರ್ದೇಶನ ನೀಡಿ ಈ ಪ್ರಕರಣವನ್ನು ವಾಪಸ್ಸು ಕಳುಹಿಸಬಹುದು.

(4) ನಿಯಮಿಸಬಹುದಾದಂಥ ಫೀಜನ್ನು ಸಂದಾಯ ಮಾಡಿದ ಮೇಲೆ ಪ್ರತಿಯೊಂದು ಅಪೀಲನ್ನು ಸಲ್ಲಿಸತಕ್ಕದ್ದು.

(5) ಕೇಂದ್ರ ಸರ್ಕಾರವು ಅಥವಾ ಸಂದರ್ಭಾನುಸಾರ ರಾಜ್ಯ ಸರ್ಕಾರವು ತಾನಾಗಿಯೇ ಅಥವಾ ಅನ್ಯಥಾ, ಯಾವ ಅಪೀಲಿನಲ್ಲಿ ಯಾವ ತೀರ್ಮಾನವನ್ನು ಕೈಗೊಳ್ಳಲಾಗಿದೆಯೋ ಅಥವಾ ಆದೇಶವನ್ನು ಮಾಡಲಾಗಿದೆಯೋ ಆ ಅಪೀಲಿನಲ್ಲಿ ಆಗಿರುವ ವ್ಯವಹರಣೆಯೂ ಸೇರಿದಂತೆ ಯಾವುದೇ ವ್ಯವಹರಣೆಯ ದಾಖಲೆಯನ್ನು, ಅಂಥ ತೀರ್ಮಾನದ ಅಥವಾ ಆದೇಶದ ಸರಿತನದ ಬಗ್ಗೆ, ಕಾನೂನು ಸಮ್ಮತತೆಯ ಬಗ್ಗೆ ಅಥವಾ ಔಚಿತ್ಯದ ಬಗ್ಗೆ ಸ್ವತಃಮನವರಿಕೆ ಮಾಡಿಕೊಳ್ಳುವ ಉದ್ದೇಶಕ್ಕಾಗಿ ತರಿಸಿಕೊಳ್ಳಬಹುದು ಮತ್ತು ಪರಿಕ್ಷೀಸಬಹುದು ಮತ್ತು ಆ ಬಗ್ಗೆ ಸೂಕ್ತವೆಂದು ತಾನು ಭಾವಿಸುವಂಥ ಆದೇಶಗಳನ್ನು ಮಾಡಬಹುದು:

ಪರಂತು, ಪ್ರಸ್ತಾವಿತ ಕ್ರಮದ ಬಗ್ಗೆ ಹೇಳಿಕೊಳ್ಳಲು ಅಂಥ ವ್ಯಕ್ತಿಗೆ ಸೂಕ್ತ ಅವಕಾಶವನ್ನು ಕೊಟ್ಟ ಹೊರತು, ಯಾರೇ ವ್ಯಕ್ತಿಗೆ ಪ್ರತಿಕೂಲ ಪರಿಣಾಮವನ್ನುಂಟು ಮಾಡುವ ಹಾಗೆ ಈ ಉಪಪ್ರಕರಣದ ಮೇರೆಗೆ ಯಾವುದೇ ತೀರ್ಮಾನವನ್ನು ಅಥವಾ ಆದೇಶವನ್ನು ವ್ಯತ್ಯಸ್ತಗೊಳಿಸತಕ್ಕದ್ದಲ್ಲ.

**51. ಭಾರತ ದಂಡ ಸಂಹಿತೆಯ ಮತ್ತು ದಂಡ ಪ್ರಕ್ರಿಯಾ ಸಂಹಿತೆಯ ಉಪಬಂಧಗಳು ಅನ್ವಯವಾಗದಿರುವುದು.–** ಭಾರತ ದಂಡ ಸಂಹಿತೆ, 1860 (1860 ರ 45)ರ ಮತ್ತು ದಂಡ ಪ್ರಕ್ರಿಯಾ ಸಂಹಿತೆ, 1973 (1974 ರ 2) ರ 153ನೇ ಪ್ರಕರಣದ ಉಪಬಂಧಗಳು ತೂಕದ ಬಟ್ಟಿನ ಅಥವಾ ಅಳತೆಯ ಮಾಪಕಗಳಿಗೆ ಸಂಬಂಧಪಟ್ಟ ಅಪರಾಧಗಳಿಗೆ ಅಂತಹ ಉಪಬಂಧಗಳು ಎಷ್ಟರ ಮಟ್ಟಿಗೆ ಸಂಬಂಧಪಡುತ್ತವೆಯೋ ಅಷ್ಟರಮಟ್ಟಿಗೆ ಈ ಅಧಿನಿಯಮದ ಮೇರೆಗೆ ದಂಡನೀಯವಾದ ಯಾವುದೇ ಅಪರಾಧಕ್ಕೆ ಅನ್ವಯವಾಗತಕ್ಕದ್ದಲ್ಲ.

**52. ನಿಯಮಗಳನ್ನು ರಚಿಸಲು ಕೇಂದ್ರ ಸರ್ಕಾರದ ಅಧಿಕಾರ.–** (1) ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ಅಧಿಸೂಚನೆಯ ಮೂಲಕ ಕೇಂದ್ರ ಸರ್ಕಾರವು ನಿಯಮಗಳನ್ನು ರಚಿಸಬಹುದು.

(2) ಅದರಲ್ಲೂ ಮುಖ್ಯವಾಗಿ ಮತ್ತು ಮೇಲೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಅಂಥ ನಿಯಮಗಳು ಈ ಮುಂದಿನ ಎಲ್ಲಾ ಅಥವಾ ಯಾವುದೇ ವಿಷಯಗಳಿಗೆ ಉಪಬಂಧ ಕಲ್ಪಿಸಬಹುದು ಎಂದರೆ:–

(ಎ) 5ನೇ ಪ್ರಕರಣದ ಉಪಪ್ರಕರಣ (2)ರ ಮೇರೆಗಿನ ಅಳತೆಗಳ ಬೇಸ್ ಯೂನಿಟ್‌ಗಳ ಮತ್ತು ದ್ರವ್ಯಮಾನದ ಬೇಸ್ ಯೂನಿಟ್‌ಗಳ ವಿಶಿಷ್ಟ ವಿವರಣೆ;

(ಬಿ) 7ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ವಸ್ತುಗಳನ್ನು ಮತ್ತು ಸಲಕರಣೆಗಳನ್ನು ಸಿದ್ಧಪಡಿಸುವ ರೀತಿ;

(ಸಿ) 7ನೇ ಪ್ರಕರಣದ (4)ನೇ ಉಪಪ್ರಕರಣದ ಮೇರೆಗೆ ಆಕೃತಿ ಲಕ್ಷಣಗಳು, ವಿನ್ಯಾಸ, ತಯಾರಿಕಾ ವಿವರಗಳು, ಸಾಮಗ್ರಿಗಳು, ಸಲಕರಣೆಗಳು, ಕಾರ್ಯಸಾಮರ್ಥ್ಯ, ಸಹನೀಯತೆ, ಮರುಸತ್ಯಾಪನೆಯ ಅವಧಿ, ಪರೀಕ್ಷೆಗಳ ವಿಧಾನಗಳು ಅಥವಾ ಕಾರ್ಯವಿಧಾನಗಳು;

(ಡಿ) 9ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ತೂಕದ ಬಟ್ಟುಗಳ ಮತ್ತು ಅಳತೆ ಮಾಪಕಗಳ ಮೂಲ ಪ್ರಮಾಣಗಳು, ಮೂಲದ್ದಲ್ಲದ ಪ್ರಮಾಣಗಳು ಮತ್ತು ಕಾರ್ಯಾರ್ಥ ಪ್ರಮಾಣಗಳು;

(ಇ) 9ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಯಾವ ಮೂಲ ಪ್ರಮಾಣಗಳನ್ನು, ಮೂಲದ್ದಲ್ಲದ ಪ್ರಮಾಣಗಳನ್ನು ಮತ್ತು ಕಾರ್ಯಾರ್ಥ ಪ್ರಮಾಣಗಳನ್ನು ಸತ್ಯಾಪನೆ ಮಾಡತಕ್ಕದ್ದೋ ಮತ್ತು ಅವುಗಳ ಮೇಲೆ ಮುದ್ರೆ ಹಾಕತಕ್ಕದ್ದೋ ಆ ಮೂಲ ಪ್ರಮಾಣಗಳು, ಮೂಲದ್ದಲ್ಲದ ಪ್ರಮಾಣಗಳು, ಕಾರ್ಯಾರ್ಥ ಪ್ರಮಾಣಗಳು ಮತ್ತು ಅದಕ್ಕಾಗಿ ಫೀಜು;

(ಎಫ್) ಯಾವುದೇ ಸರಕುಗಳ, ಸರಕುಗಳ ವರ್ಗದ ಅಥವಾ ವಾಗ್ದಾನದ ಸಂಬಂಧದಲ್ಲಿ 10ನೇ ಪ್ರಕರಣದ ಮೇರೆಗೆ ಯಾವ ತೂಕದ ಬಟ್ಟಿನಲ್ಲಿ ಅಥವಾ ಅಳತೆ ಮಾಪಕದಲ್ಲಿ ಅಥವಾ ಅಂಕಿ ಪ್ರಕಾರ ಯಾವುದೇ ವ್ಯವಹಾರವನ್ನು, ವ್ಯಾಪಾರವನ್ನು ಅಥವಾ ಕರಾರನ್ನು ಮಾಡಿಕೊಳ್ಳಬೇಕಾಗುತ್ತದೋ ಅಂಥ ತೂಕದ ಬಟ್ಟು ಅಥವಾ ಅಳತೆ ಮಾಪಕ ಅಥವಾ ಅಂಕಿ;

(ಜಿ) 13ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ನಿರ್ದೇಶಕನ ಮತ್ತು ಕಾನೂನು ಮಾಪನ ವಿಜ್ಞಾನ ಅಧಿಕಾರಿಗಳ ಅರ್ಹತೆಗಳು;

(ಹೆಚ್) 14ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ನಿಯಂತ್ರಕನ ಮತ್ತು ಕಾನೂನು ಮಾಪನ ವಿಜ್ಞಾನ ಅಧಿಕಾರಿಗಳ ಅರ್ಹತೆಗಳು;

(ಐ) 15ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ಸರಕುಗಳನ್ನು ವಿಲೆ ಮಾಡುವ ರೀತಿ;

(ಜೆ) 18ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಪ್ಯಾಕೇಜ್‌ಗಳಲ್ಲಿ ಎಷ್ಟು ಪ್ರಮಾಣ ಪರಿಮಾಣಗಳ ಅಥವಾ ಸಂಖ್ಯೆಯ ಸರಕುಗಳು ಇರಬೇಕೋ ಮತ್ತು ಯಾವ ರೀತಿಯಲ್ಲಿ ಪ್ಯಾಕೇಜುಗಳ ಮೇಲೆ ಘೋಷಣೆಗಳು ಮತ್ತು ವಿವರಗಳು ಇರಬೇಕೋ ಆ ನಿಗದಿತ ಪ್ರಮಾಣ ಪರಿಮಾಣ ಅಥವಾ ಸಂಖ್ಯೆ ಮತ್ತು ರೀತಿ;

(ಕೆ) 19ನೇ ಪ್ರಕರಣದ ಮೇರೆಗೆ ನೋಂದಣಿ ಮತ್ತು ನೋಂದಣಿಯ ರೀತಿ ಮತ್ತು ಫೀಜು;

(ಎಲ್) 21ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಸಂಸ್ಥೆಯ ಆಡಳಿತ ಮತ್ತು ನಿಯಂತ್ರಣ, ಬೋಧಕ ಸಿಬ್ಬಂದಿ ಮತ್ತು ಇತರ ನೌಕರರು, ಆ ಸಂಸ್ಥೆಯಲ್ಲಿ ತರಬೇತಿಗಾಗಿ ಇರುವ ಕೋರ್ಸುಗಳು ಮತ್ತು ಪಠ್ಯಕ್ರಮಗಳು ಆ ಸಂಸ್ಥೆಯಲ್ಲಿ ಪ್ರವೇಶ ಪಡೆಯುವುದಕ್ಕಾಗಿ ವ್ಯಕ್ತಿಗೆ ಯಾವ ಅರ್ಹತೆಗಳು ಇರಬೇಕೋ ಆ ಅರ್ಹತೆಗಳು;

(ಎಂ) 22ನೇ ಪ್ರಕರಣದ ಮೇರೆಗೆ ಮಾದರಿಗಳ ಅನುಮೋದನೆಗಾಗಿ ಇರುವ ರೀತಿ, ಫೀಜು ಮತ್ತು ಪ್ರಾಧಿಕಾರ;

(ಎನ್) 24ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ತೂಕದ ಬಟ್ಟುಗಳ ಅಥವಾ ಅಳತೆ ಮಾಪಕಗಳ ಬಗೆಗಳು;

(ಓ) 24ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ಯಾವ ರೀತಿಯಲ್ಲಿ, ಯಾವ ನಿಬಂಧನೆಗಳ ಮತ್ತು ಷರತ್ತುಗಳ ಮೇಲೆ ಮತ್ತು ಎಷ್ಟು ಫೀಜನ್ನು ಸಂದಾಯ ಮಾಡಿದ ಮೇಲೆ ಕೇಂದ್ರ ಸರ್ಕಾರವು, ಸರ್ಕಾರಿ ಅನುಮೋದಿತ ಪರೀಕ್ಷಾ ಕೇಂದ್ರವನ್ನು ಅಧಿಸೂಚಿಸಬೇಕಾಗುತ್ತದೋ ಆ ರೀತಿ, ಅಂಥ ನಿಬಂಧನೆಗಳು ಮತ್ತು ಷರತ್ತುಗಳು ಮತ್ತು ಅಷ್ಟು ಫೀಜು;

(ಪಿ) ಸರ್ಕಾರಿ ಅನುಮೋದಿತ ಪರೀಕ್ಷಾ ಕೇಂದ್ರವು ನೇಮಕ ಮಾಡಿಕೊಳ್ಳಬೇಕಾದ ಅಥವಾ ತೊಡಗಿಸಿಕೊಳ್ಳಬೇಕಾದ ವ್ಯಕ್ತಿಗಳು ಯಾವ ಅರ್ಹತೆಯನ್ನು ಮತ್ತು ಅನುಭವವನ್ನು ಹೊಂದಿರಬೇಕೋ ಆ ಅರ್ಹತೆ

ಮತ್ತು ಅನುಭವ ಮತ್ತು ಯಾವ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ಮತ್ತು ಫೀಜನ್ನು ಸಂದಾಯ ಮಾಡಿದ ಮೇಲೆ 24ನೇ ಪ್ರಕರಣದ (4)ನೇ ಉಪಪ್ರಕರಣದ ಮೇರೆಗೆ ತೂಕದ ಬಟ್ಟನ್ನು ಅಥವಾ ಅಳತೆ ಮಾಪಕವನ್ನು ಸತ್ಯಾಪನೆ ಮಾಡತಕ್ಕದ್ದೋ ಅಂಥ ಫೀಜು ಮತ್ತು ನಿಬಂಧನೆಗಳು ಮತ್ತು ಷರತ್ತುಗಳು;

(ಕ್ಯೂ) 36ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ನಿವ್ವಳ ಪರಿಮಾಣದಲ್ಲಿ ಆದ ತಪ್ಪು;

(ಆರ್) 48ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಅಪರಾಧವನ್ನು ರಾಜಿ ಮಾಡಿಕೊಳ್ಳುವುದಕ್ಕಾಗಿ ಫೀಜು;

(ಎಸ್) ನಿರ್ದೇಶಕನಿಗೆ ಅಥವಾ ನಿಯಂತ್ರಕನಿಗೆ ಅಥವಾ ಅವನು ಅಧಿಕೃತಗೊಳಿಸಿದ ಯಾರೇ ಇತರ ಅಧಿಕಾರಿಗೆ 49ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಯಾವ ನಮೂನೆಯಲ್ಲಿ ಮತ್ತು ಯಾವ ರೀತಿಯಲ್ಲಿ ನೋಟೀಸನ್ನು ನೀಡತಕ್ಕದ್ದೋ ಆ ನಮೂನೆ ಮತ್ತು ಅಂಥ ರೀತಿ.

(3) ಕೇಂದ್ರ ಸರ್ಕಾರವು ಈ ಪ್ರಕರಣದ ಮೇರೆಗೆ ಯಾವುದೇ ನಿಯಮವನ್ನು ರಚಿಸುವಾಗ, ಆ ನಿಯಮದ ಉಲ್ಲಂಘನೆಯು ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯವಾಗತಕ್ಕದ್ದೆಂದು ಉಪಬಂಧ ಕಲ್ಪಿಸಬಹುದು.

(4) ಈ ಅಧಿನಿಯಮದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಎರಡು ಅಥವಾ ಹೆಚ್ಚಿನ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಇಡತಕ್ಕದ್ದು ಮತ್ತು ಮೇಲೆ ಹೇಳಿದ ಅಧಿವೇಶನದ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಅಧಿವೇಶನಗಳ ನಿಕಟೋತ್ತರದ ಅಧಿವೇಶನದ ಮುಕ್ತಾಯಕ್ಕೆ ಮುಂಚೆ, ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ ಆ ನಿಯಮವು ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ; ಆದಾಗ್ಯೂ ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು, ಆ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

**53. ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರದ ಅಧಿಕಾರ.–** (1) ರಾಜ್ಯ ಸರ್ಕಾರವು, ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸಲು ಕೇಂದ್ರ ಸರ್ಕಾರದೊಡನೆ ಸಮಾಲೋಚನೆ ನಡೆಸಿದ ತರುವಾಯ ಅಧಿಸೂಚನೆಯ ಮೂಲಕ ನಿಯಮಗಳನ್ನು ರಚಿಸಬಹುದು.

(2) ಅದರಲ್ಲೂ ಮುಖ್ಯವಾಗಿ ಮತ್ತು ಮೇಲೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಅಂಥ ನಿಯಮಗಳು ಈ ಮುಂದಿನ ಎಲ್ಲಾ ಅಥವಾ ಯಾವುದೇ ವಿಷಯಗಳಿಗೆ ಉಪಬಂಧ ಕಲ್ಪಿಸಬಹುದು, ಎಂದರೆ:–

(ಎ) 16ನೇ ಪ್ರಕರಣದ (1)ನೇ ಉಪಪ್ರಕರಣದ ಪರಂತುಕದ ಮೇರೆಗೆ ಯಾವ ಕಾಲದೊಳಗೆ ತೂಕದ ಬಟ್ಟನ್ನು ಅಥವಾ ಅಳತೆ ಮಾಪಕವನ್ನು ಸತ್ಯಾಪನೆ ಮಾಡಿಸಬಹುದೋ ಆ ಕಾಲ;

(ಬಿ) 17ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ತಿಳಿಸಿದ ವ್ಯಕ್ತಿಗಳು ಇಡಬೇಕಾದ ರಿಜಿಸ್ಟರುಗಳು ಮತ್ತು ದಾಖಲೆಗಳು;

(ಸಿ) 23ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಲೈಸೆನ್ಸನ್ನು ನೀಡುವುದಕ್ಕಾಗಿ ಇರುವ ನಮೂನೆ, ರೀತಿ, ಷರತ್ತುಗಳು, ಅವಧಿ, ಪ್ರದೇಶ ವ್ಯಾಪ್ತಿಗೆ ಒಳಪಡುವ ಪ್ರದೇಶ ಮತ್ತು ಫೀಜು;

(ಡಿ) 24ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಯಾವುದೇ ತೂಕದ ಬಟ್ಟಿನ ಅಥವಾ ಅಳತೆ ಮಾಪಕದ ಸತ್ಯಾಪನೆಗಾಗಿ ಅಥವಾ ಅದರ ಮೇಲೆ ಮುದ್ರೆ ಹಾಕುವುದಕ್ಕಾಗಿ ಇರುವ ಫೀಜು;

(ಇ) 24ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ, ಸರ್ಕಾರಿ ಅನುಮೋದಿತ ಪರೀಕ್ಷಾ ಕೇಂದ್ರವನ್ನು ಅಧಿಸೂಚಿಸುವ ರೀತಿ, ನಿಬಂಧನೆಗಳು ಮತ್ತು ಷರತ್ತುಗಳು ಮತ್ತು ಸಂದಾಯ ಮಾಡಬೇಕಾದ ಫೀಜು;

(ಎಫ್) 48ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಅಪರಾಧಗಳನ್ನು ರಾಜಿ ಮಾಡಿಕೊಳ್ಳುವುದಕ್ಕಾಗಿ ಫೀಜು.

(3) ರಾಜ್ಯ ಸರ್ಕಾರವು, ಈ ಪ್ರಕರಣದ ಮೇರೆಗೆ ಯಾವುದೇ ನಿಯಮವನ್ನು ರಚಿಸುವಾಗ ಆ ನಿಯಮದ ಉಲ್ಲಂಘನೆಯು, ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯವಾಗತಕ್ಕದ್ದೆಂದು ಉಪಬಂಧ ಕಲ್ಪಿಸಬಹುದು.

(4) ಈ ಪ್ರಕರಣದ ಮೇರೆಗೆ ನಿಯಮಗಳನ್ನು ರಚಿಸಲು ಇರುವ ಅಧಿಕಾರವು ರಚಿಸುತ್ತಿರುವ ಆ ನಿಯಮಗಳನ್ನು ರಾಜಪತ್ರದಲ್ಲಿ ಮುಂಚಿತವಾಗಿಯೇ ಪ್ರಕಟಿಸತಕ್ಕದ್ದೆಂಬ ಷರತ್ತಿಗೆ ಒಳಪಟ್ಟಿರತಕ್ಕದ್ದು.

(5) ಈ ಪ್ರಕರಣದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ ಎರಡು ಸದನಗಳಿರುವ ರಾಜ್ಯದಲ್ಲಿ ಆ ರಾಜ್ಯದ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ ಮತ್ತು ಒಂದೇ ಸದನ ಇರುವ ರಾಜ್ಯದಲ್ಲಿ ಆ ರಾಜ್ಯ ವಿಧಾನಮಂಡಲದ ಆ ಸದನದ ಮುಂದೆ ಇರಿಸತಕ್ಕದ್ದು.

**54. ಅಧಿಕಾರಗಳ ಪ್ರತ್ಯಾಯೋಜನೆ.–** (1) ಕೇಂದ್ರ ಸರ್ಕಾರವು, ರಾಜ್ಯ ಸರ್ಕಾರದೊಡನೆ ಸಮಾಲೋಚಿಸಿ ಮತ್ತು ಅಧಿಸೂಚನೆಯ ಮೂಲಕ, ಅಪೀಲಿಗೆ ಸಂಬಂಧಿಸಿದಂತೆ 50ನೇ ಪ್ರಕರಣದಿಂದ ಅಥವಾ ನಿಯಮಗಳನ್ನು ರಚಿಸಲು ಇರುವ ಅಧಿಕಾರಕ್ಕೆ ಸಂಬಂಧಿಸಿದ 52ನೇ ಪ್ರಕರಣದಿಂದ ಪ್ರದತ್ತವಾದ ಅಧಿಕಾರ ಅಲ್ಲದ ಈ ಅಧಿನಿಯಮದ ಮೇರೆಗೆ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮದ ಮೇರೆಗೆ ಕೇಂದ್ರ ಸರ್ಕಾರವು, ಚಲಾಯಿಸಬಹುದಾದ ಯಾವುದೇ ಅಧಿಕಾರವನ್ನು ನಿಯಮಿಸಬಹುದಾದಂಥ ವಿಷಯಗಳಿಗೆ ಸಂಬಂಧಿಸಿದಂತೆ ಮತ್ತು ಅಂಥ ಷರತ್ತುಗಳಿಗೆ ಒಳಪಟ್ಟು ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ತನ್ನ ಅಧೀನ ಅಧಿಕಾರಿಯೂ ಸಹ ಚಲಾಯಿಸಬಹುದೆಂದು ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಬಹುದು.

(2) ರಾಜ್ಯ ಸರ್ಕಾರದ ಯಾವುದೇ ಸಾಮಾನ್ಯ ಅಥವಾ ವಿಶೇಷ ನಿರ್ದೇಶನಕ್ಕೆ ಅಥವಾ ಅದು ವಿಧಿಸಿದ ಷರತ್ತಿಗೆ ಒಳಪಟ್ಟು, ಕೇಂದ್ರ ಸರ್ಕಾರವು ಯಾವುದೇ ಅಧಿಕಾರಗಳನ್ನು ಚಲಾಯಿಸಲು ಅಧಿಕೃತಗೊಳಿಸಿದ ಯಾರೇ ವ್ಯಕ್ತಿಯು ಆ ಅಧಿಕಾರಗಳನ್ನು ಅವು ಈ ಅಧಿನಿಯಮದಿಂದ ನೇರವಾಗಿ ಆ ವ್ಯಕ್ತಿಗೆ ಪ್ರದತ್ತವಾಗಿದ್ದಿದ್ದರೆ ಮತ್ತು ಪ್ರತ್ಯಾಯೋಜನೆ ಮೂಲಕ ಕೊಟ್ಟಿರದಿದ್ದರೆ, ಆ ವ್ಯಕ್ತಿಯು ಅವುಗಳನ್ನು ಯಾವ ರೀತಿಯಲ್ಲಿ ಮತ್ತು ಎಷ್ಟರಮಟ್ಟಿಗೆ ಚಲಾಯಿಸಬಹುದಿತ್ತೋ ಅದೇ ರೀತಿಯಲ್ಲಿ ಮತ್ತು ಅಷ್ಟರಮಟ್ಟಿಗೆ ಚಲಾಯಿಸಬಹುದು.

55. **ಕೆಲವು ಸಂದರ್ಭಗಳಲ್ಲಿ ಅಧಿನಿಯಮವು ಅನ್ವಯವಾಗದೇ ಇರುವುದು.–** ಈ ಅಧಿನಿಯಮದ ಉಪಬಂಧಗಳು ಅವು ತೂಕದ ಬಟ್ಟುಗಳನ್ನು ಮತ್ತು ಅಳತೆಯ ಮಾಪಕಗಳನ್ನು ಸತ್ಯಾಪನೆ ಮಾಡುವುದಕ್ಕೆ ಮತ್ತು ಅವುಗಳಿಗೆ ಮುದ್ರೆ ಹಾಕುವುದಕ್ಕೆ ಎಷ್ಟರಮಟ್ಟಿಗೆ ಸಂಬಂಧಪಡುತ್ತವೆಯೋ ಅಷ್ಟರಮಟ್ಟಿಗೆ,–

(ಎ) ಒಕ್ಕೂಟದ ಸಶಸ್ತ್ರದಳ ಬಳಕೆಗಾಗಿ, ಯಾವುದೇ ಶಸ್ತ್ರಾಸ್ತ್ರಗಳನ್ನು, ಮದ್ದುಗುಂಡುಗಳನ್ನು ಅಥವಾ ಅವೆರಡನ್ನೂ ತಯಾರಿಸುವುದರಲ್ಲಿ ಮಾತ್ರವೇ ತೊಡಗಿರುವ ಯಾವುದೇ ಕಾರ್ಖಾನೆಯಲ್ಲಿ ಬಳಸುವ;

(ಬಿ) ವೈಜ್ಞಾನಿಕ ಪರೀಕ್ಷೆಗಾಗಿ ಅಥವಾ ಸಂಶೋಧನೆಗಾಗಿ ಬಳಸುವ;

(ಸಿ) ರಫ್ತು ಮಾಡುವುದಕ್ಕಾಗಿಯೇ ತಯಾರಿಸಿದ

– ಯಾವುದೇ ತೂಕದ ಬಟ್ಟಿಗೆ ಅಥವಾ ಅಳತೆಯ ಮಾಪಕಕ್ಕೆ ಅನ್ವಯವಾಗತಕ್ಕದ್ದಲ್ಲ.

**56. ಗೊತ್ತುಪಡಿಸುವ ಹೊಸ ಅರ್ಹತೆಯು ಹಾಲಿ ಇರುವ ನಿರ್ದೇಶಕನಿಗೆ, ನಿಯಂತ್ರಕನಿಗೆ ಮತ್ತು ಕಾನೂನು ಮಾಪನ ವಿಜ್ಞಾನ ಅಧಿಕಾರಿಗೆ ಬಾಧಿತವಾಗದಿರುವುದು.–** (1) ಯಾವುದೇ ನಿಯಮದಲ್ಲಿ ಬೇರೆಬೇರೆ ಅರ್ಹತೆಗಳನ್ನು ನಿಯಮಿಸಿದ್ದರೂ, ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಪ್ರಾರಂಭದ ನಿಕಟಪೂರ್ವದಲ್ಲಿ ನೇಮಕಗೊಂಡಿದ್ದ ಪ್ರತಿಯೊಬ್ಬ

ನಿರ್ದೇಶಕನನ್ನು, ನಿಯಂತ್ರಕನನ್ನು ಮತ್ತು ಕಾನೂನು ಮಾಪನ ವಿಜ್ಞಾನ ಅಧಿಕಾರಿಯನ್ನು, 13ನೇ ಮತ್ತು 14ನೇ ಪ್ರಕರಣಗಳ (1)ನೇ ಉಪಪ್ರಕರಣದ ಮೇರೆಗೆ ನೇಮಕ ಮಾಡಲಾಗಿದೆ ಎಂದು ಭಾವಿಸತಕ್ಕದ್ದು.

(2) ತೂಕ ಮತ್ತು ಅಳತೆಗಳ ಮಾನಕಗಳ (ಜಾರಿ) ಅಧಿನಿಯಮ, 1985 (1985 ರ 54) ರ ಮೇರೆಗೆ ರಾಜ್ಯ ಸರ್ಕಾರವು ರಚಿಸಿದ ಯಾವ ನಿಯಮಗಳು ಈ ಅಧಿನಿಯಮದ ಪ್ರಾರಂಭಕ್ಕೆ ನಿಕಟಪೂರ್ವದಲ್ಲಿ ಜಾರಿಯಲ್ಲಿದ್ದವೋ ಆ ನಿಯಮಗಳು, ಆ ಬಗ್ಗೆ ರಾಜ್ಯ ಸರ್ಕಾರವು ನಿಯಮಗಳನ್ನು ರಚಿಸುವ ತನಕ ಜಾರಿಯಲ್ಲಿರುವುದು ಮುಂದುವರಿಯತಕ್ಕದ್ದು.

**57. ತೂಕ ಮತ್ತು ಅಳತೆ ಮಾನಕಗಳ ಅಧಿನಿಯಮ, 1976ರ ಮತ್ತು ತೂಕಗಳ ಮತ್ತು ಅಳತೆಗಳ ಮಾನಕ (ಜಾರಿ) ಅಧಿನಿಯಮ, 1985ರ ನಿರಸನ.–** (1) ತೂಕ ಮತ್ತು ಅಳತೆ ಮಾನಕಗಳ ಅಧಿನಿಯಮ 1976 (1976 ರ 60)ನ್ನು ಮತ್ತು ತೂಕಗಳ ಮತ್ತು ಅಳತೆ ಮಾನಕಗಳ (ಜಾರಿ) ಅಧಿನಿಯಮ 1985 (1985 ರ 54)ನ್ನು ಈ ಮೂಲಕ ನಿರಸನಗೊಳಿಸಲಾಗಿದೆ.

(2) ನಿರಸನಗಳಿಗೆ ಸಂಬಂಧಪಟ್ಟಂತೆ ಸಾಮಾನ್ಯ ಖಂಡಗಳ ಅಧಿನಿಯಮ, 1897 (1897 ರ 10)ರಲ್ಲಿ ಇರುವ ಉಪಬಂಧಗಳಿಗೆ ಪ್ರತಿಕೂಲವಾಗದಂತೆ, ತೂಕ ಮತ್ತು ಅಳತೆ ಮಾನಕಗಳ ಅಧಿನಿಯಮ, 1976 (1976 ರ 60) ಮತ್ತು ತೂಕ ಮತ್ತು ಅಳತೆ ಮಾನಕಗಳ (ಜಾರಿ) ಅಧಿನಿಯಮ, 1985 (1985 ರ 54)ರ ಮೇರೆಗೆ ಹೊರಡಿಸಿದ ಯಾವುದೇ ಅಧಿಸೂಚನೆಯು, ರಚಿಸಿದ ನಿಯಮವು ಅಥವಾ ಮಾಡಿದ ಆದೇಶವು ಈ ಅಧಿನಿಯಮದ ಪ್ರಾರಂಭದಲ್ಲಿ ಜಾರಿಯಲ್ಲಿದ್ದರೆ ಅವು ಜಾರಿಯಲ್ಲಿರುವುದು ಮುಂದುವರೆಯತಕ್ಕದ್ದು ಮತ್ತು ಈ ಅಧಿನಿಯಮದ ಸಂವಾದಿ ಉಪಬಂಧದ ಮೇರೆಗೆ ಅದನ್ನು ಹೊರಡಿಸಿದ್ದಿದ್ದರೆ, ಮಾಡಿದ್ದಿದ್ದರೆ ಅಥವಾ ರಚಿಸಿದ್ದಿದ್ದರೆ ಅಥವಾ ನೀಡಿದ್ದಿದ್ದರೆ ಹೇಗೆ ಪರಿಣಾಮವನ್ನು ಹೊಂದಿರುತ್ತಿತ್ತೋ ಹಾಗೆಯೇ ಪರಿಣಾಮವನ್ನು ಹೊಂದಿರತಕ್ಕದ್ದು.

(3) ಹಾಗೆ ನಿರಸನಗೊಂಡಿದ್ದರೂ, ಅಂಥ ಕಾನೂನಿನ ಮೇರೆಗೆ ಮಾಡಿದ ಯಾವುದೇ ನೇಮಕವು, ಹೊರಡಿಸಿದ ಯಾವುದೇ ಅಧಿಸೂಚನೆಯು, ರಚಿಸಿದ ಯಾವುದೇ ನಿಯಮವು, ಹೊರಡಿಸಿದ ಯಾವುದೇ ಆದೇಶವು, ಮಾಡಿದ ಯಾವುದೇ ನೋಂದಣಿಯು, ನೀಡಿದ ಯಾವುದೇ ಲೈಸೆನ್ಸು, ಪ್ರಮಾಣಪತ್ರವು, ನೋಟೀಸು, ತೀರ್ಮಾನವು, ಅನುಮೋದನೆಯು, ಅಧಿಕಾರವು ಅಥವಾ ಸಮ್ಮತಿಯು ಈ ಅಧಿನಿಯಮದ ಪ್ರಾರಂಭದಲ್ಲಿ ಜಾರಿಯಲ್ಲಿದ್ದಿದ್ದರೆ, ಅವು ಜಾರಿಯಲ್ಲಿರುವುದು ಮುಂದುವರೆಯತಕ್ಕದ್ದು ಮತ್ತು ಅವುಗಳನ್ನು ಈ ಅಧಿನಿಯಮದ ಸಂವಾದಿ ಉಪಬಂಧಗಳ ಮೇರೆಗೆ ಅದನ್ನು ಮಾಡಿದ್ದಿದ್ದರೆ, ಹೊರಡಿಸಿದ್ದಿದ್ದರೆ, ಅಥವಾ ನೀಡಿದ್ದಿದ್ದರೆ ಹೇಗೆ ಪರಿಣಾಮವನ್ನು ಹೊಂದಿರುತ್ತಿತ್ತೋ ಹಾಗೆಯೇ ಪರಿಣಾಮವನ್ನು ಹೊಂದಿರತಕ್ಕದ್ದು.

**ಚಿಕಿತ್ಸಾ ಕಾರ್ಯಸಂಸ್ಥೆಗಳ (ನೋಂದಣಿ ಮತ್ತು ವಿನಿಯಮ) ಅಧಿನಿಯಮ, 2010**

**(2010ರ ಅಧಿನಿಯಮ ಸಂಖ್ಯೆ 23)**

[18ನೇ ಆಗಸ್ಟ್, 2010.]

ದೇಶದಲ್ಲಿನ ಚಿಕಿತ್ಸಾ ಕಾರ್ಯಸಂಸ್ಥೆಗಳ ನೋಂದಣಿ ಮತ್ತು ವಿನಿಯಮ ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಪ್ರಾಸಂಗಿಕವಾದ ವಿಷಯಗಳಿಗೆ ಉಪಬಂಧ ಕಲ್ಪಿಸಲು ಅಧಿನಿಯಮ.

ಚಿಕಿತ್ಸಾ ಕಾರ್ಯಸಂಸ್ಥೆಗಳು ಒದಗಿಸಬಹುದಾದಂಥ ಕನಿಷ್ಠ ಗುಣಮಟ್ಟಗಳ ಸೌಲಭ್ಯಗಳನ್ನು ಮತ್ತು ಸೇವೆಗಳನ್ನು ನಿಯಮಿಸುವ ದೃಷ್ಟಿಯಿಂದ ಅವುಗಳ ನೋಂದಣಿಗೆ ಮತ್ತು ವಿನಿಯಮಕ್ಕೆ ಉಪಬಂಧ ಕಲ್ಪಿಸುವುದು, ಅದರಿಂದ ಸಾರ್ವಜನಿಕರ ಆರೋಗ್ಯದಲ್ಲಿ ಸುಧಾರಣೆ ತರುವುದಕ್ಕಾಗಿ ಸಂವಿಧಾನದ 47ನೇ ಅನುಚ್ಛೇದದ ಆಜ್ಞಾಪನೆಯನ್ನು ಈಡೇರಿಸುವುದು ವಿಹಿತವೆಂದು ಪರಿಗಣಿಸಿರುವುದರಿಂದ;

ಮತ್ತು ಮೇಲೆ ಹೇಳಿದ ಯಾವುದೇ ವಿಷಯಗಳಿಗೆ ಸಂಬಂಧಿಸಿದಂತೆ, ಸಂವಿಧಾನದ 249ನೇ ಮತ್ತು 250ನೇ ಪ್ರಕರಣಗಳಲ್ಲಿ ಉಪಬಂಧಿಸಿರುವಂತೆ ಹೊರತು, ರಾಜ್ಯಗಳಿಗೆ ಅನ್ವಯಿಸಿದಂತೆ ಕಾನೂನುಗಳನ್ನು ರಚಿಸಲು ಸಂಸತ್ತಿಗೆ ಯಾವುದೇ ಅಧಿಕಾರ ಇಲ್ಲದಿರುವುದರಿಂದ;

ಸಂವಿಧಾನದ 252ನೇ ಅನುಚ್ಛೇದದ (1)ನೇ ಖಂಡದ ಅನುಸಾರವಾಗಿ, ಅರುಣಾಚಲಪ್ರದೇಶ, ಹಿಮಾಚಲಪ್ರದೇಶ, ಮಿಜೋರಾಂ ಮತ್ತು ಸಿಕ್ಕಿಂ ರಾಜ್ಯಗಳ ವಿಧಾನಮಂಡಲದ ಎಲ್ಲ ಸದನಗಳು ಮೇಲೆ ಹೇಳಿದ ವಿಷಯಗಳನ್ನು ಸಂಸತ್ತು ಕಾನೂನಿನ ಮೂಲಕ, ಆ ರಾಜ್ಯಗಳಲ್ಲಿ ವಿನಿಯಮಿಸಬೇಕೆಂಬುದಾಗಿ ನಿರ್ಣಯಗಳನ್ನು ಅಂಗೀಕರಿಸಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತೊಂದನೇ ವರ್ಷದಲ್ಲಿ ಸಂಸತ್ತಿನಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು:–

## ಅಧ್ಯಾಯ I

### ಪ್ರಾರಂಭಿಕ

1. **ಚಿಕ್ಕ ಹೆಸರು, ಅನ್ವಯ ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ಚಿಕಿತ್ಸಾ ಕಾರ್ಯಸಂಸ್ಥೆಗಳ (ನೋಂದಣಿ ಮತ್ತು ವಿನಿಯಮ) ಅಧಿನಿಯಮ, 2010 ಎಂದು ಕರೆಯತಕ್ಕದ್ದು.

(2) ಮೊದಲಿಗೆ, ಇದು ಇಡೀ ಅರುಣಾಚಲ ಪ್ರದೇಶ, ಹಿಮಾಚಲ ಪ್ರದೇಶ, ಮಿಜೋರಾಂ ಮತ್ತು ಸಿಕ್ಕಿಂ ರಾಜ್ಯಗಳಿಗೆ ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಅನ್ವಯಿಸುತ್ತದೆ ಮತ್ತು ಇದು ಸಂವಿಧಾನದ 252ನೇ ಅನುಚ್ಛೇದದ (1)ನೇ ಖಂಡದ ಮೇರೆಗೆ ಆ ಸಂಬಂಧದಲ್ಲಿ ಅಂಗೀಕರಿಸಿದ ನಿರ್ಣಯದ ಮೂಲಕ ಈ ಅಧಿನಿಯಮವನ್ನು ಯಾವ ರಾಜ್ಯವು ಅಳವಡಿಸಿಕೊಳ್ಳುತ್ತದೋ ಆ ಇತರ ರಾಜ್ಯಕ್ಕೂ ಅನ್ವಯವಾಗತಕ್ಕದ್ದು.

(3) ಇದು ಕೇಂದ್ರ ಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದ ದಿನಾಂಕದಿಂದ ಅರುಣಾಚಲಪ್ರದೇಶ, ಹಿಮಾಚಲಪ್ರದೇಶ, ಮಿಜೋರಾಂ ಮತ್ತು ಸಿಕ್ಕಿಂ ರಾಜ್ಯಗಳಲ್ಲಿ ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಕೂಡಲೇ ಜಾರಿಗೆ ಬರತಕ್ಕದ್ದು ಮತ್ತು ಸಂವಿಧಾನದ 252ನೇ ಅನುಚ್ಛೇದದ (1)ನೇ ಖಂಡದ ಮೇರೆಗೆ ಈ ಅಧಿನಿಯಮವನ್ನು ಯಾವ ರಾಜ್ಯವು ಅಳವಡಿಸಿಕೊಳ್ಳುತ್ತದೋ ಆ ಯಾವುದೇ ಇತರ ರಾಜ್ಯದಲ್ಲಿ ಹಾಗೆ ಅಳವಡಿಸಿಕೊಂಡ ದಿನಾಂಕದಂದು ಜಾರಿಗೆ ಬರತಕ್ಕದ್ದು; ಮತ್ತು ಯಾವುದೇ ರಾಜ್ಯಕ್ಕೆ ಅಥವಾ ಕೇಂದ್ರಾಡಳಿತ ಪ್ರದೇಶಕ್ಕೆ ಸಂಬಂಧಿಸಿದಂತೆ, ಈ ಅಧಿನಿಯಮದ ಪ್ರಾರಂಭಕ್ಕೆ ಅನ್ವಯಿಸಿದಂತೆ ಈ ಅಧಿನಿಯಮದಲ್ಲಿರುವ ಯಾವುದೇ ಉಲ್ಲೇಖ ಎಂದರೆ, ಅಂಥ ರಾಜ್ಯದಲ್ಲಿ ಅಥವಾ ಕೇಂದ್ರಾಡಳಿತ ಪ್ರದೇಶದಲ್ಲಿ ಈ ಅಧಿನಿಯಮವು ಯಾವ ದಿನಾಂಕದಂದು ಜಾರಿಗೆ ಬರುತ್ತದೋ ಆ ದಿನಾಂಕ:

ಪರಂತು, ಚಿಕಿತ್ಸಾ ಕಾರ್ಯಸಂಸ್ಥೆಗಳ ವಿವಿಧ ಪ್ರವರ್ಗಗಳಿಗೆ ಮತ್ತು ಮಾನ್ಯತೆ ಪಡೆದ ಬೇರೆ ಬೇರೆ ಔಷಧ ಪದ್ಧತಿಗಳಿಗೆ ಬೇರೆ ಬೇರೆ ದಿನಾಂಕಗಳನ್ನು ಗೊತ್ತುಪಡಿಸಬಹುದು.

2. **ಪರಿಭಾಷೆಗಳು.–** ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) **"ಪ್ರಾಧಿಕಾರ"** ಎಂದರೆ, 10ನೇ ಪ್ರಕರಣದ ಮೇರೆಗೆ ಸ್ಥಾಪಿಸಿದ ಜಿಲ್ಲಾ ನೋಂದಣಿ ಪ್ರಾಧಿಕಾರ;

(ಬಿ) "ಪ್ರಮಾಣಪತ್ರ" ಎಂದರೆ, 30ನೇ ಪ್ರಕರಣದ ಮೇರೆಗೆ ನೀಡಿದ ನೋಂದಣಿ ಪ್ರಮಾಣಪತ್ರ;

(ಸಿ)"ಚಿಕಿತ್ಸಾ ಕಾರ್ಯಸಂಸ್ಥೆ" ಎಂದರೆ:–

(i) ಆಸ್ಪತ್ರೆ, ಪ್ರಸೂತಿ ಗೃಹ, ನರ್ಸಿಂಗ್ ಹೋಂ, ಔಷಧಾಲಯ, ಚಿಕಿತ್ಸಾಲಯ, ಕ್ಷಯರೋಗ ಆಸ್ಪತ್ರೆ ಅಥವಾ ರೋಗ ನಿರ್ಣಯಕ್ಕೆ ಅಗತ್ಯವಾದ ಸೇವೆಗಳನ್ನು, ಸೌಲಭ್ಯಗಳನ್ನು ಒದಗಿಸುವ ಅಥವಾ ಕಾಯಿಲೆ, ಗಾಯ, ವೈಕಲ್ಯ, ವೈಪರಿತ್ಯ ಅಥವಾ ಗರ್ಭಾವಸ್ಥೆಗೆ, ಮಾನ್ಯತೆ ಪಡೆದ ಯಾವುದೇ ವೈದ್ಯ ಪದ್ಧತಿಯಿಂದ ಚಿಕಿತ್ಸೆ ನೀಡುವ ಅಥವಾ ಆರೈಕೆ ಮಾಡುವ, ಯಾರೇ ವ್ಯಕ್ತಿ ಅಥವಾ ವ್ಯಕ್ತಿಗಳ ಸಮೂಹದಿಂದ ಸ್ಥಾಪಿತವಾದ ಮತ್ತು ಆಡಳಿತ ಹೊಂದಿದ ಅಥವಾ ನಿರ್ವಹಿಸಲ್ಪಡುವ ಸಂಘಟಿತವಾದ ಅಥವಾ ಅಸಂಘಟಿತವಾದ ಯಾವುದೇ ಹೆಸರಿನಿಂದ ಕರೆಯುವ ಸಂಸ್ಥೆ; ಅಥವಾ

(ii) ಯಾರೇ ವ್ಯಕ್ತಿಯಿಂದ ಅಥವಾ ನಿಗಮಿತವಾಗಿರುವ ಅಥವಾ ನಿಗಮಿತವಾಗಿಲ್ಲದಿರುವ ವ್ಯಕ್ತಿಗಳ ನಿಕಾಯದಿಂದ ಸ್ಥಾಪಿತವಾಗಿರುವ ಮತ್ತು ಆಡಳಿತ ನಡೆಸುತ್ತಿರುವ ಪ್ರಯೋಗ ಶಾಲೆಯ ಅಥವಾ ಇತರ ವೈದ್ಯಕೀಯ ಸಾಧನ ಸಲಕರಣೆಗಳ ನೆರವಿನೊಂದಿಗೆ, ಎಲ್ಲಿ ರೋಗಶಾಸ್ತ್ರೀಯ, ಬ್ಯಾಕ್ಟೀರಿಯಾಲಾಜಿಕಲ್, ಆನುವಂಶಿಕತೆಯ ಪರೀಕ್ಷೆ, ವಿಕಿರಣ, ರಾಸಾಯನಿಕ, ಜೈವಿಕ ಪರೀಕ್ಷೆಗಳನ್ನು ಅಥವಾ ಇತರ ರೋಗನಿರ್ಣಯ ಅಥವಾ ಪರೀಕ್ಷಾ ಸೇವೆಗಳನ್ನು ಸಾಮಾನ್ಯವಾಗಿ ನಡೆಸಲಾಗುತ್ತಿದೆಯೋ ಅಲ್ಲಿ, ರೋಗನಿರ್ಣಯಕ್ಕೆ ಅಥವಾ ರೋಗಗಳ ಚಿಕಿತ್ಸೆಗೆ ಸಂಬಂಧಿಸಿದಂತೆ (1)ನೇ ಉಪಖಂಡದಲ್ಲಿ ಉಲ್ಲೇಖಿಸಿದ ಪ್ರತ್ಯೇಕ ಸಂಸ್ಥೆಯಾಗಿ ಅಥವಾ ಉದ್ಯಮ ಸಂಸ್ಥೆಯ ಒಂದು ಭಾಗವಾಗಿ ಸ್ಥಾಪಿತವಾಗಿರುವ, ಒಂದು ಸ್ಥಳ; ಮತ್ತು ಇದು–

(ಎ) ಸರ್ಕಾರವು ಅಥವಾ ಸರ್ಕಾರದ ಇಲಾಖೆಯು;

(ಬಿ) ಸಾರ್ವಜನಿಕ ಅಥವಾ ಖಾಸಗಿಯಾಗಿರುವ ಟ್ರಸ್ಟು;

(ಸಿ) ಕೇಂದ್ರ, ಪ್ರಾಂತೀಯ ಅಥವಾ ರಾಜ್ಯ ಅಧಿನಿಯಮದ ಮೇರೆಗೆ ನೋಂದಣಿಯಾದ, ಸರ್ಕಾರದ ಸ್ವಾಮ್ಯದಲ್ಲಿರುವ ಅಥವಾ ಇಲ್ಲದಿರುವ ನಿಗಮವೂ (ಸೊಸೈಟಿಯೂ ಸೇರಿದಂತೆ);

(ಡಿ) ಸ್ಥಳೀಯ ಪ್ರಾಧಿಕಾರವು; ಮತ್ತು

(ಇ) ಒಬ್ಬನೇ ವೈದ್ಯನು

– ಸ್ಥಾಪಿಸಿರುವ, ನಿಯಂತ್ರಿಸುತ್ತಿರುವ ಅಥವಾ ನಿರ್ವಹಿಸುತ್ತಿರುವ ಚಿಕಿತ್ಸಾ ಕಾರ್ಯಸಂಸ್ಥೆಯು ಒಳಗೊಳ್ಳತಕ್ಕದ್ದು, ಆದರೆ ಸಶಸ್ತ್ರ ಪಡೆಗಳ ಮಾಲೀಕತ್ವದಲ್ಲಿ, ನಿಯಂತ್ರಣದಲ್ಲಿ ಅಥವಾ ನಿರ್ವಹಣೆಯಲ್ಲಿ ಇರುವ ಚಿಕಿತ್ಸಾ ಕಾರ್ಯಸಂಸ್ಥೆಯು ಒಳಗೊಳ್ಳತಕ್ಕದ್ದಲ್ಲ.

*ವಿವರಣೆ.*– ಈ ಖಂಡದ ಉದ್ದೇಶಕ್ಕಾಗಿ, "ಸಶಸ್ತ್ರ ಪಡೆಗಳು" ಎಂದರೆ, ಸೇನಾ ಅಧಿನಿಯಮ, 1950 (1950 ರ 46)ರ, ವಾಯು ಪಡೆ ಅಧಿನಿಯಮ, 1950 (1950 ರ 45)ರ ಮತ್ತು ನೌಕಾ ಅಧಿನಿಯಮ, 1957 (1957 ರ 62)ರ ಮೇರೆಗೆ ಸ್ಥಾಪಿತವಾದ ಪಡೆಗಳು;

(ಡಿ) "ತುರ್ತು ವೈದ್ಯಕೀಯ ಸ್ಥಿತಿ" ಎಂದರೆ, ತಕ್ಷಣವೇ ವೈದ್ಯಕೀಯ ಗಮನ ನೀಡದಿದ್ದರೆ–

(i) ವ್ಯಕ್ತಿಯ ಆರೋಗ್ಯ ಪರಿಸ್ಥಿತಿಯು ಅಥವಾ ಗರ್ಭಿಣಿ ಮಹಿಳೆಯ ಸಂದರ್ಭದಲ್ಲಿ ಅವಳ ಅಥವಾ ಅವಳ ಗರ್ಭಸ್ಥ ಶಿಶುವಿನ ಆರೋಗ್ಯವು ತೀವ್ರ ಗಂಡಾಂತರಕ್ಕೆ ಒಳಗಾಗುವಂಥ; ಅಥವಾ

(ii) ದೈಹಿಕ ಕ್ರಿಯೆಗಳಿಗೆ ತೀವ್ರ ಧಕ್ಕೆಯನ್ನುಂಟು ಮಾಡುವಂಥ; ಅಥವಾ

(iii) ದೇಹದ ಯಾವುದೇ ಅಂಗವು ಅಥವಾ ಅದರ ಭಾಗವು ಗಂಭೀರ ನಿಷ್ಕ್ರಿಯತೆಗೆ ಒಳಗಾಗುವಂಥ

– ಸ್ವರೂಪದ ತೀವ್ರ ಅಸಹನೀಯವಾದ (ತೀವ್ರ ನೋವು ಇರುವ) ಗಂಭೀರ ಲಕ್ಷಣಗಳು ತಾವಾಗಿಯೇ ಕಾಣಿಸಿಕೊಳ್ಳುವ ತುರ್ತು ವೈದ್ಯಕೀಯ ಪರಿಸ್ಥಿತಿ;

(ಇ) "ರಾಷ್ಟ್ರೀಯ ಪರಿಷತ್ತು" ಎಂದರೆ, 3ನೇ ಪ್ರಕರಣದ ಮೇರೆಗೆ ಸ್ಥಾಪಿಸಿದ ಚಿಕಿತ್ಸಾ ಕಾರ್ಯಸಂಸ್ಥೆಗಳ ರಾಷ್ಟ್ರೀಯ ಪರಿಷತ್ತು;

(ಎಫ್) "ಅಧಿಸೂಚನೆ" ಎಂದರೆ, ರಾಜಪತ್ರದಲ್ಲಿ ಪ್ರಕಟಿಸಿದ ಅಧಿಸೂಚನೆ;

(ಜಿ) "ನಿಯಮಿಸಿದ" ಎಂದರೆ, ಕೇಂದ್ರ ಸರ್ಕಾರವು, ಅಥವಾ ಸಂದರ್ಭಾನುಸಾರ ರಾಜ್ಯ ಸರ್ಕಾರವು ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು;

(ಎಚ್) "ಮಾನ್ಯತೆ ಪಡೆದ ವೈದ್ಯ ಪದ್ಧತಿ" ಎಂದರೆ, ಅಲೋಪತಿ, ಯೋಗ, ಪ್ರಕೃತಿ ಚಿಕಿತ್ಸೆ, ಆಯುರ್ವೇದ, ಹೋಮಿಯೋಪತಿ, ಸಿದ್ಧ ಮತ್ತು ಯುನಾನಿ ವೈದ್ಯ ಪದ್ಧತಿ ಅಥವಾ ಕೇಂದ್ರ ಸರ್ಕಾರವು ಮಾನ್ಯತೆ ನೀಡಬಹುದಾದ, ಯಾವುದೇ ಇತರ ವೈದ್ಯ ಪದ್ಧತಿ;

(ಐ) "ರಿಜಿಸ್ಟರ್" ಎಂದರೆ, ಪ್ರಾಧಿಕಾರವು, ರಾಜ್ಯ ಸರ್ಕಾರವು ಮತ್ತು ಕೇಂದ್ರ ಸರ್ಕಾರವು ಈ ಅಧಿನಿಯಮದ ಅನುಕ್ರಮವಾಗಿ 37ನೇ, 38ನೇ ಮತ್ತು 39ನೇ ಪ್ರಕರಣಗಳ ಮೇರೆಗೆ, ನಿರ್ವಹಿಸಿರುವ, ನೋಂದಾಯಿತ ಚಿಕಿತ್ಸಾ ಕಾರ್ಯಸಂಸ್ಥೆಗಳ ವಿವರಗಳನ್ನು ಒಳಗೊಂಡಿರುವ ರಿಜಿಸ್ಟರ್;

(ಜೆ) "ನೋಂದಣಿ" ಎಂದರೆ, 11ನೇ ಪ್ರಕರಣದ ಮೇರೆಗೆ ನೋಂದಾಯಿಸುವುದು ಮತ್ತು ನೋಂದಣಿ ಅಥವಾ ನೋಂದಾಯಿತ ಪದಗಳನ್ನು ತದನುಸಾರವಾಗಿ ಅರ್ಥೈಸತಕ್ಕದ್ದು;

(ಕೆ) "ನಿಯಮಗಳು" ಎಂದರೆ, ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳು;

(ಎಲ್) "ಅನುಸೂಚಿ" ಎಂದರೆ, ಈ ಅಧಿನಿಯಮಕ್ಕೆ ಅನುಬಂಧಿಸಿರುವ ಅನುಸೂಚಿ;

(ಎಂ) "ಗುಣಮಟ್ಟಗಳು" ಎಂದರೆ, ಕೇಂದ್ರ ಸರ್ಕಾರವು ಚಿಕಿತ್ಸಾ ಕಾರ್ಯಸಂಸ್ಥೆಗಳ ನೋಂದಣಿ ಬಗ್ಗೆ, 12ನೇ ಪ್ರಕರಣದ ಮೇರೆಗೆ ನಿಯಮಿಸಬಹುದಾದ ಷರತ್ತುಗಳು;

(ಎನ್) ಕೇಂದ್ರಾಡಳಿತ ಪ್ರದೇಶಕ್ಕೆ ಸಂಬಂಧಿಸಿದಂತೆ, "ರಾಜ್ಯ ಸರ್ಕಾರ" ಎಂದರೆ, ಸಂವಿಧಾನದ 239ನೇ ಅನುಚ್ಛೇದದ ಮೇರೆಗೆ ನೇಮಕಗೊಂಡ ಅದರ ಆಡಳಿತಾಧಿಕಾರಿ; ಮತ್ತು

(ಓ) ಖಂಡ (ಡಿ) ಯಲ್ಲಿ ನಿರ್ದಿಷ್ಟಪಡಿಸಿದ ವೈದ್ಯಕೀಯ ಪರಿಸ್ಥಿತಿಗೆ ಸಂಬಂಧಿಸಿದಂತೆ "ಆರೋಗ್ಯವನ್ನು ಸ್ಥಿರವಾಗಿರಿಸುವುದು (ಅದರ ವ್ಯಾಕರಣ ವ್ಯತ್ಯಾಸಗಳೊಂದಿಗೆ ಮತ್ತು ಸಜಾತೀಯ ಪದಾವಳಿಯೊಂದಿಗೆ)" ಎಂದರೆ, ವ್ಯಕ್ತಿಯನ್ನು ಚಿಕಿತ್ಸಾ ಕಾರ್ಯಸಂಸ್ಥೆಯಿಂದ ಸಾಗಿಸುವ ಕಾಲದಲ್ಲಿ, ಆತನ ಆರೋಗ್ಯ ಪರಿಸ್ಥಿತಿಯಲ್ಲಿ ಉಂಟಾಗಬಹುದಾದ ಅಥವಾ ಸಂಭವಿಸಬಹುದಾದ ಯಾವುದೇ ಗಂಭೀರವಾದ ಕ್ಷೀಣತೆ ಉಂಟಾಗದಂತೆ ಖಚಿತಪಡಿಸಿಕೊಳ್ಳಲು, ಯುಕ್ತ ವೈದ್ಯಕೀಯ ಸಂಭಾವ್ಯತೆಯೊಳಗೆ ಅವಶ್ಯವೆನಿಸಬಹುದಾದಂತಹ ವೈದ್ಯಕೀಯ ಚಿಕಿತ್ಸೆಯನ್ನು ನೀಡುವುದು.

## ಅಧ್ಯಾಯ II

## ಚಿಕಿತ್ಸಾ ಕಾರ್ಯಸಂಸ್ಥೆಗಳ ರಾಷ್ಟ್ರೀಯ ಪರಿಷತ್ತು

**3. ರಾಷ್ಟ್ರೀಯ ಪರಿಷತ್ತಿನ ಸ್ಥಾಪನೆ.–** (1) ಕೇಂದ್ರ ಸರ್ಕಾರವು, ಈ ಅಧಿನಿಯಮದ ಉದ್ದೇಶಗಳಿಗಾಗಿ, ಚಿಕಿತ್ಸಾ ಕಾರ್ಯಸಂಸ್ಥೆಗಳ ರಾಷ್ಟ್ರೀಯ ಪರಿಷತ್ತು ಎಂಬ ಪರಿಷತ್ತನ್ನು ಅಧಿಸೂಚನೆಯ ಮೂಲಕ ಈ ಬಗ್ಗೆ ಗೊತ್ತುಪಡಿಸಬಹುದಾದಂಥ ದಿನಾಂಕದಿಂದ ಜಾರಿಗೆ ಬರುವಂತೆ ಸ್ಥಾಪಿಸತಕ್ಕದ್ದು.

(2) ರಾಷ್ಟ್ರೀಯ ಪರಿಷತ್ತು–

(ಎ) ಆರೋಗ್ಯ ಸೇವೆಗಳ ಮಹಾ ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಾಲಯ, ಪದನಿಮಿತ್ತ ಅಧ್ಯಕ್ಷನಾಗಿರತಕ್ಕದ್ದು;

(ಬಿ) ನಾಲ್ವರು ಪ್ರತಿನಿಧಿಗಳು, ಅವರಲ್ಲಿ ತಲಾ ಒಬ್ಬರು ಈ ಮುಂದಿನ ಸಂಸ್ಥೆಯಿಂದ ಚುನಾಯಿತರಾಗಿರಬೇಕು–

(i) ದಂತ ಚಿಕಿತ್ಸಕರ ಅಧಿನಿಯಮ, 1948 (1948 ರ 16)ರ 3ನೇ ಪ್ರಕರಣದ ಮೇರೆಗೆ ಸ್ಥಾಪಿತವಾದ ಭಾರತೀಯ ದಂತ ಪರಿಷತ್ತು;

(ii) ಭಾರತೀಯ ವೈದ್ಯಕೀಯ ಪರಿಷತ್ತು ಅಧಿನಿಯಮ, 1956 (1956 ರ 102)ರ 3ನೇ ಪ್ರಕರಣದ ಮೇರೆಗೆ ಸ್ಥಾಪಿತವಾದ ಭಾರತೀಯ ವೈದ್ಯಕೀಯ ಪರಿಷತ್ತು;

(iii) ಭಾರತೀಯ ನರ್ಸಿಂಗ್ ಪರಿಷತ್ತು ಅಧಿನಿಯಮ, 1947 (1947 ರ 48)ರ 3ನೇ ಪ್ರಕರಣದ ಮೇರೆಗೆ ಸ್ಥಾಪಿತವಾದ ಭಾರತೀಯ ನರ್ಸಿಂಗ್ ಪರಿಷತ್ತು;

(iv) ಔಷಧ ವಿಜ್ಞಾನ ಅಧಿನಿಯಮ, 1948 (1948 ರ 8)ರ 3ನೇ ಪ್ರಕರಣದ ಮೇರೆಗೆ ಸ್ಥಾಪಿತವಾದ ಭಾರತೀಯ ಔಷಧ ವಿಜ್ಞಾನ ಪರಿಷತ್ತು;

(ಸಿ) ಭಾರತೀಯ ವೈದ್ಯಕೀಯ ಕೇಂದ್ರೀಯ ಪರಿಷತ್ತು ಅಧಿನಿಯಮ, 1970 (1970 ರ 48)ರ 3ನೇ ಪ್ರಕರಣದ ಮೇರೆಗೆ ಸ್ಥಾಪಿತವಾದ ಆಯುರ್ವೇದ, ಸಿದ್ಧ ಹಾಗೂ ಯುನಾನಿ ವೈದ್ಯ ಪದ್ಧತಿಗಳನ್ನು ಪ್ರತಿನಿಧಿಸುವ ಭಾರತೀಯ ವೈದ್ಯಕೀಯ ಕೇಂದ್ರೀಯ ಪರಿಷತ್ತಿನಿಂದ ಚುನಾಯಿತರಾಗುವ ಮೂವರು ಪ್ರತಿನಿಧಿಗಳು;

(ಡಿ) ಹೋಮಿಯೋಪತಿ ಕೇಂದ್ರೀಯ ಪರಿಷತ್ತು ಅಧಿನಿಯಮ, 1973 (1973 ರ 59)ರ 3ನೇ ಪ್ರಕರಣದ ಮೇರೆಗೆ ಸ್ಥಾಪಿತವಾದ ಹೋಮಿಯೋಪತಿ ಕೇಂದ್ರೀಯ ಪರಿಷತ್ತಿನಿಂದ ಚುನಾಯಿತನಾಗುವ ಒಬ್ಬ ಪ್ರತಿನಿಧಿ;

(ಇ) ಭಾರತೀಯ ವೈದ್ಯಕೀಯ ಸಂಘದ ಕೇಂದ್ರೀಯ ಪರಿಷತ್ತಿನಿಂದ ಚುನಾಯಿತನಾಗುವ ಒಬ್ಬ ಪ್ರತಿನಿಧಿ;

(ಎಫ್) ಭಾರತೀಯ ಮಾನಕಗಳ ಸಂಸ್ಥೆ ಅಧಿನಿಯಮ, 1986 (1986 ರ 63)ರ 3ನೇ ಪ್ರಕರಣದ ಮೇರೆಗೆ ಸ್ಥಾಪಿತವಾದ ಭಾರತೀಯ ಮಾನಕಗಳ ಸಂಸ್ಥೆಯ ಒಬ್ಬ ಪ್ರತಿನಿಧಿ;

(ಜಿ) ರಾಜ್ಯಗಳ ಪುನರ್‌ರಚನೆ ಅಧಿನಿಯಮ, 1956 (1956 ರ 37)ರ 15ನೇ ಪ್ರಕರಣದ ಮೇರೆಗೆ ರಚಿತವಾದ ವಿಭಾಗೀಯ ಪರಿಷತ್ತಿನ ಇಬ್ಬರು ಪ್ರತಿನಿಧಿಗಳು;

(ಎಚ್) ಈಶಾನ್ಯ ಪರಿಷತ್ತು ಅಧಿನಿಯಮ, 1971 (1971 ರ 84)ರ 3ನೇ ಪ್ರಕರಣದ ಮೇರೆಗೆ ಸ್ಥಾಪಿತವಾದ ಈಶಾನ್ಯ ಪರಿಷತ್ತಿನ ಇಬ್ಬರು ಪ್ರತಿನಿಧಿಗಳು;

(ಐ) ಖಂಡ (ಬಿ)ಯ ಮೇರೆಗೆ ಯಾವ ಪದ್ಧತಿಗಳಿಗೆ ಪ್ರಾತಿನಿಧ್ಯ ನೀಡಲಾಗಿದೆಯೋ ಆ ಪದ್ಧತಿಗಳನ್ನು ಹೊರತುಪಡಿಸಿ, ಅರೆ ವೈದ್ಯಕೀಯ ಪದ್ಧತಿಗಳ ಕ್ಷೇತ್ರದ ಒಬ್ಬ ಪ್ರತಿನಿಧಿ;

(ಜೆ) ಕೇಂದ್ರ ಸರ್ಕಾರವು, ರಾಷ್ಟ್ರಮಟ್ಟದ ಗ್ರಾಹಕರ ಗುಂಪಿನಿಂದ ನಾಮನಿರ್ದೇಶನ ಮಾಡುವ ಇಬ್ಬರು ಪ್ರತಿನಿಧಿಗಳು;

(ಕೆ) ಕೇಂದ್ರ ಸರ್ಕಾರವು, ನಾಮನಿರ್ದೇಶನ ಮಾಡುವ ಆಯುರ್ವೇದ, ಸಿದ್ಧ ಮತ್ತು ಯುನಾನಿಗೆ ಸಂಬಂಧಿಸಿದಂತೆ, ಭಾರತೀಯ ವೈದ್ಯ ಪದ್ಧತಿಗಳ ಸಂಘಗಳ ಒಬ್ಬ ಪ್ರತಿನಿಧಿ;

(ಎಲ್) ಭಾರತೀಯ ಗುಣಮಟ್ಟ ಪರಿಷತ್ತಿನ ಪ್ರಧಾನ ಕಾರ್ಯದರ್ಶಿ ಪದನಿಮಿತ್ತ

– ಇವರುಗಳನ್ನು ಒಳಗೊಂಡಿರತಕ್ಕದ್ದು.

(3) ರಾಷ್ಟ್ರೀಯ ಪರಿಷತ್ತಿನ ನಾಮನಿರ್ದೇಶಿತ ಸದಸ್ಯರು ಮೂರು ವರ್ಷಗಳ ಅವಧಿಗೆ ಪದವನ್ನು ಧಾರಣ ಮಾಡತಕ್ಕದ್ದು. ಆದರೆ ಮೂರು ವರ್ಷಗಳ ಗರಿಷ್ಠ ಮತ್ತೊಂದು ಅವಧಿಗೆ ಪುನರ್ ನಾಮನಿರ್ದೇಶನ ಹೊಂದಲು ಅರ್ಹರಾಗಿರತಕ್ಕದ್ದು.

(4) ರಾಷ್ಟ್ರೀಯ ಪರಿಷತ್ತಿನ ಚುನಾಯಿತ ಸದಸ್ಯರು ಮೂರು ವರ್ಷಗಳ ಅವಧಿಗೆ ಪದವನ್ನು ಧಾರಣ ಮಾಡತಕ್ಕದ್ದು, ಆದರೆ ಪುನಃ ಚುನಾಯಿತರಾಗುವುದಕ್ಕೆ ಅರ್ಹರಾಗಿರತಕ್ಕದ್ದು:

ಪರಂತು, ನಾಮನಿರ್ದೇಶಿತ ಅಥವಾ ಸಂದರ್ಭಾನುಸಾರ ಚುನಾಯಿತ ವ್ಯಕ್ತಿಯು, ಯಾವ ಪದದ ಬಲದಿಂದ ಅವನು ಪರಿಷತ್ತಿಗೆ ನಾಮನಿರ್ದೇಶಿತನಾದನೋ ಅಥವಾ ಚುನಾಯಿತನಾದನೋ ಆ ಪದವನ್ನು ಎಲ್ಲಿಯವರೆಗೆ ಧಾರಣ ಮಾಡಿರುತ್ತಾನೋ ಅಲ್ಲಿಯವರೆಗೆ ಪರಿಷತ್ತಿನ ಪದವನ್ನು ಧಾರಣ ಮಾಡತಕ್ಕದ್ದು.

(5) ರಾಷ್ಟ್ರೀಯ ಪರಿಷತ್ತಿನ ಸದಸ್ಯರು, ಕೇಂದ್ರ ಸರ್ಕಾರವು ನಿಯಮಿಸಬಹುದಾದಂತಹ ಭತ್ಯೆಗಳಿಗೆ ಹಕ್ಕುಳ್ಳವರಾಗಿರತಕ್ಕದ್ದು.

(6) ರಾಷ್ಟ್ರೀಯ ಪರಿಷತ್ತು ಕೇಂದ್ರ ಸರ್ಕಾರದ ಪೂರ್ವಾನುಮೋದನೆಗೆ ಒಳಪಟ್ಟು, ಕೋರಂನ್ನು ಗೊತ್ತುಪಡಿಸುವ ಮತ್ತು ಅದರದೇ ಆದ ಕಾರ್ಯವಿಧಾನವನ್ನು ಹಾಗೂ ಅದು ನಿರ್ವಹಿಸಬೇಕಾದ ಎಲ್ಲಾ ಕಾರ್ಯಕಲಾಪಗಳನ್ನು ನಡೆಸುವುದನ್ನು ವಿನಿಯಮಿಸಿ ಉಪವಿಧಿಗಳನ್ನು ರಚಿಸಬಹುದು.

(7) ರಾಷ್ಟ್ರೀಯ ಪರಿಷತ್ತು ಕಡೇ ಪಕ್ಷ ಮೂರು ತಿಂಗಳಿಗೆ ಒಮ್ಮೆಯಾದರೂ ಸಭೆ ಸೇರತಕ್ಕದ್ದು.

(8) ರಾಷ್ಟ್ರೀಯ ಪರಿಷತ್ತು ಉಪ ಸಮಿತಿಗಳನ್ನು ರಚಿಸಬಹುದು ಮತ್ತು ನಿರ್ದಿಷ್ಟ ವಿಷಯಗಳ ಪರಿಶೀಲನೆಗಾಗಿ, ರಾಷ್ಟ್ರೀಯ ಪರಿಷತ್ತಿನ ಸದಸ್ಯರಲ್ಲದ, ಸೂಕ್ತವೆಂದು ತಾನು ಭಾವಿಸುವಂಥ, ವ್ಯಕ್ತಿಗಳನ್ನು ಎರಡು ವರ್ಷಗಳಿಗಿಂತ ಹೆಚ್ಚಿಲ್ಲದ ಅವಧಿಗೆ ಅಂತಹ ಉಪ ಸಮಿತಿಗಳಿಗೆ ನೇಮಕ ಮಾಡಬಹುದು.

(9) ರಾಷ್ಟ್ರೀಯ ಪರಿಷತ್ತಿನಲ್ಲಿ ಯಾವುದೇ ಸ್ಥಾನ ಖಾಲಿ ಇದ್ದಾಗ್ಯೂ ಅದರ ಪ್ರಕಾರ್ಯಗಳನ್ನು ನಿರ್ವಹಿಸಬಹುದು.

(10) ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ಯಾರೇ ವ್ಯಕ್ತಿಯನ್ನು ರಾಷ್ಟ್ರೀಯ ಪರಿಷತ್ತಿನ ಕಾರ್ಯದರ್ಶಿಯಾಗಿ ಕೇಂದ್ರ ಸರ್ಕಾರವು ನೇಮಕ ಮಾಡತಕ್ಕದ್ದು ಮತ್ತು ಕೇಂದ್ರ ಸರ್ಕಾರವು ಅವಶ್ಯವೆಂದು ಪರಿಗಣಿಸಬಹುದಾದಂಥ ಲಿಪಿಕ ಮತ್ತು ಇತರ ಸಿಬ್ಬಂದಿಯನ್ನು ರಾಷ್ಟ್ರೀಯ ಪರಿಷತ್ತಿಗೆ ಒದಗಿಸತಕ್ಕದ್ದು.

4. **ಸದಸ್ಯನಾಗಿ ನೇಮಕ ಹೊಂದಲು ಅನರ್ಹತೆಗಳು.–** ಒಬ್ಬ ವ್ಯಕ್ತಿಯು,–

(ಎ) ನೈತಿಕ ಅಧಃಪತನವನ್ನು ಒಳಗೊಂಡ ಅಪರಾಧಕ್ಕಾಗಿ ನಿರ್ಣೀತ ಅಪರಾಧಿಯಾಗಿದ್ದಾನೆಂದು ಮತ್ತು ಕಾರಾವಾಸ ಶಿಕ್ಷೆಗೆ ಗುರಿಯಾಗಿದ್ದಾನೆಂದೂ ಕೇಂದ್ರ ಸರ್ಕಾರವು ಅಭಿಪ್ರಾಯಪಟ್ಟರೆ; ಅಥವಾ

(ಬಿ) ಆತ ಅವಿಮುಕ್ತ ದಿವಾಳಿಯಾಗಿದ್ದರೆ; ಅಥವಾ

(ಸಿ) ಅಸ್ವಸ್ಥಚಿತ್ತನಾಗಿದ್ದರೆ, ಮತ್ತು ಸಕ್ಷಮ ನ್ಯಾಯಾಲಯವು ಹಾಗೆಂದು ಘೋಷಿಸಿದ್ದರೆ; ಅಥವಾ

(ಡಿ) ಸರ್ಕಾರದ ಅಥವಾ ಸರ್ಕಾರದ ಒಡೆತನದಲ್ಲಿರುವ ಅಥವಾ ನಿಯಂತ್ರಣದಲ್ಲಿರುವ ನಿಗಮದ ಸೇವೆಯಿಂದ ಆತನನ್ನು ತೆಗೆದುಹಾಕಿದ್ದರೆ ಅಥವಾ ವಜಾ ಮಾಡಿದ್ದರೆ; ಅಥವಾ

(ಇ) ಸದಸ್ಯನಾಗಿ ಅತನ ಪ್ರಕಾರ್ಯಗಳನ್ನು ನಿರ್ವಹಿಸುವುದರಿಂದ ಪರಿಷತ್ತಿನ ಆರ್ಥಿಕ ಅಥವಾ ಇತರ ಹಿತಾಸಕ್ತಿಗಳ ಮೇಲೆ ಪ್ರತಿಕೂಲ ಪರಿಣಾಮ ಉಂಟಾಗುವ ಸಂಭವ ಇದೆ ಎಂದು ಕೇಂದ್ರ ಸರ್ಕಾರವು ಅಭಿಪ್ರಾಯಪಟ್ಟರೆ

– ಆತನನ್ನು ರಾಷ್ಟ್ರೀಯ ಪರಿಷತ್ತಿನ ಸದಸ್ಯನನ್ನಾಗಿ ನೇಮಕಗೊಳ್ಳಲು ಅನರ್ಹನನ್ನಾಗಿಸತಕ್ಕದ್ದು.

5. **ರಾಷ್ಟ್ರೀಯ ಪರಿಷತ್ತಿನ ಪ್ರಕಾರ್ಯಗಳು.–** ರಾಷ್ಟ್ರೀಯ ಪರಿಷತ್ತು–

(ಎ) ಈ ಅಧಿನಿಯಮವು ಪ್ರಾರಂಭವಾದ ದಿನಾಂಕದಿಂದ ಎರಡು ವರ್ಷಗಳೊಳಗಾಗಿ, ಚಿಕಿತ್ಸಾ ಕಾರ್ಯಸಂಸ್ಥೆಗಳ ರಾಷ್ಟ್ರೀಯ ರಿಜಿಸ್ಟರನ್ನು ಸಂಕಲಿಸತಕ್ಕದ್ದು ಮತ್ತು ಪ್ರಕಟಿಸತಕ್ಕದ್ದು;

(ಬಿ) ಚಿಕಿತ್ಸಾ ಕಾರ್ಯಸಂಸ್ಥೆಗಳನ್ನು ಬೇರೆಬೇರೆ ಪ್ರವರ್ಗಗಳಾಗಿ ವರ್ಗೀಕರಿಸತಕ್ಕದ್ದು;

(ಸಿ) ಕನಿಷ್ಠ ಗುಣಮಟ್ಟಗಳನ್ನು ರೂಪಿಸತಕ್ಕದ್ದು ಮತ್ತು ಅವುಗಳನ್ನು ನಿಯತಕಾಲಿಕವಾಗಿ ಪುನರವಲೋಕಿಸತಕ್ಕದ್ದು;

(ಡಿ) ಚಿಕಿತ್ಸಾ ಕಾರ್ಯಸಂಸ್ಥೆಗಳಿಂದ ಸಮರ್ಪಕವಾದ ಆರೋಗ್ಯ ಪಾಲನೆಯನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ಪರಿಷತ್ತು ಸ್ಥಾಪನೆಯಾದಗಿನಿಂದ ಎರಡು ವರ್ಷಗಳೊಳಗೆ, ಗುಣಮಟ್ಟಗಳ ಮೊದಲ ಸೆಟ್ಟನ್ನು ನಿರ್ಧರಿಸತಕ್ಕದ್ದು;

(ಇ) ಚಿಕಿತ್ಸಾ ಕಾರ್ಯಸಂಸ್ಥೆಗಳಿಗೆ ಸಂಬಂಧಿಸಿದ ಅಂಕಿ-ಅಂಶಗಳನ್ನು ಸಂಗ್ರಹಿಸತಕ್ಕದ್ದು;

(ಎಫ್) ಕೇಂದ್ರ ಸರ್ಕಾರವು ಕಾಲ ಕಾಲಕ್ಕೆ ನಿರ್ಧರಿಸುವಂಥ ಯಾವುದೇ ಇತರ ಪ್ರಕಾರ್ಯವನ್ನು ನೆರವೇರಿಸತಕ್ಕದ್ದು.

6. **ಸಲಹೆಯನ್ನು ಅಥವಾ ಸಹಾಯವನ್ನು ಕೋರಲು ಅಧಿಕಾರ.**- ಈ ಅಧಿನಿಯಮದ ಯಾವುವೇ ಉಪಬಂಧಗಳನ್ನು ಕಾರ್ಯಗತಗೊಳಿಸುವಾಗ ಯಾರ ಸಹಕಾರವು ಅಥವಾ ಸಲಹೆಯು ಅಪೇಕ್ಷಣೀಯವಾದುದಾಗಿದೆ ಎಂದು ರಾಷ್ಟ್ರೀಯ ಪರಿಷತ್ತು ಭಾವಿಸುತ್ತದೋ, ಅಂತಹ ಯಾರೇ ವ್ಯಕ್ತಿಯನ್ನು ಅಥವಾ ಸಂಸ್ಥೆಯನ್ನು ತನ್ನೊಂದಿಗೆ ಸಹವರ್ತಿಯನ್ನಾಗಿಸಿಕೊಳ್ಳಬಹುದು.

7. **ರಾಷ್ಟ್ರೀಯ ಪರಿಷತ್ತು ಸಮಾಲೋಚನಾ ಪ್ರಕ್ರಿಯೆಯನ್ನು ಅನುಸರಿಸುವುದು.**- ರಾಷ್ಟ್ರೀಯ ಪರಿಷತ್ತು, ನಿಯಮಿಸಬಹುದಾದಂಥ ಕಾರ್ಯವಿಧಾನಕ್ಕೆ ಅನುಸಾರವಾಗಿ, ಗುಣಮಟ್ಟಗಳನ್ನು ನಿರ್ಧರಿಸುವುದಕ್ಕಾಗಿ ಮತ್ತು ಚಿಕಿತ್ಸಾ ಕಾರ್ಯಸಂಸ್ಥೆಗಳ ವರ್ಗೀಕರಣಕ್ಕಾಗಿ ಸಮಾಲೋಚನಾ ಪ್ರಕ್ರಿಯೆಯನ್ನು ಅನುಸರಿಸತಕ್ಕದ್ದು.

## ಅಧ್ಯಾಯ III

## ಚಿಕಿತ್ಸಾ ಕಾರ್ಯಸಂಸ್ಥೆಗಳ ನೋಂದಣಿ ಮತ್ತು ಗುಣಮಟ್ಟಗಳು

8. **ಚಿಕಿತ್ಸಾ ಕಾರ್ಯಸಂಸ್ಥೆಗಳ ರಾಜ್ಯ ಪರಿಷತ್ತು.**- (1) ಪ್ರತಿಯೊಂದು ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ ಚಿಕಿತ್ಸಾ ಕಾರ್ಯಸಂಸ್ಥೆಗಳ ರಾಜ್ಯ ಪರಿಷತ್ತನ್ನು ಅಥವಾ ಸಂದರ್ಭಾನುಸಾರ ಚಿಕಿತ್ಸಾ ಕಾರ್ಯಸಂಸ್ಥೆಗಳ ಕೇಂದ್ರಾಡಳಿತ ಪ್ರದೇಶ ಪರಿಷತ್ತನ್ನು ಸ್ಥಾಪಿಸತಕ್ಕದ್ದು.

(2) ರಾಜ್ಯ ಪರಿಷತ್ತು ಅಥವಾ ಸಂದರ್ಭಾನುಸಾರ ಕೇಂದ್ರಾಡಳಿತ ಪ್ರದೇಶ ಪರಿಷತ್ತು ಈ ಮುಂದಿನ ಸದಸ್ಯರನ್ನು ಒಳಗೊಂಡಿರತಕ್ಕದ್ದು, ಎಂದರೆ:-

(ಎ) ಕಾರ್ಯದರ್ಶಿ, ಆರೋಗ್ಯ —ಪದನಿಮಿತ್ತ, ಅಧ್ಯಕ್ಷನಾಗಿರತಕ್ಕದ್ದು;

(ಬಿ) ಆರೋಗ್ಯ ಸೇವೆಗಳ ನಿರ್ದೇಶಕರು —ಪದನಿಮಿತ್ತ ಸದಸ್ಯ-ಕಾರ್ಯದರ್ಶಿ;

(ಸಿ) ಭಾರತೀಯ ವೈದ್ಯ ಪದ್ಧತಿಗಳ ಬೇರೆಬೇರೆ ವಿಭಾಗಗಳ ನಿರ್ದೇಶಕರು —ಪದನಿಮಿತ್ತ ಸದಸ್ಯರು;

(ಡಿ) ಈ ಮುಂದಿನವುಗಳ ಕಾರ್ಯಕಾರಿ ಸಮಿತಿಗಳಿಂದ ಚುನಾಯಿತರಾದ ತಲಾ ಒಬ್ಬ ಪ್ರತಿನಿಧಿ-

(i) ಭಾರತದ ರಾಜ್ಯ ವೈದ್ಯಕೀಯ ಪರಿಷತ್ತು;

(ii) ಭಾರತದ ರಾಜ್ಯ ದಂತ ವೈದ್ಯ ಪರಿಷತ್ತು;

(iii) ಭಾರತದ ರಾಜ್ಯ ಶುಶ್ರೂಷಾ ಪರಿಷತ್ತು;

(iv) ಭಾರತದ ರಾಜ್ಯ ಔಷಧ ವಿಜ್ಞಾನ ಪರಿಷತ್ತು;

(ಇ) ಆಯುರ್ವೇದ, ಸಿದ್ಧ ಮತ್ತು ಯುನಾನಿಗಳನ್ನು ಪ್ರತಿನಿಧಿಸುವ ಭಾರತೀಯ ವೈದ್ಯ ಪದ್ಧತಿಯ ರಾಜ್ಯ ಪರಿಷತ್ತಿನ ಅಥವಾ ಸಂದರ್ಭಾನುಸಾರ ಕೇಂದ್ರಾಡಳಿತ ಪ್ರದೇಶ ಪರಿಷತ್ತಿನ ಕಾರ್ಯಕಾರಿಯಿಂದ ಚುನಾಯಿತರಾಗುವ ಮೂವರು ಪ್ರತಿನಿಧಿಗಳು;

(ಎಫ್) ಭಾರತೀಯ ವೈದ್ಯಕೀಯ ಸಂಘದ ರಾಜ್ಯ ಪರಿಷತ್ತಿನಿಂದ ಚುನಾಯಿತರಾಗುವ ಒಬ್ಬ ಪ್ರತಿನಿಧಿ;

(ಜಿ) ಅರೆ ವೈದ್ಯಕೀಯ ಪದ್ಧತಿಗಳ ಕ್ಷೇತ್ರದ ಒಬ್ಬ ಪ್ರತಿನಿಧಿ;

(ಎಚ್) ಆರೋಗ್ಯ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ರಾಜ್ಯ ಮಟ್ಟದ ಗ್ರಾಹಕ ಗುಂಪುಗಳ ಅಥವಾ ಹೆಸರಾಂತ ಸರ್ಕಾರೇತರ ಸಂಘ ಸಂಸ್ಥೆಗಳ ಸಂಘಟನೆಗಳಿಂದ ಇಬ್ಬರು ಪ್ರತಿನಿಧಿಗಳು.

(3) ರಾಜ್ಯ ಪರಿಷತ್ತಿನ ಅಥವಾ ಸಂದರ್ಭಾನುಸಾರ, ಕೇಂದ್ರಾಡಳಿತ ಪ್ರದೇಶ ಪರಿಷತ್ತಿನ ನಾಮ ನಿರ್ದೇಶಿತ ಸದಸ್ಯನು, ಮೂರು ವರ್ಷಗಳ ಅವಧಿಯವರೆಗೆ ಪದವನ್ನು ಧಾರಣ ಮಾಡತಕ್ಕದ್ದು, ಆದರೆ ಮೂರು ವರ್ಷಗಳ ಗರಿಷ್ಠ ಮತ್ತೊಂದು ಅವಧಿಗೆ ಪುನರ್ ನಾಮನಿರ್ದೇಶನ ಹೊಂದಲು ಅರ್ಹನಾಗಿರತಕ್ಕದ್ದು.

(4) ರಾಜ್ಯ ಪರಿಷತ್ತಿನ ಅಥವಾ ಸಂದರ್ಭಾನುಸಾರ ಕೇಂದ್ರಾಡಳಿತ ಪ್ರದೇಶ ಪರಿಷತ್ತಿನ ಚುನಾಯಿತ ಸದಸ್ಯರು ಮೂರು ವರ್ಷಗಳ ಅವಧಿಗೆ ಪದವನ್ನು ಧಾರಣ ಮಾಡತಕ್ಕದ್ದು, ಆದರೆ ಮತ್ತೆ ಚುನಾಯಿತರಾಗುವುದಕ್ಕೆ ಅರ್ಹರಾಗಿರತಕ್ಕದ್ದು:

ಪರಂತು, ನಾಮನಿರ್ದೇಶಿತ ಅಥವಾ ಸಂದರ್ಭಾನುಸಾರ ಚುನಾಯಿತ ವ್ಯಕ್ತಿಯು ರಾಜ್ಯ ಪರಿಷತ್ತಿಗೆ ಅಥವಾ ಸಂದರ್ಭಾನುಸಾರ ಕೇಂದ್ರಾಡಳಿತ ಪ್ರದೇಶ ಪರಿಷತ್ತಿಗೆ ಯಾವ ಪದದ ಬಲದಿಂದ ನಾಮನಿರ್ದೇಶಿತನಾದನೋ ಅಥವಾ ಚುನಾಯಿತನಾಗಿದ್ದನೋ ತನ್ನ ಆ ಪದವನ್ನು ಎಲ್ಲಿಯವರೆಗೆ ಧಾರಣ ಮಾಡಿರುತ್ತಾನೋ ಅಲ್ಲಿಯವರೆಗೆ ಪರಿಷತ್ತಿನ ಪದವನ್ನು ಧಾರಣ ಮಾಡತಕ್ಕದ್ದು.

(5) ರಾಜ್ಯ ಪರಿಷತ್ತು ಅಥವಾ ಸಂದರ್ಭಾನುಸಾರ ಕೇಂದ್ರಾಡಳಿತ ಪ್ರದೇಶ ಪರಿಷತ್ತು ಈ ಮುಂದಿನ ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು, ಎಂದರೆ:–

(ಎ) ಚಿಕಿತ್ಸಾ ಕಾರ್ಯಸಂಸ್ಥೆಗಳ ರಾಜ್ಯ ರಿಜಿಸ್ಟರುಗಳನ್ನು ಸಂಕಲಿಸುವುದು ಮತ್ತು ತಹಲ್‌ವರೆಗೆ ಪರಿಷ್ಕರಿಸುವುದು;

(ಬಿ) ರಾಷ್ಟ್ರೀಯ ರಿಜಿಸ್ಟರನ್ನು ತಹಲ್‌ವರೆಗೆ ಪರಿಷ್ಕರಿಸಲು ವರದಿಗಳನ್ನು ಕಳುಹಿಸುವುದು;

(ಸಿ) ರಾಷ್ಟ್ರೀಯ ಪರಿಷತ್ತಿನಲ್ಲಿ ರಾಜ್ಯವನ್ನು ಪ್ರತಿನಿಧಿಸುವುದು;

(ಡಿ) ಪ್ರಾಧಿಕಾರದ ಆದೇಶಗಳ ವಿರುದ್ಧದ ಅಪೀಲುಗಳನ್ನು ವಿಚಾರಣೆ ಮಾಡುವುದು; ಮತ್ತು

(ಇ) ತಮ್ಮ ತಮ್ಮ ರಾಜ್ಯಗಳೊಳಗೆ ಗುಣಮಟ್ಟಗಳ ಅನುಷ್ಠಾನದ ಸ್ಥಿತಿ ಕುರಿತ ವರದಿಯನ್ನು ಪ್ರತಿ ವರ್ಷ ಪ್ರಕಟಿಸುವುದು.

**9. ರಾಷ್ಟ್ರೀಯ ಪರಿಷತ್ತಿಗೆ ಮಾಹಿತಿಯನ್ನು ಒದಗಿಸುವುದು.–** ರಾಜ್ಯದ ಚಿಕಿತ್ಸಾ ಕಾರ್ಯಸಂಸ್ಥೆಗಳ ರಾಜ್ಯ ರಿಜಿಸ್ಟರನ್ನು ಸಂಕಲಿಸುವುದು ಮತ್ತು ತಹಲ್‌ವರೆಗೆ ಪರಿಷ್ಕರಿಸುವುದು ಅಲ್ಲದೆ ರಾಷ್ಟ್ರೀಯ ರಿಜಿಸ್ಟರನ್ನು ತಹಲ್‌ವರೆಗೆ ಪರಿಷ್ಕರಿಸಲು ಡಿಜಿಟಲ್ ಫಾರ್ಮ್ಯಾಟ್‌ಯಲ್ಲಿ ಮಾಸಿಕ ವಿವರಪಟ್ಟಿಕೆಗಳನ್ನು ಕಳುಹಿಸುವುದು ಚಿಕಿತ್ಸಾ ಕಾರ್ಯಸಂಸ್ಥೆಗಳ ರಾಜ್ಯ ಪರಿಷತ್ತಿನ ಜವಾಬ್ದಾರಿಯಾಗಿರತಕ್ಕದ್ದು.

**10. ನೋಂದಣಿ ಪ್ರಾಧಿಕಾರ.–** (1) ರಾಜ್ಯ ಸರ್ಕಾರವು, ಚಿಕಿತ್ಸಾ ಕಾರ್ಯಸಂಸ್ಥೆಗಳ ನೋಂದಣಿಗಾಗಿ ಪ್ರತಿಯೊಂದು ಜಿಲ್ಲೆಗೆ, ಜಿಲ್ಲಾ ನೋಂದಣಿ ಪ್ರಾಧಿಕಾರ ಎಂಬ ಪ್ರಾಧಿಕಾರವನ್ನು ಈ ಮುಂದಿನ ಸದಸ್ಯರನ್ನೊಳಗೊಂಡಂತೆ ಅಧಿಸೂಚನೆಯ ಮೂಲಕ, ಸ್ಥಾಪಿಸತಕ್ಕದ್ದು, ಎಂದರೆ:–

(ಎ) ಜಿಲ್ಲಾ ಕಲೆಕ್ಟರು;

(ಬಿ) ಜಿಲ್ಲಾ ಆರೋಗ್ಯ ಅಧಿಕಾರಿ;

(ಸಿ) ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ಅರ್ಹತೆಗಳನ್ನು ಹೊಂದಿರುವ ಮತ್ತು ಅಂಥ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ನೇಮಕಗೊಳ್ಳುವ ಮೂವರು ಸದಸ್ಯರು.

(2) ಉಪಪ್ರಕರಣ (1)ರಲ್ಲಿ ಏನೇ ಒಳಗೊಂಡಿದ್ದರೂ, 14ನೇ ಪ್ರಕರಣದ ಮೇರೆಗೆ ಚಿಕಿತ್ಸಾ ಕಾರ್ಯಸಂಸ್ಥೆಗಳ ತಾತ್ಕಾಲಿಕ ನೋಂದಣಿಯ ಉದ್ದೇಶಗಳಿಗಾಗಿ ಜಿಲ್ಲಾ ಆರೋಗ್ಯ ಅಧಿಕಾರಿಯು ಅಥವಾ ಮುಖ್ಯ ವೈದ್ಯಕೀಯ ಅಧಿಕಾರಿಯು

ಸಂಚಾಲಕನು, ಅಧ್ಯಕ್ಷನು (ಯಾವುದೇ ಹೆಸರಿನಿಂದ ಕರೆಯಲಿ) ಅವನು, ಪ್ರಾಧಿಕಾರದ ಅಧಿಕಾರಗಳನ್ನು ನಿಯಮಿಸಬಹುದಾದಂಥ ಕಾರ್ಯವಿಧಾನದ ಪ್ರಕಾರ ಚಲಾಯಿಸತಕ್ಕದ್ದು.

11. **ಚಿಕಿತ್ಸಾ ಕಾರ್ಯಸಂಸ್ಥೆಗಳ ನೋಂದಣಿ.–** ಯಾರೇ ವ್ಯಕ್ತಿಯು, ಯಾವುದೇ ಚಿಕಿತ್ಸಾ ಕಾರ್ಯಸಂಸ್ಥೆಯನ್ನು ಈ ಅಧಿನಿಯಮದ ಉಪಬಂಧಗಳಿಗೆ ಅನುಸಾರವಾಗಿ ಕ್ರಮಬದ್ಧವಾಗಿ ನೋಂದಾಯಿಸಿದ್ದ ಹೊರತು, ಅದನ್ನು ನಡೆಸತಕ್ಕದ್ದಲ್ಲ.

12. **ನೋಂದಣಿಗೆ ಷರತ್ತುಗಳು.–** (1) ನೋಂದಣಿಗೆ ಮತ್ತು ಮುಂದುವರಿಕೆಗೆ, ಪ್ರತಿಯೊಂದು ಚಿಕಿತ್ಸಾ ಕಾರ್ಯಸಂಸ್ಥೆಯು ಈ ಮುಂದಿನ ಷರತ್ತುಗಳನ್ನು ಪೂರೈಸತಕ್ಕದ್ದು, ಎಂದರೆ:–

(i) ನಿಯಮಿಸಬಹುದಾದಂಥ ಸೌಲಭ್ಯಗಳ ಮತ್ತು ಸೇವೆಗಳ ಕನಿಷ್ಠ ಗುಣಮಟ್ಟಗಳು;

(ii) ನಿಯಮಿಸಬಹುದಾದಂಥ ಅಗತ್ಯವಿರುವ ಸಿಬ್ಬಂದಿಯ ಕನಿಷ್ಠ ಸಂಖ್ಯೆ;

(iii) ನಿಯಮಿಸಬಹುದಾದಂಥ ದಾಖಲೆಗಳ ನಿರ್ವಹಣೆಗೆ ಮತ್ತು ವರದಿ ಮಾಡುವುದಕ್ಕೆ ಉಪಬಂಧಗಳು;

(iv) ನಿಯಮಿಸಬಹುದಾದಂಥ ಇತರ ಷರತ್ತುಗಳು.

(2) ಚಿಕಿತ್ಸಾ ಕಾರ್ಯಸಂಸ್ಥೆಗಳು, ಲಭ್ಯವಿರುವ ಸಿಬ್ಬಂದಿಯೊಳಗೆ ಮತ್ತು ಸೌಕರ್ಯಗಳೊಳಗೆ ತಮ್ಮ ಚಿಕಿತ್ಸಾ ಕಾರ್ಯಸಂಸ್ಥೆಗೆ ಬರುವ ಅಥವಾ ಕರೆ ತರುವ ಯಾರೇ ವ್ಯಕ್ತಿಯ ತುರ್ತು ವೈದ್ಯಕೀಯ ಪರಿಸ್ಥಿತಿಯನ್ನು ಸ್ಥಿರವಾಗಿರಿಸಲು ಅಗತ್ಯವಾಗಬಹುದಾದಂಥ ವೈದ್ಯಕೀಯ ಪರೀಕ್ಷೆಯನ್ನು ನಡೆಸುವುದಾಗಿ ಮತ್ತು ಚಿಕಿತ್ಸೆ ನೀಡುವುದಾಗಿ ಮುಚ್ಚಳಿಕೆ ಬರೆದುಕೊಡತಕ್ಕದ್ದು.

13. **ಚಿಕಿತ್ಸಾ ಕಾರ್ಯಸಂಸ್ಥೆಗಳ ವರ್ಗೀಕರಣ.–** (1) ಕೇಂದ್ರ ಸರ್ಕಾರವು, ಬೇರೆಬೇರೆ ಪದ್ಧತಿಗಳ ಚಿಕಿತ್ಸಾ ಕಾರ್ಯಸಂಸ್ಥೆಗಳನ್ನು ಕಾಲ ಕಾಲಕ್ಕೆ ನಿಯಮಿಸಬಹುದಾದಂಥ ಪ್ರವರ್ಗಗಳಾಗಿ ವರ್ಗೀಕರಿಸತಕ್ಕದ್ದು.

(2) ಉಪಪ್ರಕರಣ (1)ರಲ್ಲಿ ತಿಳಿಸಿದ ವಿವಿಧ ಪ್ರವರ್ಗಗಳ ವರ್ಗೀಕರಣಕ್ಕೆ ಬೇರೆಬೇರೆ ಗುಣಮಟ್ಟಗಳನ್ನು ನಿಯಮಿಸಬಹುದು:

ಪರಂತು, ಕೇಂದ್ರ ಸರ್ಕಾರವು ಚಿಕಿತ್ಸಾ ಕಾರ್ಯಸಂಸ್ಥೆಗಳಿಗೆ ಗುಣಮಟ್ಟಗಳನ್ನು ನಿಯಮಿಸುವಾಗ, ಸ್ಥಳೀಯ ಪರಿಸ್ಥಿತಿಗಳಿಗೆ ಗಮನ ನೀಡತಕ್ಕದ್ದು.

## ಅಧ್ಯಾಯ IV

## ನೋಂದಣಿ ಕಾರ್ಯವಿಧಾನ

14. **ತಾತ್ಕಾಲಿಕ ನೋಂದಣಿ ಪ್ರಮಾಣಪತ್ರಕ್ಕೆ ಅರ್ಜಿ.–** (1) ಪ್ರಕರಣ 10ರ ಮೇರೆಗೆ, ಚಿಕಿತ್ಸಾ ಕಾರ್ಯಸಂಸ್ಥೆಗಳ ನೋಂದಣಿಯ ಉದ್ದೇಶಗಳಿಗಾಗಿ, ನಿಯಮಿಸಿದ ಫೀಜಿನೊಂದಿಗೆ ನಿಯಮಿಸಿದ ನಮೂನೆಯಲ್ಲಿ ಅರ್ಜಿಯನ್ನು ಪ್ರಾಧಿಕಾರಕ್ಕೆ ಸಲ್ಲಿಸತಕ್ಕದ್ದು.

(2) ಅರ್ಜಿಯನ್ನು ಖುದ್ದಾಗಿ ಅಥವಾ ಅಂಚೆಯ ಮೂಲಕ ಅಥವಾ ಆನ್‌ಲೈನ್ ಮೂಲಕ ಸಲ್ಲಿಸತಕ್ಕದ್ದು.

(3) ಅರ್ಜಿಯನ್ನು ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಮೇರೆಗೆ ನಿಯಮಿಸಬಹುದಾದಂಥ ನಮೂನೆಯಲ್ಲಿ ಸಲ್ಲಿಸತಕ್ಕದ್ದು ಮತ್ತು ಅರ್ಜಿಯೊಂದಿಗೆ ನಿಯಮಿಸಬಹುದಾದಂಥ ವಿವರಗಳು ಇರತಕ್ಕದ್ದು.

(4) ಈ ಅಧಿನಿಯಮವು ಪ್ರಾರಂಭವಾದ ಕಾಲದಲ್ಲಿ ಯಾವುದಾದರೂ ಚಿಕಿತ್ಸಾ ಕಾರ್ಯಸಂಸ್ಥೆಯು ಅಸ್ತಿತ್ವದಲ್ಲಿದ್ದರೆ, ಅದರ ನೋಂದಣಿಗೆ ಈ ಅಧಿನಿಯಮವು ಪ್ರಾರಂಭವಾದ ದಿನಾಂಕದಿಂದ ಒಂದು ವರ್ಷದ ಒಳಗಾಗಿ ಅರ್ಜಿಯನ್ನು ಸಲ್ಲಿಸತಕ್ಕದ್ದು ಮತ್ತು ಈ ಅಧಿನಿಯಮವು ಪ್ರಾರಂಭವಾದ ನಂತರ ಅಸ್ತಿತ್ವಕ್ಕೆ ಬರುವ ಚಿಕಿತ್ಸಾ ಕಾರ್ಯಸಂಸ್ಥೆಯು, ಅದರ ಸ್ಥಾಪನೆಯ ದಿನಾಂಕದಿಂದ ಆರು ತಿಂಗಳುಗಳ ಅವಧಿಯೊಳಗೆ ಖಾಯಂ ನೋಂದಣಿಗಾಗಿ ಅರ್ಜಿಯನ್ನು ಸಲ್ಲಿಸತಕ್ಕದ್ದು.

(5) ಅಂಥ ಸಂಸ್ಥೆಗಳ ನೋಂದಣಿಯನ್ನು ಅಗತ್ಯಪಡಿಸುವ ಯಾವುದೇ ಚಾಲ್ತಿ ಕಾನೂನಿನ ಮೇರೆಗೆ ಯಾವುದೇ ಚಿಕಿತ್ಸಾ ಕಾರ್ಯಸಂಸ್ಥೆಯನ್ನು ಈಗಾಗಲೇ ನೋಂದಾಯಿಸಿದ್ದರೂ ಸಹ (1)ನೇ ಉಪಪ್ರಕರಣದಲ್ಲಿ ಹೇಳಿರುವಂತೆ ನೋಂದಣಿಗಾಗಿ ಅರ್ಜಿಯನ್ನು ಸಲ್ಲಿಸತಕ್ಕದ್ದು.

**15. ತಾತ್ಕಾಲಿಕ ಪ್ರಮಾಣಪತ್ರ.–** ಪ್ರಾಧಿಕಾರವು, ಅಂತಹ ಅರ್ಜಿಯನ್ನು ಸ್ವೀಕರಿಸಿದ ದಿನಾಂಕದಿಂದ ಹತ್ತು ದಿನಗಳ ಒಳಗಾಗಿ ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂತಹ ವಿವರಗಳನ್ನು ಮತ್ತು ಅಂತಹ ಮಾಹಿತಿಯನ್ನು ಒಳಗೊಂಡಿರುವಂಥ ತಾತ್ಕಾಲಿಕ ನೋಂದಣಿ ಪ್ರಮಾಣಪತ್ರವನ್ನು ಅರ್ಜಿದಾರನಿಗೆ ನೀಡತಕ್ಕದ್ದು.

**16. ತಾತ್ಕಾಲಿಕ ನೋಂದಣಿಗೆ ಮೊದಲು ವಿಚಾರಣೆ ಇಲ್ಲ.–** (1) ತಾತ್ಕಾಲಿಕ ನೋಂದಣಿ ಪ್ರಮಾಣಪತ್ರವನ್ನು ನೀಡುವುದಕ್ಕೂ ಮೊದಲು ಪ್ರಾಧಿಕಾರವು ಯಾವುದೇ ವಿಚಾರಣೆಯನ್ನು ನಡೆಸತಕ್ಕದ್ದಲ್ಲ.

(2) ತಾತ್ಕಾಲಿಕ ನೋಂದಣಿ ಪ್ರಮಾಣಪತ್ರವನ್ನೂ ನೀಡಿದ್ದರೂ ಪ್ರಾಧಿಕಾರವು, ತಾತ್ಕಾಲಿಕ ನೋಂದಣಿ ಪ್ರಮಾಣಪತ್ರವನ್ನು ನೀಡಿದ ದಿನಾಂಕದಿಂದ ನಲವತ್ತೈದು ದಿನಗಳ ಅವಧಿಯೊಳಗಾಗಿ ಹಾಗೆ ತಾತ್ಕಾಲಿಕವಾಗಿ ನೋಂದಣಿಯಾದ ಚಿಕಿತ್ಸಾ ಕಾರ್ಯಸಂಸ್ಥೆಗಳ ಎಲ್ಲಾ ವಿವರಗಳನ್ನು ನಿಯಮಿಸಬಹುದಾದಂಥ ರೀತಿಯಲ್ಲಿ ಪ್ರಕಟಿಸುವಂತೆ ಮಾಡತಕ್ಕದ್ದು.

**17. ತಾತ್ಕಾಲಿಕ ನೋಂದಣಿಯ ಮಾನ್ಯತೆ.–** 23ನೇ ಪ್ರಕರಣದ ಉಪಬಂಧಗಳಿಗೆ ಒಳಪಟ್ಟು, ಪ್ರತಿಯೊಂದು ತಾತ್ಕಾಲಿಕ ನೋಂದಣಿಯು, ನೋಂದಣಿ ಪ್ರಮಾಣಪತ್ರವನ್ನು ನೀಡಿದ ದಿನಾಂಕದಿಂದ ಹನ್ನೆರಡನೇ ತಿಂಗಳಿನ ಕೊನೆಯ ದಿನದವರೆಗೆ ಮಾನ್ಯವಾಗಿರತಕ್ಕದ್ದು ಮತ್ತು ಅಂತಹ ನೋಂದಣಿಯು ನವೀಕರಿಸುವಂತದ್ದಾಗಿರತಕ್ಕದ್ದು.

**18. ನೋಂದಣಿ ಪ್ರಮಾಣಪತ್ರವನ್ನು ಪ್ರದರ್ಶಿಸುವುದು.–** ಪ್ರಮಾಣಪತ್ರವನ್ನು, ಚಿಕಿತ್ಸಾ ಕಾರ್ಯಸಂಸ್ಥೆಯಲ್ಲಿ ಎದ್ದು ಕಾಣುವ ಸ್ಥಳದಲ್ಲಿ, ಅಂತಹ ಚಿಕಿತ್ಸಾ ಕಾರ್ಯಸಂಸ್ಥೆಗೆ ಭೇಟಿ ನೀಡುವ ಪ್ರತಿಯೊಬ್ಬರಿಗೆ ಕಾಣುವ ಹಾಗೆ ಅಂಟಿಸಿರತಕ್ಕದ್ದು.

**19. ನಕಲು ಪ್ರಮಾಣಪತ್ರ.–** ಪ್ರಮಾಣಪತ್ರವು ಕಳೆದುಹೋದ, ನಾಶವಾದ, ವಿರೂಪಗೊಂಡ, ಅಥವಾ ಹಾನಿಗೊಂಡ ಸಂದರ್ಭದಲ್ಲಿ, ಪ್ರಾಧಿಕಾರವು, ಚಿಕಿತ್ಸಾ ಕಾರ್ಯಸಂಸ್ಥೆಯ ಕೋರಿಕೆಯಂತೆ ಮತ್ತು ನಿಯಮಿಸಬಹುದಾದಂಥ ಫೀಜನ್ನು ಪಾವತಿಸಿದ ಮೇಲೆ ನಕಲು ಪ್ರಮಾಣಪತ್ರವನ್ನು ವಿತರಿಸತಕ್ಕದ್ದು.

**20. ಪ್ರಮಾಣಪತ್ರವು ವರ್ಗಾವಣೀಯವಲ್ಲದ್ದಾಗಿರುವುದು.–** (1) ನೋಂದಣಿ ಪ್ರಮಾಣಪತ್ರವು ವರ್ಗಾವಣೆ ಮಾಡುವಂತದ್ದಾಗಿರತಕ್ಕದ್ದಲ್ಲ.

(2) ಒಡೆತನದಲ್ಲಿ ಅಥವಾ ಆಡಳಿತ ವರ್ಗದಲ್ಲಿ ಬದಲಾವಣೆ ಆದ ಸಂದರ್ಭದಲ್ಲಿ ಚಿಕಿತ್ಸಾ ಕಾರ್ಯಸಂಸ್ಥೆಯು ಅಂತಹ ಬದಲಾವಣೆಯನ್ನು ಪ್ರಾಧಿಕಾರಕ್ಕೆ ನಿಯಮಿಸಬಹುದಾದಂಥ ರೀತಿಯಲ್ಲಿ ತಿಳಿಸತಕ್ಕದ್ದು.

(3) ಪ್ರವರ್ಗದಲ್ಲಿ ಅಥವಾ ಸ್ಥಳದಲ್ಲಿ ಬದಲಾವಣೆ ಆದ ಸಂದರ್ಭದಲ್ಲಿ ಅಥವಾ ಚಿಕಿತ್ಸಾ ಕಾರ್ಯಸಂಸ್ಥೆಯಾಗಿ ಕಾರ್ಯ ನಿರ್ವಹಿಸುವುದು ನಿಂತು ಹೋದ ಮೇಲೆ, ಅಂತಹ ಚಿಕಿತ್ಸಾ ಕಾರ್ಯಸಂಸ್ಥೆಗೆ ನೀಡಿರುವ ನೋಂದಣಿ ಪ್ರಮಾಣಪತ್ರವನ್ನು ಪ್ರಾಧಿಕಾರಕ್ಕೆ ಒಪ್ಪಿಸತಕ್ಕದ್ದು ಮತ್ತು ಚಿಕಿತ್ಸಾ ಕಾರ್ಯಸಂಸ್ಥೆಯು ನೋಂದಣಿ ಪ್ರಮಾಣಪತ್ರದ ನೀಡಿಕೆಗಾಗಿ ಹೊಸದಾಗಿ ಅರ್ಜಿಯನ್ನು ಸಲ್ಲಿಸತಕ್ಕದ್ದು.

**21. ನೋಂದಣಿ ಅವಧಿಯ ಮುಕ್ತಾಯದ ಪ್ರಕಟಣೆ.–** ಪ್ರಾಧಿಕಾರವು, ಯಾವ ಚಿಕಿತ್ಸಾ ಕಾರ್ಯಸಂಸ್ಥೆಗಳ ನೋಂದಣಿಯು ಮುಕ್ತಾಯವಾಗಿದೆಯೋ ಆ ಚಿಕಿತ್ಸಾ ಕಾರ್ಯಸಂಸ್ಥೆಗಳ ಹೆಸರುಗಳನ್ನು ನಿಯಮಿಸಬಹುದಾದಂಥ ಕಾಲದೊಳಗೆ ಮತ್ತು ಅಂತಹ ರೀತಿಯಲ್ಲಿ ಪ್ರಕಟಿಸುವಂತೆ ಮಾಡತಕ್ಕದ್ದು.

**22. ನೋಂದಣಿಯ ನವೀಕರಣ.–** ನೋಂದಣಿಯ ನವೀಕರಣಕ್ಕಾಗಿ ಅರ್ಜಿಯನ್ನು ತಾತ್ಕಾಲಿಕ ನೋಂದಣಿ ಪ್ರಮಾಣಪತ್ರದ ಮಾನ್ಯತೆಯು ಮುಗಿಯುವುದಕ್ಕೂ, ಮೊದಲಿನ ಮೂವತ್ತು ದಿನಗಳೊಳಗಾಗಿ ಸಲ್ಲಿಸತಕ್ಕದ್ದು ಮತ್ತು ನವೀಕರಣದ ಅರ್ಜಿಯನ್ನು ತಾತ್ಕಾಲಿಕ ನೋಂದಣಿಯು ಮುಕ್ತಾಯವಾದ ನಂತರ ಸಲ್ಲಿಸಿದ ಸಂದರ್ಭದಲ್ಲಿ, ನಿಯಮಿಸಬಹುದಾದಷ್ಟು ಹೆಚ್ಚಿಸಿದ ಫೀಜನ್ನು ಸಂದಾಯ ಮಾಡಿದ ಮೇಲೆ ನೋಂದಣಿಯ ನವೀಕರಣಕ್ಕೆ ಪ್ರಾಧಿಕಾರವು ಅನುಮತಿ ನೀಡತಕ್ಕದ್ದು.

**23. ತಾತ್ಕಾಲಿಕ ನೋಂದಣಿಗೆ ಕಾಲಮಿತಿ.–** ಯಾವ ಚಿಕಿತ್ಸಾ ಕಾರ್ಯಸಂಸ್ಥೆಗಳಿಗೆ, ಕೇಂದ್ರ ಸರ್ಕಾರವು, ಗುಣಮಟ್ಟಗಳನ್ನು ಅಧಿಸೂಚಿಸಿದೆಯೋ ಆ ಚಿಕಿತ್ಸಾ ಕಾರ್ಯಸಂಸ್ಥೆಗಳಿಗೆ ತಾತ್ಕಾಲಿಕ ನೋಂದಣಿಯನ್ನು,–

(i) ಈ ಅಧಿನಿಯಮದ ಪ್ರಾರಂಭಕ್ಕೆ ಮೊದಲು ಯಾವ ಚಿಕಿತ್ಸಾ ಕಾರ್ಯಸಂಸ್ಥೆಗಳು ಅಸ್ತಿತ್ವಕ್ಕೆ ಬಂದಿದ್ದವೊ ಆ ಚಿಕಿತ್ಸಾ ಕಾರ್ಯಸಂಸ್ಥೆಗಳ ಸಂದರ್ಭದಲ್ಲಿ, ಗುಣಮಟ್ಟಗಳನ್ನು ಅಧಿಸೂಚಿಸಿದ ದಿನಾಂಕದಿಂದ ಎರಡು ವರ್ಷಗಳ ಅವಧಿಗೂ ಮೀರಿ;

(ii) ಈ ಅಧಿನಿಯಮದ ಪ್ರಾರಂಭದ ನಂತರ ಆದರೆ, ಗುಣಮಟ್ಟಗಳನ್ನು ಅಧಿಸೂಚಿಸುವುದಕ್ಕೆ ಮೊದಲು ಅಸ್ತಿತ್ವಕ್ಕೆ ಬಂದ, ಚಿಕಿತ್ಸಾ ಕಾರ್ಯಸಂಸ್ಥೆಗಳ ಸಂದರ್ಭದಲ್ಲಿ, ಗುಣಮಟ್ಟಗಳನ್ನು ಅಧಿಸೂಚಿಸಿದ ದಿನಾಂಕದಿಂದ ಎರಡು ವರ್ಷಗಳ ಅವಧಿಗೂ ಮೀರಿ; ಮತ್ತು

(iii) ಗುಣಮಟ್ಟಗಳನ್ನು ಅಧಿಸೂಚಿಸಿದ ದಿನಾಂಕದ ನಂತರ ಅಸ್ತಿತ್ವಕ್ಕೆ ಬಂದ ಚಿಕಿತ್ಸಾ ಕಾರ್ಯಸಂಸ್ಥೆಗಳ ಸಂದರ್ಭದಲ್ಲಿ, ಗುಣಮಟ್ಟಗಳನ್ನು ಅಧಿಸೂಚಿಸಿದ ದಿನಾಂಕದಿಂದ ಆರು ತಿಂಗಳುಗಳ ಅವಧಿಗೂ ಮೀರಿ

– ಮಂಜೂರು ಮಾಡತಕ್ಕದ್ದಲ್ಲ ಮತ್ತು ನವೀಕರಿಸತಕ್ಕದ್ದಲ್ಲ.

**24. ಖಾಯಂ ನೋಂದಣಿಗೆ ಅರ್ಜಿ.–** ಚಿಕಿತ್ಸಾ ಕಾರ್ಯಸಂಸ್ಥೆಯು ಖಾಯಂ ನೋಂದಣಿಗಾಗಿ ಸಲ್ಲಿಸುವ ಅರ್ಜಿಯನ್ನು ನಿಯಮಿಸಬಹುದಾದಂಥ ನಮೂನೆಯಲ್ಲಿ, ಪ್ರಾಧಿಕಾರಕ್ಕೆ ಸಲ್ಲಿಸತಕ್ಕದ್ದು ಮತ್ತು ಆ ಅರ್ಜಿಯೊಂದಿಗೆ ನಿಯಮಿಸಬಹುದಾದಂಥ ಫೀಜು ಇರತಕ್ಕದ್ದು.

**25. ಅರ್ಜಿಯ ಪರಿಶೀಲನೆ.–** ಚಿಕಿತ್ಸಾ ಕಾರ್ಯಸಂಸ್ಥೆಯು, ನಿಯಮಿಸಿದ ಕನಿಷ್ಠ ಗುಣಮಟ್ಟಗಳನ್ನು ಪಾಲಿಸಿರುವುದರ ಬಗ್ಗೆ ರುಜುವಾತನ್ನು ನಿಯಮಿಸಬಹುದಾದಂಥ ನಮೂನೆಯಲ್ಲಿ ಸಲ್ಲಿಸತಕ್ಕದ್ದು.

**26. ಆಕ್ಷೇಪಣೆಗಳ ಸಲ್ಲಿಕೆಯ ಸಂಬಂಧದಲ್ಲಿ ಮಾಹಿತಿಯನ್ನು ಪ್ರದರ್ಶಿಸುವುದು.–** ಚಿಕಿತ್ಸಾ ಕಾರ್ಯಸಂಸ್ಥೆಗಳು ನಿಯಮಿಸಿದ ಕನಿಷ್ಠ ಗುಣಮಟ್ಟಗಳನ್ನು ಪಾಲಿಸಿರುವುದರ ಬಗ್ಗೆ ಅಗತ್ಯ ರುಜುವಾತನ್ನು ಸಲ್ಲಿಸಿದ ಕೂಡಲೇ ಪ್ರಾಧಿಕಾರವು, ಚಿಕಿತ್ಸಾ ಕಾರ್ಯಸಂಸ್ಥೆಯು ನಿಯಮಿಸಿದ ಕನಿಷ್ಠ ಗುಣಮಟ್ಟಗಳನ್ನು ಪಾಲಿಸಿರುವುದರ ಬಗ್ಗೆ ಸಲ್ಲಿಸಿದ ಎಲ್ಲಾ ರುಜುವಾತನ್ನು ಸಾರ್ವಜನಿಕರ ಮಾಹಿತಿಗಾಗಿ ಮತ್ತು ಆಕ್ಷೇಪಣೆಗಳೇನಾದರೂ ಇದ್ದರೆ ಅವುಗಳನ್ನು ನಿಯಮಿಸಬಹುದಾದಂಥ ರೀತಿಯಲ್ಲಿ ಸಲ್ಲಿಸುವುದಕ್ಕಾಗಿ, ಖಾಯಂ ನೋಂದಣಿ ನೀಡಿಕೆಗೆ ಪ್ರಕ್ರಿಯೆಯನ್ನು ಪ್ರಾರಂಭಿಸುವದಕ್ಕೆ ಮುಂಚೆ ಮೂವತ್ತು ದಿನಗಳ ಅವಧಿಯವರೆಗೆ ಪ್ರದರ್ಶಿಸುವಂತೆ ಮಾಡತಕ್ಕದ್ದು.

**27. ಆಕ್ಷೇಪಣೆಗಳನ್ನು ತಿಳಿಸುವುದು.–** ಈ ಹಿಂದಿನ ಪ್ರಕರಣದಲ್ಲಿ ತಿಳಿಸಿದ ಅವಧಿಯೊಳಗಾಗಿ ಆಕ್ಷೇಪಣೆಗಳನ್ನು ಸ್ವೀಕರಿಸಿದ್ದಲ್ಲಿ, ಅಂತಹ ಆಕ್ಷೇಪಣೆಗಳಿಗೆ ನಲವತ್ತೈದು ದಿನಗಳ ಅವಧಿಯೊಳಗಾಗಿ ಉತ್ತರಿಸಲು ಅಂಥ ಅಕ್ಷೇಪಣೆಗಳನ್ನು ಚಿಕಿತ್ಸಾ ಕಾರ್ಯಸಂಸ್ಥೆಗೆ ತಿಳಿಸತಕ್ಕದ್ದು.

**28. ಖಾಯಂ ನೋಂದಣಿಗೆ ಗುಣಮಟ್ಟಗಳು.–** ನೋಂದಣಿಗಾಗಿ ಕೇಂದ್ರ ಸರ್ಕಾರವು ನಿಯಮಿಸಿರುವ ಗುಣಮಟ್ಟಗಳನ್ನು ಚಿಕಿತ್ಸಾ ಕಾರ್ಯಸಂಸ್ಥೆಗಳು, ಪಾಲಿಸಿದಾಗ ಮಾತ್ರವೇ ಅವುಗಳಿಗೆ ಖಾಯಂ ನೋಂದಣಿಯನ್ನು ಮಂಜೂರು ಮಾಡತಕ್ಕದ್ದು.

**29. ನೋಂದಣಿಗೆ ಅನುಮತಿ ನೀಡುವುದು ಅಥವಾ ಅನುಮತಿ ನೀಡದಿರುವುದು.–** ಪ್ರಾಧಿಕಾರವು–

(ಎ) ಖಾಯಂ ನೋಂದಣಿಗಾಗಿ ಸಲ್ಲಿಸಿದ ಅರ್ಜಿಯನ್ನು ಅಂಗೀಕರಿಸಿರುವ; ಅಥವಾ

(ಬಿ) ಅರ್ಜಿಯನ್ನು ಅಂಗೀಕರಿಸಿರದಿರುವ

– ಆದೇಶವನ್ನು ನಿಯಮಿಸಿದ ಅವಧಿಯು ಮುಕ್ತಾಯವಾದ ನಿಕಟ ತರುವಾಯ ಮತ್ತು ಆ ನಂತರ ಮುಂದಿನ ಮೂವತ್ತು ದಿವಸಗಳೊಳಗಾಗಿ ಹೊರಡಿಸತಕ್ಕದ್ದು:

ಪರಂತು, ಪ್ರಾಧಿಕಾರವು ಖಾಯಂ ನೋಂದಣಿಗಾಗಿ ಸಲ್ಲಿಸಿದ ಅರ್ಜಿಯನ್ನು ಅಂಗೀಕರಿಸದಿದ್ದರೆ, ಅದಕ್ಕೆ ಕಾರಣಗಳನ್ನು ದಾಖಲಿಸತಕ್ಕದ್ದು.

**30. ಖಾಯಂ ನೋಂದಣಿ ಪ್ರಮಾಣಪತ್ರ.–** (1) ಪ್ರಾಧಿಕಾರವು, ಚಿಕಿತ್ಸಾ ಕಾರ್ಯಸಂಸ್ಥೆಯ ಅರ್ಜಿಯನ್ನು ಅಂಗೀಕರಿಸಿದ್ದರೆ, ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂತಹ ವಿವರಗಳನ್ನು ಒಳಗೊಂಡಿರುವ ಖಾಯಂ ನೋಂದಣಿ ಪ್ರಮಾಣಪತ್ರವನ್ನು ನೀಡತಕ್ಕದ್ದು.

(2) ಪ್ರಮಾಣಪತ್ರವು, ಅದನ್ನು ನೀಡಿದ ದಿನಾಂಕದಿಂದ ಐದು ವರ್ಷಗಳ ಅವಧಿಯವರೆಗೆ ಮಾನ್ಯವಾಗಿರತಕ್ಕದ್ದು.

(3) ಉಪಪ್ರಕರಣ (1)ರ ಉದ್ದೇಶಗಳಿಗಾಗಿ 18ನೇ, 19ನೇ, 20ನೇ, ಮತ್ತು 21ನೇ ಪ್ರಕರಣಗಳ ಉಪಬಂಧಗಳು ಸಹ ಅನ್ವಯವಾಗತಕ್ಕದ್ದು.

(4) ಖಾಯಂ ನೋಂದಣಿಯ ನವೀಕರಣಕ್ಕಾಗಿ ಸಲ್ಲಿಸುವ ಅರ್ಜಿಗಳನ್ನು ಖಾಯಂ ನೋಂದಣಿ ಪ್ರಮಾಣಪತ್ರದ ಮಾನ್ಯತೆ ಅವಧಿಯು ಮುಕ್ತಾಯವಾಗುವುದಕ್ಕೆ ಮೊದಲು ಆರು ತಿಂಗಳೊಳಗೆ ಸಲ್ಲಿಸತಕ್ಕದ್ದು ಮತ್ತು ನವೀಕರಣಕ್ಕಾಗಿ ಅರ್ಜಿಯನ್ನು ಗೊತ್ತುಪಡಿಸಿದ ಅವಧಿಯೊಳಗೆ ಸಲ್ಲಿಸದಿದ್ದ ಸಂದರ್ಭದಲ್ಲಿ, ನಿಯಮಿಸಬಹುದಾದಷ್ಟು ಹೆಚ್ಚಿಸಿದ ಫೀಜನ್ನು ಮತ್ತು ದಂಡವನ್ನು ಪಾವತಿಸಿದ ಮೇಲೆ ಪ್ರಾಧಿಕಾರವು ನೋಂದಣಿಯ ನವೀಕರಣಕ್ಕೆ ಅನುಮತಿ ನೀಡಬಹುದು.

**31. ಖಾಯಂ ನೋಂದಣಿಗೆ ಹೊಸ ಅರ್ಜಿ.–** ಖಾಯಂ ನೋಂದಣಿಗಾಗಿ ಸಲ್ಲಿಸಿದ್ದ ಅರ್ಜಿಯನ್ನು ಅಂಗೀಕರಿಸದಿರುವುದು, ಈ ಮೊದಲಿನ ಅರ್ಜಿಯನ್ನು ಯಾವ ನ್ಯೂನತೆಗಳನ್ನು ಆಧರಿಸಿ ತಿರಸ್ಕರಿಸಲಾಗಿತ್ತೋ ಆ ನ್ಯೂನತೆಗಳನ್ನು ಸರಿಪಡಿಸಿರುವ ಬಗ್ಗೆ ಅಗತ್ಯಪಡಿಸಬಹುದಾದಂಥ ರುಜುವಾತನ್ನು ಒದಗಿಸಿದ ನಂತರ, 24ನೇ ಪ್ರಕರಣದ ಮೇರೆಗೆ ಖಾಯಂ ನೋಂದಣಿಗಾಗಿ ಹೊಸದಾಗಿ ಅರ್ಜಿ ಸಲ್ಲಿಸಲು ಚಿಕಿತ್ಸಾ ಕಾರ್ಯಸಂಸ್ಥೆಗೆ ತಡೆಯಾಗತಕ್ಕದಲ್ಲ.

**32. ನೋಂದಣಿಯನ್ನು ರದ್ದು ಮಾಡುವುದು.–** (1) ಯಾವುದೇ ಚಿಕಿತ್ಸಾ ಕಾರ್ಯಸಂಸ್ಥೆಯನ್ನು ನೋಂದಾಯಿಸಿದ ನಂತರ ಯಾವುದೇ ಕಾಲದಲ್ಲಿ,–

(ಎ) ನೋಂದಣಿಯ ಷರತ್ತುಗಳ ಪಾಲನೆ ಆಗುತ್ತಿಲ್ಲ ಎಂದು; ಅಥವಾ

(ಬಿ) ಚಿಕಿತ್ಸಾ ಕಾರ್ಯಸಂಸ್ಥೆಯ ಆಡಳಿತ ನಿರ್ವಹಣೆಯನ್ನು ಯಾವ ವ್ಯಕ್ತಿಗೆ ವಹಿಸಲಾಗಿದೆಯೋ ಆ ವ್ಯಕ್ತಿಯು ಈ ಅಧಿನಿಯಮದ ಮೇರೆಗೆ ಶಿಕ್ಷಾರ್ಹವಾದ ಅಪರಾಧದ ನಿರ್ಣೀತ ಅಪರಾಧಿಯಾಗಿದ್ದಾನೆಂದು

– ಪ್ರಾಧಿಕಾರಕ್ಕೆ ಮನವರಿಕೆಯಾದರೆ, ಪ್ರಾಧಿಕಾರವು ಚಿಕಿತ್ಸಾ ಕಾರ್ಯಸಂಸ್ಥೆಗೆ ನೋಟೀಸನ್ನು ನೀಡಿ, ಆ ನೋಟೀಸಿನಲ್ಲಿ ತಿಳಿಸಿದ ಕಾರಣಗಳಿಗಾಗಿ, ಈ ಅಧಿನಿಯಮದ ಮೇರೆಗೆ ಆ ಕಾರ್ಯಸಂಸ್ಥೆಯ ನೋಂದಣಿಯನ್ನು ಏಕೆ ರದ್ದು ಮಾಡಬಾರದು ಎಂಬುದಕ್ಕೆ ಕಾರಣಗಳನ್ನು ಮೂರು ತಿಂಗಳುಗಳೊಳಗಾಗಿ ತೋರಿಸುವಂತೆ ಕೇಳಬಹುದು.

(2) ಚಿಕಿತ್ಸಾ ಕಾರ್ಯಸಂಸ್ಥೆಗೆ ಯುಕ್ತ ಅವಕಾಶವನ್ನು ನೀಡಿದ ನಂತರವೂ, ಈ ಅಧಿನಿಯಮದ ಯಾವುದೇ ಉಪಬಂಧಗಳ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಉಲ್ಲಂಘನೆಯಾಗುತ್ತಿದೆ ಎಂದು ಪ್ರಾಧಿಕಾರಕ್ಕೆ ಮನವರಿಕೆಯಾದರೆ, ಅದು ಅಂತಹ ಚಿಕಿತ್ಸಾ ಕಾರ್ಯಸಂಸ್ಥೆಯ ವಿರುದ್ಧ ತೆಗೆದುಕೊಳ್ಳಬಹುದಾದ ಯಾವುದೇ ಇತರ ಕ್ರಮಕ್ಕೆ ಬಾಧಕವಾಗದಂತೆ ಆದೇಶದ ಮೂಲಕ ನೋಂದಣಿಯನ್ನು ರದ್ದುಮಾಡಬಹುದು.

(3) ಉಪಪ್ರಕರಣ (2)ರ ಮೇರೆಗೆ ಮಾಡಿದ ಯಾವುದೇ ಆದೇಶವು–

(ಎ) ಅಂತಹ ಆದೇಶದ ವಿರುದ್ಧ ಅಪೀಲನ್ನು ಸಲ್ಲಿಸಿರದಿದ್ದರೆ ಅಂಥ ಅಪೀಲನ್ನು ಸಲ್ಲಿಸಲು ನಿಯಮಿಸಿದ ಅವಧಿಯು ಮುಕ್ತಾಯವಾದ ಕೂಡಲೇ; ಮತ್ತು

(ಬಿ) ಅಂತಹ ಅಪೀಲನ್ನು ಸಲ್ಲಿಸಿದ್ದಲ್ಲಿ ಹಾಗೂ ಅದನ್ನು ವಜಾಗೊಳಿಸಿದ್ದಲ್ಲಿ ಹಾಗೆ ವಜಾಗೊಳಿಸಿದ ಆದೇಶದ ದಿನಾಂಕದಿಂದ

– ಜಾರಿಗೆ ಬರತಕ್ಕದ್ದು:

ಪರಂತು, ಪ್ರಾಧಿಕಾರವು, ಲಿಖಿತದಲ್ಲಿ ಕಾರಣಗಳನ್ನು ದಾಖಲಿಸಿ ನೋಂದಣಿಯನ್ನು ರದ್ದುಪಡಿಸಿದ ನಂತರ, ರೋಗಿಗಳ ಆರೋಗ್ಯಕ್ಕೆ ಮತ್ತು ಸುರಕ್ಷತೆಗೆ ಅಪಾಯ ಸನ್ನಿಹಿತವಾಗುವಂತಿದ್ದಲ್ಲಿ, ಚಿಕಿತ್ಸಾ ಕಾರ್ಯಸಂಸ್ಥೆಯನ್ನು ನಡೆಸುವುದಕ್ಕೆ ಕೂಡಲೇ ನಿರ್ಬಂಧ ಹೇರಬಹುದು.

**33. ನೋಂದಾಯಿತ ಚಿಕಿತ್ಸಾ ಕಾರ್ಯಸಂಸ್ಥೆಗಳ ತಪಾಸಣೆ.–** (1) ಪ್ರಾಧಿಕಾರವು ಅಥವಾ ಅದರಿಂದ ಅಧಿಕೃತಗೊಂಡ ಅಧಿಕಾರಿಯು ಯಾವುದೇ ನೋಂದಾಯಿತ ಚಿಕಿತ್ಸಾ ಕಾರ್ಯಸಂಸ್ಥೆಯನ್ನು ಅದರ ಕಟ್ಟಡವನ್ನು, ಪ್ರಯೋಗಾಲಯಗಳನ್ನು ಮತ್ತು ಉಪಕರಣಗಳನ್ನು ಹಾಗೂ ಚಿಕಿತ್ಸಾ ಕಾರ್ಯಸಂಸ್ಥೆಯು ನಡೆಸಿದ ಅಥವಾ ಮಾಡಿದ ಕೆಲಸವನ್ನು ಅದು ನಿರ್ದೇಶಿಸುವಂಥ ಬಹು ಸದಸ್ಯ ತಪಾಸಣಾ ತಂಡದಿಂದ ತಪಾಸಣೆ ಮಾಡಿಸಲು ಅಥವಾ ವಿಚಾರಣೆ ಮಾಡಿಸಲು ಮತ್ತು ಚಿಕಿತ್ಸಾ ಕಾರ್ಯಸಂಸ್ಥೆಗೆ ಸಂಬಂಧಿಸಿದ ಇತರ ಯಾವುದೇ ವಿಷಯದ ಬಗ್ಗೆ ವಿಚಾರಣೆ ಮಾಡಿಸಲು ಹಕ್ಕನ್ನು ಹೊಂದಿರತಕ್ಕದ್ದು ಮತ್ತು ತಪಾಸಣೆಯಲ್ಲಿ ಅಥವಾ ವಿಚಾರಣೆಯಲ್ಲಿ ತನ್ನನ್ನು ಪ್ರತಿನಿಧಿಸಿಕೊಳ್ಳಲು ಚಿಕಿತ್ಸಾ ಕಾರ್ಯಸಂಸ್ಥೆಗೆ ಹಕ್ಕು ಇರತಕ್ಕದ್ದು.

(2) ಪ್ರಾಧಿಕಾರವು ಅಂತಹ ತಪಾಸಣೆಯ ಅಥವಾ ವಿಚಾರಣೆಯ ಫಲಿತಾಂಶದ ಬಗ್ಗೆ ತನ್ನ ಅಭಿಪ್ರಾಯಗಳನ್ನು ಚಿಕಿತ್ಸಾ ಕಾರ್ಯಸಂಸ್ಥೆಗೆ ತಿಳಿಸತಕ್ಕದ್ದು ಅವುಗಳ ಮೇಲೆ ಚಿಕಿತ್ಸಾ ಕಾರ್ಯಸಂಸ್ಥೆಯು ನೀಡಿದ ಅಭಿಪ್ರಾಯವನ್ನು ಖಚಿತಪಡಿಸಿಕೊಂಡ ನಂತರ, ತೆಗೆದುಕೊಳ್ಳಬೇಕಾದ ಕ್ರಮದ ಬಗ್ಗೆ ಆ ಸಂಸ್ಥೆಗೆ ಸಲಹೆ ನೀಡತಕ್ಕದ್ದು.

(3) ಚಿಕಿತ್ಸಾ ಕಾರ್ಯಸಂಸ್ಥೆಯು, ಅಂತಹ ತಪಾಸಣೆಯ ಅಥವಾ ವಿಚಾರಣೆಯ ಫಲಿತಾಂಶಗಳ ಮೇಲೆ ಯಾವುದಾದರೂ ಕ್ರಮಗಳನ್ನು ತೆಗೆದುಕೊಳ್ಳಲು ಉದ್ದೇಶಿಸಿದ್ದರೆ ಅಥವಾ ತೆಗೆದುಕೊಂಡಿದ್ದರೆ ಅದನ್ನು ಪ್ರಾಧಿಕಾರಕ್ಕೆ ವರದಿ ಮಾಡತಕ್ಕದ್ದು ಮತ್ತು ಅಂತಹ ವರದಿಯನ್ನು ಪ್ರಾಧಿಕಾರವು ನಿರ್ದೇಶಿಸಬಹುದಾದಂಥ ಕಾಲದೊಳಗಾಗಿ ಸಲ್ಲಿಸತಕ್ಕದ್ದು.

(4) ಚಿಕಿತ್ಸಾ ಕಾರ್ಯಸಂಸ್ಥೆಯು ಯುಕ್ತ ಕಾಲದೊಳಗಾಗಿ, ಪ್ರಾಧಿಕಾರಕ್ಕೆ ತೃಪ್ತಿಯಾಗುವಂತೆ ಕ್ರಮ ತೆಗೆದುಕೊಳ್ಳದಿದ್ದರೆ, ಪ್ರಾಧಿಕಾರವು, ಚಿಕಿತ್ಸಾ ಕಾರ್ಯಸಂಸ್ಥೆಯು ಒದಗಿಸಿದ ಯಾವುದೇ ವಿವರಣೆಯನ್ನು ಅಥವಾ ಸಲ್ಲಿಸಿದ ಮನವಿಯನ್ನು ಪರಿಶೀಲಿಸಿದ ನಂತರ, ಸೂಕ್ತವೆಂದು ತಾನು ಭಾವಿಸುವಂತಹ ನಿರ್ದೇಶನಗಳನ್ನು, ಅಂಥ ನಿರ್ದೇಶನದಲ್ಲಿ ತಿಳಿಸಿದಂತಹ ಕಾಲದೊಳಗಾಗಿ ನೀಡತಕ್ಕದ್ದು ಮತ್ತು ಚಿಕಿತ್ಸಾ ಕಾರ್ಯಸಂಸ್ಥೆಯು ಅಂತಹ ನಿರ್ದೇಶನಗಳನ್ನು ಪಾಲಿಸತಕ್ಕದ್ದು.

**34. ಪ್ರವೇಶಿಸಲು ಅಧಿಕಾರ.–** ಯಾರೇ ವ್ಯಕ್ತಿಯು ನೋಂದಣಿಯಿಲ್ಲದೇ ಚಿಕಿತ್ಸಾ ಕಾರ್ಯಸಂಸ್ಥೆಯನ್ನು ನಡೆಸುತ್ತಿದ್ದಾನೆ ಎಂದು ಅನುಮಾನಪಡಲು ಯಾವುದೇ ಕಾರಣವಿದ್ದರೆ, ಪ್ರಾಧಿಕಾರವು ಅಥವಾ ಅದರಿಂದ ಅಧಿಕೃತಗೊಂಡ ಅಧಿಕಾರಿಯು, ನಿಯಮಿಸಿದ ರೀತಿಯಲ್ಲಿ ಯಾವುದೇ ಸೂಕ್ತ ಸಮಯದಲ್ಲಿ ಚಿಕಿತ್ಸಾ ಕಾರ್ಯಸಂಸ್ಥೆಯನ್ನು ಪ್ರವೇಶಿಸಬಹುದು ಮತ್ತು ನಿಯಮಿಸಿದ ರೀತಿಯಲ್ಲಿ ಶೋಧನೆ ಮಾಡಬಹುದು ಮತ್ತು ಚಿಕಿತ್ಸಾ ಕಾರ್ಯಸಂಸ್ಥೆಯು ತಪಾಸಣೆಗೆ ಅಥವಾ ವಿಚಾರಣೆಗೆ ಯುಕ್ತ ಸೌಲಭ್ಯಗಳನ್ನು ನೀಡತಕ್ಕದ್ದು ಮತ್ತು ಆ ಸಂದರ್ಭದಲ್ಲಿ ತನ್ನನ್ನು ಪ್ರತಿನಿಧಿಸಿಕೊಳ್ಳಲು ಹಕ್ಕುಳ್ಳದ್ದಾಗಿರತಕ್ಕದ್ದು:

ಪರಂತು, ಯಾರೇ ವ್ಯಕ್ತಿಯು ಚಿಕಿತ್ಸಾ ಕಾರ್ಯಸಂಸ್ಥೆಯನ್ನು ಪ್ರವೇಶಿಸುವ ತನ್ನ ಆಶಯದ ಬಗ್ಗೆ ನೋಟೀಸನ್ನು ನೀಡದೇ ಹಾಗೆ ಪ್ರವೇಶಿಸತಕ್ಕದ್ದಲ್ಲ.

**35. ರಾಜ್ಯ ಸರ್ಕಾರವು ಫೀಜನ್ನು ವಿಧಿಸುವುದು.–** ರಾಜ್ಯ ಸರ್ಕಾರವು, ಚಿಕಿತ್ಸಾ ಕಾರ್ಯಸಂಸ್ಥೆಗಳ ವಿವಿಧ ಪ್ರವರ್ಗಗಳಿಗೆ, ನಿಯಮಿಸಬಹುದಾದಂಥ, ಫೀಜನ್ನು ವಿಧಿಸತಕ್ಕದ್ದು.

**36. ಅಪೀಲು.–** (1) ನೋಂದಣಿ ಪ್ರಮಾಣಪತ್ರವನ್ನು ನೀಡಲು ಅಥವಾ ನವೀಕರಿಸಲು ನಿರಾಕರಿಸಿರುವ ಅಥವಾ ನೋಂದಣಿ ಪ್ರಮಾಣಪತ್ರವನ್ನು ರದ್ದುಗೊಳಿಸಿರುವ ನೋಂದಣಿ ಪ್ರಾಧಿಕಾರದ ಆದೇಶದಿಂದ ಬಾಧಿತನಾದ ಯಾರೇ ವ್ಯಕ್ತಿಯು, ನಿಯಮಿಸಬಹುದಾದಂಥ ರೀತಿಯಲ್ಲಿ ಮತ್ತು ಅಂತಹ ಅವಧಿಯೊಳಗಾಗಿ, ರಾಜ್ಯ ಪರಿಷತ್ತಿಗೆ ಅಪೀಲನ್ನು ಸಲ್ಲಿಸಬಹುದು:

ಪರಂತು, ಸಕಾಲದಲ್ಲಿ ಅಪೀಲನ್ನು ಸಲ್ಲಿಸಲು ಸಾಕಷ್ಟು ಕಾರಣದಿಂದಾಗಿ ಅರ್ಜಿದಾರನಿಗೆ ಸಾಧ್ಯವಾಗಲಿಲ್ಲ ಎಂದು ರಾಜ್ಯ ಪರಿಷತ್ತಿಗೆ ಮನವರಿಕೆಯಾದರೆ, ನಿಯಮಿಸಿದ ಅವಧಿಯ ಮುಕ್ತಾಯದ ನಂತರವೂ, ಸಲ್ಲಿಸಿದ ಅಪೀಲನ್ನು ಅದು ಪುರಸ್ಕರಿಸಬಹುದು.

(2) ಉಪಪ್ರಕರಣ (1)ರ ಮೇರೆಗಿನ ಪ್ರತಿಯೊಂದು ಅಪೀಲನ್ನು ನಿಯಮಿಸಬಹುದಾದಂಥ, ನಮೂನೆಯಲ್ಲಿ ಸಲ್ಲಿಸತಕ್ಕದ್ದು ಮತ್ತು ಅದರೊಂದಿಗೆ ನಿಯಮಿಸಬಹುದಾದಂಥ ಫೀಜು ಇರತಕ್ಕದ್ದು.

## ಅಧ್ಯಾಯ V

## ಚಿಕಿತ್ಸಾ ಕಾರ್ಯಸಂಸ್ಥೆಗಳ ರಿಜಿಸ್ಟರು

**37. ಚಿಕಿತ್ಸಾ ಕಾರ್ಯಸಂಸ್ಥೆಗಳ ರಿಜಿಸ್ಟರು.–** (1) ಪ್ರಾಧಿಕಾರವನ್ನು ಸ್ಥಾಪಿಸಿದ ಎರಡು ವರ್ಷಗಳ ಅವಧಿಯೊಳಗಾಗಿ, ಪ್ರಾಧಿಕಾರವು ನೋಂದಾಯಿಸಿದ ಚಿಕಿತ್ಸಾ ಕಾರ್ಯಸಂಸ್ಥೆಗಳ ರಿಜಿಸ್ಟರನ್ನು ಡಿಜಿಟಲ್ ಫಾರ್ಮ್ಯಾಟ್‌ನಲ್ಲಿ ಸಂಕಲಿಸತಕ್ಕದ್ದು, ಪ್ರಕಟಿಸತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು ಮತ್ತು ರಾಜ್ಯ ಸರ್ಕಾರವು ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ರೀತಿಯಲ್ಲಿ ನಿರ್ವಹಿಸಿದ ರಿಜಿಸ್ಟರಿನಲ್ಲಿ ಹಾಗೆ ನೀಡಿದ ಪ್ರಮಾಣಪತ್ರದ ವಿವರಗಳನ್ನು ಆ ರಿಜಿಸ್ಟರಿನಲ್ಲಿ ನಮೂದಿಸತಕ್ಕದ್ದು.

(2) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಮೇರೆಗೆ ಚಿಕಿತ್ಸಾ ಕಾರ್ಯಸಂಸ್ಥೆಗಳ ನೋಂದಣಿಗಾಗಿ ರಚಿತವಾಗಿರುವ ಯಾವುದೇ ಇತರ ಪ್ರಾಧಿಕಾರವು ಒಳಗೊಂಡಂತೆ, ಪ್ರತಿಯೊಂದು ಪ್ರಾಧಿಕಾರವು, ಚಿಕಿತ್ಸಾ ಕಾರ್ಯಸಂಸ್ಥೆಗಳ ರಿಜಿಸ್ಟರಿನಲ್ಲಿ ಮಾಡಿರುವ ಪ್ರತಿಯೊಂದು ನಮೂದುಗಳ ಪ್ರತಿಯನ್ನು, ಡಿಜಿಟಲ್ ಫಾರ್ಮ್ಯಾಟ್‌ನಲ್ಲಿ, ನಿಯಮಿಸಬಹುದಾದಂಥ ರೀತಿಯಲ್ಲಿ, ರಾಜ್ಯ ರಿಜಿಸ್ಟರನ್ನು, ರಾಜ್ಯದಲ್ಲಿರುವ ನೋಂದಣಿ ಪ್ರಾಧಿಕಾರವು ನಿರ್ವಹಿಸುತ್ತಿರುವ ರಿಜಿಸ್ಟರುಗಳೊಂದಿಗೆ ನಿರಂತರವಾಗಿ ತಹಲ್‌ವರೆಗೆ ಪರಿಷ್ಕರಿಸಲಾಗಿದೆ ಎಂಬುದನ್ನು ಸುನಿಶ್ಚಿತಗೊಳಿಸಲು ರಾಜ್ಯ ಚಿಕಿತ್ಸಾ ಪರಿಷತ್ತಿಗೆ ಒದಗಿಸತಕ್ಕದ್ದು.

**38. ಚಿಕಿತ್ಸಾ ಕಾರ್ಯಸಂಸ್ಥೆಗಳ ರಾಜ್ಯ ರಿಜಿಸ್ಟರಿನ ನಿರ್ವಹಣೆ.–** (1) ಪ್ರತಿಯೊಂದು ರಾಜ್ಯ ಸರ್ಕಾರವು, ಡಿಜಿಟಲ್ ಫಾರ್ಮ್ಯಾಟ್‌ನಲ್ಲಿ ಮತ್ತು ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ನಮೂನೆಯಲ್ಲಿ ಇರುವ ಮತ್ತು ಅಂಥ ವಿವರಗಳನ್ನು ಒಳಗೊಂಡಿರುವ ರಾಜ್ಯದಲ್ಲಿರುವ ಚಿಕಿತ್ಸಾ ಕಾರ್ಯಸಂಸ್ಥೆಗಳಿಗೆ ಸಂಬಂಧಿಸಿದ, ಚಿಕಿತ್ಸಾ ಕಾರ್ಯಸಂಸ್ಥೆಗಳ ರಾಜ್ಯ ರಿಜಿಸ್ಟರ್ ಎಂದು ಕರೆಯುವ ರಿಜಿಸ್ಟರನ್ನು ನಿರ್ವಹಿಸತಕ್ಕದ್ದು.

(2) ಪ್ರತಿಯೊಂದು ರಾಜ್ಯ ಸರ್ಕಾರವು, ಚಿಕಿತ್ಸಾ ಕಾರ್ಯಸಂಸ್ಥೆಗಳ ರಾಜ್ಯ ರಿಜಿಸ್ಟರಿನ ಒಂದು ಪ್ರತಿಯನ್ನು ಕೇಂದ್ರ ಸರ್ಕಾರಕ್ಕೆ ಡಿಜಿಟಲ್ ಫಾರ್ಮ್ಯಾಟ್‌ನಲ್ಲಿ ಒದಗಿಸತಕ್ಕದ್ದು ಮತ್ತು ಒಂದು ನಿರ್ದಿಷ್ಟ ತಿಂಗಳಿನಲ್ಲಿ, ಅಂತಹ ರಿಜಿಸ್ಟರಿನಲ್ಲಿ ಮಾಡಿದ ಎಲ್ಲಾ ಸೇರ್ಪಡೆಗಳನ್ನು ಮತ್ತು ಇತರ ತಿದ್ದುಪಡಿಗಳನ್ನು ಮುಂದಿನ ತಿಂಗಳಿನ 15ನೆಯ ದಿನದೊಳಗೆ ಕೇಂದ್ರ ಸರ್ಕಾರಕ್ಕೆ ತಿಳಿಸತಕ್ಕದ್ದು.

**39. ಚಿಕಿತ್ಸಾ ಕಾರ್ಯಸಂಸ್ಥೆಗಳ ರಾಷ್ಟ್ರೀಯ ರಿಜಿಸ್ಟರಿನ ನಿರ್ವಹಣೆ.–** ಕೇಂದ್ರ ಸರ್ಕಾರವು, 'ಚಿಕಿತ್ಸಾ ಕಾರ್ಯಸಂಸ್ಥೆಗಳ ರಾಷ್ಟ್ರೀಯ ರಿಜಿಸ್ಟರು' ಎಂಬ ಅಖಿಲ ಭಾರತ ಮಟ್ಟದ ರಿಜಿಸ್ಟರನ್ನು ಡಿಜಿಟಲ್ ಫಾರ್ಮ್ಯಾಟ್‌ನಲ್ಲಿ ನಿರ್ವಹಿಸತಕ್ಕದ್ದು. ಅದು ರಾಜ್ಯ ಸರ್ಕಾರಗಳು ನಿರ್ವಹಿಸುವ "ಚಿಕಿತ್ಸಾ ಕಾರ್ಯಸಂಸ್ಥೆಗಳ ರಾಜ್ಯ ರಿಜಿಸ್ಟರ್"ಗಳ ಸಮ್ಮಿಳನ ರಿಜಿಸ್ಟರ್ ಆಗಿರತಕ್ಕದ್ದು ಮತ್ತು ಅದನ್ನು ಡಿಜಿಟಲ್ ಫಾರ್ಮ್ಯಾಟ್‌ನಲ್ಲಿ ಪ್ರಕಟಿಸತಕ್ಕದ್ದು.

## ಅಧ್ಯಾಯ VI

## ದಂಡಗಳು

**40. ದಂಡ.–** ಈ ಅಧಿನಿಯಮದ ಯಾವುದೇ ಉಪಬಂಧವನ್ನು ಯಾರಾದರೂ ಉಲ್ಲಂಘಿಸಿದರೆ, ಅಂಥ ಉಲ್ಲಂಘನೆಗೆ ಬೇರೆ ಎಲ್ಲಿಯೂ ದಂಡಕ್ಕೆ ಉಪಬಂಧ ಕಲ್ಪಿಸಿರದಿದ್ದರೆ, ಮೊದಲನೇ ಅಪರಾಧಕ್ಕೆ ಹತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅವನು ದಂಡನೆಗೆ ಗುರಿಯಾಗತಕ್ಕದ್ದು, ಎರಡನೇ ಅಪರಾಧಕ್ಕೆ ಐವತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೆಗೆ ಗುರಿಯಾಗತಕ್ಕದ್ದು ಮತ್ತು ತರುವಾಯದ ಯಾವುದೇ ಅಪರಾಧಕ್ಕೆ ಐದು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೆಗೆ ಗುರಿಯಾಗತಕ್ಕದ್ದು.

**41. ನೋಂದಣಿ ಮಾಡದಿದ್ದರೆ ಹಣಕಾಸಿನ ರೂಪದಲ್ಲಿ ದಂಡ.–** (1) ನೋಂದಣಿಯಿಲ್ಲದೆ, ಚಿಕಿತ್ಸಾ ಕಾರ್ಯಸಂಸ್ಥೆಯನ್ನು ಯಾರಾದರೂ ನಡೆಸುತ್ತಿದ್ದರೆ, ಅವನು ಮೊದಲನೇ ಉಲ್ಲಂಘನೆಗಾಗಿ ಐವತ್ತು ಸಾವಿರ ರೂಪಾಯಿಗಳವರೆಗಿನ ಹಣಕಾಸು ರೂಪದ ದಂಡಕ್ಕೆ ಗುರಿಯಾಗತಕ್ಕದ್ದು. ಎರಡನೇ ಉಲ್ಲಂಘನೆಗಾಗಿ ಎರಡು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಹಣಕಾಸಿನ ರೂಪದ ದಂಡಕ್ಕೆ ಗುರಿಯಾಗತಕ್ಕದ್ದು ಮತ್ತು ತರುವಾಯದ ಯಾವುದೇ ಉಲ್ಲಂಘನೆಗೆ ಐದು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಹಣಕಾಸಿನ ರೂಪದ ದಂಡಕ್ಕೆ ಗುರಿಯಾಗತಕ್ಕದ್ದು.

(2) ಈ ಅಧಿನಿಯಮದ ಮೇರೆಗೆ ನೋಂದಣಿಯಾಗಿರದ ಚಿಕಿತ್ಸಾ ಕಾರ್ಯಸಂಸ್ಥೆಯಲ್ಲಿ ತಿಳಿದೂ ತಿಳಿದೂ ಯಾರಾದರೂ, ಸೇವೆ ಸಲ್ಲಿಸಿದರೆ, ಅವನು ಇಪ್ಪತ್ತೈದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಹಣಕಾಸಿನ ರೂಪದ ದಂಡಕ್ಕೆ ಗುರಿಯಾಗತಕ್ಕದ್ದು.

(3) ಉಪಪ್ರಕರಣ (1) ಮತ್ತು (2)ರ ಮೇರೆಗೆ ನ್ಯಾಯ ನಿರ್ಣಯದ ಉದ್ದೇಶಕ್ಕಾಗಿ, ಪ್ರಾಧಿಕಾರವು, ಸಂಬಂಧಿಸಿದ ಯಾರೇ ವ್ಯಕ್ತಿಗೆ ಯಾವುದೇ ಹಣಕಾಸಿನ ರೂಪದ ದಂಡವನ್ನು ವಿಧಿಸುವುದಕ್ಕಾಗಿ ಅಹವಾಲು ಹೇಳಿಕೊಳ್ಳಲು ಅವಕಾಶವನ್ನು ನೀಡಿದ ತರುವಾಯ, ನಿಯಮಿಸಬಹುದಾದ ರೀತಿಯಲ್ಲಿ, ವಿಚಾರಣೆಯನ್ನು ನಡೆಸತಕ್ಕದ್ದು.

(4) ವಿಚಾರಣೆಯನ್ನು ನಡೆಸುವಾಗ, ಪ್ರಾಧಿಕಾರವು, ಮೊಕದ್ದಮೆಯ ವಾಸ್ತವಾಂಶಗಳು ಮತ್ತು ಸನ್ನಿವೇಶಗಳು ಗೊತ್ತಿರುವಂಥ ಯಾರೇ ವ್ಯಕ್ತಿಯನ್ನು ಸಾಕ್ಷ್ಯ ನೀಡಲು ಅಥವಾ ವಿಚಾರಣೆಯ ವಸ್ತು ವಿಷಯಕ್ಕೆ ಉಪಯುಕ್ತವಾಗಬಹುದೆಂದು ಅಥವಾ ಅದಕ್ಕೆ ಸಂಬಂಧಪಡಬಹುದೆಂದು ಪ್ರಾಧಿಕಾರವು ಅಭಿಪ್ರಾಯಪಡುವ ಯಾವುದೇ ದಾಖಲೆಯನ್ನು ಹಾಜರುಪಡಿಸಲು ಸಮನು ಮಾಡುವ ಮತ್ತು ಹಾಜರಾಗಬೇಕೆಂದು ಒತ್ತಾಯಪಡಿಸುವ ಅಧಿಕಾರವನ್ನು ಹೊಂದಿರತಕ್ಕದ್ದು ಮತ್ತು ಅಂತಹ ವಿಚಾರಣೆ ಆಗುತ್ತಿರುವಾಗ, ಆ ವ್ಯಕ್ತಿಯು, (1)ನೇ ಮತ್ತು (2)ನೇ ಉಪಪ್ರಕರಣಗಳಲ್ಲಿ ನಿರ್ದಿಷ್ಟಪಡಿಸಿರುವ ಉಪಬಂಧಗಳನ್ನು ಪಾಲಿಸಲು ವಿಫಲನಾಗಿದ್ದಾನೆ ಎಂದು ಅದಕ್ಕೆ ಮನವರಿಕೆಯಾದರೆ, ಆದೇಶದ ಮೂಲಕ ಆ ಉಪಪ್ರಕರಣಗಳಲ್ಲಿ ನಿರ್ದಿಷ್ಟಪಡಿಸಿರುವಂತೆ, 42ನೇ ಪ್ರಕರಣದ (8)ನೇ ಉಪಪ್ರಕರಣದಲ್ಲಿ ತಿಳಿಸಿದ ಖಾತೆಯಲ್ಲಿ, ಆ ಆದೇಶದ ಮೂವತ್ತು ದಿನಗಳೊಳಗಾಗಿ ಠೇವಣಿ ಇಡಬೇಕೆಂದು ತಿಳಿಸಿ ಹಣಕಾಸಿನ ರೂಪದ ದಂಡವನ್ನು ವಿಧಿಸಬಹುದು.

(5) ಹಣಕಾಸಿನ ರೂಪದ ದಂಡದ ಪರಿಮಾಣವನ್ನು ನಿರ್ಧರಿಸುವಾಗ, ಪ್ರಾಧಿಕಾರವು ಚಿಕಿತ್ಸಾ ಕಾರ್ಯಸಂಸ್ಥೆಯ ಪ್ರವರ್ಗ, ಗಾತ್ರ ಮತ್ತು ಮಾದರಿ ಮತ್ತು ಚಿಕಿತ್ಸಾ ಕಾರ್ಯಸಂಸ್ಥೆಯು ಇರುವ ಪ್ರದೇಶದ ಸ್ಥಳೀಯ ಪರಿಸ್ಥಿತಿಗಳನ್ನು ಗಮನಕ್ಕೆ ತೆಗೆದುಕೊಳ್ಳತಕ್ಕದ್ದು.

(6) ಪ್ರಾಧಿಕಾರದ ನಿರ್ಣಯದಿಂದ ಬಾಧಿತನಾದ ಯಾರೇ ವ್ಯಕ್ತಿಯು, ಸದರಿ ನಿರ್ಣಯದ ದಿನಾಂಕದಿಂದ ಮೂರು ತಿಂಗಳುಗಳ ಅವಧಿಯೊಳಗಾಗಿ, ರಾಜ್ಯ ಪರಿಷತ್ತಿಗೆ ಅಪೀಲನ್ನು ಸಲ್ಲಿಸಬಹುದು.

(7) ಉಪಪ್ರಕರಣ (6)ರಲ್ಲಿ ತಿಳಿಸಿದ ಅಪೀಲನ್ನು ಸಲ್ಲಿಸುವ ವಿಧಾನವು ನಿಯಮಿಸಬಹುದಾದಂಥದ್ದು ಆಗಿರತಕ್ಕದ್ದು.

**42. ನಿರ್ದೇಶನದ ಉಲ್ಲಂಘನೆ, ಮಾಹಿತಿ ನೀಡಲು ಅಡ್ಡಿ ಉಂಟುಮಾಡುವುದು ಮತ್ತು ನಿರಾಕರಿಸುವುದು.–** ಈ ಅಧಿನಿಯಮದ ಮೇರೆಗೆ ಯಾರೇ ವ್ಯಕ್ತಿಯು ಅಥವಾ ಪ್ರಾಧಿಕಾರವು ಕಾನೂನುಬದ್ಧವಾಗಿ ಯಾವ ನಿರ್ದೇಶನವನ್ನು ನೀಡಲು ಅಧಿಕಾರ ಹೊಂದಿರುವನೋ ಅಥವಾ ಅಧಿಕಾರ ಹೊಂದಿರುವುದೋ ಆ ಯಾವುದೇ ನಿರ್ದೇಶನವನ್ನು ಯಾರಾದರೂ ಉದ್ದೇಶಪೂರ್ವಕವಾಗಿ ಉಲ್ಲಂಘಿಸಿದರೆ ಅಥವಾ ಈ ಅಧಿನಿಯಮದ ಮೇರೆಗೆ ಯಾವುದೇ ಪ್ರಕಾರ್ಯವನ್ನು ಯಾವ ವ್ಯಕ್ತಿಯು ಅಥವಾ ಯಾವ ಪ್ರಾಧಿಕಾರವು ನಿರ್ವಹಿಸಬೇಕಾಗಿದೆಯೋ ಅಥವಾ ನಿರ್ವಹಿಸಲು ಅಧಿಕಾರ ನೀಡಲಾಗಿದೆಯೋ ಆ ಯಾರೇ ವ್ಯಕ್ತಿಯು ಅಥವಾ ಆ ಪ್ರಾಧಿಕಾರವು ಆ ಯಾವುದೇ ಪ್ರಕಾರ್ಯವನ್ನು ನಿರ್ವಹಿಸಲು ಅಡ್ಡಿ ಅಡಚಣೆ ಉಂಟುಮಾಡಿದ್ದರೆ ಅವನು ಐದು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಹಣಕಾಸಿನ ರೂಪದ ದಂಡಕ್ಕೆ ಗುರಿಯಾಗತಕ್ಕದ್ದು.

(2) ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ, ಯಾವುದೇ ಮಾಹಿತಿಯನ್ನು ಒದಗಿಸಬೇಕಾದ ಯಾರೇ ವ್ಯಕ್ತಿಯು, ಉದ್ದೇಶಪೂರ್ವಕವಾಗಿ ಅಂಥ ಮಾಹಿತಿಯನ್ನು ತಡೆಹಿಡಿದರೆ ಅಥವಾ ಸುಳ್ಳೆಂದು ತನಗೆ ಗೊತ್ತಿರುವ ಅಥವಾ

ನಿಜವೆಂದು ತಾನು ನಂಬದಿರುವ ಮಾಹಿತಿಯನ್ನು ನೀಡಿದರೆ, ಐದು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಹಣಕಾಸಿನ ರೂಪದ ದಂಡಕ್ಕೆ ಗುರಿಯಾಗತಕ್ಕದ್ದು.

(3) ಉಪಪ್ರಕರಣ (1) ಮತ್ತು (2)ರ ಮೇರೆಗೆ ಪ್ರಾಧಿಕಾರವು, ನ್ಯಾಯ ನಿರ್ಣಯದ ಉದ್ದೇಶಕ್ಕಾಗಿ ಅಹವಾಲು ಹೇಳಿಕೊಳ್ಳಲು ಸೂಕ್ತ ಅವಕಾಶವನ್ನು ನೀಡಿದ ನಂತರ, ಸಂಬಂಧಪಟ್ಟ ಯಾರೇ ವ್ಯಕ್ತಿಗೆ ಯಾವುದೇ ಹಣಕಾಸಿನ ರೂಪದ ದಂಡವನ್ನು ವಿಧಿಸುವುದಕ್ಕಾಗಿ, ನಿಯಮಿಸಬಹುದಾದ ರೀತಿಯಲ್ಲಿ ವಿಚಾರಣೆಯನ್ನು ನಡೆಸತಕ್ಕದ್ದು.

(4) ವಿಚಾರಣೆಯನ್ನು ನಡೆಸುವಾಗ, ಪ್ರಾಧಿಕಾರವು, ಮೊಕದ್ದಮೆಯ ವಾಸ್ತವಾಂಶಗಳು ಮತ್ತು ಸನ್ನಿವೇಶಗಳು ಗೊತ್ತಿರುವಂಥ ಯಾರೇ ವ್ಯಕ್ತಿಯನ್ನು ಸಾಕ್ಷ್ಯ ನೀಡಲು ಅಥವಾ ವಿಚಾರಣೆಯ ವಸ್ತು ವಿಷಯಕ್ಕೆ ಉಪಯುಕ್ತವಾಗಬಹುದೆಂದು ಅಥವಾ ಅದಕ್ಕೆ ಸಂಬಂಧಪಡಬಹುದೆಂದು ಪ್ರಾಧಿಕಾರವು ಅಭಿಪ್ರಾಯಪಡುವ ಯಾವುದೇ ದಾಖಲೆಯನ್ನು ಹಾಜರುಪಡಿಸಲು ಸಮನು ಮಾಡುವ ಮತ್ತು ಹಾಜರಾಗಬೇಕೆಂದು ಒತ್ತಾಯಪಡಿಸುವ ಅಧಿಕಾರವನ್ನು ಹೊಂದಿರತಕ್ಕದ್ದು ಮತ್ತು ಅಂತಹ ವಿಚಾರಣೆ ಆಗುತ್ತಿರುವಾಗ ಆ ವ್ಯಕ್ತಿಯು, (1)ನೇ ಮತ್ತು (2)ನೇ ಉಪಪ್ರಕರಣಗಳಲ್ಲಿ ನಿರ್ದಿಷ್ಟಪಡಿಸಿರುವ ಉಪಬಂಧಗಳನ್ನು ಪಾಲಿಸಲು ವಿಫಲನಾಗಿದ್ದಾನೆ ಎಂದು ಅದಕ್ಕೆ ಮನವರಿಕೆಯಾದರೆ, ಆದೇಶದ ಮೂಲಕ ಆ ಉಪಪ್ರಕರಣಗಳಲ್ಲಿ ನಿರ್ದಿಷ್ಟಪಡಿಸಿರುವಂತೆ, 42ನೇ ಪ್ರಕರಣದ (8)ನೇ ಉಪಪ್ರಕರಣದಲ್ಲಿ ತಿಳಿಸಿದ ಖಾತೆಯಲ್ಲಿ, ಆದೇಶದ ಮೂವತ್ತು ದಿನಗಳೊಳಗಾಗಿ ಠೇವಣಿ ಇಡಬೇಕೆಂದು ತಿಳಿಸಿ ಹಣಕಾಸಿನ ರೂಪದ ದಂಡವನ್ನು ವಿಧಿಸಬಹುದು.

(5) ಹಣಕಾಸಿನ ರೂಪದ ದಂಡದ ಪರಿಮಾಣವನ್ನು ನಿರ್ಧರಿಸುವಾಗ, ಪ್ರಾಧಿಕಾರವು ಚಿಕಿತ್ಸಾ ಕಾರ್ಯಸಂಸ್ಥೆಯ ಪ್ರವರ್ಗ, ಗಾತ್ರ ಮತ್ತು ಮಾದರಿ ಮತ್ತು ಚಿಕಿತ್ಸಾ ಕಾರ್ಯಸಂಸ್ಥೆಯು ಇರುವ ಪ್ರದೇಶದ ಸ್ಥಳೀಯ ಪರಿಸ್ಥಿತಿಗಳನ್ನು ಗಮನಕ್ಕೆ ತೆಗೆದುಕೊಳ್ಳತಕ್ಕದ್ದು.

(6) ಪ್ರಾಧಿಕಾರದ ನಿರ್ಣಯದಿಂದ ಬಾಧಿತನಾದ ಯಾರೇ ವ್ಯಕ್ತಿಯು, ಸದರಿ ನಿರ್ಣಯದ ದಿನಾಂಕದಿಂದ ಮೂರು ತಿಂಗಳುಗಳ ಅವಧಿಯೊಳಗಾಗಿ, ರಾಜ್ಯ ಪರಿಷತ್ತಿಗೆ ಅಪೀಲನ್ನು ಸಲ್ಲಿಸಬಹುದು.

(7) ಉಪಪ್ರಕರಣ (6)ರಲ್ಲಿ ತಿಳಿಸಿದ ಅಪೀಲನ್ನು ಸಲ್ಲಿಸುವ ವಿಧಾನವು ನಿಯಮಿಸಬಹುದಾದಂಥದ್ದು ಆಗಿರತಕ್ಕದ್ದು.

(8) ಪ್ರಕರಣ 41ರ ಮತ್ತು 42ರ ಮೇರೆಗೆ ವಿಧಿಸಿದ ಹಣಕಾಸಿನ ರೂಪದ ದಂಡವನ್ನು ರಾಜ್ಯ ಸರ್ಕಾರವು ಈ ಬಗ್ಗೆ ಆದೇಶದ ಮೂಲಕ ನಿರ್ದಿಷ್ಟಪಡಿಸಿದಂಥ ಖಾತೆಗೆ ಜಮೆ ಮಾಡತಕ್ಕದ್ದು.

**43. ಸಣ್ಣಪುಟ್ಟ ನ್ಯೂನತೆಗಳಿಗೆ ದಂಡ.–** ಈ ಅಧಿನಿಯಮದ ಯಾವುದೇ ಉಪಬಂಧವನ್ನು ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮವನ್ನು ಯಾರೇ ವ್ಯಕ್ತಿಯು ಉಲ್ಲಂಘಿಸಿದ್ದರಿಂದಾಗಿ, ಯಾರೇ ರೋಗಿಯ ಆರೋಗ್ಯಕ್ಕೆ ಮತ್ತು ಸುರಕ್ಷತೆಗೆ ಸದ್ಯದಲ್ಲೆ ಯಾವುದೇ ಅಪಾಯವನ್ನುಂಟು ಮಾಡದಂಥ ಮತ್ತು ಸಮಂಜಸ ಕಾಲದೊಳಗೆ ಸರಿಪಡಿಸಬಹುದಾದಂಥ ನ್ಯೂನತೆಗಳು ಉಂಟಾದರೆ ಆ ವ್ಯಕ್ತಿಯು ಹತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**44. ಕಂಪನಿಗಳಿಂದ ಉಲ್ಲಂಘನೆ.–** ಈ ಅಧಿನಿಯಮದ ಯಾವುದೇ ಉಪಬಂಧಗಳನ್ನು ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮವನ್ನು ಉಲ್ಲಂಘನೆ ಮಾಡಿದ ವ್ಯಕ್ತಿಯು, ಕಂಪನಿಯಾಗಿದ್ದರೆ, ಆ ಉಲ್ಲಂಘನೆ ಸಂಭವಿಸಿದ ಕಾಲದಲ್ಲಿ ಕಂಪನಿಯ ಪ್ರಭಾರದಲ್ಲಿದ್ದ ಮತ್ತು ಕಂಪನಿಯ ವ್ಯವಹಾರಗಳನ್ನು ನಡೆಸಲು ಕಂಪನಿಗೆ ಜವಾಬ್ದಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯನ್ನು ಹಾಗೂ ಕಂಪನಿಯನ್ನು ಸಹ ಆ ಉಲ್ಲಂಘನೆಯ ತಪ್ಪಿತಸ್ಥ ಎಂದು ಭಾವಿಸತಕ್ಕದ್ದು ಮತ್ತು ಆ ವ್ಯಕ್ತಿಯು ಜುಲ್ಮಾನೆಗೆ ಗುರಿಯಾಗತಕ್ಕದ್ದು:

ಪರಂತು, ಆ ಯಾರೇ ಅಂಥ ವ್ಯಕ್ತಿಯು, ಆ ಉಲ್ಲಂಘನೆಯು ತನ್ನ ತಿಳುವಳಿಕೆಗೆ ಬಾರದೆ ನಡೆದಿದೆಯೆಂದೂ ಅಥವಾ ಅಂತಹ ಉಲ್ಲಂಘನೆ ನಡೆಯದಂತೆ ತಡೆಯಲು ತಾನು ಎಲ್ಲಾ ಯುಕ್ತ ಜಾಗರೂಕತೆಯನ್ನು ವಹಿಸಿದ್ದೇನೆಂದು ರುಜುವಾತುಪಡಿಸಿದರೆ ಈ ಉಪಪ್ರಕರಣದಲ್ಲಿ ಇರುವುದು ಯಾವುದೂ ಅಂತಹ ಯಾರೇ ವ್ಯಕ್ತಿಯನ್ನು ಯಾವುದೇ ದಂಡನೆಗೆ ಗುರಿಪಡಿಸತಕ್ಕದ್ದಲ್ಲ.

(2) ಉಪಪ್ರಕರಣ (1)ರಲ್ಲಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮದ ಯಾವುದೇ ಉಪಬಂಧಗಳನ್ನು ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮವನ್ನು ಕಂಪನಿಯು ಉಲ್ಲಂಘಿಸಿದ್ದರೆ ಮತ್ತು ಆ ಉಲ್ಲಂಘನೆಯು ಕಂಪನಿಯ ಯಾರೇ ನಿರ್ದೇಶಕನ, ವ್ಯವಸ್ಥಾಪಕನ, ಕಾರ್ಯದರ್ಶಿಯ ಅಥವಾ ಇತರ ಅಧಿಕಾರಿಯ ಸಮ್ಮತಿಯಿಂದ ಅಥವಾ ಪರೋಕ್ಷ ಸಮ್ಮತಿಯಿಂದ ನಡೆದಿದೆಯೆಂದು ಅಥವಾ ಕಂಪನಿಯ ಯಾರೇ ನಿರ್ದೇಶಕನ, ವ್ಯವಸ್ಥಾಪಕನ, ಕಾರ್ಯದರ್ಶಿಯ, ಅಥವಾ ಕಂಪನಿಯ ಇತರ ಅಧಿಕಾರಿಯ ಯಾವುದೇ ನಿರ್ಲಕ್ಷ್ಯತೆಯ ಕಾರಣದಿಂದ ನಡೆದಿದೆಯೆಂದು ಆರೋಪಿಸಿರುವುದು ರುಜುವಾತಾದಲ್ಲಿ ಅಂಥ ನಿರ್ದೇಶಕನನ್ನು, ವ್ಯವಸ್ಥಾಪಕನನ್ನು, ಕಾರ್ಯದರ್ಶಿಯನ್ನು ಅಥವಾ ಇತರ ಅಧಿಕಾರಿಯನ್ನು ಸಹ ಆ ಉಲ್ಲಂಘನೆಯ ತಪ್ಪಿತಸ್ಥ ಎಂದು ಭಾವಿಸತಕ್ಕದ್ದು ಮತ್ತು ಅವನು ಜುಲ್ಮಾನೆಗೆ ಗುರಿಯಾಗತಕ್ಕದ್ದು.

*ವಿವರಣೆ.*– ಈ ಪ್ರಕರಣದ ಉದ್ದೇಶಕ್ಕಾಗಿ,–

(ಎ) "ಕಂಪನಿ" ಎಂದರೆ, ನಿಗಮಿತ ನಿಕಾಯ ಮತ್ತು ಅದು ಫರ್ಮ್‌ನ್ನು ಅಥವಾ ವ್ಯಕ್ತಿಗಳ ಇತರ ಸಂಘವನ್ನು ಒಳಗೊಳ್ಳುತ್ತದೆ; ಮತ್ತು

(ಬಿ) ಫರ್ಮಿಗೆ ಸಂಬಂಧಿಸಿದಂತೆ, "ನಿರ್ದೇಶಕ", ಎಂದರೆ, ಫರ್ಮಿನ ಪಾಲುದಾರ.

**45. ಸರ್ಕಾರಿ ಇಲಾಖೆಗಳಿಂದ ಅಪರಾಧಗಳು.**– (1) ಈ ಅಧಿನಿಯಮದ ಪ್ರಾರಂಭದ ನಂತರ ಆರು ತಿಂಗಳುಗಳ ಅವಧಿಯೊಳಗಾಗಿ, ಸರ್ಕಾರದ ಯಾವುದೇ ಇಲಾಖೆಯು ಈ ಅಧಿನಿಯಮದ ಮೇರೆಗೆ ಅಪರಾಧ ಮಾಡಿದ್ದರೆ, ಆ ಇಲಾಖೆಯ ಮುಖ್ಯಸ್ಥನನ್ನು ಆ ಅಪರಾಧದ ತಪ್ಪಿತಸ್ಥ ಎಂದು ಭಾವಿಸತಕ್ಕದ್ದು ಮತ್ತು ತನ್ನ ವಿರುದ್ಧದ ವ್ಯವಹರಣೆಗೆ ಆತನು ಗುರಿಯಾಗತಕ್ಕದ್ದು ಮತ್ತು ತದನುಸಾರವಾಗಿ ದಂಡಿತನಾಗತಕ್ಕದ್ದು:

ಪರಂತು, ಆ ಇಲಾಖಾ ಮುಖ್ಯಸ್ಥನು, ಅಪರಾಧವು ತನ್ನ ತಿಳುವಳಿಕೆಗೆ ಬಾರದೆ ನಡೆದಿದೆ ಎಂದು ಅಥವಾ ಅವನು ಅಂತಹ ಅಪರಾಧವು ಆಗದಂತೆ ತಡೆಯಲು ತಾನು ಎಲ್ಲಾ ಯುಕ್ತ ಜಾಗರೂಕತೆಯನ್ನು ವಹಿಸಿದ್ದೇನೆಂದು ರುಜುವಾತುಪಡಿಸಿದರೆ, ಈ ಪ್ರಕರಣದಲ್ಲಿ ಇರುವುದು ಯಾವುದೂ ಯಾರೇ ಅಂತಹ ವ್ಯಕ್ತಿಯನ್ನು ಯಾವುದೇ ಶಿಕ್ಷೆಗೆ ಗುರಿಪಡಿಸತಕ್ಕದ್ದಲ್ಲ.

(2) ಉಪಪ್ರಕರಣ (1)ರಲ್ಲಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಸರ್ಕಾರದ ಇಲಾಖೆಯು ಮಾಡಿದ್ದರೆ ಮತ್ತು ಆ ಅಪರಾಧವು ಇಲಾಖೆಯ ಮುಖ್ಯಸ್ಥನಲ್ಲದ ಯಾರೇ ಅಧಿಕಾರಿಯ ಸಮ್ಮತಿಯಿಂದ ಅಥವಾ ಪರೋಕ್ಷ ಸಮ್ಮತಿಯಿಂದ ನಡೆದಿದೆಯೆಂದು ಅಥವಾ ಯಾರೇ ಅಂಥ ಅಧಿಕಾರಿಯ ನಿರ್ಲಕ್ಷ್ಯದಿಂದ ನಡೆದಿದೆಂದು ಆರೋಪಿಸಿರುವುದು ರುಜುವಾತಾದರೆ ಅಥವಾ ಅಂಥ ಅಧಿಕಾರಿಯನ್ನು ಸಹ ಆ ಅಪರಾಧದ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ಅವನು ತನ್ನ ವಿರುದ್ಧದ ವ್ಯವಹರಣೆಗೆ ಗುರಿಯಾಗತಕ್ಕದ್ದು ಮತ್ತು ತದನುಸಾರವಾಗಿ, ದಂಡಿತನಾಗತಕ್ಕದ್ದು.

**46. ಜುಲ್ಮಾನೆಯ ವಸೂಲಿ.**– ಯಾರೇ ಆಗಲಿ, ಜುಲ್ಮಾನೆಯನ್ನು ಸಂದಾಯ ಮಾಡಲು ತಪ್ಪಿದರೆ, ರಾಜ್ಯ ಚಿಕಿತ್ಸಾ ಕಾರ್ಯಸಂಸ್ಥೆಗಳ ಪರಿಷತ್ತು, ಅಂತಹ ವ್ಯಕ್ತಿಯು ಕೊಡಬೇಕಾಗಿರುವ ಜುಲ್ಮಾನೆಯನ್ನು ನಿರ್ದಿಷ್ಟಪಡಿಸಿರುವ ಪ್ರಮಾಣಪತ್ರವನ್ನು ಸಿದ್ಧಪಡಿಸಬಹುದು. ಆ ಪ್ರಮಾಣಪತ್ರಕ್ಕೆ ಪರಿಷತ್ತು ಅಧಿಕೃತಗೊಳಿಸಿದ ಅಧಿಕಾರಿಯು ಸಹಿ ಮಾಡಿರತಕ್ಕದ್ದು ಮತ್ತು ಅಂತಹ ವ್ಯಕ್ತಿಯು ಯಾವ ಜಿಲ್ಲೆಯಲ್ಲಿ ಯಾವುದೇ ಸ್ವತ್ತಿನ ಒಡೆತನವನ್ನು ಹೊಂದಿರುವನೋ ಅಥವಾ ವಾಸಿಸುತ್ತಿರುವನೋ ಅಥವಾ ತನ್ನ ವ್ಯವಹಾರವನ್ನು ನಡೆಸುತ್ತಿರುವುನೋ ಆ ಜಿಲ್ಲೆಯ ಜಿಲ್ಲಾಧಿಕಾರಿಗೆ ಕಳುಹಿಸತಕ್ಕದ್ದು ಮತ್ತು ಆ ಜಿಲ್ಲಾಧಿಕಾರಿಯು ಅಂತಹ ಪ್ರಮಾಣಪತ್ರವನ್ನು ಸ್ವೀಕರಿಸಿದ ನಂತರ, ಅದರಲ್ಲಿ ನಿರ್ದಿಷ್ಟಪಡಿಸಿರುವ ಮೊಬಲಗನ್ನು, ಅದು ಭೂ ಕಂದಾಯದ ಬಾಕಿ ಎಂಬಂತೆ, ಅಂತಹ ವ್ಯಕ್ತಿಯಿಂದ ವಸೂಲಿ ಮಾಡಲು ಕ್ರಮತೆಗೆದುಕೊಳ್ಳತಕ್ಕದ್ದು.

## ಅಧ್ಯಾಯ VII

### ಸಂಕೀರ್ಣ

**47. ಸದ್ಭಾವನೆಯಿಂದ ಕೈಗೊಂಡ ಕ್ರಮಕ್ಕೆ ರಕ್ಷಣೆ.**– (1) ಈ ಅಧಿನಿಯಮದ ಉಪಬಂಧಗಳಿಗೆ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮಕ್ಕೆ ಅನುಸಾರವಾಗಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿರುವ ಯಾವುದೇ ಕಾರ್ಯಕ್ಕಾಗಿ ಯಾವುದೇ ದಾವೆಯನ್ನು, ಪ್ರಾಸಿಕ್ಯೂಷನನ್ನು ಅಥವಾ ಇತರ ಕಾನೂನು ವ್ಯವಹರಣೆಗಳನ್ನು,

ಯಾವುದೇ ಪ್ರಾಧಿಕಾರದ ಅಥವಾ ರಾಷ್ಟ್ರೀಯ ಪರಿಷತ್ತಿನ ಅಥವಾ ರಾಜ್ಯ ಪರಿಷತ್ತಿನ ಯಾರೇ ಸದಸ್ಯನ ಅಥವಾ ಯಾರೇ ಅಧಿಕೃತ ಅಧಿಕಾರಿಯ ವಿರುದ್ಧ ಹೂಡಲು ಅವಕಾಶವಿರತಕ್ಕದ್ದಲ್ಲ.

(2) ಈ ಅಧಿನಿಯಮದ ಉಪಬಂಧಗಳಿಗೆ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮಕ್ಕೆ ಅನುಸಾರವಾಗಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿರುವ ಯಾವುದೇ ಕಾರ್ಯದಿಂದ ಉಂಟಾದ ಅಥವಾ ಉಂಟಾಗುವ ಸಂಭವವಿರುವ ಯಾವುದೇ ನಷ್ಟಕ್ಕಾಗಿ ಅಥವಾ ಹಾನಿಗಾಗಿ ಕೇಂದ್ರ ಸರ್ಕಾರದ ಅಥವಾ ರಾಜ್ಯ ಸರ್ಕಾರದ ವಿರುದ್ಧ ಯಾವುದೇ ದಾವೆಯನ್ನು ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡಲು ಅವಕಾಶವಿರತಕ್ಕದ್ದಲ್ಲ.

**48. ವಿವರಪಟ್ಟಿಕೆ ಇತ್ಯಾದಿಗಳನ್ನು ಒದಗಿಸುವುದು.–** ಪ್ರತಿಯೊಂದು ಚಿಕಿತ್ಸಾ ಕಾರ್ಯಸಂಸ್ಥೆಯು, ವಿವರಪಟ್ಟಿಕೆಗಳನ್ನು ಒದಗಿಸುವುದಕ್ಕಾಗಿ ನಿಯಮಿಸಬಹುದಾದಂತಹ ಅಥವಾ ವಿಸ್ತರಿಸಿದಂಥ ಕಾಲದೊಳಗೆ, ಪ್ರಾಧಿಕಾರಕ್ಕೆ ಅಥವಾ ರಾಜ್ಯ ಪರಿಷತ್ತಿಗೆ ಅಥವಾ ರಾಷ್ಟ್ರೀಯ ಪರಿಷತ್ತಿಗೆ, ಕಾಲಕಾಲಕ್ಕೆ ರಾಜ್ಯ ಸರ್ಕಾರವು, ನಿಯಮಿಸಬಹುದಾದಂತಹ ರೀತಿಯಲ್ಲಿ ಅಂತಹ ವಿವರಪಟ್ಟಿಕೆಗಳನ್ನು ಅಥವಾ ಅಂಕಿಅಂಶಗಳನ್ನು ಮತ್ತು ಇತರ ಮಾಹಿತಿಯನ್ನು ಒದಗಿಸತಕ್ಕದ್ದು.

**49. ನಿರ್ದೇಶನಗಳನ್ನು ನೀಡಲು ಅಧಿಕಾರ.–** ಈ ಅಧಿನಿಯಮದ ಹಿಂದೆ ಹೇಳಿದ ಉಪಬಂಧಗಳಿಗೆ ಬಾಧಕವಾಗದಂತೆ, ಪ್ರಾಧಿಕಾರವು, ಚಿಕಿತ್ಸಾ ಕಾರ್ಯಸಂಸ್ಥೆಗಳ ಸಮರ್ಪಕ ಕಾರ್ಯನಿರ್ವಹಣೆಗಾಗಿ, ವಿವರಪಟ್ಟಿಕೆಗಳನ್ನು, ಅಂಕಿಅಂಶಗಳನ್ನು ಮತ್ತು ಇತರ ಮಾಹಿತಿಗಳನ್ನು ಒದಗಿಸುವುದೂ ಸೇರಿದಂತೆ ನಿರ್ದೇಶನಗಳನ್ನು ನೀಡಲು ಅಧಿಕಾರವನ್ನು ಹೊಂದಿರತಕ್ಕದ್ದು ಮತ್ತು ಅಂತಹ ನಿರ್ದೇಶನಗಳಿಗೆ ಚಿಕಿತ್ಸಾ ಕಾರ್ಯಸಂಸ್ಥೆಗಳು ಬದ್ಧವಾಗಿರತಕ್ಕದ್ದು.

**50. ಪ್ರಾಧಿಕಾರ ಇತ್ಯಾದಿಗಳ ನೌಕರರು ಲೋಕ ನೌಕರರಾಗಿರುವುದು.–** ಪ್ರಾಧಿಕಾರದ, ರಾಷ್ಟ್ರೀಯ ಪರಿಷತ್ತಿನ ಮತ್ತು ರಾಜ್ಯ ಪರಿಷತ್ತಿನ ಪ್ರತಿಯೊಬ್ಬ ನೌಕರನನ್ನು ಈ ಅಧಿನಿಯಮದ ಯಾವುದೇ ಉಪಬಂಧಗಳಿಗನುಸಾರವಾಗಿ ಅವನು ಕಾರ್ಯನಿರ್ವಹಿಸುವಾಗ ಅಥವಾ ಕಾರ್ಯನಿರ್ವಹಿಸುತ್ತಿರುವನೆಂದು ತಾತ್ಪರ್ಯವಾಗುವಾಗ, ಭಾರತ ದಂಡ ಸಂಹಿತೆ (1860 ರ 45)ಯ 21ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಲೋಕ ನೌಕರ ಎಂದು ಭಾವಿಸತಕ್ಕದ್ದು.

**51. ತೊಂದರೆಗಳನ್ನು ನಿವಾರಿಸಲು ಅಧಿಕಾರ.–** (1) ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವಾಗ ಯಾವುದೇ ತೊಂದರೆಯು ಉದ್ಭವಿಸಿದರೆ, ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಪ್ರಕಟಿಸಿದ ಆದೇಶದ ಮೂಲಕ, ತೊಂದರೆಯನ್ನು ನಿವಾರಿಸಲು ಅವಶ್ಯವೆಂದು ಅಥವಾ ವಿಹಿತವೆಂದು ತನಗೆ ತೋರುವಂಥ ಮತ್ತು ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗಿರದ ಉಪಬಂಧಗಳನ್ನು ರಚಿಸಬಹುದು:

ಪರಂತು, ಈ ಅಧಿನಿಯಮವು ಪ್ರಾರಂಭವಾದ ದಿನಾಂಕದಿಂದ ಎರಡು ವರ್ಷಗಳು ಮುಕ್ತಾಯವಾದ ತರುವಾಯ ಯಾವುದೇ ಅಂಥ ಆದೇಶವನ್ನು ಮಾಡತಕ್ಕದ್ದಲ್ಲ.

(2) ಈ ಪ್ರಕರಣದ ಮೇರೆಗೆ ಮಾಡಿದ ಪ್ರತಿಯೊಂದು ಆದೇಶವನ್ನು ಅದನ್ನು ಮಾಡಿದ ನಂತರ ಸಾಧ್ಯವಾದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಇಡತಕ್ಕದ್ದು.

**52. ನಿಯಮಗಳನ್ನು ರಚಿಸಲು ಕೇಂದ್ರ ಸರ್ಕಾರದ ಅಧಿಕಾರ.–** (1) ಕೇಂದ್ರ ಸರ್ಕಾರವು ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಎಲ್ಲಾ ಅಥವಾ ಯಾವುದೇ ಉಪಬಂಧಗಳನ್ನು ಜಾರಿಗೆ ತರಲು ನಿಯಮಗಳನ್ನು ರಚಿಸಬಹುದು.

(2) ಅದರಲ್ಲೂ ಮುಖ್ಯವಾಗಿ ಮತ್ತು ಮೇಲೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಅಂತಹ ನಿಯಮಗಳಲ್ಲಿ ಈ ಕೆಳಕಂಡ ಎಲ್ಲಾ ಅಥವಾ ಯಾವುದೇ ವಿಷಯಗಳಿಗಾಗಿ ಉಪಬಂಧ ಕಲ್ಪಿಸಬಹುದು, ಎಂದರೆ:–

(ಎ) 3ನೇ ಪ್ರಕರಣದ (5)ನೇ ಉಪಪ್ರಕರಣದ ಮೇರೆಗೆ, ರಾಷ್ಟ್ರೀಯ ಪರಿಷತ್ತಿನ ಸದಸ್ಯರಿಗೆ ಭತ್ಯೆಗಳು;

(ಬಿ) 3ನೇ ಪ್ರಕರಣದ (10)ನೇ ಉಪಪ್ರಕರಣದ ಮೇರೆಗೆ, ನಿಯಮಿಸಬಹುದಾದಂಥ ವ್ಯಕ್ತಿಯನ್ನು ರಾಜ್ಯ ಪರಿಷತ್ತಿನ ಕಾರ್ಯದರ್ಶಿಯಾಗಿ ಕೇಂದ್ರ ಸರ್ಕಾರವು ನೇಮಕ ಮಾಡುವುದು;

(ಸಿ) 7ನೇ ಪ್ರಕರಣದ ಮೇರೆಗೆ, ಗುಣಮಟ್ಟಗಳ ನಿರ್ಧರಣೆ ಮತ್ತು ಚಿಕಿತ್ಸಾ ಕಾರ್ಯಸಂಸ್ಥೆಗಳ ವರ್ಗೀಕರಣ;

(ಡಿ) 10ನೇ ಪ್ರಕರಣದ (1)ನೇ ಉಪಪ್ರಕರಣದ (ಸಿ) ಖಂಡದ ಮೇರೆಗೆ, ಪ್ರಾಧಿಕಾರದ ಸದಸ್ಯರ ಅರ್ಹತೆ ಮತ್ತು ನಿಬಂಧನೆಗಳು ಮತ್ತು ಷರತ್ತುಗಳು;

(ಇ) 10ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ, ಚಿಕಿತ್ಸಾ ಕಾರ್ಯಸಂಸ್ಥೆಗಳ ನೋಂದಣಿಯ ಉದ್ದೇಶಕ್ಕಾಗಿ ಪ್ರಾಧಿಕಾರದ ಅಧಿಕಾರವನ್ನು ಜಿಲ್ಲಾ ಆರೋಗ್ಯ ಅಧಿಕಾರಿಯು ಅಥವಾ ಪ್ರಧಾನ ವೈದ್ಯಕೀಯ ಅಧಿಕಾರಿಯು ಯಾವ ಕಾರ್ಯವಿಧಾನದ ಮೇಲೆ ಚಲಾಯಿಸಬಹುದೋ ಆ ಕಾರ್ಯವಿಧಾನ;

(ಎಫ್) 12ನೇ ಪ್ರಕರಣದ (1)ನೇ ಉಪಪ್ರಕರಣದ (i)ನೇ ಖಂಡದ ಮೇರೆಗೆ, ಸೌಲಭ್ಯಗಳ ಮತ್ತು ಸೇವೆಗಳ ಕನಿಷ್ಠ ಗುಣಮಟ್ಟಗಳು;

(ಜಿ) 12ನೇ ಪ್ರಕರಣದ (1)ನೇ ಉಪಪ್ರಕರಣದ (ii)ನೇ ಖಂಡದ ಮೇರೆಗೆ, ಅಗತ್ಯವಿರುವ, ಸಿಬ್ಬಂದಿಯ ಕನಿಷ್ಠ ಸಂಖ್ಯೆ;

(ಎಚ್) 12ನೇ ಪ್ರಕರಣದ (1)ನೇ ಉಪಪ್ರಕರಣದ (iii)ನೇ ಖಂಡದ ಮೇರೆಗೆ, ದಾಖಲೆಗಳ ನಿರ್ವಹಣೆ ಮತ್ತು ವರದಿ ಸಲ್ಲಿಕೆ;

(ಐ) 12ನೇ ಪ್ರಕರಣದ (1)ನೇ ಉಪಪ್ರಕರಣದ (iv) ನೇ ಖಂಡದ ಮೇರೆಗೆ, ಚಿಕಿತ್ಸಾ ಕಾರ್ಯಸಂಸ್ಥೆಗಳ ನೋಂದಣಿಗೆ ಮತ್ತು ಮುಂದುವರಿಕೆಗೆ ಇತರ ಷರತ್ತುಗಳು;

(ಜೆ) 13ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ, ಚಿಕಿತ್ಸಾ ಕಾರ್ಯಸಂಸ್ಥೆಗಳ ವರ್ಗೀಕರಣ;

(ಕೆ) 13ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ, ಚಿಕಿತ್ಸಾ ಕಾರ್ಯಸಂಸ್ಥೆಗಳ ವರ್ಗೀಕರಣಕ್ಕಾಗಿ ಬೇರೆಬೇರೆ ಗುಣಮಟ್ಟಗಳು;

(ಎಲ್) 28ನೇ ಪ್ರಕರಣದ ಮೇರೆಗೆ, ಖಾಯಂ ನೋಂದಣಿಗಾಗಿ ಕನಿಷ್ಠ ಗುಣಮಟ್ಟಗಳು;

(ಎಂ) 38ನೇ ಪ್ರಕರಣದ ಮೇರೆಗೆ, ಯಾವ ನಮೂನೆಯಲ್ಲಿ ರಿಜಿಸ್ಟರನ್ನು ಇಡಬೇಕೋ ಆ ನಮೂನೆ ಮತ್ತು ಅದರಲ್ಲಿ ಇರಬೇಕಾದ ವಿವರಗಳು.

**53. ನಿಯಮಗಳನ್ನು ಇರಿಸುವುದು.–** ಈ ಅಧಿನಿಯಮದ ಮೇರೆಗೆ, ಕೇಂದ್ರ ಸರ್ಕಾರವು ರಚಿಸಿದ, ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಇರಿಸತಕ್ಕದ್ದು ಮತ್ತು ಮೇಲೆ ಹೇಳಲಾದ ಅಧಿವೇಶನದ ಅಥವಾ ಅನುಕ್ರಮವಾಗಿ ಬರುವ ಅದರ ನಿಕಟೋತ್ತರದ ಅಧಿವೇಶನದ ಮುಕ್ತಾಯಕ್ಕೆ ಮುಂಚೆ, ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ ಆ ನಿಯಮವು, ಸಂದರ್ಭಾನುಸಾರ, ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗಿರತಕ್ಕದ್ದು ಅಥವಾ ಪರಿಣಾಮಕಾರಿಯಾಗಿರತಕ್ಕದ್ದಲ್ಲ; ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

**54. ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರದ ಅಧಿಕಾರ.–** (1) ರಾಜ್ಯ ಸರ್ಕಾರವು, 52ನೇ ಪ್ರಕರಣದ ವ್ಯಾಪ್ತಿಯೊಳಗೆ ಬರದಿರುವ ವಿಷಯಗಳನ್ನು ಕಾರ್ಯರೂಪಕ್ಕೆ ತರಲು ಅಧಿಸೂಚನೆಯ ಮೂಲಕ, ನಿಯಮಗಳನ್ನು ರಚಿಸಬಹುದು.

(2) ಅದರಲ್ಲೂ ಮುಖ್ಯವಾಗಿ ಮತ್ತು ಮೇಲೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಅಂಥ ನಿಯಮಗಳಲ್ಲಿ ಈ ಕೆಳಕಂಡ ಎಲ್ಲಾ ಅಥವಾ ಯಾವುದೇ ವಿಷಯಗಳಿಗಾಗಿ ಉಪಬಂಧ ಕಲ್ಪಿಸಬಹುದು ಎಂದರೆ:–

(ಎ) 14ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ, ನಿರ್ದರ್ಶನ ನಮೂನೆ ಮತ್ತು ನೋಂದಣಿಗಾಗಿ ಸಂದಾಯ ಮಾಡಬೇಕಾದ ಫೀಜು;

(ಬಿ) 14ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ, ಅರ್ಜಿಯ ನಮೂನೆ ಮತ್ತು ಅದರಲ್ಲಿ ಇರಬೇಕಾದ ವಿವರಗಳು;

(ಸಿ) 15ನೇ ಪ್ರಕರಣದ ಮೇರೆಗೆ, ತಾತ್ಕಾಲಿಕ ನೋಂದಣಿ ಪ್ರಮಾಣಪತ್ರದಲ್ಲಿ ಇರಬೇಕಾದ ವಿವರಗಳು ಮತ್ತು ಮಾಹಿತಿ;

(ಡಿ) 16ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ, ನೋಂದಾಯಿಸಲು ಪ್ರಸ್ತಾವಿತವಾಗಿರುವ ಚಿಕಿತ್ಸಾ ಕಾರ್ಯಸಂಸ್ಥೆಗಳ ಎಲ್ಲಾ ವಿವರಗಳನ್ನು ಪ್ರಕಟಪಡಿಸುವ ವಿಧಾನ;

(ಇ) 19ನೇ ಪ್ರಕರಣದ ಮೇರೆಗೆ, ನಕಲು ಪ್ರಮಾಣಪತ್ರ ನೀಡಿಕೆಗಾಗಿ ಸಂದಾಯ ಮಾಡಬೇಕಾದ ಫೀಜುಗಳು;

(ಎಫ್) ಒಡೆತನದಲ್ಲಾದ ಅಥವಾ ಆಡಳಿತ ವರ್ಗದಲ್ಲಾದ ಯಾವ ಬದಲಾವಣೆಯನ್ನು ಚಿಕಿತ್ಸಾ ಕಾರ್ಯಸಂಸ್ಥೆಯು, 20ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ, ಪ್ರಾಧಿಕಾರಕ್ಕೆ ತಿಳಿಸಬೇಕೋ ಆ ಬದಲಾವಣೆ;

(ಜಿ) 21ನೇ ಪ್ರಕರಣದ ಮೇರೆಗೆ, ನೋಂದಣಿಯ ಅವಧಿಯು ಮುಕ್ತಾಯವಾದ ಚಿಕಿತ್ಸಾ ಕಾರ್ಯಸಂಸ್ಥೆಗಳ ಹೆಸರುಗಳನ್ನು ಯಾವ ರೀತಿಯಲ್ಲಿ ಪ್ರಕಟಿಸಬೇಕಾಗಿದೆಯೋ ಆ ರೀತಿ;

(ಎಚ್) ತಾತ್ಕಾಲಿಕ ನೋಂದಣಿಯು ಮುಕ್ತಾಯವಾದ ನಂತರ, ನವೀಕರಣಕ್ಕಾಗಿ 22ನೇ ಪ್ರಕರಣದ ಮೇರೆಗೆ, ವಿಧಿಸಬೇಕಾದ ಫೀಜುಗಳನ್ನು ಹೆಚ್ಚಿಸುವುದು;

(ಐ) 24ನೇ ಪ್ರಕರಣದ ಮೇರೆಗೆ, ಅರ್ಜಿಯ ನಮೂನೆ ಮತ್ತು ರಾಜ್ಯ ಸರ್ಕಾರ ವಿಧಿಸಬೇಕಾದ ಫೀಜುಗಳು;

(ಜೆ) 25ನೇ ಪ್ರಕರಣದ ಮೇರೆಗೆ, ಕನಿಷ್ಠ ಗುಣಮಟ್ಟಗಳನ್ನು ಪಾಲಿಸಿರುವುದರ ಬಗ್ಗೆ ಚಿಕಿತ್ಸಾ ಕಾರ್ಯಸಂಸ್ಥೆಗಳು ರುಜುವಾತನ್ನು ಸಲ್ಲಿಸುವ ವಿಧಾನ;

(ಕೆ) 26ನೇ ಪ್ರಕರಣದ ಮೇರೆಗೆ, ಆಕ್ಷೇಪಣೆಗಳನ್ನು ಸಲ್ಲಿಸಲು ಚಿಕಿತ್ಸಾ ಕಾರ್ಯಸಂಸ್ಥೆಗಳು ಕನಿಷ್ಠ ಗುಣಮಟ್ಟಗಳನ್ನು ಪಾಲಿಸುವುದರ ಬಗೆಗಿನ ಮಾಹಿತಿಯನ್ನು ಪ್ರದರ್ಶಿಸುವ ರೀತಿ;

(ಎಲ್) 29ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಅವಧಿಯ ಮುಕ್ತಾಯ;

(ಎಂ) 30ನೇ ಪ್ರಕರಣದ ಮೇರೆಗೆ, ನೋಂದಣಿಯ ಪ್ರಮಾಣಪತ್ರದ ನಮೂನೆ ಮತ್ತು ಅದರಲ್ಲಿ ಇರಬೇಕಾದ ವಿವರಗಳು;

(ಎನ್) 32ನೇ ಪ್ರಕರಣದ (3)ನೇ ಉಪಪ್ರಕರಣದ (ಎ) ಖಂಡದ ಮೇರೆಗೆ, ಯಾವ ಅವಧಿಯೊಳಗೆ ಅಪೀಲನ್ನು ಸಲ್ಲಿಸಬೇಕೋ ಆ ಅವಧಿ;

(ಓ) 34ನೇ ಪ್ರಕರಣದ ಮೇರೆಗೆ, ಚಿಕಿತ್ಸಾ ಕಾರ್ಯಸಂಸ್ಥೆಗಳನ್ನು ಪ್ರವೇಶಿಸುವ ಮತ್ತು ತನಿಖೆ ಮಾಡುವ ವಿಧಾನ;

(ಪಿ) 35ನೇ ಪ್ರಕರಣದ ಮೇರೆಗೆ, ರಾಜ್ಯ ಸರ್ಕಾರವು, ಚಿಕಿತ್ಸಾ ಕಾರ್ಯಸಂಸ್ಥೆಗಳ ವಿವಿಧ ಪ್ರವರ್ಗಗಳಿಗೆ ವಿಧಿಸಬೇಕಾದ ಫೀಜುಗಳು;

(ಕ್ಯೂ) 36ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ, ಯಾವ ರೀತಿಯಲ್ಲಿ ಮತ್ತು ಯಾವ ಅವಧಿಯೊಳಗೆ ರಾಜ್ಯ ಪರಿಷತ್ತಿಗೆ ಅಪೀಲನ್ನು ಸಲ್ಲಿಸಬೇಕೋ ಆ ರೀತಿ ಮತ್ತು ಆ ಅವಧಿ;

(ಆರ್) 36ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗಿನ ಅಪೀಲಿನ ನಮೂನೆ ಮತ್ತು ಸಂದಾಯ ಮಾಡಬೇಕಾದ ಫೀಜು;

(ಎಸ್) 37ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ, ಯಾವ ನಮೂನೆಯಲ್ಲಿ ಮತ್ತು ಯಾವ ರೀತಿಯಲ್ಲಿ ರಿಜಿಸ್ಟರನ್ನು ಇಡಬೇಕೋ ಆ ನಮೂನೆ ಮತ್ತು ಆ ರೀತಿ;

(ಟಿ) 37ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ, ಚಿಕಿತ್ಸಾ ಕಾರ್ಯಸಂಸ್ಥೆಗಳ ರಿಜಿಸ್ಟರಿನಲ್ಲಿ ಮಾಡಿದ ನಮೂದುಗಳನ್ನು ಡಿಜಿಟಲ್ ಫಾರ್ಮ್ಯಾಟಿನಲ್ಲಿ ರಾಜ್ಯ ಪರಿಷತ್ತಿಗೆ ಒದಗಿಸುವ ರೀತಿ;

(ಯು) 41ನೇ ಮತ್ತು 42ನೇ ಪ್ರಕರಣಗಳ (3)ನೇ ಉಪಪ್ರಕರಣದ ಮೇರೆಗೆ, ಪ್ರಾಧಿಕಾರವು ನಡೆಸುವ ವಿಚಾರಣೆಯ ರೀತಿ;

(ವಿ) 41ನೇ ಮತ್ತು 42ನೇ ಪ್ರಕರಣಗಳ (7)ನೇ ಉಪಪ್ರಕರಣದ ಮೇರೆಗೆ, ಅಪೀಲನ್ನು ಸಲ್ಲಿಸುವ ರೀತಿ;

(ಡಬ್ಲ್ಯೂ) 48ನೇ ಪ್ರಕರಣದ ಮೇರೆಗೆ, ಯಾವ ರೀತಿಯಲ್ಲಿ ಮತ್ತು ಯಾವ ಕಾಲದೊಳಗೆ ಮಾಹಿತಿಯನ್ನು ಪ್ರಾಧಿಕಾರಕ್ಕೆ ಅಥವಾ ಸಂದರ್ಭಾನುಸಾರ ರಾಜ್ಯ ಪರಿಷತ್ತಿಗೆ ಅಥವಾ ರಾಷ್ಟ್ರೀಯ ಪರಿಷತ್ತಿಗೆ ಒದಗಿಸಬೇಕೋ ಆ ರೀತಿ ಮತ್ತು ಆ ಕಾಲ;

(ಎಕ್ಸ್) ರಾಜ್ಯ ಸರ್ಕಾರವು ಅಗತ್ಯಪಡಿಸಿದ ಅಥವಾ ನಿಯಮಿಸಬಹುದಾದ ಯಾವುದೇ ಇತರ ವಿಷಯ.

**55. ನಿಯಮಗಳನ್ನು ಇರಿಸುವುದು.–** ಈ ಪ್ರಕರಣದ ಮೇರೆಗೆ, ರಾಜ್ಯ ಸರ್ಕಾರವು ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೇ, ಯಾವ ರಾಜ್ಯ ವಿಧಾನಮಂಡಲದಲ್ಲಿ ಎರಡು ಸದನಗಳು ಇವೆಯೋ, ಆ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ, ಯಾವ ರಾಜ್ಯ ವಿಧಾನಮಂಡಲದಲ್ಲಿ ಒಂದೇ ಸದನವು ಇದೆಯೋ, ಆ ಸದನದ ಮುಂದೆ ಇಡಿಸತಕ್ಕದ್ದು.

**56. ಉಳಿಸುವಿಕೆಗಳು.–** (1) ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿರುವ ಅಧಿನಿಯಮಿತಿಗಳು ಯಾವ ರಾಜ್ಯಕ್ಕೆ ಅನ್ವಯವಾಗುತ್ತವೆಯೋ ಆ ರಾಜ್ಯಗಳಿಗೆ ಈ ಅಧಿನಿಯಮದ ಉಪಬಂಧಗಳು ಅನ್ವಯವಾಗತಕ್ಕದ್ದಲ್ಲ:

ಪರಂತು, (1)ನೇ ಉಪಪ್ರಕರಣದಲ್ಲಿ ಹೇಳಿರುವ ಅಧಿನಿಯಮಿತಿಗಳು ಯಾವ ರಾಜ್ಯಕ್ಕೆ ಅನ್ವಯವಾಗುತ್ತವೆಯೋ ಆ ರಾಜ್ಯಗಳು, ಈ ಅಧಿನಿಯಮದ ಪ್ರಾರಂಭದ ತರುವಾಯ, ಸಂವಿಧಾನದ 252ನೇ ಅನುಚ್ಛೇದದ (1)ನೇ ಖಂಡದ ಮೇರೆಗೆ ಈ ಅಧಿನಿಯಮವನ್ನು ಅಳವಡಿಸಿಕೊಂಡರೆ, ಈ ಅಧಿನಿಯಮದ ಉಪಬಂಧಗಳು ಹಾಗೆ ಅಳವಡಿಸಿಕೊಂಡ ತರುವಾಯ, ಆ ರಾಜ್ಯಕ್ಕೆ ಅನ್ವಯವಾಗತಕ್ಕದ್ದು.

(2) ಕೇಂದ್ರ ಸರ್ಕಾರವು ಅಗತ್ಯವೆಂದು ಪರಿಗಣಿಸಿದಾಗಲೆಲ್ಲ, ಅಧಿಸೂಚನೆಯ ಮೂಲಕ ಅನುಸೂಚಿಯನ್ನು ತಿದ್ದುಪಡಿ ಮಾಡಬಹುದು.

## ಅನುಸೂಚಿ

### (56ನೇ ಪ್ರಕರಣವನ್ನು ನೋಡಿ)

1. ದ ಆಂಧ್ರ ಪ್ರದೇಶ ಪ್ರೈವೇಟ್ ಮೆಡಿಕಲ್ ಕೇರ್ ಎಸ್ಟಾಬ್ಲಿಷ್‌ಮೆಂಟ್ಸ್ (ರಿಜಿಸ್ಟ್ರೇಷನ್ ಆ್ಯಂಡ್ ರೆಗ್ಯುಲೇಷನ್) ಆ್ಯಕ್ಟ್, 2002.
2. ದ ಬಾಂಬೆ ನರ್ಸಿಂಗ್ ಹೋಮ್ಸ್ ರಿಜಿಸ್ಟ್ರೇಷನ್ ಆ್ಯಕ್ಟ್, 1949.
3. ದ ಡೆಲ್ಲಿ ನರ್ಸಿಂಗ್ ಹೋಮ್ಸ್ ರಿಜಿಸ್ಟ್ರೇಷನ್ ಆ್ಯಕ್ಟ್, 1953.
4. ದ ಮಧ್ಯಪ್ರದೇಶ ಉಪಚಾರ್ಯ ಗೃಹ ತಥಾ ರಾಜೋಪ್ಚಾರ್ ಸನ್‌ಬಬ್ದು ಸ್ಥಾಪಮಯಿ (ರೆಜಸ್ಟ್ರಿಕರಣ್ ತಥಾ ಅನುಜ್ಞಾಪನ) ಅಧಿನಿಯಮ್, 1973.
5. ದ ಮಣಿಪುರ ಹೋಮ್ಸ್ ಆ್ಯಂಡ್ ಕ್ಲಿನಿಕ್ಸ್ ರಿಜಿಸ್ಟ್ರೇಷನ್ ಆ್ಯಕ್ಟ್, 1992.
6. ದ ನಾಗಾಲ್ಯಾಂಡ್ ಹೆಲ್ತ್ ಕೇರ್ ಎಸ್ಟಾಬ್ಲಿಷ್‌ಮೆಂಟ್ಸ್ ಆ್ಯಕ್ಟ್, 1997.
7. ಒರಿಸ್ಸಾ ಕ್ಲಿನಿಕಲ್ ಎಸ್ಟಾಬ್ಲಿಷ್‌ಮೆಂಟ್ಸ್ (ಕಂಟ್ರೋಲ್ ಆ್ಯಂಡ್ ರೆಗ್ಯುಲೇಷನ್) ಆ್ಯಕ್ಟ್, 1990.
8. ದ ಪಂಜಾಬ್ ಸ್ಟೇಟ್ ನರ್ಸಿಂಗ್ ಹೋಮ್ ರಿಜಿಸ್ಟ್ರೇಷನ್ ಆ್ಯಕ್ಟ್, 1991.
9. ದ ವೆಸ್ಟ್ ಬೆಂಗಾಲ್ ಕ್ಲಿನಿಕಲ್ ಎಸ್ಟಾಬ್ಲಿಷ್‌ಮೆಂಟ್ಸ್ ಆ್ಯಕ್ಟ್, 1950.

## ಭಾರತ ಭೂ ಬಂದರುಗಳ ಪ್ರಾಧಿಕಾರ ಅಧಿನಿಯಮ, 2010

## (2010ರ ಅಧಿನಿಯಮ ಸಂಖ್ಯೆ 31)

[31ನೇ ಆಗಸ್ಟ್, 2010.]

ಭಾರತದ ಅಂತರರಾಷ್ಟ್ರೀಯ ಗಡಿಗಳುದ್ದಕ್ಕೂ ನಿರ್ದಿಷ್ಟಪಡಿಸಿದ ಸ್ಥಳಗಳಲ್ಲಿ ಭದ್ರತಾ ಅಗತ್ಯತೆಗಳನ್ನು ಪೂರೈಸುವಂಥ ವ್ಯವಸ್ಥೆಗಳನ್ನು ಕಲ್ಪಿಸಲು ಭೂ ಬಂದರುಗಳ ಪ್ರಾಧಿಕಾರವನ್ನು ಸ್ಥಾಪನೆ ಮಾಡುವುದಕ್ಕೆ ಮತ್ತು ಪ್ರಯಾಣಿಕರನ್ನು ಹಾಗೂ ಸರಕುಗಳನ್ನು ಗಡಿಯಿಂದಾಚೆಗೆ ಸಾಗಿಸುವುದಕ್ಕಾಗಿ ಸೌಕರ್ಯಗಳನ್ನು ಅಭಿವೃದ್ಧಿಪಡಿಸಲು ಮತ್ತು ನಿರ್ವಹಣೆ ಮಾಡಲು ಹಾಗೂ ಅದಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಪ್ರಾಸಂಗಿಕವಾದ ವಿಷಯಗಳಿಗೆ ಉಪಬಂಧ ಕಲ್ಪಿಸಲು ಅಧಿನಿಯಮ.

ಇದು ಭಾರತ ಗಣರಾಜ್ಯದ ಅರವತ್ತೊಂದನೇ ವರ್ಷದಲ್ಲಿ ಸಂಸತ್ತಿನಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು:–

### ಅಧ್ಯಾಯ I

### ಪ್ರಾರಂಭಿಕ

1. **ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ಭಾರತ ಭೂ ಬಂದರುಗಳ ಪ್ರಾಧಿಕಾರ ಅಧಿನಿಯಮ, 2010 ಎಂದು ಕರೆಯತಕ್ಕದ್ದು.

(2) ಇದು, ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂತಹ *ದಿನಾಂಕದಂದು ಜಾರಿಗೆ ಬರತಕ್ಕದ್ದು ಮತ್ತು ಈ ಅಧಿನಿಯಮದ ಬೇರೆ ಬೇರೆ ಉಪಬಂಧಗಳಿಗೆ, ಬೇರೆ ಬೇರೆ ದಿನಾಂಕಗಳನ್ನು ಗೊತ್ತುಪಡಿಸಬಹುದು ಮತ್ತು ಈ ಅಧಿನಿಯಮದ ಪ್ರಾರಂಭದಲ್ಲಿ ಯಾವುದೇ ಅಂತಹ ಉಪಬಂಧದಲ್ಲಿರುವ ಯಾವುದೇ ಉಲ್ಲೇಖವನ್ನು ಆ ಉಪಬಂಧವನ್ನು ಜಾರಿಗೊಳಿಸುವುದಕ್ಕೆ ಸಂಬಂಧಿಸಿದ ಉಲ್ಲೇಖವೆಂಬುದಾಗಿ ಅರ್ಥೈಸತಕ್ಕದ್ದು.

2. **ಪರಿಭಾಷೆಗಳು.–** ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) "ಪ್ರಾಧಿಕಾರ" ಎಂದರೆ, 3ನೇ ಪ್ರಕರಣದ ಮೇರೆಗೆ ರಚಿಸಿದ ಭಾರತ ಭೂ ಬಂದರುಗಳ ಪ್ರಾಧಿಕಾರ;

(ಬಿ) "ಅಧ್ಯಕ್ಷ" ಎಂದರೆ, 3ನೇ ಪ್ರಕರಣದ (3)ನೇ ಉಪಪ್ರಕರಣದ (ಎ) ಖಂಡದ ಮೇರೆಗೆ ನೇಮಕಗೊಂಡ ಪ್ರಾಧಿಕಾರದ ಅಧ್ಯಕ್ಷ;

(ಸಿ) "ವಲಸೆ ತನಿಖಾ ಠಾಣೆ" ಎಂದರೆ, ವಿದೇಶೀಯರ ಅಧಿನಿಯಮ, 1946 (1946 ರ 31) ರ ಮೇರೆಗೆ ಅಧಿಸೂಚಿಸಿದಂಥ ಭೂಮಿಯ ಮೇಲಿರುವ ಯಾವುದೇ ಬಂದರು ಅಥವಾ ನಿರ್ಗಮನ ಸ್ಥಳ;

(ಡಿ) "ಸಂಯೋಜಿತ ತನಿಖಾ ಠಾಣೆ" ಎಂದರೆ, ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದ ಯಾವುದೇ ಭೂ ಬಂದರು;

(ಇ) "ಭೂ ಸೀಮಾಸುಂಕ ಕೇಂದ್ರ" ಎಂದರೆ, ಭೂ ಮಾರ್ಗದ ಮೂಲಕ ಅಥವಾ ಒಳನಾಡು ಜಲಮಾರ್ಗದ ಮೂಲಕ ಆಮದು ಮಾಡಿಕೊಂಡ ಅಥವಾ ರಫ್ತು ಮಾಡುವಂಥ ಸರಕುಗಳನ್ನು ತೆರವುಗೊಳಿಸುವುದಕ್ಕಾಗಿ ಸೀಮಾಸುಂಕ ಅಧಿನಿಯಮ, 1962 (1962 ರ 52)ರ 7ನೇ ಪ್ರಕರಣದ (1)ನೇ ಉಪಪ್ರಕರಣದ (ಬಿ) ಖಂಡದ ಮೇರೆಗೆ ಕೇಂದ್ರ ಸರ್ಕಾರವು ಭೂ ಸೀಮಾಸುಂಕ ಕೇಂದ್ರ ಎಂದು ಅಧಿಸೂಚಿಸಲಾದಂಥ ಯಾವುದೇ ಸ್ಥಳ;

(ಎಫ್) "ಭೂ ಬಂದರು" ಎಂದರೆ, ಸೀಮಾಸುಂಕ ಅಧಿನಿಯಮ, 1962 (1962 ರ 52)ರ ಅಥವಾ ವಿದೇಶೀಯರ ಅಧಿನಿಯಮ, 1946 (1946 ರ 31)ರ ಮೇರೆಗೆ ಭೂ ಸೀಮಾಸುಂಕ ಕೇಂದ್ರವೆಂದು ಅಥವಾ ವಲಸೆ ತನಿಖಾ ಠಾಣೆ ಎಂದು ಅಧಿಸೂಚಿಸಿದಂಥ, ರಾಷ್ಟ್ರೀಯ ಹೆದ್ದಾರಿಗಳ, ರಾಜ್ಯ ಹೆದ್ದಾರಿಗಳ ಮತ್ತು ಇತರ ರಸ್ತೆಗಳ ಭಾಗಗಳೂ ಸೇರಿದಂತೆ,

---

* ಮಾರ್ಚ್ 01, 2012 ರಂದು ಜಾರಿಗೆ ಬಂದಿದೆ: ಅಧಿಸೂಚನೆ ಸಂಖ್ಯೆ ಎಸ್.ಒ 328 (ಇ), ದಿನಾಂಕ: 24-02-2012 ರ ಭಾರತ ವಿಶೇಷ ರಾಜಪತ್ರ, ಭಾಗ-II, ವಿಭಾಗ 3 (ii) ನೋಡಿ.

ಭಾರತದ ಅಂತರರಾಷ್ಟ್ರೀಯ ಗಡಿಗಳಲ್ಲಿನ ಪ್ರದೇಶ; ಮತ್ತು ಭಾರತದ ಗಡಿಗಳುದ್ದಕ್ಕೂ ಪ್ರಯಾಣಿಕರನ್ನು ಮತ್ತು ಸರಕುಗಳನ್ನು ತೆರವುಗೊಳಿಸುವುದಕ್ಕಾಗಿ ಸೌಲಭ್ಯಗಳು ಇರುವಂಥ ರೈಲ್ವೆಯು ಒಳಗೊಳ್ಳುತ್ತದೆ;

(ಜಿ) "ಅಧಿಸೂಚನೆ" ಎಂದರೆ, ರಾಜಪತ್ರದಲ್ಲಿ ಪ್ರಕಟಿಸಿದ ಅಧಿಸೂಚನೆ;

(ಎಚ್) "ನಿಯಮಿಸಿದ" ಎಂದರೆ, ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು; ಮತ್ತು

(ಐ) "ವಿನಿಯಮಗಳು" ಎಂದರೆ, ಈ ಅಧಿನಿಯಮದ ಮೇರೆಗೆ ಪ್ರಾಧಿಕಾರವು ರಚಿಸಿದ ವಿನಿಯಮಗಳು.

## ಅಧ್ಯಾಯ II

## ಭಾರತ ಭೂ ಬಂದರುಗಳ ಪ್ರಾಧಿಕಾರ

3. **ಪ್ರಾಧಿಕಾರದ ರಚನೆ.–** (1) ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಿಂದ ಜಾರಿಗೆ ಬರುವಂತೆ ಭಾರತ ಭೂ ಬಂದರುಗಳ ಪ್ರಾಧಿಕಾರ ಎಂಬ ಹೆಸರಿನ ಪ್ರಾಧಿಕಾರವನ್ನು ರಚಿಸತಕ್ಕದ್ದು.

(2) ಪ್ರಾಧಿಕಾರವು ಶಾಶ್ವತ ಉತ್ತರಾಧಿಕಾರವನ್ನು ಮತ್ತು ಸಾಮಾನ್ಯ ಮೊಹರನ್ನು ಹೊಂದಿರುವ, ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, ಚರ ಮತ್ತು ಸ್ಥಿರ ಎರಡೂ ಸ್ವತ್ತನ್ನು ಆರ್ಜಿಸಲು, ಧಾರಣ ಮಾಡಲು ಮತ್ತು ವಿಲೆ ಮಾಡಲು ಹಾಗೂ ಕರಾರು ಮಾಡಿಕೊಳ್ಳಲು ಅಧಿಕಾರವನ್ನು ಹೊಂದಿರುವ ಮೇಲ್ಕಂಡ ಹೆಸರಿನ ನಿಗಮಿತ ನಿಕಾಯವಾಗಿರತಕ್ಕದ್ದು ಮತ್ತು ಅದು ಸದರಿ ಹೆಸರಿನಿಂದ ದಾವೆ ಹೂಡತಕ್ಕದ್ದು ಮತ್ತು ದಾವೆಗೆ ಗುರಿಯಾಗತಕ್ಕದ್ದು.

(3) ಪ್ರಾಧಿಕಾರವು ಈ ಮುಂದಿನವರನ್ನು ಒಳಗೊಂಡಿರತಕ್ಕದ್ದು–

(ಎ) ಅಧ್ಯಕ್ಷ;

(ಬಿ) ಇಬ್ಬರು ಸದಸ್ಯರು ಅವರಲ್ಲಿ ಒಬ್ಬ ಸದಸ್ಯ (ಯೋಜನೆ ಮತ್ತು ಅಭಿವೃದ್ಧಿ), ಮತ್ತೊಬ್ಬ ಸದಸ್ಯ (ಹಣಕಾಸು) ಆಗಿರತಕ್ಕದ್ದು;

(ಸಿ) ಒಳಾಡಳಿತ ವ್ಯವಹಾರಗಳು, ವಿದೇಶ ವ್ಯವಹಾರಗಳು, ರಾಜಸ್ವ, ವಾಣಿಜ್ಯ, ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳು, ರೈಲ್ವೆ, ರಕ್ಷಣೆ, ಕೃಷಿ ಮತ್ತು ಸಹಕಾರ, ಕಾನೂನು ಮತ್ತು ನ್ಯಾಯ ಇವುಗಳನ್ನು ನೋಡಿಕೊಳ್ಳುವ ಭಾರತ ಸರ್ಕಾರದ ಮಂತ್ರಾಲಯಗಳನ್ನು ಅಥವಾ ಇಲಾಖೆಗಳನ್ನು ಪ್ರತಿನಿಧಿಸುವ ಭಾರತ ಸರ್ಕಾರದ ಜಂಟಿ ಕಾರ್ಯದರ್ಶಿ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಅಧಿಕಾರಿಗಳ ಪೈಕಿಯಿಂದ ಕೇಂದ್ರ ಸರ್ಕಾರವು ನೇಮಕ ಮಾಡುವಂಥ ಒಂಭತ್ತಕ್ಕಿಂತ ಹೆಚ್ಚಲ್ಲದ ಪದನಿಮಿತ್ತ ಸದಸ್ಯರು;

(ಡಿ) ಸಂಯೋಜಿತ ತನಿಖಾ ಠಾಣೆಗಳು ಯಾವ ರಾಜ್ಯದಲ್ಲಿದೆಯೊ ಆ ಸಂಬಂಧಪಟ್ಟ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಅಥವಾ ಸರ್ಕಾರದ ಕಾರ್ಯದರ್ಶಿಯ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಆತನ ನಾಮನಿರ್ದೇಶಿತ ಅಧಿಕಾರಿ;

(ಇ) ಇಬ್ಬರು ಪ್ರತಿನಿಧಿಗಳು, ಅವರಲ್ಲಿ ಒಬ್ಬನನ್ನು ಮಾನ್ಯತೆ ಪಡೆದ ಕಾರ್ಮಿಕರ ಸಂಸ್ಥೆಗಳಿಂದ ಮತ್ತೊಬ್ಬನನ್ನು ವ್ಯಾಪಾರಿಗಳ ಪೈಕಿ ಕೇಂದ್ರ ಸರ್ಕಾರವು ನೇಮಕ ಮಾಡತಕ್ಕ ಒಬ್ಬ ವ್ಯಕ್ತಿ; ಮತ್ತು

(ಎಫ್) ಕೇಂದ್ರ ಸರ್ಕಾರವು ಕಾರ್ಯನಿರ್ವಹಣೆಯ ಉದ್ದೇಶಗಳಿಗಾಗಿ ಸಹ–ಸದಸ್ಯರನ್ನಾಗಿ ಸೇರಿಸಿಕೊಳ್ಳಬಹುದಾದಂಥ ಇತರ ಪ್ರತಿನಿಧಿಗಳು.

(4) ಖಂಡ (ಬಿ)ಯಲ್ಲಿ ಉಲ್ಲೇಖಿಸಿದ ಅಧ್ಯಕ್ಷನನ್ನು ಮತ್ತು ಸದಸ್ಯರನ್ನು ಕೇಂದ್ರ ಸರ್ಕಾರವು ನೇಮಕ ಮಾಡತಕ್ಕದ್ದು ಮತ್ತು ಅವರು ಪೂರ್ಣಕಾಲಿಕ ಸದಸ್ಯರಾಗಿರತಕ್ಕದ್ದು.

(5) ಅಧ್ಯಕ್ಷನನ್ನು ಭದ್ರತೆ, ಸಾರಿಗೆ, ಕೈಗಾರಿಕೆ, ವಾಣಿಜ್ಯ, ಕಾನೂನು, ಹಣಕಾಸು ಅಥವಾ ಸಾರ್ವಜನಿಕ ಆಡಳಿತ ಕ್ಷೇತ್ರದಲ್ಲಿ ವಿಶೇಷ ಜ್ಞಾನವನ್ನು ಮತ್ತು ಅನುಭವವನ್ನು ಹೊಂದಿರುವ ವ್ಯಕ್ತಿಗಳ ಪೈಕಿಯಿಂದ ಆಯ್ಕೆ ಮಾಡತಕ್ಕದ್ದು.

4. **ಸದಸ್ಯ ಪದಕ್ಕೆ ಅನರ್ಹತೆಗಳು.–** ಒಬ್ಬ ವ್ಯಕ್ತಿಯು–

(ಎ) ನೈತಿಕ ಅಧಃಪತನವನ್ನು ಒಳಗೊಂಡ ಅಪರಾಧವೆಂದು ಕೇಂದ್ರ ಸರ್ಕಾರವು ಅಭಿಪ್ರಾಯಪಡುವಂಥ ಅಪರಾಧಕ್ಕಾಗಿ ಅಪರಾಧಿಯೆಂದು ನಿರ್ಣೀತನಾಗಿದ್ದರೆ ಮತ್ತು ಕಾರಾವಾಸ ಶಿಕ್ಷೆಗೆ ಗುರಿಯಾಗಿದ್ದರೆ; ಅಥವಾ

(ಬಿ) ಅವಿಮುಕ್ತ ದಿವಾಳಿಯಾಗಿದ್ದರೆ; ಅಥವಾ

(ಸಿ) ಅಸ್ವಸ್ಥಚಿತ್ತನಾಗಿದ್ದರೆ ಮತ್ತು ಸಕ್ಷಮ ನ್ಯಾಯಾಲಯವು ಹಾಗೆ ಘೋಷಿಸಿದ್ದರೆ; ಅಥವಾ

(ಡಿ) ಆತನನ್ನು ಸರ್ಕಾರದ ಅಥವಾ ಸರ್ಕಾರದ ಒಡೆತನಕ್ಕೆ ಅಥವಾ ನಿಯಂತ್ರಣಕ್ಕೆ ಒಳಪಟ್ಟ ಒಂದು ನಿಗಮಿತ ನಿಕಾಯದ ಸೇವೆಯಿಂದ ತೆಗೆದುಹಾಕಿದ್ದರೆ ಅಥವಾ ವಜಾಗೊಳಿಸಿದ್ದರೆ; ಅಥವಾ

(ಇ) ಸದಸ್ಯನಾಗಿ ಅವನ ಪ್ರಕಾರ್ಯಗಳ ನಿರ್ವಹಣೆಯ ಮೇಲೆ ಪ್ರತಿಕೂಲ ಪರಿಣಾಮಬೀರುವ ಸಂಭವವಿರುವಂಥ ಹಣಕಾಸು ಅಥವಾ ಇತರ ಹಿತಾಸಕ್ತಿಗಳನ್ನು ಪ್ರಾಧಿಕಾರದಲ್ಲಿ ಹೊಂದಿದ್ದಾನೆಂದು ಕೇಂದ್ರ ಸರ್ಕಾರವು ಅಭಿಪ್ರಾಯಪಟ್ಟರೆ

– ಸದಸ್ಯನಾಗಿ ನೇಮಕಗೊಳ್ಳಲು ಅನರ್ಹನಾಗಿರತಕ್ಕದ್ದು.

5. **ಸದಸ್ಯರುಗಳ ಪದಾವಧಿ ಮತ್ತು ಸೇವೆಯ ಷರತ್ತುಗಳು.–** (1) ಪ್ರಕರಣ 6ರ ಉಪಬಂಧಗಳಿಗೊಳಪಟ್ಟು, ಪ್ರತಿಯೊಬ್ಬ ಪೂರ್ಣಕಾಲಿಕ ಸದಸ್ಯನು ಆತನು ಪದವನ್ನು ವಹಿಸಿಕೊಂಡ ದಿನಾಂಕದಿಂದ ಐದು ವರ್ಷಗಳ ಅವಧಿಗೆ ಅಥವಾ ಅವನಿಗೆ ಅರವತ್ತು ವರ್ಷ ತುಂಬುವವರೆಗೆ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಪದವನ್ನು ಧಾರಣ ಮಾಡತಕ್ಕದ್ದು:

ಪರಂತು, ಕೇಂದ್ರ ಸರ್ಕಾರವು–

(ಎ) ಯಾರೇ ಪೂರ್ಣಕಾಲಿಕ ಸದಸ್ಯನ ನೇಮಕವನ್ನು ಆತನಿಗೆ ಮೂರು ತಿಂಗಳಿಗಿಂತ ಕಡಿಮೆಯಲ್ಲದ ಅವಧಿಯ ನೋಟೀಸನ್ನು ನೀಡಿದ ತರುವಾಯ ಅಥವಾ ಅದಕ್ಕೆ ಬದಲಾಗಿ ಮೂರು ತಿಂಗಳ ಅವಧಿಯ ಆತನ ಸಂಬಳ ಮತ್ತು ಭತ್ಯೆಗಳು ಯಾವುದಾದರೂ ಇದ್ದರೆ, ಅವುಗಳಿಗೆ ಸಮನಾದ ಮೊತ್ತವನ್ನು ಸಂದಾಯ ಮಾಡಿದ ಮೇಲೆ ಕೊನೆಗೊಳಿಸಬಹುದು;

(ಬಿ) ಸರ್ಕಾರದ ನೌಕರನಾಗಿರುವ ಯಾರೇ ಸದಸ್ಯನ ನೇಮಕವನ್ನು ಯಾವುದೇ ಕಾಲದಲ್ಲಿ ಕೊನೆಗೊಳಿಸಬಹುದು.

(2) ಸದಸ್ಯರ ಸೇವೆಯ ಇತರ ಷರತ್ತುಗಳು ನಿಯಮಿಸಬಹುದಾದಂತೆ ಇರತಕ್ಕದ್ದು.

(3) ಯಾರೇ ಸದಸ್ಯನು ನಿಯಮಿಸಬಹುದಾದಂಥ ಅವಧಿಗೆ ಲಿಖಿತದಲ್ಲಿ ಕೇಂದ್ರ ಸರ್ಕಾರಕ್ಕೆ ನೋಟೀಸನ್ನು ನೀಡುವ ಮೂಲಕ ತನ್ನ ಪದಕ್ಕೆ ರಾಜೀನಾಮೆ ನೀಡಬಹುದು ಮತ್ತು ಅಂಥ ರಾಜೀನಾಮೆಯನ್ನು ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚಿಸಿದ ಮೇಲೆ ಅಂಥ ಸದಸ್ಯನು ತನ್ನ ಪದವನ್ನು ಖಾಲಿ ಮಾಡಿದ್ದಾನೆಂದು ಭಾವಿಸತಕ್ಕದ್ದು.

6. **ಸದಸ್ಯರನ್ನು ಪದದಿಂದ ತೆಗೆದುಹಾಕುವುದು.–** ಕೇಂದ್ರ ಸರ್ಕಾರವು, ಸದಸ್ಯನನ್ನು–

(ಎ) ಅವನು 4ನೇ ಪ್ರಕರಣದಲ್ಲಿ ತಿಳಿಸಿರುವ ಯಾವುದೇ ಅನರ್ಹತೆಗಳಿಗೆ ಒಳಗಾದರೆ:

ಪರಂತು, ಯಾರೇ ಸದಸ್ಯನಿಗೆ ಆ ವಿಷಯದಲ್ಲಿ ತನ್ನ ಅಹವಾಲನ್ನು ಹೇಳಿಕೊಳ್ಳಲು ಯುಕ್ತ ಅವಕಾಶವನ್ನು ನೀಡಿದ ಹೊರತು, ಆ ಪ್ರಕರಣದ (ಇ) ಖಂಡದಲ್ಲಿ ತಿಳಿಸಿರುವ ಅನರ್ಹತೆಗೆ ಅವನು ಒಳಗಾಗಿದ್ದಾನೆ ಎಂಬ ಕಾರಣದ ಮೇಲೆ ಅವನನ್ನು ತೆಗೆದುಹಾಕತಕ್ಕದ್ದಲ್ಲ; ಅಥವಾ

(ಬಿ) ಅವನು ಕಾರ್ಯನಿರ್ವಹಿಸಲು ನಿರಾಕರಿಸಿದರೆ ಅಥವಾ ಕಾರ್ಯನಿರ್ವಹಿಸಲು ಅಸಮರ್ಥನಾದರೆ; ಅಥವಾ

(ಸಿ) ಅವನು ಪ್ರಾಧಿಕಾರದಿಂದ ಅನುಮತಿ ಪಡೆಯದೆ ಪ್ರಾಧಿಕಾರದ ಮೂರು ನಿರಂತರ ಸಭೆಗಳಿಗೆ ಗೈರು ಹಾಜರಾದರೆ; ಅಥವಾ

(ಡಿ) ಅವನು ತನ್ನ ಪದದಲ್ಲಿ ಮುಂದುವರೆದರೆ, ಸಾರ್ವಜನಿಕ ಹಿತಾಸಕ್ತಿಗೆ ಧಕ್ಕೆಯುಂಟಾಗುತ್ತದೆ ಎಂಬುವಷ್ಟರ ಮಟ್ಟಿಗೆ ಅವನು ತನ್ನ ಪದವನ್ನು ದುರುಪಯೋಗಪಡಿಸಿಕೊಂಡಿದ್ದಾನೆ ಎಂದು ಕೇಂದ್ರ ಸರ್ಕಾರವು ಅಭಿಪ್ರಾಯಪಟ್ಟರೆ

– ಪದದಿಂದ ತೆಗೆದುಹಾಕತಕ್ಕದ್ದು:

ಪರಂತು, ಯಾರೇ ಸದಸ್ಯನಿಗೆ ಈ ವಿಷಯದ ಬಗ್ಗೆ ಅಹವಾಲು ಹೇಳಿಕೊಳ್ಳಲು ಅವಕಾಶ ನೀಡಿದ ಹೊರತು ಅವನನ್ನು ಈ ಖಂಡದ ಮೇರೆಗೆ ಪದದಿಂದ ತೆಗೆದುಹಾಕತಕ್ಕದ್ದಲ್ಲ.

7. **ಮರುನೇಮಕಕ್ಕೆ ಸದಸ್ಯನ ಅರ್ಹತೆ.–** ಯಾವ ವ್ಯಕ್ತಿಯು ಸದಸ್ಯನಾಗಿರುವುದು ನಿಂತು ಹೋಗಿದೆಯೋ ಆ ಯಾರೇ ವ್ಯಕ್ತಿಯು, 4ನೇ ಪ್ರಕರಣದ ಮೇರೆಗೆ ಅನರ್ಹಗೊಂಡಿದ್ದ ಹೊರತು ಮರು ನೇಮಕಕ್ಕೆ ಅರ್ಹನಾಗಿರತಕ್ಕದ್ದು.

8. **ಸಭೆಗಳು.–** (1) ಪ್ರಾಧಿಕಾರವು, ವಿನಿಯಮಗಳ ಮೂಲಕ ಗೊತ್ತುಪಡಿಸಬಹುದಾದಂಥ ಕಾಲಗಳಲ್ಲಿ ಮತ್ತು ಸ್ಥಳಗಳಲ್ಲಿ ಸಭೆ ಸೇರತಕ್ಕದ್ದು ಮತ್ತು ಅದರ ಸಭೆಗಳಲ್ಲಿ (ಅಂತಹ ಸಭೆಗಳಲ್ಲಿನ ಕೋರಂ ಸೇರಿದಂತೆ) ಕಾರ್ಯಕಲಾಪಗಳನ್ನು ನಡೆಸುವುದಕ್ಕೆ ಸಂಬಂಧಿಸಿದಂತೆ ಅಂಥ ಕಾರ್ಯವಿಧಾನದ ನಿಯಮಗಳನ್ನು ಪಾಲಿಸತಕ್ಕದ್ದು.

(2) ಅಧ್ಯಕ್ಷನು ಅಥವಾ ಯಾವುದೇ ಕಾರಣದಿಂದಾಗಿ ಪ್ರಾಧಿಕಾರದ ಯಾವುದೇ ಸಭೆಗೆ ಹಾಜರಾಗಲು ಅವನಿಗೆ ಸಾಧ್ಯವಾಗದಿದ್ದರೆ, ಪ್ರಾಧಿಕಾರದ ಸಭೆಯಲ್ಲಿ ಹಾಜರಿರುವ ಸದಸ್ಯರಿಂದ ಆಯ್ಕೆಯಾದಂಥ ಯಾರೇ ಇತರ ಸದಸ್ಯನು ಸಭೆಯ ಅಧ್ಯಕ್ಷತೆ ವಹಿಸತಕ್ಕದ್ದು.

(3) ಪ್ರಾಧಿಕಾರದ ಯಾವುದೇ ಸಭೆಯ ಮುಂದೆ ಬರುವ ಎಲ್ಲಾ ವಿಷಯಗಳನ್ನು ಹಾಜರಿರುವ ಮತ್ತು ಮತ ನೀಡುವ ಸದಸ್ಯರ ಬಹುಮತದಿಂದ ತೀರ್ಮಾನಿಸತಕ್ಕದ್ದು ಮತ್ತು ಮತಗಳು ಸಮನಾಗಿ ಬಿದ್ದ ಸಂದರ್ಭದಲ್ಲಿ, ಅಧ್ಯಕ್ಷನು ಅಥವಾ ಅವನ ಅನುಪಸ್ಥಿತಿಯಲ್ಲಿ ಅಧ್ಯಕ್ಷತೆ ವಹಿಸಿರುವ ವ್ಯಕ್ತಿಯು ಎರಡನೆಯ ಅಥವಾ ನಿರ್ಣಾಯಕ ಮತವನ್ನು ಹೊಂದಿರತಕ್ಕದ್ದು ಮತ್ತು ಚಲಾಯಿಸತಕ್ಕದ್ದು.

9. **ಖಾಲಿಸ್ಥಾನ ಇತ್ಯಾದಿಗಳು ಪ್ರಾಧಿಕಾರದ ವ್ಯವಹರಣೆಗಳನ್ನು ಅಸಿಂಧುಗೊಳಿಸದಿರುವುದು.–** ಪ್ರಾಧಿಕಾರದ ಯಾವುದೇ ಕಾರ್ಯವು ಅಥವಾ ವ್ಯವಹರಣೆಯು–

(ಎ) ಪ್ರಾಧಿಕಾರದಲ್ಲಿ ಯಾವುದೇ ಸ್ಥಾನವು ಖಾಲಿಯಿರುವ ಅಥವಾ ಅದರ ರಚನೆಯಲ್ಲಿ ಯಾವುದೇ ದೋಷವಿರುವ; ಅಥವಾ

(ಬಿ) ಪ್ರಾಧಿಕಾರದ ಸದಸ್ಯನಾಗಿ ಕಾರ್ಯನಿರ್ವಹಿಸುತ್ತಿರುವ ವ್ಯಕ್ತಿಯ ನೇಮಕದಲ್ಲಿ ಯಾವುದೇ ಲೋಪವಿರುವ; ಅಥವಾ

(ಸಿ) ಪ್ರಾಧಿಕಾರದ ಕಾರ್ಯವಿಧಾನದಲ್ಲಿ ಪ್ರಕರಣದ ಗುಣಾವಗುಣಗಳಿಗೆ ಬಾಧಕವಾಗದಂಥ ಯಾವುದೇ ಅಕ್ರಮತೆ ಇರುವ

– ಕಾರಣ ಮಾತ್ರದಿಂದಲೇ ಅಸಿಂಧುವಾಗತಕ್ಕದ್ದಲ್ಲ.

10. **ಪ್ರಾಧಿಕಾರದ ಅಧಿಕಾರಿಗಳು ಮತ್ತು ಇತರ ನೌಕರರು.–** (1) ಈ ಅಧಿನಿಯಮದ ಮೇರೆಗೆ ತನ್ನ ಪ್ರಕಾರ್ಯಗಳನ್ನು ಸಮರ್ಥವಾಗಿ ನಿರ್ವಹಿಸುವುದಕ್ಕೆ ಪ್ರಾಧಿಕಾರಕ್ಕೆ ಸಾಧ್ಯವಾಗಿಸುವ ಉದ್ದೇಶಕ್ಕಾಗಿ, ತಾನು ಅವಶ್ಯವೆಂದು ಪರಿಗಣಿಸುವಷ್ಟು ಸಂಖ್ಯೆಯ ಅಧಿಕಾರಿಗಳನ್ನು ಮತ್ತು ಇತರ ನೌಕರರನ್ನು ಪ್ರಾಧಿಕಾರವು ನೇಮಕ ಮಾಡಿಕೊಳ್ಳತಕ್ಕದ್ದು:

ಪರಂತು, ನಿರ್ದಿಷ್ಟಪಡಿಸಬಹುದಾದಂಥ ಪ್ರವರ್ಗದ ಅಧಿಕಾರಿಗಳ ನೇಮಕವು ಕೇಂದ್ರ ಸರ್ಕಾರದ ಅನುಮೋದನೆಗೊಳಪಟ್ಟಿರತಕ್ಕದ್ದು.

(2) ಪ್ರಾಧಿಕಾರದಿಂದ ನೇಮಕಗೊಂಡ ಪ್ರತಿಯೊಬ್ಬ ಅಧಿಕಾರಿಯು ಅಥವಾ ಇತರ ನೌಕರನು, ವಿನಿಯಮಗಳ ಮೂಲಕ ನಿರ್ಧರಿಸಬಹುದಾದಂಥ ಸೇವೆಯ ಷರತ್ತುಗಳಿಗೊಳಪಟ್ಟಿರತಕ್ಕದ್ದು ಮತ್ತು ಅಂಥ ಪರಿಶ್ರಮಧನಕ್ಕೆ ಹಕ್ಕುಳ್ಳವನಾಗಿರತಕ್ಕದ್ದು.

## ಅಧ್ಯಾಯ III

## ಪ್ರಾಧಿಕಾರದ ಪ್ರಕಾರ್ಯಗಳು

**11. ಪ್ರಾಧಿಕಾರದ ಪ್ರಕಾರ್ಯಗಳು.–** (1) ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, ಭಾರತದ ಅಂತರರಾಷ್ಟ್ರೀಯ ಗಡಿಗಳುದ್ದಕ್ಕೂ ಹೆಸರಿಸಲಾದ ಸ್ಥಳಗಳಲ್ಲಿ ಪ್ರಯಾಣಿಕರನ್ನು ಮತ್ತು ಸರಕುಗಳನ್ನು ಗಡಿಯಿಂದಾಚೆಗೆ ಸಾಗಿಸುವುದಕ್ಕೆ ಸೌಲಭ್ಯಗಳನ್ನು ಅಭಿವೃದ್ಧಿಪಡಿಸಲು, ನೈರ್ಮಲ್ಯ ವ್ಯವಸ್ಥೆ ಕಲ್ಪಿಸಲು ಮತ್ತು ನಿರ್ವಹಣೆ ಮಾಡಲು ಪ್ರಾಧಿಕಾರವು ಅಧಿಕಾರವನ್ನು ಹೊಂದಿರತಕ್ಕದ್ದು.

(2) ಉಪಪ್ರಕರಣ (1)ರಲ್ಲಿ ಒಳಗೊಂಡ ಉಪಬಂಧಗಳ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ ಪ್ರಾಧಿಕಾರವು–

(ಎ) ಗಡಿಭಾಗಗಳಲ್ಲಿರುವ ಸಂಯೋಜಿತ ತನಿಖಾ ಕಟ್ಟೆಗಳಲ್ಲಿ ಭದ್ರತಾ ಅಗತ್ಯತೆಗಳನ್ನು ಪೂರೈಸುವ ವ್ಯವಸ್ಥೆಗಳನ್ನು ಕಲ್ಪಿಸಬಹುದು;

(ಬಿ) ಸಂಯೋಜಿತ ತನಿಖಾ ಠಾಣೆಗಳಲ್ಲಿ, ರಾಷ್ಟ್ರೀಯ ಹೆದ್ದಾರಿಗಳು, ರಾಜ್ಯ ಹೆದ್ದಾರಿಗಳು ಮತ್ತು ರೈಲ್ವೆಯನ್ನು ಹೊರತುಪಡಿಸಿ ರಸ್ತೆಗಳನ್ನು ಮತ್ತು ಟರ್ಮಿನಲ್‌ಗಳನ್ನು ಮತ್ತು ಪೂರಕ ಕಟ್ಟಡಗಳನ್ನು ಯೋಜಿಸಬಹುದು, ನಿರ್ಮಿಸಬಹುದು ಮತ್ತು ನಿರ್ವಹಿಸಬಹುದು;

(ಸಿ) ಸಂಯೋಜಿತ ತನಿಖಾ ಠಾಣೆಗಳಲ್ಲಿ ಸಂಪರ್ಕ ವ್ಯವಸ್ಥೆಯನ್ನು, ಭದ್ರತೆಯನ್ನು, ಸರಕುಗಳ ನಿರ್ವಹಣೆಯನ್ನು ಮತ್ತು ಸ್ಕ್ಯಾನಿಂಗ್ ಸಾಧನ ಸಲಕರಣೆಗಳನ್ನು ಯೋಜಿಸಬಹುದು, ಸಂಗ್ರಹಿಸಬಹುದು, ಸ್ಥಾಪಿಸಬಹುದು ಮತ್ತು ನಿರ್ವಹಿಸಬಹುದು;

(ಡಿ) ವಲಸೆಗಾಗಿ, ಸೀಮಾಸುಂಕಕ್ಕಾಗಿ, ಭದ್ರತೆಗಾಗಿ, ತೆರಿಗೆ ಪ್ರಾಧಿಕಾರಗಳಿಗಾಗಿ, ಪ್ರಾಣಿ ಮತ್ತು ಸಸ್ಯಗಳನ್ನು ಬೇರ್ಪಡಿಸಿಡುವುದಕ್ಕಾಗಿ, ಉಗ್ರಾಣಗಳಿಗಾಗಿ, ಸರಕು ಮತ್ತು ಸಾಮಾನುಗಳಿಗಾಗಿ, ಪರೀಕ್ಷಾ ಪ್ರಾಂಗಣಗಳಿಗಾಗಿ, ಪಾರ್ಕಿಂಗ್ ವಲಯಗಳಿಗಾಗಿ, ಬ್ಯಾಂಕುಗಳಿಗಾಗಿ, ಅಂಚೆ ಕಚೇರಿಗಳಿಗಾಗಿ, ಸಂಪರ್ಕ ಸೌಲಭ್ಯಗಳಿಗಾಗಿ, ಪ್ರವಾಸಿ ಮಾಹಿತಿ ಕೇಂದ್ರಗಳಿಗಾಗಿ, ನಿರೀಕ್ಷಣಾ ಸಭಾಂಗಣಗಳಿಗಾಗಿ, ಕ್ಯಾಂಟೀನ್‌ಗಾಗಿ, ಉಪಾಹಾರ ಮಳಿಗೆಗಳಿಗಾಗಿ, ಸಾರ್ವಜನಿಕ ಅನುಕೂಲತೆಗಳಿಗಾಗಿ, ಆರೋಗ್ಯ ಸೇವೆಗಳಿಗಾಗಿ ಮತ್ತು ಅವಶ್ಯವೆಂದು ಭಾವಿಸಬಹುದಾದ ಅಂಥ ಇತರ ಸೇವೆಗಳಿಗಾಗಿ ಸೂಕ್ತ ಸ್ಥಳವನ್ನು ಮತ್ತು ಸೌಕರ್ಯಗಳನ್ನು ಒದಗಿಸಬಹುದು;

(ಇ) ಅದರ ನೌಕರರಿಗೆ ನಿವಾಸದ ಕಟ್ಟಡಗಳನ್ನು ಹಾಗೂ ಸಂಯೋಜಿತ ತನಿಖಾ ಕಟ್ಟೆಯಲ್ಲಿ ನಿಯೋಜಿತರಾದ ಸಿಬ್ಬಂದಿಗೆ ವಸತಿ ಸೌಕರ್ಯಗಳನ್ನು ನಿರ್ಮಿಸಬಹುದು;

(ಎಫ್) ಹೋಟೆಲುಗಳನ್ನು, ರೆಸ್ಟೋರೆಂಟ್‌ಗಳನ್ನು ಮತ್ತು ವಿಶ್ರಾಂತಿ ಗೃಹಗಳನ್ನು ಸ್ಥಾಪಿಸಬಹುದು ಮತ್ತು ನಿರ್ವಹಿಸಬಹುದು;

(ಜಿ) ಸರಕುಗಳನ್ನು ದಾಸ್ತಾನು ಮಾಡಲು ಅಥವಾ ಸಂಸ್ಕರಿಸಲು ಉಗ್ರಾಣಗಳನ್ನು, ಕಂಟೈನರ್ ಡಿಪೋಗಳನ್ನು ಮತ್ತು ಕಾರ್ಗೋ ಕಾಂಪ್ಲೆಕ್ಸ್‌ಗಳನ್ನು ಸ್ಥಾಪಿಸುವುದು ಮತ್ತು ನಿರ್ವಹಿಸುವುದು;

(ಎಚ್) ಸಂಯೋಜಿತ ತನಿಖಾ ಠಾಣೆಗಳಲ್ಲಿ ಪ್ರಯಾಣಿಕರ ಮತ್ತು ಇತರ ವ್ಯಕ್ತಿಗಳ ಉಪಯೋಗಕ್ಕಾಗಿ ಅಂಚೆ, ಹಣ ವಿನಿಮಯ, ವಿಮಾ ಮತ್ತು ದೂರವಾಣಿ ಸೌಕರ್ಯಗಳಿಗೆ ವ್ಯವಸ್ಥೆ ಮಾಡಬಹುದು;

(ಐ) ಸಂಯೋಜಿತ ತನಿಖಾ ಠಾಣೆಗಳ ಭದ್ರತೆಗಾಗಿ ಸೂಕ್ತ ವ್ಯವಸ್ಥೆಗಳನ್ನು ಮಾಡಬಹುದು ವಾಹನಗಳ ಸಂಚಾರವನ್ನು ವಿನಿಯಮಿಸುವುದಕ್ಕೆ ಮತ್ತು ನಿಯಂತ್ರಿಸುವುದಕ್ಕೆ ಮತ್ತು ಪ್ರಯಾಣಿಕರ ಮತ್ತು ಸರಕುಗಳ ಆಗಮನ ಮತ್ತು ನಿರ್ಗಮನಕ್ಕೆ ಸಂಬಂಧಿಸಿದ ಕಾನೂನಿಗನುಸಾರವಾಗಿ ಅವಕಾಶ ಕಲ್ಪಿಸಬಹುದು;

(ಜೆ) ಬೆಂಕಿ ಮತ್ತು ಇತರ ಅಪಾಯಗಳನ್ನು ತಡೆಗಟ್ಟುವುದನ್ನು ಮತ್ತು ನಿಯಂತ್ರಿಸುವುದನ್ನು ಮತ್ತು ಅವಶ್ಯವೆಂದು ಭಾವಿಸಬಹುದಾದ ಇತರ ಸೌಲಭ್ಯಗಳು ಇರುವುದನ್ನು ಸುನಿಶ್ಚಿತಪಡಿಸಿಕೊಳ್ಳಬಹುದು;

(ಕೆ) ಕಾನೂನಿಗೆ ಮತ್ತು ಭದ್ರತೆಗೆ ಮತ್ತು ಭಾರತ ಸರ್ಕಾರದ ಶಿಷ್ಟಾಚಾರಕ್ಕೆ ಸೂಕ್ತ ಗಮನ ಕೊಡುವುದರೊಂದಿಗೆ ಸಂಯೋಜಿತ ತನಿಖಾ ಠಾಣೆಗಳಲ್ಲಿ ವಾಹನಗಳ ಸಂಚಾರವನ್ನು, ಪ್ರಯಾಣಿಕರ, ಸಾಗಾಣೆ ಕೆಲಸಗಾರರ, ನಿರ್ವಹಣಾ ಏಜೆಂಟರುಗಳ, ಸರಕುಗಳನ್ನು ತೆಗೆದು ಸಾಗಿಸುವ ಏಜೆಂಟರುಗಳ ಮತ್ತು ಸರಕುಗಳ ಆಗಮನ ಮತ್ತು ನಿರ್ಗಮನವನ್ನು ವಿನಿಯಮಿಸಬಹುದು ಮತ್ತು ನಿಯಂತ್ರಿಸಬಹುದು;

(ಎಲ್) ತತ್ಕಾಲದಲ್ಲಿ ಜಾರಿಯಲ್ಲಿರುವ ಸಂಬಂಧಪಟ್ಟ ಕಾನೂನಿಗನುಸಾರವಾಗಿ, ಸಂಯೋಜಿತ ತನಿಖಾ ಠಾಣೆಗಳಲ್ಲಿ ವಿವಿಧ ಚಟುವಟಿಕೆಗಳಲ್ಲಿ ತೊಡಗಿರುವ ಕಾರ್ಯನಿರತ ಏಜೆನ್ಸಿಗಳ ಕಾರ್ಯನಿರ್ವಹಣೆಯಲ್ಲಿ ಸಮನ್ವಯ ತರಬಹುದು ಮತ್ತು ಆ ಕಾರ್ಯನಿರ್ವಹಣೆಗೆ ಅನುಕೂಲ ಮಾಡಿಕೊಡಬಹುದು;

(ಎಂ) ಸಂಯೋಜಿತ ತನಿಖಾ ಠಾಣೆಗಳಿಗೆ ಸಂಬಂಧಿಸಿದಂತೆ ಭಾರತದಲ್ಲಿ ಮತ್ತು ಹೊರಗೆ ಸಮಾಲೋಚನೆ, ನಿರ್ಮಾಣ ಅಥವಾ ನಿರ್ವಹಣಾ ಸೇವೆಗಳನ್ನು ಅಭಿವೃದ್ಧಿಪಡಿಸಬಹುದು ಮತ್ತು ಒದಗಿಸಬಹುದು ಮತ್ತು ಕಾರ್ಯಾಚರಣೆಗಳನ್ನು ಕೈಗೊಳ್ಳಬಹುದು;

(ಎನ್) ಈ ಅಧಿನಿಯಮದ ಮೂಲಕ ಅದಕ್ಕೆ ವಹಿಸಿದ ಪ್ರಕಾರ್ಯಗಳನ್ನು ದಕ್ಷತೆಯಿಂದ ನಿರ್ವಹಿಸುವುದಕ್ಕಾಗಿ, ಕಂಪನಿಗಳ ಅಧಿನಿಯಮ 1956 (1956 ರ 1)ರ ಮೇರೆಗೆ ಅಥವಾ ಕಂಪನಿಗಳಿಗೆ ಸಂಬಂಧಿಸಿದ ಯಾವುದೇ ಇತರ ಕಾನೂನಿನ ಮೇರೆಗೆ ಒಂದು ಅಥವಾ ಹೆಚ್ಚು ಕಂಪನಿಗಳನ್ನು ರಚಿಸಬಹುದು;

(ಓ) ಈ ಅಧಿನಿಯಮದ ಮೂಲಕ ಅದಕ್ಕೆ ಪ್ರದತ್ತವಾದ ಯಾವುದೇ ಅಧಿಕಾರವನ್ನು ಚಲಾಯಿಸಲು ಅಥವಾ ಅದಕ್ಕೆ ವಹಿಸಿದ ಯಾವುದೇ ಪ್ರಕಾರ್ಯವನ್ನು ನಿರ್ವಹಿಸಲು ಅವಶ್ಯವಾಗಬಹುದಾದಂಥ ಅಥವಾ ವಿಹಿತವಾಗಬಹುದಾದಂಥ ಅಥವಾ ಅದಕ್ಕೆ ಪ್ರಾಸಂಗಿಕವಾಗಬಹುದಂಥ ಎಲ್ಲ ಕ್ರಮಗಳನ್ನು ತೆಗೆದುಕೊಳ್ಳಬಹುದು:

ಪರಂತು, ಪ್ರಾಧಿಕಾರಕ್ಕೆ ಇರುವ ಸಾರ್ವಭೌಮ ಪ್ರಕಾರ್ಯಗಳನ್ನು ಯಾವುದೇ ಖಾಸಗಿ ಸಂಸ್ಥೆಗೆ ವಹಿಸಿಕೊಡತಕ್ಕದ್ದಲ್ಲ;

(ಪಿ) ಪ್ರಾಧಿಕಾರಕ್ಕೆ ವಹಿಸಿರುವ ಯಾವುವೇ ಪ್ರಕಾರ್ಯಗಳ ನಿರ್ವಹಣೆಗಾಗಿ ಜಂಟಿ ಉದ್ಯಮಗಳನ್ನು ಸ್ಥಾಪಿಸಬಹುದು; ಮತ್ತು

(ಕ್ಯೂ) ಪ್ರಾಧಿಕಾರದ ಅತ್ಯುತ್ತಮ ನಾಲ್ಕು ವಾಣಿಜ್ಯ ಹಿತಾಸಕ್ತಿಗಳಿಗೆ ಸಂಬಂಧಿಸಿದಂತೆ ಯಾವುದೇ ಇತರ ಚಟುವಟಿಕೆಯನ್ನು ಸಂಯೋಜಿತ ತನಿಖಾ ಠಾಣೆಗಳಲ್ಲಿ ಕೈಗೊಳ್ಳಬಹುದು.

(3) ಈ ಪ್ರಕರಣದ ಮೇರೆಗೆ ಪ್ರಾಧಿಕಾರವು ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವಾಗ ಅವಶ್ಯವೆಂದು ತಾನು ಭಾವಿಸಬಹುದಾದಂಥ, ಭಾರತ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಮಂತ್ರಾಲಯದೊಂದಿಗೆ, ಇಲಾಖೆಯೊಂದಿಗೆ ಸಮಾಲೋಚಿಸಬಹುದು ಮತ್ತು ಭೂ ಬಂದರು ಸೇವೆಗಳ ಅಭಿವೃದ್ಧಿಗೆ ಮತ್ತು ಅಂಥ ಸೇವೆಗಳ ದಕ್ಷತೆಗೆ, ಮಿತವ್ಯಯಕ್ಕೆ ಮತ್ತು ಸುರಕ್ಷತೆಗೆ ಸೂಕ್ತ ಗಮನ ನೀಡತಕ್ಕದ್ದು.

(4) ಈ ಪ್ರಕರಣದಲ್ಲಿ ಒಳಗೊಂಡಿರುವುದು ಯಾವುದೂ–

(ಎ) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನನ್ನು ಪ್ರಾಧಿಕಾರವು ಉಪೇಕ್ಷಿಸುವುದಕ್ಕೆ ಅಧಿಕಾರ ನೀಡಿದೆ ಎಂದು; ಅಥವಾ

(ಬಿ) ಪ್ರಾಧಿಕಾರವು ಅಥವಾ ಅದರ ಅಧಿಕಾರಿಗಳು ಅಥವಾ ಇತರ ನೌಕರರು ಯಾವ ಕರ್ತವ್ಯಕ್ಕೆ ಅಥವಾ ಹೊಣೆಗೆ ಒಳಪಟ್ಟಿಲ್ಲವೊ ಆ ಕರ್ತವ್ಯಕ್ಕೆ ಅಥವಾ ಹೊಣೆಗೆ ಸಂಬಂಧಿಸಿದಂತೆ ಯಾವುದೇ ವ್ಯವಹರಣೆಯನ್ನು ಹೂಡಲು ಯಾರೇ ವ್ಯಕ್ತಿಗೆ ಅಧಿಕಾರ ನೀಡುತ್ತದೆ ಎಂದು

– ಅರ್ಥೈಸತಕ್ಕದ್ದಲ್ಲ.

**12. ಇತರ ಏಜೆನ್ಸಿಗಳ ಜವಾಬ್ದಾರಿಗಳು ಮತ್ತು ಅಧಿಕಾರಗಳು.–** (1) ಭಾರತದ ಗಡಿಗಳಲ್ಲಿ ನಿಯೋಜಿಸಿರುವ ಸಂಬಂಧಪಟ್ಟ ಗಡಿ ಸಂರಕ್ಷಣಾ ಪಡೆಗಳು ಸಂಯೋಜಿತ ತನಿಖಾ ಠಾಣೆಗಳ ಸುತ್ತಮುತ್ತಲಿನ ಭದ್ರತೆಗೆ ಜವಾಬ್ದಾರಿಯಾಗಿರತಕ್ಕದ್ದು.

(2) ಪ್ರಾಧಿಕಾರವು, ಸಂಯೋಜಿತ ತನಿಖಾ ಠಾಣೆಗಳಲ್ಲಿ ಶಾಂತಿ ಮತ್ತು ಭದ್ರತೆಯನ್ನು ಸುನಿಶ್ಚಿತಪಡಿಸಿಕೊಳ್ಳುವುದಕ್ಕಾಗಿ ತತ್ಕಾಲದಲ್ಲಿ ಜಾರಿಯಲ್ಲಿರುವ ಕಾನೂನಿನ ಉಪಬಂಧಗಳಿಗನುಸಾರವಾಗಿ ಸಶಸ್ತ್ರ ಪಡೆಗಳ, ಕೇಂದ್ರ ಅರೆ ಸೇನಾಪಡೆಗಳ ಅಥವಾ ರಾಜ್ಯ ಪೊಲೀಸಿನ ನೆರವು ಅವಶ್ಯವೆಂದು ಪರಿಗಣಿಸಿದಾಗಲೆಲ್ಲ ಆ ನೆರವನ್ನು ಕೋರಬಹುದು.

(3) ಪ್ರಾಧಿಕಾರದ ಪ್ರಕಾರ್ಯಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸುವುದಕ್ಕಾಗಿ ಸೀಮಾಸುಂಕ, ವಲಸೆ, ರೋಗಿ ಸಂಸರ್ಗ ನಿಷೇಧ ಸ್ಥಳದಲ್ಲಿ ಕಾರ್ಯನಿರ್ವಹಿಸುವ ಮತ್ತು ಇತರ ಸಿಬ್ಬಂದಿಗಳು ಪ್ರಾಧಿಕಾರದೊಂದಿಗೆ ಸಮನ್ವಯದಿಂದ ಕಾರ್ಯನಿರ್ವಹಿಸತಕ್ಕದ್ದು.

(4) ಈ ಅಧಿನಿಯಮದ ಯಾವುದೇ ಉಪಬಂಧಗಳಲ್ಲಿ ಏನೇ ಒಳಗೊಂಡಿದ್ದರೂ, ಸೀಮಾಸುಂಕ, ವಲಸೆ ಮತ್ತು ರೋಗಿ ಸಂಸರ್ಗ ನಿಷೇಧ ಸ್ಥಳದಲ್ಲಿ ಕಾರ್ಯನಿರ್ವಹಿಸುವ ಸಿಬ್ಬಂದಿಗಳು, ಗಡಿಕಾವಲು ಪಡೆಗಳು ಮತ್ತು ಪೊಲೀಸರು ತತ್ಕಾಲದಲ್ಲಿ ಜಾರಿಯಲ್ಲಿರುವ ಕಾನೂನಿಗೆ ಅನುಸಾರವಾಗಿ ತಮ್ಮತಮ್ಮ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

## ಅಧ್ಯಾಯ IV

## ಸ್ವತ್ತು ಮತ್ತು ಕರಾರು

**13. ಆಸ್ತಿಗಳು ಮತ್ತು ಹೊಣೆಗಾರಿಕೆಗಳು ಪ್ರಾಧಿಕಾರದಲ್ಲಿ ನಿಹಿತವಾಗುವುದು.–** (1) ಪ್ರಕರಣ 2ರ (ಡಿ) ಖಂಡದ ಮೇರೆಗೆ ಹೊರಡಿಸಿದ ಅಧಿಸೂಚನೆಯ ದಿನಾಂಕದಂದು, ಆ ಅಧಿಸೂಚನೆಯಲ್ಲಿ ಕೇಂದ್ರ ಸರ್ಕಾರವು ನಿರ್ದಿಷ್ಟಪಡಿಸಬಹುದಾದಂಥ ಎಲ್ಲಾ ಆಸ್ತಿಗಳು, ಹಕ್ಕುಗಳು, ಅಧಿಕಾರಗಳು, ಪ್ರಾಧಿಕಾರಗಳು ಮತ್ತು ವಿಶೇಷಾಧಿಕಾರಗಳು ಹಾಗೂ ಆ ಅಧಿಸೂಚನೆಯನ್ನು ಹೊರಡಿಸುವ ನಿಕಟಪೂರ್ವದಲ್ಲಿ ಯಾವುದೇ ಭೂ ಬಂದರಿನಲ್ಲಿ ಭಾರತ ಸರ್ಕಾರದ ಒಡೆತನದಲ್ಲಿದ್ದ ಅಥವಾ ಸ್ವಾಧೀನದಲ್ಲಿದ್ದ ಭೂಮಿಗಳು, ಕಟ್ಟಡಗಳು, ಯಂತ್ರೋಪಕರಣಗಳು, ಸಾಧನ ಸಾಮಗ್ರಿಗಳು, ಕಾಮಗಾರಿಗಳು, ಕಾರ್ಯಾಗಾರಗಳು, ನಗದು ಶಿಲ್ಕುಗಳು, ಬಂಡವಾಳ, ಮೀಸಲುಗಳು, ಮೀಸಲು ನಿಧಿಗಳು, ಹೂಡಿಕೆಗಳು, ಗೇಣಿದಾರಿಕೆಗಳು, ನಷ್ಟಗಳು ಮತ್ತು ಪುಸ್ತಕ ಋಣಗಳು ಸೇರಿದಂತೆ ಅಂಥ ಚರ ಮತ್ತು ಸ್ಥಿರ, ವಾಸ್ತವಿಕವಾದ ಅಥವಾ ವೈಯಕ್ತಿಕವಾದ, ಮೂರ್ತವಾದ ಅಥವಾ ಅಮೂರ್ತವಾದ, ಪ್ರಸ್ತುತ ಇರುವ ಅಥವಾ ಸಂಭವನೀಯವಾದ ಯಾವುದೇ ಸ್ವರೂಪದ ಅಂಥ ಸ್ವತ್ತು ಮತ್ತು ಅಂಥ ಸ್ವತ್ತಿನಿಂದ ಉಂಟಾಗುವ ಎಲ್ಲ ಇತರ ಹಕ್ಕುಗಳು ಹಾಗೂ ಹಿತಾಸಕ್ತಿಗಳು ಪ್ರಾಧಿಕಾರದಲ್ಲಿ ನಿಹಿತವಾಗತಕ್ಕದ್ದು ಮತ್ತು ಹಾಗೆ ನಿಹಿತಗೊಂಡವುಗಳಲ್ಲಿ ಅಸ್ತಿತ್ವದಲ್ಲಿರುವ ಯಾವುದೇ ಬಗೆಯ ಎಲ್ಲಾ ಸಾಲಗಳು, ಹೊಣೆಗಾರಿಕೆಗಳು ಮತ್ತು ಬಾಧ್ಯತೆಗಳು ಸಹ ಒಳಗೊಂಡಿವೆ ಎಂದು ಭಾವಿಸತಕ್ಕದ್ದು.

(2) ಉಪಪ್ರಕರಣ (1)ರ ಮೇರೆಗಿನ ಅಧಿಸೂಚನೆಯನ್ನು, ಭಾರತ ಸರ್ಕಾರದ ಸಂಬಂಧಪಟ್ಟ ಮಂತ್ರಾಲಯಗಳು ಅಥವಾ ಇಲಾಖೆಗಳು, ಅಂಥ ಸ್ವತ್ತುಗಳ ಒಡೆತನವನ್ನು ಮತ್ತು ನಿಯಂತ್ರಣವನ್ನು ಹೊಂದಿದ್ದಲ್ಲಿ, ಆ ಮಂತ್ರಾಲಯಗಳ ಅಥವಾ ಇಲಾಖೆಗಳ ಸಹಮತಿಯನ್ನು ಪಡೆದ ತರುವಾಯ ಮಾತ್ರವೇ ಹೊರಡಿಸತಕ್ಕದ್ದು.

**14. ಒಡಂಬಡಿಕೆಗಳನ್ನು ಪ್ರಾಧಿಕಾರದಲ್ಲಿ ನಿಹಿತಗೊಳಿಸಿದ್ದರಿಂದಾಗುವ ಸಾಮಾನ್ಯ ಪರಿಣಾಮ.–** 2ನೇ ಪ್ರಕರಣದ (ಡಿ) ಖಂಡದ ಮೇರೆಗೆ ಅಧಿಸೂಚನೆಯನ್ನು ಹೊರಡಿಸಿದ ದಿನಾಂಕಕ್ಕೆ ನಿಕಟಪೂರ್ವದಲ್ಲಿ ಅಸ್ತಿತ್ವದಲ್ಲಿ ಇರುವ ಹಾಗೂ ಭೂ ಬಂದರುಗಳಿಗೆ ಸಂಬಂಧಿಸಿದ ಎಲ್ಲಾ ಕರಾರುಗಳು, ಒಪ್ಪಂದಗಳು ಮತ್ತು ಕಾರ್ಯನಿರ್ವಹಣಾ ಏರ್ಪಾಡುಗಳು ಪ್ರಾಧಿಕಾರಕ್ಕೆ ಸಂಬಂಧಿಸಿದಂತೆ ಪೂರ್ಣವಾಗಿ ಜಾರಿಗೆ ತರುವಂಥವುಗಳು ಮತ್ತು ಪರಿಣಾಮವನ್ನು ಹೊಂದಿರುವಂಥವುಗಳಾಗಿರತಕ್ಕದ್ದು.

**15. ಖಾತರಿಯು ಸಲುವಳಿಯಲ್ಲಿರುವುದು.–** ಸಾಲಕ್ಕೆ, ಗೇಣಿಗೆ ಅಥವಾ ಹಣಕಾಸಿಗೆ ಸಂಬಂಧಿಸಿದಂತೆ ಭೂ ಸೀಮಾಸುಂಕ ಕೇಂದ್ರಗಳಿಗೆ ಅಥವಾ ವಲಸೆ ತನಿಖಾ ಠಾಣೆಗಳಿಗೆ ಅಥವಾ ಅವುಗಳ ಪರವಾಗಿ ನೀಡಿದ ಯಾವುದೇ ಖಾತರಿಯು ಈ ಅಧಿನಿಯಮದ ಬಲದಿಂದಾಗಿ ಪ್ರಾಧಿಕಾರದಲ್ಲಿ ನಿಹಿತಗೊಳಿಸಿರುವಂತಹ ಕೇಂದ್ರಗಳಿಗೆ ಅಥವಾ ತನಿಖಾ ಠಾಣೆಗಳಿಗೆ ಸಂಬಂಧಿಸಿದಂತೆ ಸಲುವಳಿಯಲ್ಲಿರುವುದು ಮುಂದುವರಿಯತಕ್ಕದ್ದು.

**16. ಪ್ರಾಧಿಕಾರಕ್ಕಾಗಿ ಭೂಮಿಯ ಕಡ್ಡಾಯ ಆರ್ಜನೆ.–** ಈ ಅಧಿನಿಯಮದ ಮೇರೆಗೆ ತನ್ನ ಪ್ರಕಾರ್ಯಗಳನ್ನು ನಿರ್ವಹಿಸಲು ಪ್ರಾಧಿಕಾರಕ್ಕೆ ಬೇಕಾದ ಯಾವುದೇ ಭೂಮಿಯನ್ನು ಸಾರ್ವಜನಿಕ ಉದ್ದೇಶಕ್ಕಾಗಿ ಬೇಕಾಗಿದೆ ಎಂದು ಭಾವಿಸತಕ್ಕದ್ದು ಮತ್ತು ಅಂಥ ಭೂಮಿಯನ್ನು ರಾಷ್ಟ್ರೀಯ ಹೆದ್ದಾರಿಗಳ ಅಧಿನಿಯಮ, 1956 (1956 ರ 48)ರ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಉಪಬಂಧಗಳ ಮೇರೆಗೆ ಪ್ರಾಧಿಕಾರಕ್ಕಾಗಿ ಆರ್ಜಿಸಬಹುದು.

**17. ಪ್ರಾಧಿಕಾರದಿಂದ ಕರಾರುಗಳು.–** ಪ್ರಾಧಿಕಾರವು ಈ ಅಧಿನಿಯಮದ ಮೇರೆಗೆ ಅದರ ಪ್ರಕಾರ್ಯಗಳನ್ನು ನಿರ್ವಹಿಸಲು ಅಗತ್ಯವಾದ ಯಾವುದೇ ಕರಾರನ್ನು 18ನೇ ಪ್ರಕರಣದ ಉಪಬಂಧಗಳಿಗೊಳಪಟ್ಟು, ಮಾಡಿಕೊಳ್ಳಲು ಮತ್ತು ಅದನ್ನು ನೆರವೇರಿಸಲು ಸಕ್ಷಮವಾಗಿರತಕ್ಕದ್ದು.

**18. ಪ್ರಾಧಿಕಾರದ ಪರವಾಗಿ ಕರಾರುಗಳನ್ನು ಮಾಡಿಕೊಳ್ಳುವ ವಿಧಾನ.–** (1) ಪ್ರಾಧಿಕಾರದ ಪರವಾಗಿ ಮಾಡಿಕೊಳ್ಳುವ ಪ್ರತಿಯೊಂದು ಕರಾರನ್ನು ಪ್ರಾಧಿಕಾರದ ಅಧ್ಯಕ್ಷನು ಅಥವಾ ಪ್ರಾಧಿಕಾರವು ಈ ಬಗ್ಗೆ ಸಾಮಾನ್ಯವಾಗಿ ಅಥವಾ ವಿಶೇಷವಾಗಿ ಅಧಿಕೃತಗೊಳಿಸಬಹುದಾದಂಥ ಇತರ ಅಧಿಕಾರಿಯು ಮಾಡಿಕೊಳ್ಳತಕ್ಕದ್ದು ಮತ್ತು ವಿನಿಯಮಗಳಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಕರಾರುಗಳನ್ನು ಪ್ರಾಧಿಕಾರದ ಸಾಮಾನ್ಯ ಮೊಹರನ್ನು ಹಾಕಿ ಸೀಲು ಮಾಡತಕ್ಕದ್ದು:

ಪರಂತು, ಕೇಂದ್ರ ಸರ್ಕಾರವು ಈ ಬಗ್ಗೆ ಆದೇಶದ ಮೂಲಕ ನಿಗದಿಪಡಿಸಬಹುದಾದಂಥ ಮೌಲ್ಯವನ್ನು ಅಥವಾ ಮೊತ್ತವನ್ನು ಮೀರುವಂಥ ಯಾವುದೇ ಕರಾರಿಗೆ, ಕೇಂದ್ರ ಸರ್ಕಾರವು ಪೂರ್ವಾನುಮೊದನೆ ನೀಡಿದ್ದ ಹೊರತು ಅಂಥ ಕರಾರನ್ನು ಮಾಡಿಕೊಳ್ಳತಕ್ಕದ್ದಲ್ಲ:

ಮತ್ತೂ ಪರಂತು, ಸ್ಥಿರ ಸ್ವತ್ತನ್ನು ಆರ್ಜಿಸುವುದಕ್ಕೆ ಅಥವಾ ಮಾರಾಟ ಮಾಡುವುದಕ್ಕೆ ಅಥವಾ ಮೂವತ್ತು ವರ್ಷಗಳಿಗೆ ಮೀರಿದ ಅವಧಿಗೆ ಅಂಥ ಯಾವುದೇ ಸ್ವತ್ತನ್ನು ಗುತ್ತಿಗೆಗೆ ಕೊಡುವುದಕ್ಕೆ ಸಂಬಂಧಿಸಿದ ಯಾವುದೇ ಕರಾರಿಗೆ ಮತ್ತು ಕೇಂದ್ರ ಸರ್ಕಾರವು ಈ ಬಗ್ಗೆ ಆದೇಶದ ಮೂಲಕ ನಿಗದಿಪಡಿಸಬಹುದಾದಂಥ ಮೌಲ್ಯವನ್ನು ಅಥವಾ ಮೊತ್ತವನ್ನು ಮೀರುವಂಥ ಯಾವುದೇ ಕರಾರಿಗೆ ಕೇಂದ್ರ ಸರ್ಕಾರವು ಪೂರ್ವಾನುಮೋದನೆ ನೀಡಿದ್ದ ಹೊರತು ಅಂಥ ಕರಾರನ್ನು ಮಾಡಿಕೊಳ್ಳತಕ್ಕದ್ದಲ್ಲ.

(2) ಉಪಪ್ರಕರಣ (1)ರ ಉಪಬಂಧಗಳಿಗೊಳಪಟ್ಟು, ಈ ಅಧಿನಿಯಮದ ಮೇರೆಗೆ ಯಾವುದೇ ಕರಾರನ್ನು ಯಾವ ನಮೂನೆಯಲ್ಲಿ ಮತ್ತು ಯಾವ ರೀತಿಯಲ್ಲಿ ಮಾಡಿಕೊಳ್ಳಬೇಕೊ ಆ ನಮೂನೆಯು ಮತ್ತು ರೀತಿಯು ವಿನಿಯಮಗಳ ಮೂಲಕ ಉಪಬಂಧಿಸಬಹುದಾದಂತೆ ಇರತಕ್ಕದ್ದು.

(3) ಈ ಅಧಿನಿಯಮದ ಉಪಬಂಧಗಳಿಗೆ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳಿಗೆ ಮತ್ತು ವಿನಿಯಮಗಳಿಗೆ ಅನುಸಾರವಾಗಿ ಇಲ್ಲದಿರುವ ಯಾವುದೇ ಕರಾರಿಗೆ ಪ್ರಾಧಿಕಾರವು ಬದ್ಧವಾಗಿರತಕ್ಕದ್ದಲ್ಲ.

## ಅಧ್ಯಾಯ V

## ಹಣಕಾಸು, ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ

**19. ಫೀಜುಗಳು, ಬಾಡಿಗೆ, ಇತ್ಯಾದಿಗಳನ್ನು ವಿಧಿಸಲು ಪ್ರಾಧಿಕಾರದ ಅಧಿಕಾರ.–** ಪ್ರಾಧಿಕಾರವು, ಪ್ರತಿಯೊಂದು ಸಂಯೋಜಿತ ತನಿಖಾ ಠಾಣೆಗೆ ಪ್ರತ್ಯೇಕವಾಗಿ, ಯಾವುದೇ ಇತರ ಅಧಿನಿಯಮದ ಮೇರೆಗೆ ಶಾಸನಬದ್ಧ ಲೇವಿಯಾಗಿರದ, ವಿನಿಯಮಗಳ ಮೂಲಕ ಉಪಬಂಧಿಸಬಹುದಾದಂಥ ಫೀಜನ್ನು ಅಥವಾ ಬಾಡಿಗೆಯನ್ನು,–

(ಎ) ಸಾರಿಗೆ ಕಾರ್ಯಾಚರಣೆಗಳ ಸಂಬಂಧದಲ್ಲಿ ರವಾನೆ ಸರಕುಗಳ ನಿರ್ವಹಣೆಗಾಗಿ, ಉಗ್ರಾಣಗಳಿಗಾಗಿ, ಟ್ರಕ್‌ಗಳನ್ನು ನಿಲ್ಲಿಸುವುದಕ್ಕಾಗಿ ಅಥವಾ ಯಾವುದೇ ಇತರ ಸೇವೆಗಾಗಿ ಅಥವಾ ಸೌಕರ್ಯಕ್ಕಾಗಿ;

(ಬಿ) ಪ್ರಯಾಣಿಕರ ವಾಹನಗಳ ನಿಲುಗಡೆಗಾಗಿ ಮತ್ತು ಪ್ರಯಾಣಿಕರಿಗೆ ಹಾಗೂ ಬಂದು ಹೋಗುವ ವ್ಯಕ್ತಿಗಳಿಗೆ ನೀಡಿದ ಇತರ ಸೌಕರ್ಯಗಳಿಗಾಗಿ; ಮತ್ತು

(ಸಿ) ಪ್ರಾಧಿಕಾರವು ನೀಡಿದಂಥ ಸೌಕರ್ಯಗಳನ್ನು ಮತ್ತು ಇತರ ಸೇವೆಗಳನ್ನು ಬಳಸಿಕೊಳ್ಳುವುದಕ್ಕಾಗಿ

– ನಿರ್ಧರಿಸಬಹುದು ಮತ್ತು ವಿಧಿಸಬಹುದು.

**20. ಕೇಂದ್ರ ಸರ್ಕಾರದಿಂದ ಪ್ರಾಧಿಕಾರಕ್ಕೆ ಹೆಚ್ಚುವರಿ ಬಂಡವಾಳ ಮತ್ತು ಅನುದಾನ.–** ಕೇಂದ್ರ ಸರ್ಕಾರವು, ಸಂಸತ್ತು ಈ ಬಗ್ಗೆ ಕಾನೂನಿನ ಮೂಲಕ ಹಣವನ್ನು ಹಂಚಿಕೆ ಮಾಡಿದ ತರುವಾಯ,–

(ಎ) ಈ ಅಧಿನಿಯಮದ ಮೇರೆಗೆ ತನ್ನ ಪ್ರಕಾರ್ಯಗಳನ್ನು ನಿರ್ವಹಿಸಲು ಅಥವಾ ಅದಕ್ಕೆ ಸಂಬಂಧಿಸಿದ ಯಾವುದೇ ಉದ್ದೇಶಕ್ಕಾಗಿ ಪ್ರಾಧಿಕಾರಕ್ಕೆ ಅಗತ್ಯವಿರಬಹುದಾದ ಯಾವುದೇ ಬಂಡವಾಳವನ್ನು ಕೇಂದ್ರ ಸರ್ಕಾರವು ನಿರ್ಧರಿಸಬಹುದಾದಂಥ ನಿಬಂಧನೆಗಳ ಮತ್ತು ಷರತ್ತುಗಳ ಮೇಲೆ ಒದಗಿಸಬಹುದು;

(ಬಿ) ಈ ಅಧಿನಿಯಮದ ಮೇರೆಗೆ ಪ್ರಾಧಿಕಾರವು ತನ್ನ ಪ್ರಕಾರ್ಯಗಳನ್ನು ದಕ್ಷತೆಯಿಂದ ನಿರ್ವಹಿಸುವುದಕ್ಕಾಗಿ ಅವಶ್ಯವೆಂದು ಕೇಂದ್ರ ಸರ್ಕಾರವು ಪರ್ಯಾಲೋಚಿಸಬಹುದಾದಂಥ ಹಣದ ಮೊತ್ತವನ್ನು ಸಾಲಗಳ ಅಥವಾ ಅನುದಾನಗಳ ರೂಪದಲ್ಲಿ ಕೇಂದ್ರ ಸರ್ಕಾರವು ನಿರ್ಧರಿಸಬಹುದಾದಂಥ ನಿಬಂಧನೆಗಳ ಮತ್ತು ಷರತ್ತುಗಳ ಮೇಲೆ ಪ್ರಾಧಿಕಾರಕ್ಕೆ ಸಂದಾಯ ಮಾಡಬಹುದು.

**21. ಪ್ರಾಧಿಕಾರದ ನಿಧಿ ಮತ್ತು ಅದರ ಹೂಡಿಕೆ.–** (1) ಪ್ರಾಧಿಕಾರವು ತನ್ನದೇ ಆದ ಒಂದು ನಿಧಿಯನ್ನು ಸ್ಥಾಪಿಸತಕ್ಕದ್ದು ಮತ್ತು ಪ್ರಾಧಿಕಾರಕ್ಕೆ ಬರುವ ಎಲ್ಲಾ ಹಣವನ್ನು ಅದಕ್ಕೆ ಜಮೆ ಮಾಡತಕ್ಕದ್ದು ಮತ್ತು ಪ್ರಾಧಿಕಾರವು ಮಾಡಬೇಕಾದ ಎಲ್ಲಾ ಸಂದಾಯಗಳನ್ನು ಅದರಿಂದ ಮಾಡತಕ್ಕದ್ದು.

(2) ಪ್ರಾಧಿಕಾರದ ಎಲ್ಲಾ ಆಡಳಿತ ವೆಚ್ಚಗಳನ್ನು ಭರಿಸಲು ಅಥವಾ ಈ ಅಧಿನಿಯಮದ ಮೂಲಕ ಅಧಿಕೃತಗೊಳಿಸಿದ ಉದ್ದೇಶಗಳಿಗಾಗಿ ಪ್ರಾಧಿಕಾರವು ಸೂಕ್ತವೆಂದು ಭಾವಿಸಬಹುದಾದಂಥ ಮೊತ್ತವನ್ನು ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು ಖರ್ಚು ಮಾಡಲು ಅದು ಅಧಿಕಾರ ಹೊಂದಿರತಕ್ಕದ್ದು ಮತ್ತು ಅಂಥ ಮೊತ್ತಗಳನ್ನು ಪ್ರಾಧಿಕಾರದ ನಿಧಿಯಿಂದ ಮಾಡಿದ ವೆಚ್ಚವೆಂದು ಪರಿಗಣಿಸತಕ್ಕದ್ದು.

(3) ಉಪಪ್ರಕರಣ (2)ರಲ್ಲಿ ಉಪಬಂಧಿಸಿರುವಂತೆ ಕೂಡಲೇ ವಿನಿಯೋಗಿಸಲು ಆಗದಂಥ ಪ್ರಾಧಿಕಾರದ ಲೆಕ್ಕದಲ್ಲಿರುವ ಎಲ್ಲಾ ಹಣವನ್ನು–

(ಎ) ಕೇಂದ್ರ ಸರ್ಕಾರವು ಕಾಲಕಾಲಕ್ಕೆ ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳಿಗೊಳಪಟ್ಟು, ಭಾರತೀಯ ಸ್ಟೇಟ್ ಬ್ಯಾಂಕಿನಲ್ಲಿ ಅಥವಾ ಯಾವುದೇ ಅಂಥ ಷೆಡ್ಯೂಲ್ಡ್ ಬ್ಯಾಂಕಿನಲ್ಲಿ ಅಥವಾ ಬ್ಯಾಂಕುಗಳಲ್ಲಿ ಅಥವಾ ಇತರ ಸಾರ್ವಜನಿಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿ ಇಡತಕ್ಕದ್ದು;

(ಬಿ) ಕೇಂದ್ರ ಸರ್ಕಾರದ ಭದ್ರತಾ ಪತ್ರಗಳಲ್ಲಿ ಅಥವಾ ನಿಯಮಿಸಬಹುದಾದಂಥ ರೀತಿಯಲ್ಲಿ ಹೂಡತಕ್ಕದ್ದು.

ವಿವರಣೆ.– ಈ ಉಪಪ್ರಕರಣದಲ್ಲಿ, **"ಷೆಡ್ಯೂಲ್ಡ್ ಬ್ಯಾಂಕ್"** ಪದವು ಭಾರತೀಯ ರಿಸರ್ವ್ ಬ್ಯಾಂಕ್ ಅಧಿನಿಯಮ, 1934 (1934 ರ 2)ರ 2ನೇ ಪ್ರಕರಣದ (ಇ) ಖಂಡದಲ್ಲಿ ಅದಕ್ಕಿರುವ ಅರ್ಥವನ್ನೇ ಹೊಂದಿರತಕ್ಕದ್ದು.

**22. ಹೆಚ್ಚುವರಿ ನಿಧಿಗಳ ಹಂಚಿಕೆ.–** (1) ಪ್ರಾಧಿಕಾರವು, ಯಾವುದೇ ಸಂಯೋಜಿತ ತನಿಖಾ ಠಾಣೆಯಲ್ಲಿ ಹಾಲಿ ಇರುವ ಸೌಲಭ್ಯಗಳನ್ನು ಅಥವಾ ಸೇವೆಗಳನ್ನು ವಿಸ್ತರಿಸುವ ಅಥವಾ ಹೊಸ ಸೌಲಭ್ಯಗಳನ್ನು ಮತ್ತು ಸೇವೆಗಳನ್ನು ಸೃಜಿಸುವ ಉದ್ದೇಶಕ್ಕಾಗಿ ಅಥವಾ ಅಲ್ಪಕಾಲೀನ ಕಾರಣಗಳಿಂದಾಗಿ ವೆಚ್ಚದಲ್ಲಿ ಉಂಟಾಗುವ ಹೆಚ್ಚಳಕ್ಕಾಗಿ ಅಥವಾ ಬದಲಾಯಿಸುವ ಅಥವಾ ಯಾವುದೇ ನೈಸರ್ಗಿಕ ವಿಕೋಪದಿಂದಾಗಿ ಅಥವಾ ಅವಘಡದಿಂದಾಗಿ ಆದ ನಷ್ಟದಿಂದ ಅಥವಾ ಹಾನಿಯಿಂದ ಉಂಟಾದ ವೆಚ್ಚವನ್ನು ಅಥವಾ ಪುನಃ ಭರಿಸುವ ಅಥವಾ ಉದ್ದೇಶಕ್ಕಾಗಿ ಈ ಅಧಿನಿಯಮದ ಮೇರೆಗೆ ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವಾಗ ಆದ ಯಾವುದೇ ಲೋಪ ದೋಷಗಳ ಕಾರಣದಿಂದಾಗಿ ಉಂಟಾದ ಯಾವುದೇ ಹೊಣೆಗಾರಿಕೆಯನ್ನು ಈಡೇರಿಸುವ ಉದ್ದೇಶಗಳಿಗಾಗಿ ಕಾಲಕಾಲಕ್ಕೆ ಸೂಕ್ತವೆಂದು ತಾನು ಭಾವಿಸಬಹುದಾದಂಥ ಮೊಬಲಗುಗಳನ್ನು ಮೀಸಲು ನಿಧಿಯಾಗಿ ಅಥವಾ ನಿಧಿಗಳಾಗಿ ಪ್ರತ್ಯೇಕವಾಗಿ ಇಡತಕ್ಕದ್ದು:

ಪರಂತು, ಪ್ರಾಧಿಕಾರವು ನಿರ್ದಿಷ್ಟ ಉದ್ದೇಶಗಳಿಗಾಗಿ, ನಿರ್ದಿಷ್ಟ ಮೀಸಲು ನಿಧಿಗಳನ್ನು ಸ್ಥಾಪಿಸಲು ಸಹ ಅಧಿಕಾರವನ್ನೂ ಹೊಂದಿರತಕ್ಕದ್ದು:

ಮತ್ತೂ ಪರಂತು, ಪ್ರತಿಯೊಂದು ನಿಧಿಯ ಅಥವಾ ಯಾವುದೇ ನಿರ್ದಿಷ್ಟ ಮತ್ತು ಸಾಮಾನ್ಯ ಮೀಸಲು ನಿಧಿಗಳ ಸಂಬಂಧದಲ್ಲಿ ಪ್ರತಿಯೊಂದು ವರ್ಷದಲ್ಲಿ ತೆಗೆದಿಟ್ಟ ಮೊತ್ತಗಳು ಮತ್ತು ಯಾವುದೇ ಕಾಲದಲ್ಲಿ ಅಂಥ ಮೊತ್ತಗಳ ಸರಾಸರಿಯು ಕೇಂದ್ರ ಸರ್ಕಾರವು ಕಾಲಕಾಲಕ್ಕೆ ಈ ಬಗ್ಗೆ ನಿಗದಿಪಡಿಸಬಹುದಾದಂಥ ಮಿತಿಗಳಿಗಿಂತ ಹೆಚ್ಚಾಗಿರತಕ್ಕದ್ದಲ್ಲ.

(2) ಅಂಥ ಮೀಸಲು ನಿಧಿಗೆ ಮತ್ತು ನಿಧಿಗಳಿಗೆ ಮತ್ತು ವಸೂಲಾಗದ ಹಾಗೂ ವಸೂಲಾಗುವುದು ಸಂದೇಹಾಸ್ಪದವಾದ ಸಾಲಗಳಿಗೆ, ಆಸ್ತಿಗಳಲ್ಲಿನ ಸವಕಳಿಗೆ ಮತ್ತು 1956 (1956 ರ 1) ರ ಕಂಪನಿಗಳ ಅಧಿನಿಯಮದ ಮೇರೆಗೆ ನೋಂದಾಯಿತವಾದ ಮತ್ತು ನಿಗಮಿತವಾದ ಕಂಪನಿಗಳು ಸಾಮಾನ್ಯವಾಗಿ ಉಪಬಂಧ ಕಲ್ಪಿಸುವಂಥ ಎಲ್ಲಾ ಇತರ ವಿಷಯಗಳಿಗೆ ಅವಕಾಶ ಕಲ್ಪಿಸಿದ ತರುವಾಯ, ಪ್ರಾಧಿಕಾರವು ತನ್ನ ವರ್ಷದ ನಿವ್ವಳ ಲಾಭದಲ್ಲಿ ಉಳಿಯುವ ಹಣವನ್ನು ಕೇಂದ್ರ ಸರ್ಕಾರಕ್ಕೆ ಸಂದಾಯ ಮಾಡತಕ್ಕದ್ದು.

**23. ಕಾರ್ಯಚಟುವಟಿಕೆಗಳ ಸೂಚಿಯನ್ನು ಮತ್ತು ಹಣಕಾಸಿನ ಅಂದಾಜುಗಳನ್ನು ಸಲ್ಲಿಸುವುದು.–** ಪ್ರಾಧಿಕಾರವು ಪ್ರತಿಯೊಂದು ಹಣಕಾಸು ವರ್ಷ ಪ್ರಾರಂಭವಾಗುವುದಕ್ಕೆ ಮೊದಲು ಮುಂಬರುವ ಹಣಕಾಸು ವರ್ಷದಲ್ಲಿ ಅದು ಕೈಗೊಳ್ಳಲಿರುವ ಕಾರ್ಯಚಟುವಟಿಕೆಗಳ ಸೂಚಿಯನ್ನು ಹಾಗೂ ಅದಕ್ಕೆ ಸಂಬಂಧಿಸಿದ ಹಣಕಾಸಿನ ಅಂದಾಜಿನ ವಿವರ ಪಟ್ಟಿಯನ್ನು ಸಿದ್ಧಪಡಿಸತಕ್ಕದ್ದು ಮತ್ತು ಅದನ್ನು ಕೇಂದ್ರ ಸರ್ಕಾರದ ಅನುಮೋದನೆಗಾಗಿ ಸಲ್ಲಿಸತಕ್ಕದ್ದು.

**24. ಸಾಲ ಪಡೆಯಲು ಪ್ರಾಧಿಕಾರಕ್ಕೆ ಇರುವ ಅಧಿಕಾರಗಳು.–** (1) ಪ್ರಾಧಿಕಾರವು ಈ ಅಧಿನಿಯಮದ ಮೇರೆಗೆ ಅದರ ಎಲ್ಲಾ ಅಥವಾ ಯಾವುವೇ ಪ್ರಕಾರ್ಯಗಳನ್ನು ನಿರ್ವಹಿಸುವುದಕ್ಕಾಗಿ ಕೇಂದ್ರ ಸರ್ಕಾರದ ಸಮ್ಮತಿಯೊಂದಿಗೆ ಅಥವಾ ಕೇಂದ್ರ ಸರ್ಕಾರವು ಅದಕ್ಕೆ ನೀಡಿದ ಯಾವುದೇ ಸಾಮಾನ್ಯ ಅಥವಾ ವಿಶೇಷ ಪ್ರಾಧಿಕಾರದ ನಿಬಂಧನೆಗಳಿಗನುಸಾರವಾಗಿ, ಬಾಂಡ್‌ಗಳನ್ನು, ಡಿಬೆಂಚರುಗಳನ್ನು ಅಥವಾ ಸೂಕ್ತವೆಂದು ತಾನು ಭಾವಿಸಬಹುದಾದಂಥ ಇತರ ಲಿಖಿತ ಪತ್ರಗಳನ್ನು ನೀಡುವ ಮೂಲಕ ಯಾವುದೇ ಮೂಲದಿಂದ ಹಣವನ್ನು ಸಾಲವಾಗಿ ಪಡೆಯಬಹುದು.

(2) ಉಪಪ್ರಕರಣ (1)ರ ಮೇರೆಗೆ ಪ್ರಾಧಿಕಾರವು ತೆಗೆದುಕೊಂಡ ಸಾಲಗಳ ಸಂಬಂಧದಲ್ಲಿ ಕೇಂದ್ರ ಸರ್ಕಾರವು ಅಸಲಿನ ಮರುಸಂದಾಯಕ್ಕೆ ಮತ್ತು ಅದರ ಮೇಲಿನ ಬಡ್ಡಿಯ ಸಂದಾಯಕ್ಕೆ ಸಂಬಂಧಿಸಿದಂತೆ ಅದು ಸೂಕ್ತವೆಂದು ಭಾವಿಸಬಹುದಾದಂತಹ ರೀತಿಯಲ್ಲಿ ಖಾತರಿಯನ್ನು ಕೊಡಬಹುದು.

(3) ಕೇಂದ್ರ ಸರ್ಕಾರವು ಕಾಲಕಾಲಕ್ಕೆ ವಿಧಿಸಬಹುದಾದಂಥ ಪರಿಮಿತಿಗೊಳಪಟ್ಟು ಪ್ರಾಧಿಕಾರವು, ಈ ಅಧಿನಿಯಮದ ಮೇರೆಗೆ ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವ ಸಲುವಾಗಿ ಅಗತ್ಯವಾಗಬಹುದಾದಷ್ಟು ಮೊತ್ತವನ್ನು ಓವರ್‌ಡ್ರಾಫ್ಟ್ ರೂಪದಲ್ಲಿ ಅಥವಾ ಬೇರೆ ರೀತಿಯಲ್ಲಿ ತಾತ್ಕಾಲಿಕವಾಗಿ ಸಾಲವಾಗಿ ಪಡೆಯಬಹುದು.

**25. ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ.–** (1) ಪ್ರಾಧಿಕಾರವು, ಭಾರತದ ಲೆಕ್ಕ ನಿಯಂತ್ರಕ ಹಾಗೂ ಮಹಾಲೆಕ್ಕಪರಿಶೋಧಕನೊಂದಿಗೆ ಸಮಾಲೋಚಿಸಿ ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ನಮೂನೆಯಲ್ಲಿ ಸಮರ್ಪಕವಾದ ಲೆಕ್ಕಪತ್ರಗಳನ್ನು ಮತ್ತು ಇತರ ಸುಸಂಗತ ದಾಖಲೆಗಳನ್ನು ಇಡತಕ್ಕದ್ದು ಮತ್ತು ಲಾಭ ಮತ್ತು ನಷ್ಟದ ಲೆಕ್ಕ ಹಾಗೂ ಜಮಾ ಖರ್ಚು ಪಟ್ಟಿಯೂ ಸೇರಿದಂತೆ ಲೆಕ್ಕಪತ್ರಗಳ ವಾರ್ಷಿಕ ವಿವರಣಾ ಪಟ್ಟಿಯನ್ನು ಸಿದ್ಧಪಡಿಸತಕ್ಕದ್ದು.

(2) ಪ್ರಾಧಿಕಾರದ ಲೆಕ್ಕಪತ್ರಗಳನ್ನು ಭಾರತದ ಲೆಕ್ಕನಿಯಂತ್ರಕ ಹಾಗೂ ಮಹಾಲೆಕ್ಕಪರಿಶೋಧಕನು ಪ್ರತಿವರ್ಷ ಲೆಕ್ಕಪರಿಶೋಧನೆ ಮಾಡತಕ್ಕದ್ದು ಮತ್ತು ಅಂಥ ಲೆಕ್ಕಪರಿಶೋಧನೆಯ ಸಂಬಂಧದಲ್ಲಿ ಆತ ಮಾಡಿದ ಯಾವುದೇ ವೆಚ್ಚವನ್ನು ಪ್ರಾಧಿಕಾರವು ಆತನಿಗೆ ತುಂಬಿಕೊಡತಕ್ಕದ್ದು.

(3) ಭಾರತದ ಲೆಕ್ಕ ನಿಯಂತ್ರಕ ಹಾಗೂ ಮಹಾಲೆಕ್ಕಪರಿಶೋಧಕನು ಅಥವಾ ಪ್ರಾಧಿಕಾರದ ಲೆಕ್ಕಪತ್ರಗಳ ಲೆಕ್ಕ ಪರಿಶೋಧನೆಯ ಸಂಬಂಧದಲ್ಲಿ ಆತನಿಂದ ನೇಮಕಗೊಂಡ ಯಾರೇ ವ್ಯಕ್ತಿಯು ಅಂಥ ಲೆಕ್ಕ ಪರಿಶೋಧನೆಯ ಸಂಬಂಧದಲ್ಲಿ, ಸರ್ಕಾರದ ಲೆಕ್ಕಪತ್ರಗಳ ಲೆಕ್ಕಪರಿಶೋಧನೆಯ ಸಂಬಂಧದಲ್ಲಿ ಲೆಕ್ಕ ನಿಯಂತ್ರಕ ಹಾಗೂ ಮಹಾಲೆಕ್ಕಪರಿಶೋಧಕನು ಹೊಂದಿರುವಂತಹದೇ ಹಕ್ಕುಗಳನ್ನು ಮತ್ತು ವಿಶೇಷಾಧಿಕಾರಗಳನ್ನು ಮತ್ತು ಅಧಿಕಾರವನ್ನು ಹೊಂದಿರತಕ್ಕದ್ದು ಮತ್ತು ಅದರಲ್ಲೂ ಮುಖ್ಯವಾಗಿ, ಪುಸ್ತಕಗಳನ್ನು, ಲೆಕ್ಕಪತ್ರಗಳನ್ನು, ಸಂಬಂಧಪಟ್ಟ ವೋಚರುಗಳನ್ನು, ದಸ್ತಾವೇಜುಗಳನ್ನು ಮತ್ತು ಕಾಗದ ಪತ್ರಗಳನ್ನು ಹಾಜರುಪಡಿಸುವಂತೆ ಕೇಳುವ ಮತ್ತು ಪ್ರಾಧಿಕಾರದ ಯಾವುದೇ ಕಚೇರಿಗಳನ್ನು ತಪಾಸಣೆ ಮಾಡುವ ಹಕ್ಕನ್ನು ಹೊಂದಿರತಕ್ಕದ್ದು.

(4) ಭಾರತದ ಲೆಕ್ಕನಿಯಂತ್ರಕ ಹಾಗೂ ಮಹಾಲೆಕ್ಕಪರಿಶೋಧಕನು ಅಥವಾ ಈ ಬಗ್ಗೆ ಆತನಿಂದ ನೇಮಕಗೊಂಡ ಯಾರೇ ಇತರ ವ್ಯಕ್ತಿಯು ಪ್ರಮಾಣೀಕರಿಸಿದ ಪ್ರಾಧಿಕಾರದ ಲೆಕ್ಕಪತ್ರಗಳನ್ನು ಅವುಗಳ ಮೇಲಿನ ಲೆಕ್ಕಪರಿಶೋಧನಾ ವರದಿಯೊಂದಿಗೆ ಪ್ರತಿವರ್ಷ ಕೇಂದ್ರ ಸರ್ಕಾರಕ್ಕೆ ಕಳುಹಿಸತಕ್ಕದ್ದು ಮತ್ತು ಕೇಂದ್ರ ಸರ್ಕಾರವು ಅವುಗಳನ್ನು ಸಂಸತ್‌ನ ಎರಡೂ ಸದನಗಳ ಮುಂದೆ ಇರಿಸತಕ್ಕದ್ದು.

## ಅಧ್ಯಾಯ VI

### ಸಂಕೀರ್ಣ

**26. ವಾರ್ಷಿಕ ವರದಿಯನ್ನು ಸಲ್ಲಿಸುವುದು.–** (1) ಪ್ರಾಧಿಕಾರವು ಪ್ರತಿ ಹಣಕಾಸು ವರ್ಷವು ಮುಕ್ತಾಯವಾದ ತರುವಾಯ ಸಾಧ್ಯವಾದಷ್ಟು ಬೇಗನೆ, ಆ ಹಣಕಾಸು ವರ್ಷದಲ್ಲಿ ಅದು ಕೈಗೊಂಡ ಕಾರ್ಯಚಟುವಟಿಕೆಗಳ ವಿವರವನ್ನು ನೀಡುವ ವರದಿಯನ್ನು ನಿಯಮಿಸಬಹುದಾದಂಥ ನಮೂನೆಯಲ್ಲಿ ಸಿದ್ಧಪಡಿಸತಕ್ಕದ್ದು ಮತ್ತು ಅದನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸತಕ್ಕದ್ದು ಮತ್ತು ಮುಂದಿನ ಹಣಕಾಸು ವರ್ಷದಲ್ಲಿ ಪ್ರಾಧಿಕಾರವು ಕೈಗೊಳ್ಳುವ ಸಂಭವವಿರುವ ಕಾರ್ಯಚಟುವಟಿಕೆಗಳ ವಿವರವನ್ನು ಸಹ ಆ ವರದಿಯಲ್ಲಿ ನೀಡಿರತಕ್ಕದ್ದು.

(2) ಅಂಥ ವರದಿಯನ್ನು ಸಲ್ಲಿಸಿದ ತರುವಾಯ ಕೇಂದ್ರ ಸರ್ಕಾರವು ಸಾಧ್ಯವಾದಷ್ಟು ಬೇಗನೆ ಸಂಸತ್ತಿನ ಎರಡೂ ಸದನಗಳ ಮುಂದೆ ಅದನ್ನು ಇರಿಸತಕ್ಕದ್ದು.

**27. ಅಧಿಕಾರವನ್ನು ವಹಿಸಿಕೊಡುವುದು.–** ಪ್ರಾಧಿಕಾರವು, ಸಾಮಾನ್ಯ ಅಥವಾ ವಿಶೇಷ ಲಿಖಿತ ಆದೇಶದ ಮೂಲಕ, ಆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂತಹ ಷರತ್ತುಗಳು ಮತ್ತು ಪರಿಮಿತಿಗಳು ಏನಾದರೂ ಇದ್ದರೆ, ಅವುಗಳಿಗೆ ಒಳಪಟ್ಟು ಅದು ಅವಶ್ಯವೆಂದು ಭಾವಿಸಬಹುದಾದಂಥ ಈ ಅಧಿನಿಯಮದ ಮೇರೆಗಿನ ತನ್ನ ಅಧಿಕಾರಗಳನ್ನು ಮತ್ತು ಪ್ರಕಾರ್ಯಗಳನ್ನು (35ನೇ ಪ್ರಕರಣದ ಮೇರೆಗಿನ ಅಧಿಕಾರಗಳನ್ನು ಹೊರತುಪಡಿಸಿ) ಪ್ರಾಧಿಕಾರದ ಅಧ್ಯಕ್ಷನಿಗೆ ಅಥವಾ ಯಾರೇ ಇತರ ಸದಸ್ಯನಿಗೆ ಅಥವಾ ಯಾರೇ ಅಧಿಕಾರಿಗೆ ವಹಿಸಿಕೊಡಬಹುದು.

**28. ಪ್ರಾಧಿಕಾರದ ಆದೇಶಗಳನ್ನು ಮತ್ತು ಇತರ ಲಿಖಿತಪತ್ರಗಳನ್ನು ಅಧಿಪ್ರಮಾಣೀಕರಿಸುವುದು.–** ಪ್ರಾಧಿಕಾರದ ಎಲ್ಲಾ ಆದೇಶಗಳನ್ನು ಮತ್ತು ನಿರ್ಣಯಗಳನ್ನು ಪ್ರಾಧಿಕಾರದ ಅಧ್ಯಕ್ಷನು ಅಥವಾ ಅಧಿಪ್ರಮಾಣೀಕರಿಸುವ ಉದ್ದೇಶಕ್ಕಾಗಿ ಪ್ರಾಧಿಕಾರವು ಅಧಿಕೃತಗೊಳಿಸಿದ ಇತರ ಯಾರೇ ಸದಸ್ಯನು ಸಹಿ ಮಾಡಿ ಅಧಿಪ್ರಮಾಣೀಕರಿಸತಕ್ಕದ್ದು ಮತ್ತು ಪ್ರಾಧಿಕಾರವು ಬರೆದುಕೊಟ್ಟ ಎಲ್ಲಾ ಇತರ ಲಿಖಿತ ಪತ್ರಗಳನ್ನು ಅಧಿಪ್ರಮಾಣೀಕರಿಸುವುದಕ್ಕಾಗಿ ಪ್ರಾಧಿಕಾರವು ಅಧಿಕೃತಗೊಳಿಸಿದ ಪ್ರಾಧಿಕಾರದ ಅಧಿಕಾರಿಯು ಸಹಿ ಮಾಡಿ ಅಧಿಪ್ರಮಾಣೀಕರಿಸತಕ್ಕದ್ದು.

**29. ಪ್ರಾಧಿಕಾರದ ಅಧಿಕಾರಿಗಳು ಮತ್ತು ನೌಕರರು ಲೋಕನೌಕರರಾಗಿರುವುದು.–** ಪ್ರಾಧಿಕಾರದ ಎಲ್ಲ ಅಧಿಕಾರಿಗಳು ಮತ್ತು ನೌಕರರು ಈ ಅಧಿನಿಯಮದ ಉಪಬಂಧಗಳಿಗೆ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮಕ್ಕೆ ಅಥವಾ ವಿನಿಯಮಕ್ಕೆ ಅನುಸಾರವಾಗಿ ಕಾರ್ಯನಿರ್ವಹಿಸುವಾಗ ಅಥವಾ ಕಾರ್ಯನಿರ್ವಹಿಸುತ್ತಿರುವರೆಂದು ತಾತ್ಪರ್ಯವಾಗುವಾಗ ಅವರನ್ನು ಭಾರತ ದಂಡ ಸಂಹಿತೆ (1860 ರ 45)ಯ 21ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಲೋಕನೌಕರರೆಂದು ಭಾವಿಸತಕ್ಕದ್ದು.

**30. ಸದ್ಭಾವನೆಯಿಂದ ಕೈಗೊಂಡ ಕ್ರಮಕ್ಕೆ ರಕ್ಷಣೆ.–** ಈ ಅಧಿನಿಯಮಕ್ಕೆ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮಕ್ಕೆ ಅಥವಾ ವಿನಿಯಮಕ್ಕೆ ಅನುಸಾರವಾಗಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯಕ್ಕಾಗಿ ಪ್ರಾಧಿಕಾರದ ಅಥವಾ ಪ್ರಾಧಿಕಾರದ ಯಾರೇ ಸದಸ್ಯನ ಅಥವಾ ಯಾರೇ ಅಧಿಕಾರಿಯ ಅಥವಾ ಇತರ ನೌಕರನ ವಿರುದ್ಧ ಯಾವುದೇ ದಾವೆಯನ್ನು, ಪ್ರಾಸಿಕ್ಯೂಷನನ್ನು ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡಲು ಅವಕಾಶವಿರತಕ್ಕದ್ದಲ್ಲ.

**31. ಕಾಣೆಯಾಗಿದ್ದು ನಂತರ ಕಂಡುಬಂದ ಸ್ವತ್ತಿನ ಅಭಿರಕ್ಷೆ ಮತ್ತು ವಿಲೆ.–** ಪ್ರಾಧಿಕಾರವು, ಕಾಣೆಯಾದ ಯಾವ ಸ್ವತ್ತು ಪ್ರಾಧಿಕಾರಕ್ಕೆ ಸೇರಿದ ಅಥವಾ ಅದರ ಒಟ್ಟಾರೆ ನಿಯಂತ್ರಣದಲ್ಲಿರುವ ಯಾವುದೇ ಆವರಣದಲ್ಲಿ ಕಂಡುಬರುವುದೋ ಆ ಯಾವುದೇ ಸ್ವತ್ತಿಗೆ, ಅದರ ಅಭಿರಕ್ಷೆ ಮತ್ತು ವಿಲೆ ಉದ್ದೇಶಕ್ಕಾಗಿ ರಚಿಸಬಹುದಾದಂಥ ವಿನಿಯಮಗಳಿಗೆ ಒಳಪಟ್ಟು ಸುರಕ್ಷಿತ ಅಭಿರಕ್ಷೆಯನ್ನು ಒದಗಿಸತಕ್ಕದ್ದು ಮತ್ತು ಅದನ್ನು ಹಿಂದುರಿಗಿಸತಕ್ಕದ್ದು.

**32. ಪ್ರಾಧಿಕಾರವನ್ನು ರದ್ದುಗೊಳಿಸಲು ಕೇಂದ್ರ ಸರ್ಕಾರದ ಅಧಿಕಾರ.–** (1) ಕೇಂದ್ರ ಸರ್ಕಾರವು, ಯಾವುದೇ ಕಾಲದಲ್ಲಿ–

(ಎ) ಈ ಅಧಿನಿಯಮದ ಉಪಬಂಧಗಳ ಮೂಲಕ ಅಥವಾ ಮೇರೆಗೆ ಪ್ರಾಧಿಕಾರಕ್ಕೆ ವಿಧಿಸಿರುವ ಪ್ರಕಾರ್ಯಗಳನ್ನು ಮತ್ತು ಕರ್ತವ್ಯಗಳನ್ನು, ತೀವ್ರ ತುರ್ತು ಪರಿಸ್ಥಿತಿಯ ಕಾರಣದಿಂದಾಗಿ ನಿರ್ವಹಿಸಲು ಅದಕ್ಕೆ ಸಾಧ್ಯವಾಗಿಲ್ಲವೆಂದು; ಅಥವಾ

(ಬಿ) ಪ್ರಾಧಿಕಾರವು ಈ ಅಧಿನಿಯಮದ ಮೇರೆಗೆ ಕೇಂದ್ರ ಸರ್ಕಾರವು ನೀಡಿದ ಯಾವುದೇ ನಿರ್ದೇಶನವನ್ನು ಪಾಲಿಸುವಾಗ ಅಥವಾ ಈ ಅಧಿನಿಯಮದ ಉಪಬಂಧಗಳ ಮೂಲಕ ಅಥವಾ ಮೇರೆಗೆ ತನಗೆ ವಹಿಸಿದ ಪ್ರಕಾರ್ಯಗಳನ್ನು ಮತ್ತು ಕರ್ತವ್ಯಗಳನ್ನು ನಿರ್ವಹಿಸುವಾಗ ಪ್ರಾಧಿಕಾರವು ಸತತವಾಗಿ ತಪ್ಪಿದೆಯೆಂದು ಮತ್ತು ಹಾಗೆ ತಪ್ಪಿದ ಪರಿಣಾಮವಾಗಿ ಪ್ರಾಧಿಕಾರದ ಹಣಕಾಸು ಪರಿಸ್ಥಿತಿಯು ಅಥವಾ ಸಂಯೋಜಿತ ತನಿಖಾ ಠಾಣೆಯ ಆಡಳಿತವು ಕ್ಷೀಣಿಸಿದೆಯೆಂದು; ಅಥವಾ

(ಸಿ) ಸಾರ್ವಜನಿಕ ಹಿತದೃಷ್ಟಿಯಿಂದ ಪ್ರಾಧಿಕಾರವನ್ನು ರದ್ದುಪಡಿಸುವುದನ್ನು ಅವಶ್ಯಕವಾಗಿಸುವಂಥ ಸಂದರ್ಭ ಸನ್ನಿವೇಶಗಳು ಇವೆ ಎಂದು

– ಅಭಿಪ್ರಾಯಪಟ್ಟರೆ, ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಅಂಥ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ಆರು ತಿಂಗಳಿಗೆ ಮೀರದಂಥ ಅವಧಿಯವರೆಗೆ ಪ್ರಾಧಿಕಾರವನ್ನು ರದ್ದುಪಡಿಸಬಹುದು:

ಪರಂತು, (ಬಿ) ಖಂಡದಲ್ಲಿ ತಿಳಿಸಿದ ಕಾರಣಗಳಿಗಾಗಿ, ಈ ಉಪಪ್ರಕರಣದ ಮೇರೆಗೆ ಅಧಿಸೂಚನೆಯನ್ನು ಹೊರಡಿಸುವುದಕ್ಕೆ ಮೊದಲು, ಕೇಂದ್ರ ಸರ್ಕಾರವು ಪ್ರಾಧಿಕಾರವನ್ನು ಏಕೆ ರದ್ದುಗೊಳಿಸಬಾರದು ಎಂಬುದಕ್ಕೆ ಕಾರಣ ತೋರಿಸಲು ಪ್ರಾಧಿಕಾರಕ್ಕೆ ಸೂಕ್ತ ಅವಕಾಶವನ್ನು ನೀಡತಕ್ಕದ್ದು ಮತ್ತು ಪ್ರಾಧಿಕಾರವು ಈ ಬಗ್ಗೆ ಯಾವುದಾದರೂ ವಿವರಣೆಗಳನ್ನು ಮತ್ತು ಆಕ್ಷೇಪಣೆಗಳನ್ನು ನೀಡಿದರೆ ಅವುಗಳನ್ನು ಪರಿಶೀಲಿಸತಕ್ಕದ್ದು.

(2) ಉಪಪ್ರಕರಣ (1)ರ ಮೇರೆಗೆ ಪ್ರಾಧಿಕಾರವನ್ನು ರದ್ದುಪಡಿಸಿದ ಅಧಿಸೂಚನೆಯನ್ನು ಪ್ರಕಟಿಸಿದ ನಂತರ,–

(ಎ) ಹಾಗೆ ರದ್ದುಪಡಿಸಿದ ದಿನಾಂಕದಿಂದ ಎಲ್ಲಾ ಸದಸ್ಯರು ತಮ್ಮ ಪದಗಳನ್ನು ತೆರವು ಮಾಡತಕ್ಕದ್ದು;

(ಬಿ) ಈ ಅಧಿನಿಯಮದ ಉಪಬಂಧಗಳ ಮೂಲಕ ಅಥವಾ ಮೇರೆಗೆ ಪ್ರಾಧಿಕಾರವು ಅಥವಾ ಅದರ ಪರವಾಗಿ ಚಲಾಯಿಸಬಹುದಾದ ಎಲ್ಲಾ ಅಧಿಕಾರಗಳನ್ನು ಅಥವಾ ನಿರ್ವಹಿಸಬಹುದಾದ ಎಲ್ಲ ಪ್ರಕಾರ್ಯಗಳನ್ನು ಮತ್ತು ಕರ್ತವ್ಯಗಳನ್ನು (3)ನೇ ಉಪಪ್ರಕರಣದ ಮೇರೆಗೆ ಪ್ರಾಧಿಕಾರವನ್ನು ಪುನರ್‌ರಚಿಸುವವರೆಗೆ, ಕೇಂದ್ರ ಸರ್ಕಾರವು ನಿರ್ದೇಶಿಸಬಹುದಾದಂಥ ವ್ಯಕ್ತಿಯು ಅಥವಾ ವ್ಯಕ್ತಿಗಳು ಚಲಾಯಿಸತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು; ಮತ್ತು

(ಸಿ) ಪ್ರಾಧಿಕಾರದ ಒಡೆತನದಲ್ಲಿರುವ ಅಥವಾ ಅದರ ನಿಯಂತ್ರಣದಲ್ಲಿರುವ ಎಲ್ಲಾ ಸ್ವತ್ತು (3)ನೇ ಉಪಪ್ರಕರಣದ ಮೇರೆಗೆ ಪ್ರಾಧಿಕಾರವನ್ನು ಪುನರ್‌ರಚಿಸುವವರೆಗೆ ಕೇಂದ್ರ ಸರ್ಕಾರದಲ್ಲಿ ನಿಹಿತವಾಗಿರತಕ್ಕದ್ದು.

(3) ಉಪಪ್ರಕರಣ (1)ರ ಮೇರೆಗೆ ಹೊರಡಿಸಿದ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿದ ರದ್ದಿಯಾತಿಯ ಅವಧಿಯು ಮುಕ್ತಾಯವಾದ ಮೇಲೆ ಕೇಂದ್ರ ಸರ್ಕಾರವು,–

(ಎ) ರದ್ದಿಯಾತಿಯ ಅವಧಿಯನ್ನು ತಾನು ಅಗತ್ಯವೆಂದು ಪರಿಗಣಿಸುವಂತೆ ಆರು ತಿಂಗಳಿಗೆ ಮೀರದಂಥ ಹೆಚ್ಚಿನ ಅವಧಿಯವರೆಗೆ ವಿಸ್ತರಿಸಬಹುದು; ಅಥವಾ

(ಬಿ) ಹೊಸದಾಗಿ ನೇಮಕ ಮಾಡುವ ಮೂಲಕ ಪ್ರಾಧಿಕಾರವನ್ನು ಪುನರ್ ರಚಿಸಬಹುದು ಮತ್ತು ಅಂಥ ಸಂದರ್ಭದಲ್ಲಿ (2)ನೇ ಉಪಪ್ರಕರಣದ (ಎ) ಖಂಡದ ಮೇರೆಗೆ ತಮ್ಮ ಪದಗಳನ್ನು ತೆರವು ಮಾಡಿದಂಥ ಸದಸ್ಯರನ್ನು ನೇಮಕಕ್ಕೆ ಅನರ್ಹರೆಂದು ಭಾವಿಸತಕ್ಕದ್ದಲ್ಲ:

ಪರಂತು, ಕೇಂದ್ರ ಸರ್ಕಾರವು, (1)ನೇ ಉಪಪ್ರಕರಣದ ಮೇರೆಗೆ ಮೂಲತಃ ನಿರ್ದಿಷ್ಟಪಡಿಸಿದಂಥ ಅಥವಾ ಈ ಉಪಪ್ರಕರಣದ ಮೇರೆಗೆ ವಿಸ್ತರಿಸಿದಂಥ ರದ್ದಿಯಾತಿಯ ಅವಧಿಯು ಮುಕ್ತಾಯವಾಗುವುದಕ್ಕೆ ಮೊದಲು ಯಾವುದೇ ಕಾಲದಲ್ಲಿ ಈ ಉಪಪ್ರಕರಣದ (ಬಿ) ಖಂಡದ ಮೇರೆಗೆ ಕ್ರಮ ಕೈಗೊಳ್ಳಬಹುದು.

(4) ಕೇಂದ್ರ ಸರ್ಕಾರವು (1)ನೇ ಉಪಪ್ರಕರಣದ ಮೇರೆಗೆ ಅಧಿಸೂಚನೆಯನ್ನು ಹೊರಡಿಸುವಂತೆ ಮಾಡತಕ್ಕದ್ದು ಮತ್ತು ಈ ಪ್ರಕರಣದ ಮೇರೆಗೆ ತೆಗೆದುಕೊಂಡ ಯಾವುದೇ ಕ್ರಮದ ಮತ್ತು ಅಂಥ ಕ್ರಮ ಕೈಗೊಳ್ಳಲು

ಕಾರಣವಾದ ಸಂದರ್ಭ ಸನ್ನಿವೇಶಗಳ ಪೂರ್ಣ ವರದಿಯನ್ನು ಸಂಸತ್ತಿನ ಎರಡೂ ಸದನಗಳ ಮುಂದೆ ಸಂಸತ್ತಿನ ನಿಕಟ ತರುವಾಯದ ಅಧಿವೇಶನದಲ್ಲಿ ಇರಿಸತಕ್ಕದ್ದು.

**33. ನಿರ್ದೇಶನಗಳನ್ನು ನೀಡಲು ಕೇಂದ್ರ ಸರ್ಕಾರದ ಅಧಿಕಾರ.–** (1) ಈ ಅಧಿನಿಯಮದ ಹಿಂದೆ ಹೇಳಿದ ಉಪಬಂಧಗಳಿಗೆ ಬಾಧಕವಾಗದಂತೆ, ಪ್ರಾಧಿಕಾರವು ಈ ಅಧಿನಿಯಮದ ಮೇರೆಗೆ ತನ್ನ ಪ್ರಕಾರ್ಯಗಳನ್ನು ಮತ್ತು ಕರ್ತವ್ಯಗಳನ್ನು ನಿರ್ವಹಿಸುವಾಗ ಕಾರ್ಯನೀತಿಯ ವಿಷಯಗಳಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರವು ಕಾಲಕಾಲಕ್ಕೆ ಲಿಖಿತದಲ್ಲಿ ತನಗೆ ನೀಡಬಹುದಾದಂಥ ನಿರ್ದೇಶನಗಳಿಗೆ ಬದ್ಧವಾಗಿರತಕ್ಕದ್ದು:

ಪರಂತು, ಈ ಉಪಪ್ರಕರಣದ ಮೇರೆಗೆ ಯಾವುದೇ ನಿರ್ದೇಶನವನ್ನು ನೀಡುವುದಕ್ಕೆ ಮುಂಚೆ ಪ್ರಾಧಿಕಾರಕ್ಕೆ ಅದರ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಕಾರ್ಯಸಾಧ್ಯವಾದಷ್ಟು ಮಟ್ಟಿಗೆ ಅವಕಾಶವನ್ನು ನೀಡತಕ್ಕದ್ದು.

(2) ವಿಷಯವು ಕಾರ್ಯನೀತಿಗೆ ಸಂಬಂಧಿಸಿದೆಯೇ ಅಥವಾ ಇಲ್ಲವೇ ಎಂಬ ಬಗ್ಗೆ ಕೇಂದ್ರ ಸರ್ಕಾರದ ತೀರ್ಮಾನವು ಅಂತಿಮವಾದುದು ಆಗಿರತಕ್ಕದ್ದು.

(3) ಕೇಂದ್ರ ಸರ್ಕಾರವು 11ನೇ ಪ್ರಕರಣದ (2)ನೇ ಉಪಪ್ರಕರಣದ ಖಂಡಗಳ ಮೇರೆಗೆ ಪ್ರಾಧಿಕಾರವು ಯಾವುವೇ ಪ್ರಕಾರ್ಯಗಳನ್ನು ನಿರ್ವಹಿಸುವುದಕ್ಕೆ ಸಂಬಂಧಿಸಿದಂತೆ ಕಾಲಕಾಲಕ್ಕೆ ಪ್ರಾಧಿಕಾರಕ್ಕೆ ನಿರ್ದೇಶನಗಳನ್ನು ನೀಡತಕ್ಕದ್ದು ಮತ್ತು ಪ್ರಾಧಿಕಾರವು ಅಂಥ ನಿರ್ದೇಶನಗಳನ್ನು ಪಾಲಿಸಲು ಬದ್ಧವಾಗಿರತಕ್ಕದ್ದು.

**34. ನಿಯಮಗಳನ್ನು ರಚಿಸಲು ಅಧಿಕಾರ.–** (1) ಕೇಂದ್ರ ಸರ್ಕಾರವು ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ನಿಯಮಗಳನ್ನು ರಚಿಸಬಹುದು.

(2) ಅಂಥ ನಿಯಮಗಳು, ಅದರಲ್ಲೂ ಮುಖ್ಯವಾಗಿ ಮತ್ತು ಹಿಂದೆ ಹೇಳಿದ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ–

(ಎ) (5)ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಪ್ರಾಧಿಕಾರದ ಸದಸ್ಯರ ಪದಾವಧಿ ಮತ್ತು ಸೇವೆಯ ಇತರ ಷರತ್ತುಗಳಿಗೆ;

(ಬಿ) 5ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ತನ್ನ ಪದಕ್ಕೆ ರಾಜೀನಾಮೆ ಸಲ್ಲಿಸಲು ಯಾರೇ ಸದಸ್ಯನು ಕೊಡಬಹುದಾದ ನೋಟೀಸಿನ ಅವಧಿಗೆ;

(ಸಿ) 21ನೇ ಪ್ರಕರಣದ (3)ನೇ ಉಪಪ್ರಕರಣದ (ಬಿ)ಖಂಡದ ಮೇರೆಗೆ ಪ್ರಾಧಿಕಾರವು ನಿಧಿಗಳನ್ನು ಯಾವ ರೀತಿಯಲ್ಲಿ ಹೂಡಬಹುದೋ ಆ ರೀತಿಗೆ;

(ಡಿ) 25ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಪ್ರಾಧಿಕಾರವು ವಾರ್ಷಿಕ ಲೆಕ್ಕಪತ್ರಗಳ ವಿವರಣಾ ಪಟ್ಟಿಯನ್ನು ಯಾವ ನಮೂನೆಯಲ್ಲಿ ಸಿದ್ಧಪಡಿಸಿಸಬೇಕೊ ಆ ನಮೂನೆಗೆ;

(ಇ) 26ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಪ್ರಾಧಿಕಾರವು ತನ್ನ ಕಾರ್ಯಚಟುವಟಿಕೆಗಳ ವಿವರಗಳನ್ನು ನೀಡುವ ವರದಿಯನ್ನು ಯಾವ ನಮೂನೆಯಲ್ಲಿ ಸಿದ್ಧಪಡಿಸಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸಬೇಕೋ ಆ ನಮೂನೆಗೆ; ಮತ್ತು

(ಎಫ್) ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದ ಯಾವುದೇ ಇತರ ವಿಷಯಗಳಿಗೆ

–ಉಪಬಂಧ ಕಲ್ಪಿಸಬಹುದು.

**35. ವಿನಿಯಮಗಳನ್ನು ರಚಿಸಲು ಅಧಿಕಾರ.–** (1) ಪ್ರಾಧಿಕಾರವು ಕೇಂದ್ರ ಸರ್ಕಾರದ ಪೂರ್ವಾನುಮೋದನೆ ಪಡೆದು, ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವ ಉದ್ದೇಶಕ್ಕಾಗಿ ಈ ಅಧಿನಿಯಮಕ್ಕೆ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳಿಗೆ ಅಸಂಗತವಲ್ಲದಂಥ ವಿನಿಯಮಗಳನ್ನು ರಚಿಸಬಹುದು.

(2) ಅಂಥ ವಿನಿಯಮಗಳು ಹಿಂದೆ ಹೇಳಿದ ಅಧಿಕಾರಗಳ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ–

(ಎ) 8ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಪ್ರಾಧಿಕಾರದ ಸಭೆಗಳಲ್ಲಿ ಇರಬೇಕಾದ ಕೋರಂ ಸೇರಿದಂತೆ ಪ್ರಾಧಿಕಾರದ ಸಭೆಗಳು ನಡೆಯುವ ಸಮಯಕ್ಕೆ ಮತ್ತು ಸ್ಥಳಗಳಿಗೆ ಮತ್ತು ಪ್ರಾಧಿಕಾರದ ಕಾರ್ಯಕಲಾಪಗಳ ನಿರ್ವಹಣೆಗೆ ಅನುಸರಿಸಬೇಕಾದ ಕಾರ್ಯವಿಧಾನಕ್ಕೆ;

(ಬಿ) 10ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಪ್ರಾಧಿಕಾರವು ನೇಮಕ ಮಾಡುವಂಥ ಅಧಿಕಾರಿಗಳ ಮತ್ತು ಇತರ ನೌಕರರ ಸೇವಾ ಷರತ್ತುಗಳಿಗೆ ಮತ್ತು ಪರಿಶ್ರಮ ಧನಕ್ಕೆ;

(ಸಿ) (1)ನೇ ಉಪಪ್ರಕರಣದ ಮೇರೆಗೆ ಯಾವ ಕರಾರುಗಳಿಗೆ ಪ್ರಾಧಿಕಾರದ ಸಾಮಾನ್ಯ ಮೊಹರು ಹಾಕಿ ಸೀಲು ಮಾಡಬೇಕೊ ಆ ಕರಾರುಗಳಿಗೆ ಮತ್ತು 18ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಪ್ರಾಧಿಕಾರವು ಕರಾರುಗಳನ್ನು ಯಾವ ನಮೂನೆಯಲ್ಲಿ ಮತ್ತು ರೀತಿಯಲ್ಲಿ ಮಾಡಿಕೊಳ್ಳಬಹುದೋ ಆ ನಮೂನೆಗೆ ಮತ್ತು ರೀತಿಗೆ;

(ಡಿ) 19ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಪ್ರಾಧಿಕಾರವು ವಿಧಿಸಬೇಕಾದ ಫೀಜುಗಳಿಗೆ ಮತ್ತು ಬಾಡಿಗೆಗೆ;

(ಇ) 31ನೇ ಪ್ರಕರಣದ ಮೇರೆಗೆ ಕಾಣೆಯಾದ ಸ್ವತ್ತಿನ ಅಭಿರಕ್ಷೆಗೆ ಮತ್ತು ಅದನ್ನು ಹಿಂದಿರುಗಿಸುವುದಕ್ಕೆ ಮತ್ತು ಕಾಣೆಯಾದ ಸ್ವತ್ತನ್ನು ಯಾವ ನಿಬಂಧನೆಗಳ ಮತ್ತು ಷರತ್ತುಗಳ ಮೇರೆಗೆ ಹಿಂದಿರುಗಿಸಬಹುದೋ ಆ ನಿಬಂಧನೆಗಳಿಗೆ ಮತ್ತು ಷರತ್ತುಗಳಿಗೆ

–ಉಪಬಂಧ ಕಲ್ಪಿಸಬಹುದು.

**36. ನಿಯಮಗಳನ್ನು, ವಿನಿಯಮಗಳನ್ನು ಮತ್ತು ಅಧಿಸೂಚನೆಗಳನ್ನು ಸಂಸತ್ತಿನ ಮುಂದೆ ಇಡುವುದು.–** ಈ ಅಧಿನಿಯಮದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು ಮತ್ತು ಪ್ರತಿಯೊಂದು ವಿನಿಯಮವನ್ನು ಅಥವಾ ಪ್ರತಿಯೊಂದು ಅಧಿಸೂಚನೆಯನ್ನು ಅದನ್ನು ರಚಿಸಿದ ತರುವಾಯ ಸಾಧ್ಯವಾದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಇಡತಕ್ಕದ್ದು ಮತ್ತು ಮೇಲೆ ಹೇಳಿದ ಅಧಿವೇಶನದ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಅಧಿವೇಶನಗಳ ನಿಕಟ ತರುವಾಯದ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮುಂಚೆ ಆ ನಿಯಮದಲ್ಲಿ, ವಿನಿಯಮದಲ್ಲಿ ಅಥವಾ ಅಧಿಸೂಚನೆಯಲ್ಲಿ ಯಾವುದೇ ಮಾರ್ಪಾಟು ಮಾಡಬೇಕೆಂದು ಎರಡು ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು, ವಿನಿಯಮವನ್ನು ರಚಿಸಬಾರದೆಂದು ಅಥವಾ ಆ ಅಧಿಸೂಚನೆಯನ್ನು ಹೊರಡಿಸಬಾರದೆಂದು ಎರಡೂ ಸದನಗಳು ಒಪ್ಪಿದರೆ ಆ ನಿಯಮವು, ವಿನಿಯಮವು ಅಥವಾ ಅಧಿಸೂಚನೆಯು ಆ ತರುವಾಯ ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ, ಆದರೆ ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ, ವಿನಿಯಮದ ಅಥವಾ ಅಧಿಸೂಚನೆಯ ಮೇರೆಗೆ ಈ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕ ಉಂಟು ಮಾಡತಕ್ಕದ್ದಲ್ಲ.

**37. ತೊಂದರೆಗಳನ್ನು ನಿವಾರಿಸಲು ಅಧಿಕಾರ.–** (1) ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೆ ತರುವಾಗ ಯಾವುದೇ ತೊಂದರೆಯು ಉದ್ಭವಿಸಿದರೆ, ಕೇಂದ್ರ ಸರ್ಕಾರವು ಆ ತೊಂದರೆಯನ್ನು ನಿವಾರಿಸಲು ಅವಶ್ಯವೆಂದು ಅಥವಾ ವಿಹಿತವೆಂದು ತನಗೆ ಕಂಡುಬರಬಹುದಾದಂಥ ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗಿರದಂಥ ಉಪಬಂಧಗಳನ್ನು ಸಾಮಾನ್ಯ ಅಥವಾ ವಿಶೇಷ ಆದೇಶವನ್ನು ರಾಜಪತ್ರದಲ್ಲಿ ಪ್ರಕಟಿಸಿ ಕಲ್ಪಿಸಬಹುದು:

ಪರಂತು, ಈ ಅಧಿನಿಯಮದ ಪ್ರಾರಂಭದ ದಿನದಿಂದ ಎರಡು ವರ್ಷಗಳು ಮುಕ್ತಾಯವಾದ ತರುವಾಯ ಅಂಥ ಯಾವುದೇ ಆದೇಶವನ್ನು ಮಾಡತಕ್ಕದ್ದಲ್ಲ.

(2) ಈ ಪ್ರಕರಣದ ಮೇರೆಗೆ ಮಾಡಿದ ಪ್ರತಿಯೊಂದು ಆದೇಶವನ್ನು ಅದನ್ನು ಮಾಡಿದ ತರುವಾಯ, ಸಾಧ್ಯವಾದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಇಡತಕ್ಕದ್ದು.

**ಕೇಂದ್ರೀಯ ಶೈಕ್ಷಣಿಕ ಸಂಸ್ಥೆಗಳ (ಶಿಕ್ಷಕ ವೃಂದದಲ್ಲಿ ಮೀಸಲಾತಿ) ಅಧಿನಿಯಮ, 2019**

**(2019 ರ ಅಧಿನಿಯಮ ಸಂಖ್ಯೆ 10)**

[9ನೇ ಜುಲೈ, 2019.]

ಕೇಂದ್ರ ಸರ್ಕಾರದ ಮೂಲಕ ಸ್ಥಾಪಿಸಲಾದ, ನಿರ್ವಹಿಸಲಾದ ಅಥವಾ ಅನುದಾನಿತಗೊಂಡ ಕೆಲವು ಕೇಂದ್ರೀಯ ಶೈಕ್ಷಣಿಕ ಸಂಸ್ಥೆಗಳಲ್ಲಿ ಶಿಕ್ಷಕರ ವೃಂದಕ್ಕೆ ಅನುಸೂಚಿತ ಜಾತಿಗಳು, ಅನುಸೂಚಿತ ಪಂಗಡಗಳು, ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ವರ್ಗಗಳಿಗೆ ಮತ್ತು ಆರ್ಥಿಕವಾಗಿ ದುರ್ಬಲವಾಗಿರುವ ವರ್ಗಗಳಿಗೆ ಸೇರಿರುವಂಥ ವ್ಯಕ್ತಿಗಳಿಗೆ ನೇರ ನೇಮಕಾತಿ ಮಾಡುವ ಮೂಲಕ ನೌಕರಿ ಭರ್ತಿಯಲ್ಲಿ ಹುದ್ದೆಗಳ ಮೀಸಲಾತಿಯನ್ನು ಒದಗಿಸುವ ಸಲುವಾಗಿ ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಪ್ರಾಸಂಗಿಕವಾದ ವಿಷಯಗಳಿಗಾಗಿ ಉಪಬಂಧ ಕಲ್ಪಿಸುವ ಅಧಿನಿಯಮ.

ಇದು, ಭಾರತ ಗಣರಾಜ್ಯದ ಎಪ್ಪತ್ತನೇ ವರ್ಷದಲ್ಲಿ ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:–

**1. ಚಿಕ್ಕ ಹೆಸರು ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು, ಕೇಂದ್ರೀಯ ಶೈಕ್ಷಣಿಕ ಸಂಸ್ಥೆಗಳ (ಶಿಕ್ಷಕ ವೃಂದದಲ್ಲಿ ಮೀಸಲಾತಿ) ಅಧಿನಿಯಮ, 2019 ಎಂದು ಕರೆಯತಕ್ಕದ್ದು.

(2) ಇದು, 2019 ರ ಮಾರ್ಚ್ 7ನೇ ದಿನದಂದು ಜಾರಿಗೆ ಬಂದಿದೆ ಎಂದು ಭಾವಿಸತಕ್ಕದ್ದು.

**2. ಪರಿಭಾಷೆಗಳು.–** ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) "ಸಮುಚಿತ ಪ್ರಾಧಿಕಾರ" ಎಂದರೆ, ಯಾವುದೇ ಕೇಂದ್ರೀಯ ಶೈಕ್ಷಣಿಕ ಸಂಸ್ಥೆಯಲ್ಲಿ ಉನ್ನತ ಶಿಕ್ಷಣದ ಗುಣಮಟ್ಟಗಳನ್ನು ನಿರ್ಧರಿಸುವುದಕ್ಕಾಗಿ, ಸಮನ್ವಯಕ್ಕಾಗಿ ಅಥವಾ ನಿರ್ವಹಣೆಗಾಗಿ ವಿಶ್ವವಿದ್ಯಾಲಯ ಧನಸಹಾಯ ಆಯೋಗ, 1956 (1956 ರ 3)ರ ಮೇರೆಗೆ ಸ್ಥಾಪನೆಯಾದ ವಿಶ್ವವಿದ್ಯಾಲಯ ಧನಸಹಾಯ ಆಯೋಗ ಅಥವಾ ಇತರ ಯಾವುದೇ ಪ್ರಾಧಿಕಾರ ಅಥವಾ ಕೇಂದ್ರ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಸ್ಥಾಪಿಸಲಾದ ನಿಕಾಯ;

(ಬಿ) "ಅಧ್ಯಯನ ವಿಭಾಗ" ಎಂದರೆ, ಸ್ನಾತಕ ಪದವಿಗಳು (ಪದವಿ ವರ್ಗದಲ್ಲಿ) ಮಾಸ್ಟರ್ ಪದವಿ (ಸ್ನಾತಕೋತ್ತರ ಪದವಿ) ಮತ್ತು ಡಾಕ್ಟರೇಟ್ ಪದವಿ ಹಂತದ ವಿದ್ಯಾರ್ಹತೆಗಳ ಮೂರು ಪ್ರಮುಖ ಹಂತಗಳನ್ನು ನಡೆಸುತ್ತಿರುವ ಅಧ್ಯಯನ ವಿಭಾಗ ಎಂದು ಅರ್ಥ;

(ಸಿ) "ಕೇಂದ್ರೀಯ ಶೈಕ್ಷಣಿಕ ಸಂಸ್ಥೆ" ಎಂದರೆ–

(i) ಕೇಂದ್ರ ಅಧಿನಿಯಮದ ಮೂಲಕ ಅಥವಾ ಅದರ ಅಡಿಯಲ್ಲಿ ಸ್ಥಾಪಿಸಲಾದ ಅಥವಾ ನಿಗಮಿತವಾದ ವಿಶ್ವವಿದ್ಯಾಲಯ;

(ii) ಸಂಸತ್ತಿನ ಅಧಿನಿಯಮದ ಮೂಲಕ ಸ್ಥಾಪಿಸಲಾದ ರಾಷ್ಟ್ರೀಯ ಮಹತ್ವವುಳ್ಳ ಸಂಸ್ಥೆ;

(iii) ಸಂಸ್ಥೆಯು, ವಿಶ್ವವಿದ್ಯಾಲಯ ಅನುದಾನ ಆಯೋಗ ಅಧಿನಿಯಮ, 1956 (1956 ರ 3)ರ 3ನೇ ಪ್ರಕರಣದ ಮೇರೆಗೆ ವಿಶ್ವವಿದ್ಯಾಲಯವೆಂದು ಭಾವಿಸಲಾದ ಸಂಸ್ಥೆಯನ್ನಾಗಿ ಘೋಷಿಸಿದ ಮತ್ತು ಕೇಂದ್ರ ಸರ್ಕಾರದಿಂದ ಸಹಾಯಾನುದಾನದ ಮೂಲಕ ನಿರ್ವಹಿಸಿದ ಅಥವಾ ಸಹಾಯಾನುದಾನ ಸ್ವೀಕರಿಸುವ ಸಂಸ್ಥೆ;

(iv) ಕೇಂದ್ರ ಸರ್ಕಾರದಿಂದ ಪ್ರತ್ಯಕ್ಷವಾಗಿಯಾಗಲಿ ಅಥವಾ ಪರೋಕ್ಷವಾಗಿಯಾಗಲಿ ಸಹಾಯಾನುದಾನದ ಮೂಲಕ ಅಥವಾ ಸಹಾಯಾನುದಾನವನ್ನು ಸ್ವೀಕರಿಸುವ ಮೂಲಕ ನಿರ್ವಹಿಸಲ್ಪಡುತ್ತಿರುವ ಮತ್ತು (i)ನೇ ಉಪಖಂಡ ಅಥವಾ (ii)ನೇ ಉಪಖಂಡದಲ್ಲಿ ಉಲ್ಲೇಖಿಸಲಾದ ಮಾನ್ಯತೆ ಪಡೆದಿದ್ದ ಸಂಸ್ಥೆ ಅಥವಾ (iii)ನೇ ಉಪಖಂಡದಲ್ಲಿ ಉಲ್ಲೇಖಿಸಲಾದ ಸಂಸ್ಥೆಯ ಘಟಕ ರಚನೆ; ಮತ್ತು

(v) ಸಂಘಗಳ ನೋಂದಣಿ ಅಧಿನಿಯಮ, 1860 (1860 ರ 21)ರ ಮೇರೆಗೆ ಕೇಂದ್ರ ಸರ್ಕಾರವು ಸ್ಥಾಪಿಸಿದ ಶೈಕ್ಷಣಿಕ ಸಂಸ್ಥೆ;

(ಡಿ) "ನೇರ ನೇಮಕಾತಿ" ಎಂದರೆ, ಕೇಂದ್ರೀಯ ಶೈಕ್ಷಣಿಕ ಸಂಸ್ಥೆಯಲ್ಲಿ ಬೋಧಿಸಲು ಅರ್ಹರಾಗಿರುವ ವ್ಯಕ್ತಿಗಳಿಂದ ಸಾರ್ವಜನಿಕ ಜಾಹೀರಾತು ಮೂಲಕ ಅರ್ಜಿಗಳನ್ನು ಆಹ್ವಾನಿಸುವ ಮೂಲಕ ಬೋಧಕ ವರ್ಗವನ್ನು ನೇಮಕಾತಿ ಮಾಡುವ ಪ್ರಕ್ರಿಯೆ;

(ಇ) "ಆರ್ಥಿಕವಾಗಿ ದುರ್ಬಲರಾಗಿರುವ ವರ್ಗಗಳು" ಎಂದರೆ, ಸಂವಿಧಾನದ 15ನೇ ಅನುಚ್ಛೇದದ (6)ನೇ ಖಂಡದ ವಿವರಣೆಯಲ್ಲಿ ಉಲ್ಲೇಖಿಸಲಾಗಿರುವಂಥ ದುರ್ಬಲರಾಗಿರುವ ವರ್ಗಗಳು;

(ಎಫ್) "ಬೋಧಕ ವರ್ಗ" ಎಂದರೆ, ಕೇಂದ್ರೀಯ ಶೈಕ್ಷಣಿಕ ಸಂಸ್ಥೆಯ ಬೋಧಕ ವರ್ಗ;

(ಜಿ) "ಅಲ್ಪಸಂಖ್ಯಾತರ ಶೈಕ್ಷಣಿಕ ಸಂಸ್ಥೆ" ಎಂದರೆ, ಸಂವಿಧಾನದ 30ನೇ ಅನುಚ್ಛೇದದ (1)ನೇ ಖಂಡದಲ್ಲಿ ಅಲ್ಪಸಂಖ್ಯಾತರು ಸ್ಥಾಪಿಸಿದ ಮತ್ತು ಆಡಳಿತ ನಡೆಸುತ್ತಿರುವ ಮತ್ತು ಸಂಸತ್ತಿನ ಅಧಿನಿಯಮದ ಮೂಲಕ ಅಥವಾ ಕೇಂದ್ರ ಸರ್ಕಾರವು ಹಾಗೆ ಘೋಷಿಸಿದ ಅಥವಾ ಅಲ್ಪಸಂಖ್ಯಾತರ ಶೈಕ್ಷಣಿಕ ಸಂಸ್ಥೆಗಳ ರಾಷ್ಟ್ರೀಯ ಆಯೋಗ ಅಧಿನಿಯಮ, 2004 (2005 ರ 2)ರ ಮೇರೆಗೆ ರಾಷ್ಟ್ರೀಯ ಅಲ್ಪಸಂಖ್ಯಾತರ ಶೈಕ್ಷಣಿಕ ಸಂಸ್ಥೆಯನ್ನಾಗಿ ಘೋಷಿಸಲಾದ ಸಂಸ್ಥೆ;

(ಎಚ್) "ಮಂಜೂರಾದ ಶಿಕ್ಷಕರ ಸಂಖ್ಯಾಬಲ" ಎಂದರೆ, ಸಮುಚಿತ ಪ್ರಾಧಿಕಾರವು ಅನುಮೋದಿಸಿದ ಶಿಕ್ಷಕರ ವೃಂದದಲ್ಲಿ ಹುದ್ದೆಗಳ ಸಂಖ್ಯೆ;

(ಐ) "ಅನುಸೂಚಿತ ಜಾತಿಗಳು" ಎಂದರೆ, ಸಂವಿಧಾನದ 341ನೇ ಅನುಚ್ಛೇದದ ಅಡಿಯಲ್ಲಿ ಅಧಿಸೂಚಿಸಿದ ಅನುಸೂಚಿತ ಜಾತಿಗಳು;

(ಜೆ) "ಅನುಸೂಚಿತ ಬುಡಕಟ್ಟುಗಳು" ಎಂದರೆ, ಸಂವಿಧಾನದ 342ನೇ ಅನುಚ್ಛೇದದ ಅಡಿಯಲ್ಲಿ ಅಧಿಸೂಚಿಸಿದ ಅನುಸೂಚಿತ ಬುಡಕಟ್ಟುಗಳು;

(ಕೆ) "ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ವರ್ಗಗಳು" ಎಂದರೆ, ಸಂವಿಧಾನದ 342–ಎ ಅನುಚ್ಛೇದದ ಮೇರೆಗೆ ಹಾಗೆಂದು ಭಾವಿಸಿದ ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ವರ್ಗಗಳು;

(ಎಲ್) "ಶಿಕ್ಷಕ ವೃಂದ" ಎಂದರೆ, ಯಾವುದೇ ಭತ್ಯೆ ಅಥವಾ ಬೋನಸ್ ಹೊರತುಪಡಿಸಿ, ವೇತನದ ಒಂದೇ ಶ್ರೇಣಿಯಲ್ಲಿ ಯಾರು ಪರಿಶ್ರಮಧನ ಪಡೆಯುತ್ತಿರುವರೋ ಆ ಅಧ್ಯಯನ ವಿಭಾಗವನ್ನು ಅಥವಾ ಬೋಧಕ ವರ್ಗವನ್ನು ಪರಿಗಣಿಸದೆ, ಕೇಂದ್ರೀಯ ಶೈಕ್ಷಣಿಕ ಸಂಸ್ಥೆಯ ಎಲ್ಲ ಶಿಕ್ಷಕ ವರ್ಗ.

3. **ಕೇಂದ್ರೀಯ ಶೈಕ್ಷಣಿಕ ಸಂಸ್ಥೆಗಳ ನೌಕರಿ ಭರ್ತಿಯಲ್ಲಿ ಹುದ್ದೆಗಳ ಮೀಸಲಾತಿ.**– (1) ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಕೇಂದ್ರ ಸರ್ಕಾರವು, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಷ್ಟರ ಮಟ್ಟಿಗೆ ಮತ್ತು ಆ ರೀತಿಯಲ್ಲಿ ಕೇಂದ್ರೀಯ ಶೈಕ್ಷಣಿಕ ಸಂಸ್ಥೆಗಳಲ್ಲಿ ಶಿಕ್ಷಕರ ವೃಂದದಲ್ಲಿ ಮಂಜೂರಾದ ಶಿಕ್ಷಕರ ಹುದ್ದೆಗಳಿಗೆ ನೌಕರಿ ಭರ್ತಿ ಮಾಡುವಲ್ಲಿ ಹುದ್ದೆಗಳನ್ನು ಮೀಸಲಿರಿಸತಕ್ಕದ್ದು.

(2) ಹುದ್ದೆಗಳ ಮೀಸಲಾತಿಯ ಉದ್ದೇಶಗಳಿಗಾಗಿ, ಕೇಂದ್ರೀಯ ಶೈಕ್ಷಣಿಕ ಸಂಸ್ಥೆಯನ್ನು ಒಂದು ಘಟಕವೆಂದು ಪರಿಗಣಿಸತಕ್ಕದ್ದು.

4. **ಕೆಲವು ಪ್ರಕರಣಗಳಲ್ಲಿ ಈ ಅಧಿನಿಯಮವು ಅನ್ವಯವಾಗುವುದಿಲ್ಲ.**– (1) 3ನೇ ಪ್ರಕರಣದ ಉಪಬಂಧಗಳು–

(ಎ) ಈ ಅಧಿನಿಯಮದ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಲಾದ ಉನ್ನತ ಸಂಸ್ಥೆಗಳು, ಸಂಶೋಧನಾ ಸಂಸ್ಥೆಗಳು, ರಾಷ್ಟ್ರೀಯ ಮತ್ತು ಕಾರ್ಯತಂತ್ರ ಪ್ರಾಮುಖ್ಯತೆಯುಳ್ಳ ಸಂಸ್ಥೆಗಳಿಗೆ;

(ಬಿ) ಅಲ್ಪಸಂಖ್ಯಾತರ ಶೈಕ್ಷಣಿಕ ಸಂಸ್ಥೆಗೆ

– ಅನ್ವಯವಾಗತಕ್ಕದ್ದಲ್ಲ.

(2) ಕೇಂದ್ರ ಸರ್ಕಾರವು, ಅಧಿಕೃತ ರಾಜಪತ್ರದಲ್ಲಿ ಅಧಿಸೂಚನೆ ಮೂಲಕ, ಕಾಲಕಾಲಕ್ಕೆ (1)ನೇ ಉಪಪ್ರಕರಣದ (ಎ) ಖಂಡದಲ್ಲಿ ಉಲ್ಲೇಖಿಸಲಾದ ಅನುಸೂಚಿಯನ್ನು ತಿದ್ದುಪಡಿ ಮಾಡಬಹುದು.

**5. ಸಂಸತ್ತಿನ ಮುಂದೆ ಅಧಿಸೂಚನೆಗಳನ್ನು ಮಂಡಿಸುವುದು.–** ಈ ಅಧಿನಿಯಮದ ಮೇರೆಗೆ ಕೇಂದ್ರ ಸರ್ಕಾರವು ರಚಿಸಿದ ಪ್ರತಿಯೊಂದು ಅಧಿಸೂಚನೆಯನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಬರುವ ಎರಡು ಅಥವಾ ಅದಕ್ಕಿಂತ ಹೆಚ್ಚಿನ ಅನುಕ್ರಮ ಅಧಿವೇಶನಗಳಲ್ಲಿ ಅಡಕವಾಗಬಹುದಾದಂಥ ಒಟ್ಟು ಮೂವತ್ತು ದಿವಸಗಳ ಅವಧಿವರೆಗೆ ಮಂಡಿಸತಕ್ಕದ್ದು ಮತ್ತು ಮೇಲೆ ಹೇಳಿದ ಅನುಕ್ರಮದ ಅಧಿವೇಶನಗಳು ಮುಕ್ತಾಯವಾಗುವುದಕ್ಕೆ ಮುಂಚೆ ಆ ಅಧಿಸೂಚನೆಯಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ಅಧಿಸೂಚನೆಯನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ ಸಂದರ್ಭಾನುಸಾರ, ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗಿರತಕ್ಕದ್ದು ಅಥವಾ ಪರಿಣಾಮಕಾರಿಯಾಗಿರತಕ್ಕದ್ದಲ್ಲ. ಆದಾಗ್ಯೂ, ಯಾವುದೇ ಅಂಥ ಮಾರ್ಪಾಟು ಅಥವಾ ರದ್ದಿಯಾತಿಯು ಆ ಅಧಿಸೂಚನೆಯ ಮೇರೆಗೆ ಈ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

**6. ನಿರಸನ ಮತ್ತು ಉಳಿಸುವಿಕೆಗಳು.–** (1) ಕೇಂದ್ರೀಯ ಶೈಕ್ಷಣಿಕ ಸಂಸ್ಥೆಗಳ (ಶಿಕ್ಷಕ ವೃಂದದಲ್ಲಿ ಮೀಸಲಾತಿ) ಅಧ್ಯಾದೇಶ, 2019 (2019ರ ಅಧ್ಯಾದೇಶ ಸಂಖ್ಯೆ 13) ನ್ನು ಈ ಮೂಲಕ ನಿರಸನಗೊಳಿಸಲಾಗಿದೆ.

(2) ಅಂತಹ ನಿರಸನಗೊಳಿಸುವಿಕೆಯು ಸದರಿ ಅಧ್ಯಾದೇಶದ ಮೇರೆಗೆ ಮಾಡಿದ ಯಾವುದೇ ಕಾರ್ಯ ಅಥವಾ ಕೈಗೊಂಡ ಯಾವುದೇ ಕ್ರಮವನ್ನು ಈ ಅಧಿನಿಯಮದ ಮೇರೆಗೆ ಮಾಡಲಾಗಿದೆ ಅಥವಾ ಕೈಗೊಳ್ಳಲಾಗಿದೆ ಎಂದು ಭಾವಿಸತಕ್ಕದ್ದು.

**ಅನುಸೂಚಿ**

**[ಪ್ರಕರಣ 4 (ಎಲ್) (ಎ) ನ್ನು ನೋಡಿ]**

| **ಕ್ರಮ ಸಂಖ್ಯೆ** | **ಉನ್ನತ ಸಂಸ್ಥೆಯ ಹೆಸರು, ಇತ್ಯಾದಿ** |
|---|---|
| (1) | (2) |
| 1. | ಹೋಮಿ ಬಾಬಾ ರಾಷ್ಟ್ರೀಯ ಸಂಸ್ಥೆ, ಮುಂಬೈ ಮತ್ತು ಅದರ ಅಂಗ ಘಟಕಗಳು, ಎಂದರೆ:– |
| | (i) ಬಾಬಾ ಪರಮಾಣು ಸಂಶೋಧನಾ ಕೇಂದ್ರ, ಟ್ರೊಂಬೆ; |
| | (ii) ಇಂದಿರಾಗಾಂಧಿ ಪರಮಾಣು ಸಂಶೋಧನಾ ಕೇಂದ್ರ, ಕಲ್ಪಕ್ಕಂ; |
| | (iii) ರಾಜಾ ರಾಮಣ್ಣ ಸುಧಾರಿತ ತಂತ್ರಜ್ಞಾನ ಕೇಂದ್ರ, ಇಂದೋರ್; |
| | (iv) ಪ್ಲಾಸ್ಮಾ ಸಂಶೋಧನಾ ಸಂಸ್ಥೆ, ಗಾಂಧಿನಗರ; |
| | (v) ವೇರಿಯಬಲ್ ಎನರ್ಜಿ ಸೈಕ್ಲೋಟ್ರಾನ್ ಸೆಂಟರ್, ಕೋಲ್ಕತ್ತ; |
| | (vi) ಸಹಾ ಪರಮಾಣು ಭೌತಶಾಸ್ತ್ರ ಸಂಸ್ಥೆ, ಕೋಲ್ಕತ್ತ; |
| | (vii) ಭೌತಶಾಸ್ತ್ರ ಸಂಸ್ಥೆ, ಭುವನೇಶ್ವರ್; |
| | (viii) ಗಣಿತಶಾಸ್ತ್ರೀಯ ವಿಜ್ಞಾನಗಳ ಸಂಸ್ಥೆ, ಚೆನ್ನೈ; |
| | (ix) ಹರೀಶ್ ಚಂದ್ರ ಸಂಶೋಧನಾ ಸಂಸ್ಥೆ, ಅಲಹಾಬಾದ್; |

(x) ಟಾಟಾ ಸ್ಮಾರಕ ಕೇಂದ್ರ, ಮುಂಬೈ.

2. ಟಾಟಾ ಮೂಲಭೂತ ಸಂಶೋಧನಾ ಸಂಸ್ಥೆ, ಮುಂಬೈ.
3. ಇಂದಿರಾಗಾಂಧಿ ಈಶಾನ್ಯ ಪ್ರಾದೇಶಿಕ ಆರೋಗ್ಯ ಮತ್ತು ವೈದ್ಯಕೀಯ ವಿಜ್ಞಾನ ಸಂಸ್ಥೆ, ಶಿಲ್ಲಾಂಗ್.
4. ರಾಷ್ಟ್ರೀಯ ಮಿದುಳಿನ ಸಂಶೋಧನಾ ಕೇಂದ್ರ, ಮನೇಸರ್, ಗುರಗಾಂವ್.
5. ಜವಾಹರಲಾಲ್ ನೆಹರು ಸೆಂಟರ್ ಫಾರ್ ಅಡ್ವಾನ್ಸ್ ಸೈಂಟಿಫಿಕ್ ರಿಸರ್ಚ್, ಬೆಂಗಳೂರು.
6. ಭೌತಿಕ ಸಂಶೋಧನೆ ಪ್ರಯೋಗಾಲಯ, ಅಹಮದಾಬಾದ್.
7. ಬಾಹ್ಯಾಕಾಶ ಭೌತವಿಜ್ಞಾನ ಪ್ರಯೋಗಾಲಯ, ತಿರುವನಂತಪುರಂ.
8. ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ರಿಮೋಟ್ ಸೆನ್ಸಿಂಗ್, ಡೆಹ್ರಾಡೂನ್.

# ಮುಸ್ಲಿಂ ಮಹಿಳೆಯರ (ವಿವಾಹದ ಹಕ್ಕುಗಳ ಸಂರಕ್ಷಣೆ) ಅಧಿನಿಯಮ, 2019

## (2019 ರ ಅಧಿನಿಯಮ ಸಂಖ್ಯೆ 20)

[31ನೇ ಜುಲೈ, 2019.]

ಮುಸ್ಲಿಂ ಮಹಿಳೆಯರ ವಿವಾಹದ ಹಕ್ಕುಗಳನ್ನು ಸಂರಕ್ಷಿಸಲು ಮತ್ತು ಅವರುಗಳ ಪತಿಯರು ತಲಾಖ್ ಅಂತ ಉಚ್ಚರಿಸುವುದರ ಮೂಲಕ ವಿವಾಹ ವಿಚ್ಛೇದನ ನೀಡುವುದನ್ನು ನಿಷೇಧಿಸಲು ಮತ್ತು ಅದಕ್ಕೆ ಸಂಬಂಧಪಟ್ಟ ಅಥವಾ ಪ್ರಾಸಂಗಿಕವಾದ ವಿಷಯಗಳಿಗೆ ಉಪಬಂಧ ಕಲ್ಪಿಸುವ ಅಧಿನಿಯಮ.

ಅದು, ಭಾರತ ಗಣರಾಜ್ಯದ ಎಪ್ಪತ್ತನೆಯ ವರ್ಷದಲ್ಲಿ ಸಂಸತ್ತಿನಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು:–

## ಅಧ್ಯಾಯ I

### ಪ್ರಾರಂಭಿಕ

**1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ಮುಸ್ಲಿಂ ಮಹಿಳೆಯರ (ವಿವಾಹದ ಹಕ್ಕುಗಳ ಸಂರಕ್ಷಣೆ) ಅಧಿನಿಯಮ, 2019 ಎಂದು ಕರೆಯತಕ್ಕದ್ದು.

(2) ಇದು, ಜಮ್ಮು ಮತ್ತು ಕಾಶ್ಮೀರ* ರಾಜ್ಯವನ್ನು ಹೊರತುಪಡಿಸಿ ಇಡೀ ಭಾರತಕ್ಕೆ ವ್ಯಾಪ್ತವಾಗತಕ್ಕದ್ದು.

(3) ಇದು, 2018 ರ ಸೆಪ್ಟೆಂಬರ್ 19ನೆಯ ದಿನದಂದು ಜಾರಿಗೆ ಬಂದಿದೆ ಎಂದು ಭಾವಿಸತಕ್ಕದ್ದು.

**2. ಪರಿಭಾಷೆಗಳು.–** ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) **"ವಿದ್ಯುನ್ಮಾನ ನಮೂನೆ"**ಯು ಮಾಹಿತಿ ತಂತ್ರಜ್ಞಾನ ಅಧಿನಿಯಮ, 2000 (2000ದ 21) ದ ಪ್ರಕರಣ (2) ರ ಉಪಪ್ರಕರಣ (1) ರ ಖಂಡ (ಆರ್) ರಲ್ಲಿ ಅದಕ್ಕೆ ನೀಡಿದ ಅದೇ ಅರ್ಥವನ್ನೇ ಹೊಂದಿರತಕ್ಕದ್ದು;

(ಬಿ) **"ಮ್ಯಾಜಿಸ್ಟ್ರೇಟ್"** ಎಂದರೆ, ವಿವಾಹಿತ ಮುಸ್ಲಿಂ ಮಹಿಳೆ ವಾಸವಾಗಿರುವ ಪ್ರದೇಶದಲ್ಲಿ, ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2) ರ ಮೇರೆಗೆ ಅಧಿಕಾರವ್ಯಾಪ್ತಿಯನ್ನು ಚಲಾಯಿಸುತ್ತಿರುವ ಪ್ರಥಮ ದರ್ಜೆ ನ್ಯಾಯಿಕ ಮ್ಯಾಜಿಸ್ಟ್ರೇಟ್; ಮತ್ತು

(ಸಿ) **"ತಲಾಖ್"** ಎಂದರೆ, ತಲಾಖ್–ಇ–ಬಿದ್ದತ್ ಅಥವಾ ಮುಸ್ಲಿಂ ಪತಿಯು ಉಚ್ಚರಿಸಿದ ತತ್‌ಕ್ಷಣದ ಮತ್ತು ರದ್ದುಪಡಿಸಲಾಗದ ವಿವಾಹ ವಿಚ್ಛೇದನದ ಪರಿಣಾಮವುಳ್ಳ ಯಾವುದೇ ಇತರ ಅದೇ ಬಗೆಯ ರೀತಿಯ ತಲಾಖ್.

## ಅಧ್ಯಾಯ II

### ತಲಾಖ್‌ನ ಘೋಷಣೆಯು ಅನೂರ್ಜಿತವಾಗುವುದು ಮತ್ತು ಕಾನೂನುಬಾಹಿರವಾಗುವುದು

**3. ತಲಾಖ್ ಅನೂರ್ಜಿತವಾಗುವುದು ಮತ್ತು ಕಾನೂನುಬಾಹಿರವಾಗುವುದು.–** ಮುಸ್ಲಿಂ ಪತಿಯು, ತನ್ನ ಪತ್ನಿಗೆ, ಮಾತುಗಳಲ್ಲಿ ಅಥವಾ ಲಿಖಿತ ಪದಗಳಲ್ಲಿ ಅಥವಾ ವಿದ್ಯುನ್ಮಾನ ನಮೂನೆಯಲ್ಲಿ ಅಥವಾ ಯಾವುದೇ ಇತರ ರೀತಿಯಲ್ಲಾದರೂ ಉಚ್ಚರಿಸಿದ ತಲಾಖ್ ಅನೂರ್ಜಿತವಾಗತಕ್ಕದ್ದು ಮತ್ತು ಕಾನೂನುಬಾಹಿರವಾಗತಕ್ಕದ್ದು.

**4. ತಲಾಖ್ ಉಚ್ಚರಿಸಿದ್ದಕ್ಕಾಗಿ ದಂಡನೆ.–** ಪ್ರಕರಣ (3) ರಲ್ಲಿ ಉಲ್ಲೇಖಿಸಲಾದ ಯಾರೇ ಮುಸ್ಲಿಂ ಪತಿಯು ಆತನ ಪತ್ನಿಗೆ ತಲಾಖ್ ಅಂತ ಉಚ್ಚರಿಸಿದರೆ, ಅವನು ಮೂರು ವರ್ಷಗಳಿಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದೊಂದಿಗೆ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೆ ಗುರಿಯಾಗತಕ್ಕದ್ದು.

---

*ನೋಡಿ ಅಧಿಸೂಚನೆ ಸಂಖ್ಯೆ ಎಸ್.ಓ 3912 (ಇ) ದಿನಾಂಕ: 30ನೇ ಅಕ್ಟೋಬರ್ 2019. ಈ ಅಧಿನಿಯಮವು ಜಮ್ಮು ಮತ್ತು ಕಾಶ್ಮೀರ ಕೇಂದ್ರಾಡಳಿತ ಪ್ರದೇಶಕ್ಕೆ ಮತ್ತು ಲಡಾಖ್ ಕೇಂದ್ರಾಡಳಿತ ಪ್ರದೇಶಕ್ಕೆ ಅನ್ವಯವಾಗುವಂತೆ ಮಾಡಲಾಗಿದೆ.

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



## ಅಧ್ಯಾಯ III

### ವಿವಾಹಿತ ಮುಸ್ಲಿಂ ಮಹಿಳೆಯ ಹಕ್ಕುಗಳ ಸಂರಕ್ಷಣೆ

**5. ಜೀವನ ನಿರ್ವಹಣೆ ಭತ್ಯೆ.–** ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಒಳಗೊಂಡಿರುವ ಉಪಬಂಧಗಳ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಯಾವ ಮುಸ್ಲಿಂ ಮಹಿಳೆಗೆ ತಲಾಖ್ ಅಂತ ಉಚ್ಚರಿಸಲಾಗಿದೆಯೋ ಆ ಮುಸ್ಲಿಂ ಮಹಿಳೆಯು, ಮ್ಯಾಜಿಸ್ಟ್ರೇಟನು ನಿರ್ಧರಿಸಬಹುದಾದಂತೆ, ಅವಳು ಮತ್ತು ಅವಳ ಅವಲಂಬಿತ ಮಕ್ಕಳಿಗೆ ಜೀವನ ನಿರ್ವಹಣೆ ಭತ್ಯೆಯ ಮೊಬಗಲನ್ನು ಆಕೆಯ ಪತಿಯಿಂದ ಪಡೆಯಲು ಹಕ್ಕುಳ್ಳವಳಾಗಿರತಕ್ಕದ್ದು.

**6. ಅಪ್ರಾಪ್ತ ವಯಸ್ಕ ಮಕ್ಕಳ ಅಭಿರಕ್ಷೆ.–** ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಒಳಗೊಂಡಿದ್ದಾಗ್ಯೂ, ವಿವಾಹಿತ ಮುಸ್ಲಿಂ ಮಹಿಳೆಯು, ಆಕೆಯ ಪತಿಯು ತಲಾಖ್ ಅಂತ ಉಚ್ಚರಿಸಿದ ಸಂದರ್ಭದಲ್ಲಿ, ಮ್ಯಾಜಿಸ್ಟ್ರೇಟನು ನಿರ್ಧರಿಸಬಹುದಾದಂಥ ರೀತಿಯಲ್ಲಿ, ಅವಳ ಅಪ್ರಾಪ್ತ ವಯಸ್ಕ ಮಕ್ಕಳನ್ನು ಅಭಿರಕ್ಷೆಗೆ ತೆಗೆದುಕೊಳ್ಳಲು ಹಕ್ಕುಳ್ಳವಳಾಗಿರತಕ್ಕದ್ದು.

**7. ಅಪರಾಧವು ಸಂಜ್ಞೇಯವಾಗಿರುವುದು, ರಾಜಿ ಮಾಡಿಕೊಳ್ಳಬಹುದಾಗಿರುವುದು, ಇತ್ಯಾದಿ.–** ದಂಡ ಪ್ರಕ್ರಿಯಾ ಸಂಹಿತೆ, 1973 (1974 ರ 2) ರಲ್ಲಿ ಏನೇ ಒಳಗೊಂಡಿದ್ದಾಗ್ಯೂ,–

(ಎ) ಈ ಅಧಿನಿಯಮದ ಮೇರೆಗೆ ದಂಡನೀಯ ಅಪರಾಧವು, ಯಾವ ಮುಸ್ಲಿಂ ಮಹಿಳೆಗೆ ತಲಾಖ್ ಅಂತ ಉಚ್ಚರಿಸಲಾಗಿದೆಯೋ ಆ ಮುಸ್ಲಿಂ ಮಹಿಳೆಯು ಅಥವಾ ರಕ್ತ ಸಂಬಂಧದಿಂದ ಅಥವಾ ವಿವಾಹದಿಂದಾಗಿ ಆಕೆಯ ಸಂಬಂಧಿಯಾದ ಯಾರೇ ವ್ಯಕ್ತಿಯು ಪೊಲೀಸ್ ಠಾಣೆಯ ಪ್ರಭಾರದಲ್ಲಿರುವ ಅಧಿಕಾರಿಗೆ ಅಪರಾಧ ಮಾಡಿರುವುದಕ್ಕೆ ಸಂಬಂಧಪಟ್ಟ ಮಾಹಿತಿಯನ್ನು ನೀಡಿದ್ದರೆ, ಸಂಜ್ಞೇಯವಾದುದಾಗಿರತಕ್ಕದ್ದು;

(ಬಿ) ಈ ಅಧಿನಿಯಮದ ಮೇರೆಗೆ ದಂಡನೀಯವಾದ ಅಪರಾಧವು ಯಾವ ಮುಸ್ಲಿಂ ಮಹಿಳೆಗೆ ತಲಾಖ್ ಅಂತ ಉಚ್ಚರಿಸಲಾಗಿದೆಯೋ ಆ ಮುಸ್ಲಿಂ ಮಹಿಳೆಯ ಸೂಚನೆ ಮೇರೆಗೆ ಮ್ಯಾಜಿಸ್ಟ್ರೇಟ್‌ನ ಅನುಮತಿಯೊಂದಿಗೆ, ಅವನು ನಿರ್ಧರಿಸಬಹುದಾದಂಥ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ, ರಾಜಿ ಮಾಡಿಕೊಳ್ಳಬಹುದಾದುದಾಗಿರತಕ್ಕದ್ದು;

(ಸಿ) ಈ ಅಧಿನಿಯಮದ ಮೇರೆಗೆ ದಂಡನೀಯವಾದ ಅಪರಾಧದ ಆಪಾದಿತನು ಜಾಮೀನಿಗಾಗಿ ಅರ್ಜಿಯನ್ನು ಸಲ್ಲಿಸಿದಾಗ ಮತ್ತು ಯಾವ ಮುಸ್ಲಿಂ ಮಹಿಳೆಗೆ ತಲಾಖ್ ಅಂತ ಉಚ್ಚರಿಸಲಾಗಿದೆಯೋ ಆ ವಿವಾಹಿತ ಮುಸ್ಲಿಂ ಮಹಿಳೆಯ ಅಹವಾಲನ್ನು ಕೇಳಿದ ತರುವಾಯ, ಅಂಥ ವ್ಯಕ್ತಿಗೆ ಜಾಮೀನನ್ನು ಮಂಜೂರು ಮಾಡಲು ಸಾಕಷ್ಟು ಕಾರಣಗಳು ಇವೆ ಎಂದು ಮ್ಯಾಜಿಸ್ಟ್ರೇಟ್‌ನಿಗೆ ಮನದಟ್ಟಾದ ಹೊರತು, ಜಾಮೀನಿನ ಮೇಲೆ ಬಿಡುಗಡೆ ಮಾಡತಕ್ಕದ್ದಲ್ಲ.

**8. ನಿರಸನ ಮತ್ತು ಉಳಿಸುವಿಕೆ.–** (1) ಮುಸ್ಲಿಂ ಮಹಿಳೆಯರ (ವಿವಾಹದ ಹಕ್ಕುಗಳ ಸಂರಕ್ಷಣೆ) ಎರಡನೇ ಅಧ್ಯಾದೇಶ, 2019 (2019ರ ಅಧ್ಯಾದೇಶ 4) ನ್ನು ಈ ಮೂಲಕ ನಿರಸನಗೊಳಿಸಲಾಗಿದೆ.

(2) ಅಂಥ ನಿರಸನದಲ್ಲಿ ಏನೇ ಇದ್ದರೂ, ಮುಸ್ಲಿಂ ಮಹಿಳೆಯರ (ವಿವಾಹದ ಹಕ್ಕುಗಳ ಸಂರಕ್ಷಣೆ) ಎರಡನೇ ಅಧ್ಯಾದೇಶ 2019 (2019 ರ ಅಧ್ಯಾದೇಶ 4)ರ ಮೇರೆಗೆ ಮಾಡಿದ ಯಾವುದೇ ಕಾರ್ಯವನ್ನು ಅಥವಾ ತೆಗೆದುಕೊಂಡ ಯಾವುವೇ ಕ್ರಮವನ್ನು, ಈ ಅಧಿನಿಯಮದ ಉಪಬಂಧಗಳ ಮೇರೆಗೆ ಮಾಡಲಾಗಿದೆ ಎಂದು ಅಥವಾ ತೆಗೆದುಕೊಳ್ಳಲಾಗಿದೆ ಎಂದು ಭಾವಿಸತಕ್ಕದ್ದು.

ಡಾ. ರೀಟಾ ವಸಿಷ್ಠ
ಭಾರತ ಸರ್ಕಾರದ ಕಾರ್ಯದರ್ಶಿ

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು
SUNIL GARDE